ಕರ್ಣಾಟಕ ಕಾವ್ಯಕಲಾನಿಧಿ, ಕೋಶಸಂಖ್ಯೆ—೮೭

# ಕೋನಯ್ಯ

ವಿರಚಿತ

# ಗಯಚರಿತ್ರ

ಅಥವಾ

## ಕೃಷ್ಣಾರ್ಜುನರ ಸಂಗರ

(ಭಾಮಿನೀ ಷಟ್ಪದಿ)

ಎಂ. ಎ. ರಾಮಾನುಜಯ್ಯಂಗಾರ್,

ಅಸಿಸ್ಟೆಂಟ್ ಮಾಸ್ಟರ್ ಮಹಾರಾಣೀ ಕಾಲೇಜ್ ಮೈಸೂರು,

ಇವರಿಂದ ಶೋಧಿತವಾಗಿ

ಮೈಸೂರು

ಶ್ರೀನಿವಾಸ ಮುದ್ರಣಶಾಲೆಯಲ್ಲಿ ಮುದ್ರಿತವಾಗಿದೆ.

1915

ಕ್ರಯ ೨|| ರೂಪಾಯಿ

UNIVERSAL LIBRARY
OU_200580
UNIVERSAL LIBRARY

All Rights Reserved by the Editor
Registered according to Act. XXV of 1867.

# ಸಂಧಿಕಥಾಸೂಚಿ.


| ಸಂಧಿಸಂಖ್ಯೆ | ಕಥಾಭಾಗ | ಪದ್ಯಗಳ ಸಂಖ್ಯೆ | ಪುಟದಸಂಖ್ಯೆ |
| --- | --- | --- | --- |
| ೧ | ಪೀಠಿಕೆ | ೨೬ | ೧ |
| ೨ | ಜನಮೇಜಯನಿಗೆ ವೈಶಂಪಾಯನನು ಹೇಳಿದ ಕೃಷ್ಣಾರ್ಜುನರ ಕಾಳಗದ ಕಥೆಯನ್ನು ಸೂತಪೌರಾಣಿಕನು ಶೌನಕಾದಿ ಮಹರ್ಷಿಗಳಿಗೆ ಹೇಳುತ್ತಾನೆ | ೨೬ | ೬ |
| ೩ | ದ್ವಾರಕೆಯ ಸೌಭಾಗ್ಯವರ್ಣನೆ | ೫೪ | ೧೨ |
| ೪ | ಶ್ರೀಕೃಷ್ಣನು ರೈವತಕ ಪರ್ವತದ ತಪ್ಪಲ ಉದ್ಯಾನವನ್ನು ನೋಡುತ್ತಿರುವನು | ೬೬ | ೨೪ |
| ೫ | ಹರಿಗೆ ದ್ರೋಹಮಾಡಿ, ಅಭಯಬೇಡಲು ತನ್ನಲ್ಲಿ ಬಂದ ಗಯನನ್ನು ಪ್ರದ್ಯುಮ್ನನು ನಿರಾಕರಿಸುವನು | ೩೪ | ೪೦ |
| ೬ | ಬಳಿಕ ಹರಿಯ ಭಯದಿಂದ ತನ್ನಲ್ಲಿ ಮರೆಗೊಳಲು ಬಂದ ಗಯನಿಗೆ ಶಿವನು ಅಭಯಗೊಡದೆ ಉಚಿತವಚನಗಳನ್ನು ಹೇಳಿಕಳುಹುವನು | ೩೧ | ೪೮ |
| ೭ | ಮಧ್ಯಮಾರ್ಗದಲ್ಲಿ ಸಂಧಿಸಿದ ನಾರದ ಮಹರ್ಷಿಗೆ ಗಯನು ತನ್ನ ಸಂಕಟವನ್ನು ಅರುಹುವನು | ೨೩ | ೫೫ |
| ೮ | ನಾರದನು ಅರ್ಜುನನ ಸಾಹಸ ಸಾಮರ್ಥ್ಯಗಳನ್ನು ಗಯನಿಗೆ ಹೇಳುವನು | ೨೧ | ೬೦ |
| ೯ | ಡಂಭಾಸುರನ ಗರ್ವಭಂಗವನ್ನು ಮಾಡಲು ಹರಿಯು ಎರಡುರೂಪವನ್ನು ಧರಿಸಿದ ವಿವರ | ೧೧೧ | ೬೫ |
| ೧೦ | ಡಂಭಾಸುರನ ಸಂಹಾರ | ೧೧೨ | ೮೬ |
| ೧೧ | ಗಯನು ಅರ್ಜುನನನ್ನು ಶರಣುಹೊಗುವನು | ೬೬ | ೧೧೦ |
| ೧೨ | ಶ್ರೀಕೃಷ್ಣನು ಅಕ್ರೂರ ವೇಗವಂತರ ಮುಖಾಂತರ ಗಯನನ್ನು ತ್ಯಜಿಸುವಂತೆ ಅರ್ಜುನನಿಗೆ ಹೇಳಿಕಳುಹಿಸುವನು | ೫೮ | ೧೨೩ |

| | | | |
|---|---|---|---|
| ೧೩ | ಸುಭದ್ರೆಯು ಗಯನನ್ನು ಬಿಟ್ಟುಬಿಡುವಂತೆ ಪತಿಗೆ ಹೇಳುವುದಕ್ಕೆ ದ್ವೈತವನಕ್ಕೆ ಬರುವಳು | ೫೯ | ೧೩ |
| ೧೪ | ಧರ್ಮರಾಜ, ಭೀಮ, ನಕುಲ, ಸಹದೇವ ಮತ್ತು ದ್ರೌಪದಿ ಎಲ್ಲರೂ ಸುಭದ್ರೆಯನ್ನು ಅರ್ಜುನನ ಬಳಿಗೆ ಕಳುಹಿಕೊಡುವರು | ೪೫ | ೧೪ |
| ೧೫ | ನಯಭಯನೀತಿಗಳನ್ನು ಹೇಳಿ ಸುಭದ್ರೆ ಗಯನನ್ನು ಬಿಟ್ಟುಬಿಡುವಂತೆ ಎಷ್ಟೆಷ್ಟುಹೇಳಿದರೂ ಅರ್ಜುನನು ಕೇಳದೆ ಹೋಗುವನು | ೯೧ | ೧೦ |
| ೧೬ | ಯುದ್ಧನಿಮಿತ್ತವಾಗಿ ಶ್ರೀಕೃಷ್ಣನು ದ್ವಾರಕಿಯಿಂದ ಹೊರಡುವನು | ೩೦ | ೧೬ |
| ೧೭ | ಕೌರವರು ಸೇನಾಸಮೇತರಾಗಿ ಪಾಂಡವರ ಸಹಾಯಕ್ಕೆ ಬರುವರು | ೮೩ | ೧೭ |
| ೧೮ | ಪಾರ್ಥನು ಯುದ್ಧಕ್ಕೆ ಹೊರಡುವನು | ೮೧ | ೧೯ |
| ೧೯ | ಪಾರ್ಥನು ಗಯನಿಗೆ ಯದುಸೇನೆಯಲ್ಲಿರುವ ವೀರರನ್ನು ವಿವರಿಸುವನು | ೨೮ | ೨೦ |
| ೨೦ | ಶ್ರೀಕೃಷ್ಣನು ಪಾರ್ಥನ ಸೇನೆಯಲ್ಲಿರುವ ಭಟರನ್ನು ಬಲರಾಮನಿಗೆ ತೋರಿಸುವನು | ೩೨ | ೨೧೭ |
| ೨೧ | ಉಭಯಸೇನಾಸಮರ | ೪೯ | ೨೨೩ |
| ೨೨ | ಶ್ರೀಕೃಷ್ಣನು ಕೌರವಬಲವನ್ನುಸಮ್ಮೋಹನಾಸ್ತ್ರದಿಂದ ಜಯಿಸುವನು | ೧೦೩ | ೨೩೩ |
| ೨೩ | ಶ್ರೀಕೃಷ್ಣನು ಘಟೋತ್ಕಚನನ್ನು ಸಂಹರಿಸುವನು | ೯೩ | ೨೫೪ |
| ೨೪ | ಬಲರಾಮ ಭೀಮರ ಕಾಳಗ | ೩೨ | ೨೬೩ |
| ೨೫ | ಪಾರ್ಥನು ಯದುಸೇನೆಯನ್ನು ಸಮ್ಮೋಹನಾಸ್ತ್ರದಿಂದ ಗೆಲ್ಲುವನು | ೧೨೦ | ೨೭೯ |
| ೨೬ | ಕೃಷ್ಣಾರ್ಜುನರ ಸಂಗರ | ೮೮ | ೩೦೪ |
| ೨೭ | ಸುದರ್ಶನಧಾರೆಗೂ ಅಳುಕದ ಅರ್ಜುನನನ್ನು ಮನ್ನಿಸಿ ಗಯನನ್ನು ಕರುಣಿಸಿ, ಯುದ್ಧದಲ್ಲಿ ಮಡಿದ ಸಮಸ್ತರನ್ನೂ ಬದುಕಿಸಿ, ಮುರವೈರಿಯು ನಿಜಬಲದೊಡನೆ ದ್ವಾರಕಿಗೆ ತೆರಳುವನು | ೧೨೦ | ೩೯೨ |

# ಭೂಮಿಕೆ.

**ಕವಿಚರಿತೆ:**—

ಸಿರಿಯುರಸನೊಲಿಪಿಂದ ರಚಿಸಿದ |
ಮುನಿಪ ಕಾಶ್ಯಪಗೋತ್ರಸಂಭವ |
ಧರೆಗಧಿಕ ಹೋತೂರು ಬೆಟ್ಟರಸನ ತನೂಭವನು ||
ಸರಸಭಾರತ ಕೋನಯಾಖ್ಯನು | (ಸಂಧಿ ೧. ೧೦)

ಈಕೃತಿಗೆ ನಾಯಕನದಾರೆನೆ |
ಲೋಕಕತಿಶಯ ಪುಣ್ಯಕರ ಭೂ |
ಲೋಕದೊಳ್ ವಿಖ್ಯಾತ ತಿರುವೇಂಕಟನಗಾಧೀಶ || (ಸಂ. ೧. ೧೨)

ಪಂಕಜಾಕ್ಷೀರಮಣಗಮಲಸು |
ಪಂಕರುಹನಾಭಗೆ ಜಗತ್ಪತಿ |
ವೇಂಕಟೇಶಗೆ ಕೊಡುವೆನಾರಚಿಸಿದ ಮಹಾಕೃತಿಯ || (ಸಂ. ೧. ೨೦)

ಈ ಮೇಲಿನ ಪದ್ಯಭಾಗಗಳಿಂದ ಈ ಗ್ರಂಥವನ್ನು ರಚಿಸಿದವನು ಕೋನಯ್ಯನು, ಆ ಕಾಶ್ಯಪಗೋತ್ರೋದ್ಭವನು; ಈತನ ತಂದೆ ಬೆಟ್ಟರಸನು; ಹೋತೂರಿನವನು. ಈತನ ಕುಲದೇವರು ತಿರುಪತಿಯ ವೇಂಕಟಾಚಲಸ್ವಾಮಿ ಎಂದು ತಿಳಿದುಬರುತ್ತದೆ.

ಬೆಟ್ಟರಸನೆಂಬ ಹೆಸರು ವೈಷ್ಣವಬ್ರಾಹ್ಮಣರಲ್ಲಿ ಅನೇಕರಿಗೆ ಇರುವುದನ್ನೂ ಬೆಟ್ಟರಸ, ತಿರುಮಲಾಧೀಶ, ವೇಂಕಟಾಚಲಪತಿ ಎಂಬುವು ಸಮಾನಾರ್ಥಕ ಪದಗಳಾಗಿರುವುದನ್ನೂ, ಗ್ರಂಥಾದಿಯಲ್ಲಿ ಶ್ರೀನಿವಾಸ, ಈಶ್ವರ, ಕಮಲಭವ, ವಿಘ್ನೇಶ, ಇಂದಿರಾದೇವಿ, ವಾಗ್ದೇವಿ, ಪಕ್ಷಿರಾಜ (ಗರುಡ), ಮುಖ್ಯಪ್ರಾಣ (ಹನುಮಂತ) ಸೂರಿಯರನ್ನು ಸ್ತುತಿಸಿರುವುದನ್ನೂ ನೋಡಲಾಗಿ-ಕವಿಯು ವೈಷ್ಣವ ಬ್ರಾಹ್ಮಣನಾಗಿರಬಹುದೆಂದು ತೋರುತ್ತದೆ.

ಈತನು ಸ್ಮಾರ್ತಬ್ರಾಹ್ಮಣನಲ್ಲ. ಹಾಗಿದ್ದಲ್ಲಿ ಪಾರ್ವತಿಯ ಸ್ತುತಿಯನ್ನು ಎಂದೂ ಬಿಡಲಾರನು ಮತ್ತು ಆಂಜನೇಯನನ್ನು ಮುಖ್ಯಪ್ರಾಣನೆಂದು ಕರೆಯುತ್ತಿರಲಿಲ್ಲ.

ಶ್ರೀವೈಷ್ಣವಬ್ರಾಹ್ಮಣನೂ ಅಲ್ಲ. ಶ್ರೀವೈಷ್ಣವನಾಗಿದ್ದಲ್ಲಿ ತ್ರಿಮೂರ್ತಿಗಳನ್ನು ಹಾಗೂ ಅವರಾದ ಮೇಲೆ ಇಂದಿರಾದೇವಿಯನ್ನೂ ಸ್ತುತಿಸುತ್ತಿರಲಿಲ್ಲ.

ಒಂದುವೇಳೆ ಈತನು ಕ್ಷತ್ರಿಯನಾಗಿದ್ದರೂ ಇರಬಹುದು. ಬೆಟ್ಟರಸ, ಬೆಟ್ಟದಯ್ಯ ಎಂಬ ಹೆಸರುಗಳು ಅರಸರ ಸಂತತಿಯಲ್ಲಿ ಕೆಲವರಿಗಿವೆ. ಮೈಸೂರರಸರಲ್ಲಿ ಗೋತ್ರಸೂತ್ರಗಳ ವ್ಯವಹಾರವೂ ಉಂಟು. ಕ್ಷತ್ರಿಯನಾಗಿದ್ದಲ್ಲಿ ಈತನು ಹೋತೂರು ಎಂಬ ಗ್ರಾಮದ ಪಾಳ್ಯಗಾರನಾದ ಬೆಟ್ಟರಸನ ಮಗನಾಗಿರಬೇಕು. ಒಟ್ಟುನೋಡಲಾಗಿ ಕವಿಯು ವೈಷ್ಣವಬ್ರಾಹ್ಮಣನೋ ಇಲ್ಲವೆ ಅರಸುಸಂತತಿಯವನೋ ನಿಸ್ಸಂದೇಹವಾಗಿ ಆಗಿರಬೇಕು.

ಕವಿಯ ಹೆಸರು ಕೋನಯ್ಯ. ಕೋನಯ್ಯ = ಕೋನ್ + ಅಯ್ಯ; ತಮಿಳಿನಲ್ಲಿ ಕೋನ್ ಎಂಬ ಪದವು ಸ್ವಾಮಿ ಎಂಬ ಅರ್ಥವನ್ನು ಕೊಡುತ್ತದೆ. ಅಯ್ಯ-ಎಂಬುದು ಆರ್ಯಶಬ್ದಕ್ಕೆ ತದ್ಭವರೂಪವಾಗಲಾಗಿ, ಗೌರವವಾಚಿಯಾಗಿರುತ್ತದೆ. ಮೇ|| ರೈಸರವರು "ಸರಸಭಾರತಿ ಕೋನಯಾಖ್ಯನು" ಎಂಬ ಕಡೆ ಲೇಖಕರ ಪ್ರಮಾದದಿಂದ ಒಂದು ಪ್ರತಿಯಲ್ಲಿ ಬಿದ್ದಿರುವ "ಸರಸಭಾರತ ಕೋನಯಾಖ್ಯನು" ಎಂಬುದನ್ನು ನೋಡಿ ಕವಿಗೆ ಭಾರತಕೋನಯ್ಯ ಎಂಬ ಹೆಸರಿದೆ ಎಂದು ಶಬ್ದಾನುಶಾಸನದ ಉಪೋದ್ಘಾತದ ಕವಿಚರಿತ್ರೆಯಲ್ಲಿ ಹೇಳಿರುವುದು ತಪ್ಪಾಗಿದೆ.

ಓದಿದವ ತಾನಲ್ಲ ಶಬ್ದವ |
ಮೋದದೊಳಲಂಕಾರರಸ ಭಂ |
ದಾದಿಗಳ ನೆನೆದಱಿಯೆ ದೇವರು ಬಲ್ಲ ಕೆಲಸವಿದು || (ಸಂ. ೧. ೧೪)
ಶಬ್ದಾಕ್ಷರ ದರಿದ್ರನನು | (ಸಂ ೨೭. ೧೧೫)
ಲಲಿತಶಬ್ದ ಸುವರ್ಣಲಕ್ಷಣ |
ಕಲಿತಭಾವರಸಾದಿಯೆಂಬುದ |
ನೊಳಗಱಿಯದಿವನೇನ ಬಲ್ಲನದೆಂದು ಕೋಪಿಸದೆ (ಸಂ.೨೭ ೧೧೭)

ಈ ಮೇಲಣ ಪದ್ಯಭಾಗಗಳಲ್ಲಿ ಕವಿಯು ತಾನು ಓದಿದವನಲ್ಲ, ಅಲಂಕಾರಾದಿಗಳನ್ನು ಮೊದಲೆ ಕಾಣನು, ಶಬ್ದದರಿದ್ರನು, ಎಂದು ಹೇಳಿಕೊಂಡಿರುವುದು ನಿಜವಾದ ಸಂಗತಿಯೇ ಹೊರತು ಮಹಾಕವಿಗಳು ನೈಚ್ಯವನ್ನು ಆರೋಪಿಸಿಕೊಂಡು ಹೇಳುವ ಮಾತಾಗಿಲ್ಲ. ಪ್ರಾಯಶಃ ಕನ್ನಡ ಕವಿಗಳು ಉಪಮೋತ್ಪ್ರೇಕ್ಷಾದಿಗಳಿಂದಲೇ ಗ್ರಂಥವನ್ನು ವಿಸ್ತರಿಸುವರು. ಅಷ್ಟು ದೊಡ್ಡ ಗ್ರಂಥವಾದರೂ ಇದರಲ್ಲಿ

ಎಲ್ಲೋ ಒಂದೊಂದುಕಡೆ ಬೆಟ್ಟಿನಲ್ಲಿ ಎಣಿಸುವಂತೆ ಅಲಂಕಾರಾದಿಗಳು ಸಿಕ್ಕುವುವು. ಅಲ್ಪವಾದ ಕಥಾಸಂದರ್ಭವನ್ನು ಬಳೆಸುವುದರಲ್ಲಿ ತನ್ನ ಶ್ರಮವನ್ನೆಲ್ಲಾ ಬಹುವಾಗಿ ವೆಚ್ಚ ಮಾಡಿರುವನು. ಒಂದುಕಡೆಯಲ್ಲಿಯೂ ವರ್ಣನಾದಿಗಳಲ್ಲಿ ತನ್ನ ಚಮತ್ಕಾರ ವನ್ನು ತೋರಿಸಿಕೊಡಲಿಲ್ಲ. ಕೃಷ್ಣಾರ್ಜುನರು ವೀರವಾದದಿಂದ ಪರಸ್ಪರ ಹೀಯಾಳಿ ಸುವ ಕಡೆಗಳಲ್ಲಿ ಮಾತ್ರ ಮಾತುಗಳಲ್ಲಿ ತನ್ನ ಸಾಮರ್ಥ್ಯವನ್ನು ಸ್ವಲ್ಪಮಟ್ಟಿಗೆ ತೋ ರಿಸಿಕೊಂಡಿರುವನು. ಶಬ್ದದಾರಿದ್ರ್ಯವಂತೂ ಗ್ರಂಥವನ್ನು ಪಠಿಸುತ್ತಹೋದರೆ ತಾನೇ ಗೊತ್ತಾಗುತ್ತದೆ. ಅವನೇ ಹೇಳಿಕೊಳ್ಳುವಂತೆ ಭಗವಂತನ ಕೃಪೆಯಿಂದ ಷಟ್ಪದಿಯಲ್ಲಿ ಅಭಿಪ್ರಾಯವನ್ನು ನಯಿಸುವ ಸಾಮರ್ಥ್ಯವು ಅವನಿಗೆ ಸಹಜವಾಗಿ ಬಂದಿರಬಹುದು. ಕುಮಾರವ್ಯಾಸನು 'ಹಲಗೆ ಬಳಪವ ಹಿಡಿಯದೊಂದಗ್ಗಳಿಕೆ' ಎಂಬ ಪದ್ಯದಲ್ಲಿ ಹೇಳಿಕೊಂಡಂತೆ, ಈತನೂ ಹೇಳಿಕೊಂಡನೆಂದು ತಿಳಿಯುಕೂಡದು. ಅವನ ಅಶಕ್ತಿ ಜ್ಞಾನವು ಆರೋಪಿತವಾದುದು. ಇವನದು ಸಹಜ ಅನೇಕಕಡೆ ಇವನು ಬರೆ ದಿರುವ ಪದ್ಯಗಳು ಇಲ್ಲದಿದ್ದರೆ, ಗ್ರಂಥವು ಚೆನ್ನಾಗಿರುವುದೆಂಬ ಭಾವವು ಪಾಠಕರಲ್ಲಿ ಹುಟ್ಟದೆ ಇಲ್ಲ. ಹೇಗೋ ಪದಗಳನ್ನು ಸೇರಿಸಿ ಧಾರಾಳವಾಗಿ ಕವಿತ್ವ ಮಾಡುವ ಸಾಮರ್ಥ್ಯವು ಇವನಲ್ಲಿ ಉಂಟು.

ಕಾಳಿದಾಸ ಮಯೂರ ವರಕವಿ |
ಮೌಳಿಮಣಿ ಬಾಣಾಂಕ ದಂಡಿ |
ವಿಶಾಲಮತಿ ಮಲಹಣ ಕುಮಾರವ್ಯಾಸ ಶುಕರೂಪ ||
ಲೋಲಗುಣಲಕ್ಷ್ಮೀಶ ಘನಕವಿ |
ಜಾಲಮೃದುಪದಪಲ್ಲವಳಿಗೆ |
ಫಾಲಮಂ ಚಾಚುತ್ತ ಪೇಳುವೆನೀ ಮಹಾಕೃತಿಯ ||

ಎಂಬೀ ಪದ್ಯದಲ್ಲಿ ಸಂಸ್ಕೃತ ಕವಿಶ್ರೇಷ್ಠರೆಂದು ಪ್ರಸಿದ್ಧಿಹೊಂದಿದ ಪ್ರಾಚೀನ ಕವಿಗಳಾದ ಕಾಳಿದಾಸ, ಮಯೂರ, ಬಾಣ, ದಂಡಿ, ಮಲ್ಹಣ ಎಂಬವರನ್ನು ಸ್ಮರಿಸುವನು. ಇದರಿಂದ ಕವಿಯ ಕಾಲವನ್ನು ನಿರ್ಣಯಿಸಲಾಗುವುದಿಲ್ಲ. ಕನ್ನಡ ಕವಿಗಳಲ್ಲಿ ಕುಮಾರವ್ಯಾಸ ನಿತ್ಯಾತ್ಮರನ್ನೂ, ಲೋಲಗುಣ ಲಕ್ಷ್ಮೀಶನನ್ನೂ ಸ್ಮರಿ ಸುವನು. ಇದು ಕವಿಯಕಾಲವನ್ನು ನಿರ್ಧರಿಸುವುದಕ್ಕೆ ಸ್ವಲ್ಪ ಸಹಾಯಮಾಡುತ್ತ ದೆ. ಕುಮಾರವ್ಯಾಸ ನಿತ್ಯಾತ್ಮಲಕ್ಷ್ಮೀಶರ ಹೆಸರನ್ನು ಹೇಳಿರುವುದರಿಂದ ಅವರ ಕಾಲ ದಲ್ಲಿದ್ದವರೆಂದು ಹೇಳಲಾಗದು. ಅನೇಕ ಶತಮಾನಗಳ ಹಿಂದೆ ಪ್ರಸಿದ್ಧರಾಗಿದ್ದ ಸಂಸ್ಕೃತ ಕವಿಗಳನ್ನು ಹೇಳಿದ್ದಂತೆ, ತನಗಿಂತ ೨, ೩ ಶತಮಾನಕ್ಕಿಂತ ಹಿಂದಣವರಾದ

ಈ ಕವಿಗಳನ್ನು ಹೇಳಿರಬಹುದು ಇದರಿಂದ ಕುಮಾರವ್ಯಾಸ ನಿತ್ಯಾತ್ಮ (16 ನೆಯ ಶತಮಾನ) ಲಕ್ಷ್ಮೀಶ(15 ಅಥವಾ 16ನೆಯ ಶತಮಾನ) ಇವರಿಗಿಂತ ಈಚಿನವನೆಂದು ಖಂಡಿತವಾಡಬಹುದು. ಈತನ ವಾಕ್ಯಸರಣಿಯೂ, ಅರಿಸಮಾಸಪ್ರಯೋಗಗಳೂ, ಆಶಯವನ್ನು ತಿಳಿಸುವ ಕ್ರಮವೂ ಒಟ್ಟುಮಟ್ಟಿಗೆ ಕುಮಾರವಾಲ್ಮೀಕಿಯ ಗ್ರಂಥವನ್ನು ಸ್ಮರಣಕ್ಕೆ ತರುವುದು. ಈ ಗ್ರಂಥವನ್ನು ಓದುವಲ್ಲಿ ಕುಮಾರವಾಲ್ಮೀಕಿಯ ತೊರವೆಯ ರಾಮಾಯಣವನ್ನು ಕವಿಯು ಓದಿಯೇ ಇರಬೇಕೆಂಬ ಅಭಿಪ್ರಾಯ ಹುಟ್ಟುತ್ತದೆ. ಕುಮಾರವಾಲ್ಮೀಕಿಯ ಹೆಸರನ್ನು ಏಕೆ ಸ್ಮರಿಸಲಿಲ್ಲವೊ ? 17 ನೆಯ ಶತಮಾನದ ಅಂತ್ಯಭಾಗದಲ್ಲಿ ಇದ್ದಿರಬಹುದೆಂದು ತೋರುತ್ತದೆ.

ಕವಿಯು ಇನ್ನು ಯಾವ ಗ್ರಂಥವನ್ನು ಬರೆದಿರುವನೋ ಗೊತ್ತಿಲ್ಲ. ಇವನ ಹೆಸರನ್ನು ಆಧುನಿಕಕವಿಗಳು ಯಾರೂ ಹೇಳಿಲ್ಲ.

## —ಗ್ರಂಥವಿಚಾರ—

ಈ ಗ್ರಂಥಕ್ಕೆ ಕೃಷ್ಣಾರ್ಜುನರ ಸಂಗರ, ಮತ್ತು ಗಯಚರಿತ್ರೆ ಎಂಬ ಎರಡು ಹೆಸರುಗಳು ಇರುವಂತಿದೆ. ಇವೆರಡರಲ್ಲಿ ಕವಿಗೆ ಇಷ್ಟವಾದುದು ಮೊದಲನೆಯದು; ವಾಡಿಕೆಯಲ್ಲಿ ನಡೆದುಬಂದ ಹೆಸರು ಎರಡನೆಯದು. ಅದಕ್ಕಾಗಿ ಸಂಧಿ ೧.೧೫ ರಲ್ಲಿ ಕವಿಯು 'ಕೃಷ್ಣಾರ್ಜುನರ ಸಂಗರವ ಪೇಳುವೆನು' ಎಂದು ಹೇಳಿರುವನಲ್ಲದೆ, ಸಂಧಿ. ೨೬.ಸಂಧಿ.೨.೧೬ ರಲ್ಲಿ " ಹರಿಧನಂಜಯಚರಿತವನು ನಿಮಗೆ ಪ್ರೇಮದಿಂದರುಹುವೆನು '' ಎಂದು ಸೂತಪೌರಾಣಿಕನಿಂದಲೂ ಹೇಳಿಸಿರುವವನು. ಮೇ || ರೈಸರವರು ಕೃಷ್ಣಾರ್ಜುನರ ಸಂಗರ ಗಯಚರಿತ್ರೆ ಎಂಬ ಬೇರೆಬೇರೆ ಎರಡು ಗ್ರಂಥಗಳನ್ನು ಈ ಕವಿಯು ರಚಿಸಿದ್ದಾನೆಂದು ಹೇಳುವುದು ಭ್ರಮೆಯೇ ಸರಿ

ಈ ಗ್ರಂಥದ ಕಥಾಗಮವನ್ನು ಕವಿಯು ಸಂಧಿ. ೨, ೧೨, ೧೯, ರಲ್ಲಿ ಸಂಗ್ರಹಿಸಿ ಹೇಳಿರುತ್ತಾನೆ.

ಈ ಗ್ರಂಥದಲ್ಲಿ ೨೭ ಸಂಧಿಗಳಿವೆ, ಪ್ರತಿಸಂಧಿಗಳಲ್ಲಿರುವ ಪದ್ಯಗಳ ಸಂಖ್ಯೆಯು ಕಥಾಸೂಚಿಯಿಂದ ಗೊತ್ತಾಗುತ್ತದೆ. ಕವಿಯು ತನ್ನ ಈ ಗ್ರಂಥಕ್ಕೆ "ಮಹಾಭಾರತದೊಳೆಸೆವ ಸನಾಮ ವನಪರ್ವದೊಳಗುದಿಸಿದ ರಾಮಣೀಯಕ ಹರಿಧನಂಜಯಚರಿತವೇ' ಆಧಾರವೆಂದು ಹೇಳುತ್ತಾನೆ (ಸಂ ೨.೧೬) ಆದರೆ ಈಗ ಮುದ್ರಿತವಾಗಿ ಪ್ರಚಾರದಲ್ಲಿರುವ ವ್ಯಾಸಮಹರ್ಷಿಪ್ರೋಕ್ತವಾದ ಮಹಾಭಾರತದ ವನಪರ್ವದಲ್ಲಿ ಈ ಕಥೆಯು ಇಲ್ಲ. ಕಥೆಯೇನೋ ಬಹು ಪ್ರಸಿದ್ಧವಾಗಿದೆ. ವಿಚಾರಮಾಡುವಲ್ಲಿ ಈ ಕಥಾಭಾಗವು ಮಹಾಪರ್ವತದಲ್ಲಿ ಪ್ರಮಾದದಿಂದ ಉಕ್ತವಾಗಿರ

ಬೇಕು, ಇಲ್ಲವೆ ಕವಿಯು ಸುಳ್ಳುಹೇಳಿರಬೇಕು? ಕವಿಯು ಸುಳ್ಳುಹೇಳಲು ಕಾರಣ ವಿಲ್ಲ. ಈ ಕಥಾಭಾಗವು ಮಹಾಭಾರತದ ಕೋಶಗಳಲ್ಲೆಲ್ಲಾ ಬಿಟ್ಟುಹೋಗಿರಲು ಕಾರಣವಿಲ್ಲ. ಹೀಗಿರುವುದರಿಂದ ಈ ಕಥೆಯು ಬೇರೆ ಯಾವುದೋ ಮಹಾಭಾರತ ದಲ್ಲಿ ಇದ್ದಿರಬೇಕು. ಆ ಮಹಾಭಾರತ ಯಾವುದೋ ಗೊತ್ತಿಲ್ಲ. ವೈಶಂಪಾಯನ ಮಹಾಭಾರತದಲ್ಲಿ ಈ ಕಥೆಯುಂಟೆಂದು ಕೆಲವರು ಹೇಳುತ್ತಾರೆ.

ಇದೆ ಕಥೆಯನ್ನು "ಕೃಷ್ಣಾರ್ಜುನರ ಕಾಳಗ"ವೆಂಬ ಹೆಸರಿನಿಂದ ಎಂಬಾ ಚಯ್ಯಕವಿಯು ಸಾಂಗತ್ಯದಲ್ಲಿ ಬರೆದಿದ್ದಾನೆ. ಮತ್ತೊಬ್ಬ ಕವಿಯು ಕೃಷ್ಣಾ ರ್ಜುನರ ಸಂಗ್ರಾಮವು ಎಂಬ ಹೆಸರಿನಿಂದ ಯಕ್ಷಗಾನದಲ್ಲಿ ಬರೆದಿದ್ದಾನೆ. ಮುಮ್ಮಡಿ ಕೃಷ್ಣರಾಜಒಡೆಯರವರ ಅಳಿಯಂದಿರು ಲಿಂಗರಾಜೇಅರಸಿನವರು ಈ ಕಥೆಯನ್ನು ಗಾನವಾಗಿಯೂ, ಚಂಪುವಾಗಿಯೂ ಬರೆದಿದ್ದಾರೆ. ಇವರೆಲ್ಲರೂ ತಮ್ಮ ಈ ಗ್ರಂಥ ವನ್ನು ಗಯಚರಿತ್ರೆಯೆಂದು ಕರೆದಿರುವರು.

—ಮುದ್ರಣ—

ಈ ಗ್ರಂಥವನ್ನು ಮೂರು ಪ್ರತಿಗಳ ಸಹಾಯದಿಂದ ಮುದ್ರಿಸಿದ್ದೇವೆ:—

1. ಕಾವ್ಯಕಲಾನಿಧಿ ಭಂಡಾರದ ಪುಸ್ತಕ.
2. ಮೈಸೂರು ಸರ್ಕಾರದ ಓರಿಯಂಟಲ್ ಲೈಬ್ರೇರಿಯ ಪುಸ್ತಕ.
3. ಮ||ರಾ|| ಮಾಗಡಿ ಸ್ಕೂಲ್‌ಮಾಸ್ಟರ್, ಕೆ. ರಾಮಸ್ವಾಮಿ ಅಯ್ಯಂಗಾರ್ರ ಪುಸ್ತಕ.

ಇವೆಲ್ಲವೂ ಬರೆದ ಪುಸ್ತಕಗಳು; ಬಹಳ ಅಶುದ್ಧವಾದುವು. ಪ್ರತಿಗಳನ್ನು ಕೊಟ್ಟು ದಯಮಾಡಿದವರಿಗೆ ನಮ್ಮ ವಿನಂತಿ ಇದೆ.

# ಗಯಚರಿತ್ರ

## (ಭಾಮಿನಿ ಷಟ್ಪದಿ)

### ಪೀಠಿಕಾಸಂಧಿ

---

ಶ್ರೀರಮಣ ಸುರವಂದ್ಯ ನಿರುಪಮ |
ಚಾರುನೀರದವರ್ಣ ವಿಮಲ ಸ |
ರೋರುಹಾಂಬಕ ಜಗದುದರ ರವಿಕೋಟಿಸಂಕಾಶ ||
ನಾರದಾದಿಮುನಿಪ್ರಿಯಾಚ್ಯುತ |
ವಾರಿಜಾಸನಜನಕ ಸಲಹು ಕೃ |
ಪಾರಸದಿ ಸಜ್ಜನರನನುದಿನ ತಿರುಮಲಾಧೀಶ || ೧

ರಜತಪರ್ವತವಾಸ ರಾಜಿತ |
ಭುಜಗನಿಚಯವಿಭೂಷ ಶಂಭು |
ತ್ರಿಜಗದಧಿಪ ಮಹೇಶ ಭವತತಿನಾಶ ಗಿರಿಜೇಶ ||
ಸುಜನಮುನಿದಿವಿಜೇಶಸನ್ನುತ |
ವಿಜಯಪಾಲ ಗಿರೀಶ ಪಾಲಿಸು |
ಭಜಕಜನರನು ದಯದಿ ತೇಜೋನಿಹಿತ ಸರ್ವೇಶ || ೨

ವರಚತುರ್ದಶಭುವನನಿರ್ಮಿತ |
ಸುರನರೋರಗಲೋಕಸನ್ನುತ |
ಸರಸಿಜಾಸನ ಸನಕನಾರದಮುಖ್ಯಮುನಿವಂದ್ಯ ||
ಕ್ಷರಿತಕಲ್ಮಷ ವರರಜೋಗುಣ |
ಭರಿತ ವಾಣೀಪ್ರಾಣನಾಯಕ |
ಕರುಣಿಸುವುದಾನತಜನೌಘವನೊಲಿದು ಕಮಲಭವ ||

ಪರಶುಮೋದಕಹಸ್ತ ವರಸಿಂ |
ಧುರವದನ ಶಶಿವರ್ಣ ನಾಗಾ |
ಭರಣ ಸುಗುಣಸ್ಫುರಣರಾಜಿತ ಮೂಷಕಾರೂಢ ||
ಸುರನರೋರಗಲೋಕಪೂಜಿತ |
ಭರಿತಭದ್ರಾಕಾರ ವಿಘ್ನೇ |
ಶ್ವರನೆ ನಿನಗೆರಗುವೆನು ಕೊಡುಯೆನಗಿಷ್ಟಸಮ್ಮತಿಯ || ೪

ಪಡೆದವನು ದುಗ್ಧಾಬ್ಧಿ, ಮಿಗೆ ನಿ |
ನ್ನೊಡನೆ ಹುಟ್ಟಿದನಮೃತಕರ, ಕೈ |
ವಿಡಿದ ಪುರುಷನು ವರಚತುರ್ದಶಭುವನರಕ್ಷಕನು ||
ಪೊಡೆಯಲುದಿಸಿಹನಸಮಶರನೆಡೆ |
ಬಿಡದೆ ಮಹಿಮೆಯನೇನ ವರ್ಣಿಪೆ |
ಕೊಡು ಎನಗಭೀಷ್ಟವನು ಮುದದೊಳಗಿಂದಿರಾದೇವಿ || ೫
ಲಲಿತ ಹಂಸೀಗಣದ ನಡೆಗಳು |
ಚಲಿಸುವೆಳಮೀನ್ಗಳ ಕಟಾಕ್ಷವು |
ತೊಳಗುವಾವಟಿಗುರುಳು ವಿಮಲಾಂಬುವಿನ ಸೈಸಿರಿಯು ||
ಜಲಜವದನವು ಚಕ್ರಮಿಥುನೋ |
ಜ್ಜ್ವಲಕುಚದ್ವಯದಿಂದ ನವನಿ |
ರ್ಮಲಸರೋವರದಂತೆಸೆವ ವಾಗ್ದೇವಿ ಕೊಡು ಮತಿಯ ||
ಧನಿಕಗಿತ್ತ ಸುದಾನ, ಪ್ರವಹಿಸು |
ವ ನದಿಯೊಳು ಮುಳಿ ಸುರಿದ ತೈಲಸಂ |
ತನವರತ ಕವಿತಾಗಮವನಾಳಿದವಗೆ ನೀನೊಲಿಯೆ ||
ನೆನೆಯುರದಹಿಂಡೆನ್ನ ಜಿಹ್ವೆಯೊ |
ಳನುನಯದಿ ನೀನೊಲಿದು ಹೇಳಿಸೆ |
ಮನದಣಿಯೆ ನುತಿಗೈವೆ ಸಂತತ ಶಾರದಾದೇವಿ || ೬
ಪಕ್ಷಯುಗ ವರಕುಂಕುಮಾಕ್ತ ನಿ |
ರೀಕ್ಷಿಸುವ ಮುನಿವಮೃತರೂಪ ಸು |
ಮೋಕ್ಷವಂ ಕೊಡುವನೆಂಬ ಕೃಷ್ಣಸ್ಮರಣೆ ವಾಣಿಯೊಳು ||
ಅಕ್ಷಯನ ಬೆನ್ನಿನಲಿ ಪೊತ್ತಿಹ |
ಪಕ್ಷಿರಾಜನೆ ಶರಣು ಎನಗೆ ಸು |
ರಕ್ಷಿತಕ್ಷೇಮವನೆನಗೆ ಕೃತಿಹೇಳಿಸುವುದೊಲಿದು || ೭
ರಾಮಪದಯುಗಕಲ್ಪಕುಜವಿ |
ಶ್ರಾಮ ದಶಶಿರನಗರಜಾತಲ |
ರಾಮನಿಶಿತಕುಠಾರ ರಣಪಟುದೈತ್ಯಸುತಮಥನ ||
ರಾಮಪೌರುಷವಾರ್ಧಿವರ್ಧನ |
ಸೋಮ ಸೀತಾಹ್ಲಾದಕರ ಸು |
ಪ್ರೇಮದಲಿ ಕೊಡು ಮತಿಯ ಮುಖ್ಯಪ್ರಾಣ ನೀನೆನಗೆ || ೮

ದಿನಕೆ ಲಕ್ಷಾಂತರಸುಯೋಜನ |
ಕನಕಗಿರಿಯನು ತೊಳಲಿ ದಶದಿ |
ಗ್ಗನಿತನಿಬಿಡತರಾಂಧಕಾರವ ಬಿಡಿಸಿ ಭೂಸುರರ ||
ವಿನುತಸತ್ಕೃತ್ಯವನು ಕೈಕೊಂ |
ಡನವರತ ನಿರ್ದೋಷನಾಗಿಹ |
ದಿನಪ ಕೊಡು ಸತ್ಕೃತಿಯ ಪೂರೈಸುವ ಮಹಾಮತಿಯ || ೧೦

ವ್ಯಾಸವಾಲ್ಮೀಕರ ಪದಾಬ್ಜಕೆ, |
ವಾಸುದೇವಕಥಾಮೃತವ ವಿ |
ನ್ಯಾಸದಿಂ ನುತಿಗೈವ ಶುಕಗೆ, ಮಹಾಪ್ರಬಂಧಕರ ||
ಭಾಸುರಾಂಘ್ರಿದ್ವಯಕೆ, ನಮಿಸುತ |
ನಾ ನಮೂಥಾನದಲಿ ಪೇಳುವೆ |
ವಾಸುದೇವಧನಂಜಯರ ಚರಿತವನು ಸಮ್ಮುದದಿ || ೧೧

ಕಾಳಿದಾಸ ಮಯೂರ ವರಕವಿ |
ಮಾಘಮುನಿ ಬಾಣಾಂಕ ದಂಡಿ ವಿ |
ಶಾಲಮತಿ ಮಲ್ಹಣಿ ಕುಮಾರವ್ಯಾಸ ಶುಕರೂಪ ||
ಲೋಲಗುಣಲಕ್ಷ್ಮೀಶ-ಷಡ ಕವಿ |
ಜಾಲನ್ಮೃದುನಾದಪಲ್ಲವಗಂಗ |
ಫಾಲಮಂ ಚಾಚುತ್ತ ಪೇಳುವೆನೀಮಹಾಕೃತಿಯ || ೧೨

ಅನುಗುಂದದೆ ಮುನ್ನ ದುಷ್ಕವಿ |
ನಿವಹಚರಣದ್ವಂದ್ವಕೆರಗುವೆ |
ವಿನಯದಿಂ ನಾಶ್ಯಂಗಯುವನಾಗಾನು ಭಕ್ತಿಯಲಿ ||
ಅನಘರಿಗೆ ಬಾಲಕನು ಪೇಳುವ |
ನವಕಥಾವಿಸ್ತರವ ಮುದದಿಂ |
ಭುವನದೊಳ್ ಪ್ರಖ್ಯಾತಿಯಹವೋಲ್ ಗುಣವ ಗ್ರಹಿಸುವುದು || ೧೩

ಓದುವ ತಾನಲ್ಲ ಬಲ್ಲವ, |
ಮೋದದೊಳಲಂಕಾರ ರಸ ಛಂ |
ದಾದಿಗಳ ನೆನದಿಯೆ, ದೇವರು ಒಲ್ಲ ಕೆಲಸವಿದು ||
ಸಾಧುಸತ್ಕವಿವರರು ಮಿಗೆ ಲೇ |
ಸಾದುದೆನ್ನೆಂಬಂತೆ ಮತಿಯನು |
ಸಾದರದೊಳೆನಗಿತ್ತು ರಕ್ಷಿಸೆ ಕೀರ್ತಿ ನಿಮಗಹುದು || ೧೪

ಸಕಲದೇವತೆಗಳಿಗೆ ಬೞಿಕಲಿ |
ಸಕಲಕವಿಕೋವಿದರಿಗಾಂ ಸ |
ದ್ಭಕುತಿಯಲಿ ವಂದಿಸುತ ಕೃಷ್ಣಾರ್ಜುನರ ಸಂಗರವ ||
ಯುಕುತದಿಂ ಪೇೞುವೆನು ಬಹಳಾ |
ಸಕತಿಯಲಿ ಕೇಳುವ ಮಹಾತ್ಮರು |
ಪ್ರಕಟಿಸುವೊಲಿದ ತಿದ್ದಿ ಮೆಱೆವುದು ನಿಜಗುಣಾವಳಿಯ || ೧೫

ವರಮಹಾಭಾರತಕಥಾಮೃತ |
ಶರಧಿಮಧ್ಯದಿ ರಾಜಿಸುವ ಹರಿ |
ನರವಿವಾದವ ಭಾಮಿನೀಷಟ್ಪದಿಯೊಳನುಗೈದು ||
ಧರೆಗೆ ಕನ್ನಡವಾಗಿ ಪೇೞಿದ್ದೆನು |
ಹಿರಿಯರವಧರಿಸೆನ್ನ ಮೇಲತಿ |
ಕರುಣಮಂ ಪಾಲಿಸುತ ಮನವೊಲಿದೀಮಹಾಕೃತಿಯ || ೧೬

ಸಿರಿಯರಸನೊಲವಿಂದ ರಚಿಸಿದ |
ಮಿಱುಪ ಕಾಶ್ಯಪಗೋತ್ರಸಂಭವ |
ಧರೆಗಧಿಕ ಹೋತೂರುಬೆಟ್ಟರಸನ ತನೂಭವನು ||
ಸರಸಭಾರತಿ ಕೋನಯಾಖ್ಯನು |
ತರಣಿಚಂದ್ರಮರುಳ್ಳನಕ ಸು |
ಸ್ಥಿರವೆನಿಸಲೀಕೃತಿಯ ಸಜ್ಜನರುಗಳು ಲಾಲಿಪುದು || ೧೭

ಈಕೃತಿಗೆ ನಾಯಕನದಾರೆನೆ |
ಲೋಕಕತಿಶಯಪುಣ್ಯಾಕರ ಭೂ |
ಲೋಕದೊಳ್ ವಿಖ್ಯಾತ ತಿರುವೇಂಕಟನಗಾಧೀಶ ||
ಶ್ರೀಕುಚಾಗ್ರಸುಕುಂಕುಮಾಂಕಿತ |
ಸೌಕುಮಾರೋರಸ್ಸ್ಥಲಸು ಲೋ |
ಕೈಕಪೂಜಿತ ಹರಿಯು ತಾನೆ ಕೃತೀಶನಾಗೆಸೆವ || ೧೮

ಸಕಲಲೋಕೇಶ್ವರಗೆ ರಾಜಿಪ |
ಸಕಲವೇದನುತಂಗೆ ಸುಲಲಿತ |
ಸಕಲಯಾಗಮಯಂಗೆ ಸಕಲೋರ್ವೀನಿವಾಸಂಗೆ ||
ಸಕಲಗುಣಸಂಯುತಗೆ ವಿಧಿಮುಖ |
ಸಕಲಸುರರನು ಕಾದ ದೇವಗೆ |
ಸಕಲಶರಣಾಧೀನಹರಿಗೊಪ್ಪಿಸುವೆನೀಕೃತಿಯ || ೧೯

ವೇಂಕಟಾಚಲಪತಿಗೆ ಭಾಸುರ |
ಪಂಕಜಾಪ್ತಸ್ತುತಗೆ ನಿರುಪಮ |
ಸಂಕರುಷಣಗೆ ಬ್ರಹ್ಮಸುರಪತಿಮುಖ್ಯರೊಡೆಯಂಗೆ ||
ಪಂಕಜಾಕ್ಷೀರಮಣಗಮಲಸು |
ಪಂಕರುಹನಾಭಗೆ ಜಗತ್ಪತಿ |
ವೆಂಕಟೇಶಗೆ ಕೊಡುವೆ ನಾ ರಚಿಸಿದ ಮಹಾಕೃತಿಯ || ೨೦

ಆದಿಮೂರ್ತಿಗೆ ಹರಿಗೆ ಯಗಣಿತ |
ವೇದಮಯವೇದಾಂತವೇದ್ಯಗೆ |
ಮೇದಿನೀಪತಿಯಂಬರೀಷವಿಭೀಷಣಾದಿಗಳ ||
ಸಾದರದಿ ರಕ್ಷಿಸಿದ ವಿಮಲ ವಿ |
ನೋದವಿಗ್ರಹನೆನಿಪ ಬಹಳಕೃ |
ಪೋದಧಿಗೆ ಶ್ರೀವೆಂಕಟೇಶಗೆ ಕೊಡುವೆನೀಕೃತಿಯ || ೨೧

ಅಂಬುಜಾಕ್ಷಿಯ ಕಾದ ದೇವಗೆ |
ಶಂಬರಾರಿಯ ಪಡೆದ ಸಾಮಿಗೆ |
ಅಂಬುರುಹಭವ ಸೂತಮನುಮುನಿಪಾಲಗಚ್ಯುತಗೆ ||
ಕಂಬುಕಂಠ ವಿಶಾಲವಕ್ಷಗೆ |
ಕಂಬುಚಕ್ರಗದಾಬ್ಜಪಾಣಿಗೆ |
ನಂಬಿದವರನು ಸಲಹುವರಸಗೆ ಕೊಡುವೆನೀಕೃತಿಯ || ೨೨

ಜಲಜ ಕಚ್ಛಪ ಕ್ರೋಡರೂಪಗೆ |
ಲಲಿತ ನರಮೃಗವೇಷಧಾರಿಗೆ |
ಬಲರಿಪುವಿನನುಜಂಗೆ ಭಾರ್ಗವರಾಮ ರಾಘವಗೆ ||
ಬಲಗೆ ಬೌದ್ಧಾಕೃತಿಯ ತಾಳ್ದಗೆ |
ಲಲಿತ ತುರಗಾರೂಢನಾದಗೆ |
ಯೊಲವಿನಿಂದರ್ಪಿಸುವೆನಾರಚಿಸಿದ ಮಹಾಕೃತಿಯ || ೨೩

ಕೋಟಿಸೂರ್ಯದ್ಯುತಿ ಘನಾಂಗಗೆ |
ಕೋಟಿಸುರಪತಿಭೋಗವುಳ್ಳಗೆ |
ಕೋಟಿ ಬೊಮ್ಮರಿಗೆಸೆವ ರಾಜಸಗುಣಸಮಗ್ರಂಗೆ ||
ಕೋಟಿಮಹಿಮಾನ್ವಿತಗೆ ಮನ್ಮಥ |
ಕೋಟಿಸೌಂದರಯುತಗೆ ಕೊಟ್ಟೆನು |
ಮಾಟೆನಿಪ ಸತ್ಕೃತಿಯ ತಿರುವೇಂಕಟಕೃಪಾನಿಧಿಗೆ || ೨೪

ವರತಟಾಕ್ಷವ ಕಟ್ಟಿಸಿದ ಫಲ |
ಹಿರಿದು ಧನ ನಿಕ್ಷೇಪಫಲ ಬಂ |
ಧುರದ ಬುಧಸ್ಥಾಪ್ಯಫಲ ಹರಿಹರವರಾಲಯುವ ||
ಭರದಿ ವಿರಚಿಸಿದಖಿಳಫಲ ವಿ |
ಸ್ತರ ವನಾಳಿಯ ಹಾಯ್ಕಿಸಿದ ಫಲ |
ದೊರವುದೀಸತ್ಕೃತಿಯ ಶ್ರದ್ಧೆಯಲೊಲಿದು ಕೇಳ್ದರಿಗೆ || ೨೫

ಆಯುರಾರೋಗ್ಯವನು ಬಹಳ |
ಶ್ರೀಯುತದ ಸಾಂಮ್ರಾಜ್ಯಪದವನು |
ಪಾಯಶಕ್ತಿಯನಖಿಳ ಗೋಧನ ರಾಜಪೂಜಿತವ ||
ಧೀಯುತವ ಬಹುಸುಖವನಧಿಕೋ |
ಪಾಯದಿಂ ಕೃತಿ ಪೇಳ್ದ ಮಹಿಮಗೆ |
ಶ್ರೀಯರಸ ತಿರುವೇಂಕಟೇಶನು ಕರುಣಿಸುವನೊಲಿದು || ೨೬

ಇಂತು ಪೀಠಿಕಾಸಂಧಿ ಸಂಪೂರ್ಣಂ

## ಎರಡನೆಯ ಸಂಧಿ

ಸೂಚನೆ || ರಾಜವಂಶಲಲಾಮನಹ ಜನ |
ಮೇಜಯುಗೆ ಹೇಳಿದನು ಮುನಿಜನ |
ತೇಜ ವೈಶಂಪಾಯನಾಹರಿನರಕಥಾಗವುವ ||

ವಿಮಲ ವರವೇದಾಂತನಿಷ್ಠ |
ಪ್ರಮುಖರುತ್ತಮಶಾಸ್ತ್ರಕುಶಲರು |
ಕಮಲನಾಭಭವಾಂಘ್ರಿಪದುಮಪರಾಗಮಧುಕರರು ||
ಕ್ರಮಿತರಖಿಳಾಗಮನಿಪುಣರ |
ಕ್ರಮವಿದೂರರು ನೈಮಿಶಾಖ್ಯಾ |
ಶ್ರಮನಿವಾಸದಲೊಪ್ಪುತಿರ್ದರು ಶೌನಕಾದಿಗಳು || ೧

ನಿರುತ ನೆಲೆಗೊಂಡಿರ್ಪ ಶಾಂತಿಯೆ |
ಸುರುಚಿರ ಗ್ರಹರಾಜಿ ಪರಿಕಿಸೆ |
ಪರಮದೈವಧ್ಯಾನವಾಮುಹಿಮರ್ಗೆ ಮನವಾರ್ತೆ ||
ಉರುತರಾಮ್ನಾಯಾಂತತತ್ವವೆ |
ಭರಿತ ಯಮನಿಯಮಾದಿ ಸೋಪ |
ಸ್ಕರವೆನಿಸೆ ನಿಶ್ಚಿಂತರಾಗಿಹರಾತಪೋಧನದಿ || ೨
ವರಮೃಗಾಜಿನದಮಲವಸನದ |
ಭರಿತ ರುದ್ರಾಕ್ಷೌಘದುರುವಿ |
ಸ್ತರವಿಭೂಷಣದಿಂದ ಸರ್ವಾಂಗದಲಿ ಧರಿಸಿರ್ಪ ||
ಉರುವಿಭೂತಿಯೆ ಮಲಯಜದ ಸಿರಿ |
ಮೆಱೆಯಲಾವ್ರತನಿಷ್ಠರಿರ್ದರು |
ಪರಮಭೋಗಿಗಳಂತೆ ವನಸಾಂಮ್ರಾಜ್ಯವೆಂದೆನಿಸಿ || ೩
ಪತಿ ನಮಗೆ ನಿಜದೈವವೆಂದೇ |
ಇತರ ಚಿಂತೆಯನುೞಿದಹರ್ನಿಶ |
ಪತಿಯ ಸೇವೆಯೊಳಿರ್ಪ ಸುಪತಿವ್ರತೆಯರಂದದಲಿ ||
ಅತಿಶಯದ ಭಕ್ತಿಯಲಿ ಪೂಜಿಸಿ |
ನುತಿಸುತನ್ಯವನುೞಿದು ತ್ರಿಜಗ |
ತ್ಪತಿಯ ನೆನಹಿನಲಿರ್ದರನುದಿನ ಶೌನಕಾದಿಗಳು || ೪
ಈಪರಿಯೊಳಾಗಹನಮಧ್ಯದೊ |
ಳಾಪುರಾತನಮುನಿಗಳಿರುತಿರೆ |
ರೂಪುದೋಱದನವರ್ಗೆ ಸೂತಪುರಾಣಿಕನು ಬೞಿಕ ||
ತಾಪಸರು ಕಂಡೀತನನು ಹರು |
ಷಾಪಗಾಂಚಿತರಾಗಿ ವಿನಯಾ |
ಲಾಪವಚನದೊಳಿದಿರುವಂದೊಯ್ದರು ತಪೋವನಕೆ || ೫
ಎತ್ತಣಿಂದೈತಂದಿರಿಲ್ಲಿಗ |
ದೆತ್ತ ಗಮಿಸುವ ಪಯಣ ನಿಮ್ಮಯ |
ದುತ್ತಮೋತ್ತಮ ದರುಶನವು ಬೞಿಕೆಮಗೆ ಸುದಿನವಲೆ ||
ಕತ್ತಲೆಯ ಮೋಹರಕೆ ರವಿ ತಲೆ |
ಯೆತ್ತಿದಂದದಿ ಜನದ ತಾಮಸ |
ದೊತ್ತು ಪೋದುದು ಭವದಮಿತತೇಜೋರ್ಕ ಪಸರಿಸಲು || ೬

ಅನುದಿನವು ಜಪ ತಪ ನಿಯಮ ವರ |
ಘನತರ ಸ್ವಾಧ್ಯಾಯ ತತ್ವವ |
ನೊನರಿಸುತಲೀಪರಿಯೊಳಾವೀಪುಣ್ಯಭೂಮಿಯಲಿ ||
ದಿನಗಳೆವೆ ಸತ್ಕೃತ್ಯದಿಂದವೆ |
ವನಜನಾಭಕಥಾಸುಧಾರಸ |
ವನು ಸವಿದು ಸಂತುಷ್ಟರಾಗುವ ಸಮಯ ದೊರಕಿತಲಾ || ೭

ಈವಿಧದೊಳಿರುತಿರ್ಪ ವರನತಿ |
ಪಾವನವ ಮಾಡುವ ಮಹಾತ್ಮರು |
ನೀವಲೇ ಕೃಪೆಯಿಂದಲುತ್ತಮವಾದ ಹರಿಕಥೆಯ ||
ಭಾವಶುದ್ಧಿಯೊಳಖಿಳ ಕರುಣಾನೊ |
ಳೋವಿ ಸುಕೃತಿಗಳಪ್ಪ ತೆರದಲಿ |
ಕಾವುದೆಂದಾತನನು ನುತಿಮಾಡಿದುದು ಮುನಿನಿಕರ || ೮

ಎನಲು ಹರುಷಿತನಾಗಿ ಸೂತನು |
ಮನದೊಳಗೆ ಸಂಭ್ರಮಿಸಿ ಶಿವಶಿವ |
ಎನಗಿನಿತು ಬಗೆಗಳಲಿ ಸನ್ನುತಿಯೇಕಪ್ರಾಕೃತದ ||
ಮುನಿಗಳೇ ನೀವಾದಿಪುರುಷನ |
ತನುಗಳಲ್ಲಾ ನೋಡೆ ನಿಮ್ಮಯ |
ಘನಚರಿತ್ರವ ಕೇಳ್ದವರು ಕೃತಕೃತ್ಯರಹರೆಂದ || ೯

ಮನೆಗೆ ಮನವಾರತೆಗೆ ವಿತ್ತಕೆ |
ವನಿತೆಯರಿಗಭಿಲಾಷೆ ಮಾಡದೆ |
ಮನದೊಳುಕ್ತಿಯೊಳಂಗದಲಿ ಹರಿದೈವ ಗುರುವೆಂದು ||
ಅನುನಯದೊಳಿಂಬಿಟ್ಟು ಹರಿಪದ |
ವನಜಸೇವೆಯೊಳಿರ್ಪ ಮಹಿಮರ |
ನನುಕರಿಸುವವೆ ಪಾಪಜಡತೆಗಳೆಂದನಾಸೂತ || ೧೦

ಆವ ಹರಿಕಥೆಯಿದಕೆ ಪಾಸಟಿ |
ಯಾವ ಷೋಡಶದಾನ ಸದೃಶ ಮ |
ಹಾವನಾಂತರದಲ್ಲಿ ಸತ್ಕರ್ಮಗಳೊಳಿಡಬಿಡದೆ ||
ಭಾವಜನ ಪಿತನಂಘ್ರಿಪೂಜೆಯ |
ಭಾವಶುದ್ಧಿಯೊಳೊಸೆದು ಮಾಡುವ |
ಪಾವನಿಗಳೈ ನೀವು ನಿಮಗಿನ್ನಾರು ಸರಿಯೆಂದ || ೧೧

ಆದಡವಧರಿಪುದೆಲೆ ಮಹಾತ್ಮ |
ರಾ ದಯಾಂಬುಧಿ ವಾಸುದೇವನ |
ವೇದವೇದ್ಯನ ವಿಶ್ವಪೂಜ್ಯನ ಮಹಿಮೆ ಪಲವಿಹವು ||
ಸಾದರದೊಳೇಕತೆಯನಱುಹೆನೆ |
ಮಾಧವನ ಕೃಪೆಯಿಂದೆ ಪೇಳುವೆ |
ಮೋದದಿಂದಾಜ್ಞಾಪಿಸೆಂದನು ಸೂತ ಕೈಮುಗಿದು || ೧೨

ಅಹುದು ಪೌರಾಣಿಕರೆ ನಿಮ್ಮಯ |
ವಿಹಿತವಾಕ್ಯಪ್ರೌಢಿಯಿದು ವನ |
ರುಹದಳಾಕ್ಷನು ಪಾಂಡವರಿಗಧಿನಾಥನೆಂದೆನಿಸಿ ||
ಕುಹಕವಿಲ್ಲದೆ ಪಾಲಿಸುತಲೊಲಿ |
ದಿಹನದೇಕರ್ಜುನನೊಡನೆ ವಿ |
ಗ್ರಹವ ಮಾಡಿದನೆಂದು ನುಡಿದರು ಶೌನಕಾದಿಗಳು || ೧೩

ನರನು ನಾರಾಯಣನೆನಿಸಿ ಬಳಿ |
ಕೆರಡುದೋಱದೆ ಬಾವಮೈದುನ |
ರಿರವದೊಂದೇ ತನುವೆನಿಸಿ ಜಗದೊಳಗೆ ತೋಱಿಸುತ ||
ಪರಮಬಾಂಧವನಾಗಿ ಕಡೆಯಲಿ |
ನರನೊಡನೆ ಸಂಗ್ರಾಮಕೆಯ್ದಿದ |
ಪರಿಯನೆಲ್ಲವ ತಮಗೆ ಹೇಳೆಂದುದು ಮುನಿಸ್ತೋಮ || ೧೪

ಎನಲು ಸಂತಸದಿಂದ ಸೂತನು |
ಮನದೊಳಗೆ ಸಂಭ್ರಮಿಸಿ ನುಡಿದನು |
ಮುನಿಪ ವೈಶಂಪಾಯ ತಾ ಜನಮೇಜಯಗೆ ಪೇಳ್ದ ||
ಘನಕಥಾಸಂಗತಿಯ ವಿವರಿಸು |
ವೆನು ಮಹಾಭಾರತಕಥಾಮೃತ |
ವನಧಿಮಧ್ಯದೊಳೆಸೆದಿಹುದು ಚಿತ್ತೈಸಿ ನೀವೆಂದ || ೧೫

ಆ ಮಹಾಭಾರತದೊಳೆಸೆವ ಸ |
ನಾಮ ವನಪರ್ವದೊಳಗುದಿಸಿದ |
ರಾಮಣೀಯಕ ಪರಧನಂಜಯಚರಿತವನು ನಿಮಗೆ ||
ಪ್ರೇಮದಿಂದಱುಹುವೆನು ಘನನಿ |
ಸ್ಸೀಮರಾಲಿಪುದೆಂದು ಮೌನಿ |
ಸ್ತೋಮಯುತ ಶೌನಕರಿಗೆಂದನು ಸೂತ ವಿನಯದಲಿ || ೧೬

[ಒರೆವೆನೈ ನೃಪ] ಕೇಳರಣ್ಯದ |
ಲುರುವ ದ್ವೈತವನಾಂತರದಿ ನೃಪ |
ವರರು ದ್ರೌಪದಿ[ಸಹಿತ ವಿಪ್ರರ ಕೂಡಿಯಿರುತಿರಲು]
ದೊರಕಿದುದು ಘನ ಸಮರವಾಹರಿ |
ನರರೊಳಗೆ ಬೞಿಕೆನುತ ಶಶಿಕುಲ |
ದರಸ ಜನಮೇಜಯಗೆ ವೈಶಂಪಾಯಮುನಿ ನುಡಿದ || ೧೭

ಅರಸ ಕೇಳ್ ಗಯನೆಂಬ ಗಂಧ |
ರ್ವರ ಶಿರೋಮಣಿ ಕೃಷ್ಣರಾಯಂ |
ಗುರುತರದ್ರೋಹವನೆಸಗಿ ಫಲುಗುಣನ ಮಱಿವುಗಲು ||
ಅಱಿತು ಹರಿ ಕೊಡ ಹೇೞಲವನನು |
ಮುರಳಿ ಕೊಡೆನೆನೆ ಕಾದಿದರು ಹರಿ |
ನರರು ತ್ರೈಜಗವೆಲ್ಲ ಕಂಪಿಸೆ ದ್ವೈತಕಾನನದಿ || ೧೮

ಬೞಿಕಲಾಪರಮೇಶನಿಬ್ಬರ |
ತಿಳುಪಿ ಸಾಮದಲೊಂದು ಮಾಡಿಯೆ |
ನಿಳಯಕೈದಿದನದು ನಿಮಿತ್ತವು ವೈರಕೆಂದೆನಲು ||
ತಿಳಿಯದೆಲೆ ಮುನಿಪೋತ್ತಮನೆ ಗಯ |
ಜಳಜನಾಭಗದೇನ ಮಾಡಿದ |
ನೆಳಬಳವ ವಿಸ್ತರಿಸಿ ಪೇೞೆಂದನು ಮಹೀಪಾಳ || ೧೯

ಗಯನದೆಂಬವನಾರು ಬೞಿಕೆ |
ಲ್ಲಿಯ ನಿವಾಸವವಂಗದಾವ |
ನ್ವಯದಲುದಿಸಿಹನವನ ಪಡೆದಿಹ ತಂದೆ ತಾನಾರು ||
ನಿಯಮಿಸಿರ್ದಪವಾದವಾವುದು |
ನಯವಿದನೆ ಪೇೞೀಕಥೆಯ ನಿ |
ರ್ಣಯವ ತುದಿಮೊದಲಿಂದಲೆನಗೆಂದನು ಮಹೀಪಾಲ || ೨೦

ಇಂತೆನಲು ಜನಮೇಜಯನು, ಮಿಗೆ |
ಸಂತಸದಿ ಮುನಿನಾಥ ಮುರನರ |
ಕಾಂತಕನು ನರನಾಟಕದ ಲೀಲಾವಿನೋದದಲಿ ||
ಅಂತರಂಗವನೊಳಗಿರಿಸಿ ಬಹಿ |
ರಂತರವ್ಯಾಪಾರದಲಿ ಮಿಗೆ |
ನಿಂತು ನರನೊಳು ಸೆಣಸಿದಾಗಮವನು ನಿರೂಪಿಸಿದ || ೨೧

ಕೇಳು ಭೂಪತಿ ಪರಮಸದ್ಗುಣ |
ಶೀಲ ನೃಪಕೋಟೀರಮಧ್ಯವಿ |
ಶಾಲರಂಜಿತರತ್ನ ಹರಿಪದಕಮಲಷಟ್ಚರಣ ||
ಪೇಳುವೆನು ಮುದದಿಂದ ಹರಿನರ |
ರೇಳಿಗೆಯ ಕದನಪ್ರಪಂಚವ |
ನಾಲಿಸೈ ನೀನೆಂದು ನುಡಿದನು ನಗುತ ಮುನಿನಾಥ || ೨೨

ಅವನಿಯೊಳಗಣ ಖಳರ ಶಿಕ್ಷಿಸೆ |
ವಿವಿಧರೂಪವ ಧರಿಸಿ ರಾಕ್ಷಸ |
ನಿವಹವನು ಮರ್ದಿಸಿ ಮುರಾಂತಕ ದ್ವಾಪರದೊಳೆಸೆವ ||
ಅವನಿಪತಿ ವಸುದೇವ ದೇವಕಿ |
ಗವತರಿಸಿ ಕೃಷ್ಣಾವತಾರದ |
ಲವನಿಭಾರಕರನು ಮುರುಹಿ ಮಧುರೆಯಲಿ ನೆಲಸಿದನು || ೨೩

ಮಗಧನೃಪನುಪಟಳಕೆ ಮಧುರಾ |
ನಗರವನು ಬೀಳ್ಕೊಟ್ಟು ಮುರಹರ |
ಜಗಕಿದಚ್ಚರಿಯೆಂಬವೋಲ್ ಲವಣಾಬ್ಧಿಯೊಳು ನೆಲನ ||
ಮಿಗೆ ವಿನಯದಿಂ ಪಡೆದು ವಿರಚಿಪ |
ಒಗೆಯ ಸುರವರ್ಧಕಿಗೆ ಪೇಳಿ |
ಲ್ಕಗಣಿತೋಪಮ ನಿರ್ಮಿಸಿದನಾಕ್ಷಣದಿ ಪುರವರವ || ೨೪

ಸುರನಗರಕಿಮ್ಮಡಿ ಕುಬೇರನ |
ಪುರಿಗೆ ನೂರ್ಮಡಿ ವರುಣಮಾರುತ |
ತರಣಿನಂದನರಾಲಯಂಗಳಿಗೆರಡು ನೂರು ಮಡಿ ||
ಉರಗಕಿನ್ನರಯಕ್ಷಗಂಧ |
ರ್ವರ ನಗರಿಗೈನೂರು ಭೂಮೀ |
ಶ್ವರರ ಪುರಿಗಯುತಧಿಕಮೆನಲೆಸೆದಿಹುದು ಹರಿನಗರ || ೨೫

ನೆಲಸಿಹನು ತತ್ಪುರವರದೊಳಾ |
ಜಲಜಸಂಭವಪಿತನು ತನ್ನಯ |
ಲಲನೆಸಹಿತಗ್ರಜನು ಪಿತನೊಡನಧಿಕಹರುಷದಲಿ ||
ನಲಿಯಲಮರಸಮೂಹ ಮಾಗಧ |
ರುಲಿಯಲಾತಿರುವೇಂಕಟೇಶನು |
ಮಲತರನು ಮರ್ದಿಸುತಲಿರುತಿಹ ದ್ವಾರಕಿಯೊಳೊಲಿದು || ೨೬

ಅಂತು ಸಂಧಿ ೨ ಕ್ಕಂ ಪದ ೫೨ ಕ್ಕಂ ಮಂಗಳಂ

# ಮೂರನೆಯ ಸಂಧಿ

---

ಸೂಚನೆ|| ವಿವರಿಸಿದನಾದ್ವಾರಕಿಯ ನಿಜ |
ವಿವಿಧ ಸೌಭಾಗ್ಯದ ವಿಚಿತ್ರವ |
ನವನಿಗಿದು ಪೊಸತೆನಲು ವೈಶಂಪಾಯನಾನೃಪಗೆ ||

---

ಕೇಳಿದೈ ಶಶಿವಂಶನೃಪವರ |
ಮೌಳಿಮಣಿ ಜನಮೇಜಯನೆ ಸುವಿ |
ಶಾಳಹರಿಚಾರಿತ್ರವಾರ್ಧಿಯೊಳೊಂದು ಶೀಕರವ ||
ಪೇಳಲರಿದುರಗಾಧಿಪಗೆ ರಸ |
ನಾಳಿ ಪಡೆದಂಗೆಂತೆನಗೆ ಸಿರಿ |
ಲೋಲನಗ್ಗದ ಕಥೆಯನಱುಹಲ್ಕೆಂದನಾಮುನಿಪ || ೧

ಏನನೆಂಬೆನು ದ್ವಾರಕಿಯ ರಚ|
ನಾನುರಂಜಿತವನು ಧರೆಯೊಳಿಹ |
ಮಾನವರ ನಗರಿಗಳ ನಾಯಕರತ್ನದಂತೆಸೆವ ||
ದಾನವಾಮರಮರ್ತ್ಯರೊಳಗಸ |
ಮಾನವಾಗಿಹುದದಕೆ ಪಡಿಯಿಡೆ |
ಸೂನಶರಪಿತನಱಿವನಲ್ಲದೆ ಕಾಣೆ ತಾನೆಂದ || ೨

ಪರಿಧಿಪರಿವೃತದಿಂದ ಮೆಱೆದಿಹ |
ತರಣಿಮಂಡಲದಂತೆ ನಗರಕೆ |
ಪರಿಖೆ ತಾನೊಪ್ಪಿಹುದು ನೋಡಲಸಾಧ್ಯ ಚಿತ್ತರವ ||
ಸುರುಚಿರಾಮಲಹೇಮಮಯಬಂ |
ಧುರ ಸುಕೋಟಾವಳಿಯ ಮಿಗೆ ಯ |
ಳ್ಳಿರಿಯುತಾಧ್ರುವಮಂಡಲವನೆಸಗಿಪ್ಪುದೇವೇಱ್ವಿ ||

ನಿಲವ ನೋಡುವೆನೀಪುರದ ನಿಜ |
ವಲಯಸಹಿತವೆನುತ್ತ ಫಣಿಪನು |
ನೆಲನನುಱಿದತಿವೇಗದಿಂದವೆ ಪೋಗುತಿರಲೊಡನೆ ||
ಸಲೆ ದ್ವಿಜನ ಕಾಣುತ್ತ ಮುಂದಕೆ |
ತಳರಲನುಚಿತವೆಂದು ನಿಂದೊಲು |
ಬಳಸಿಕೊಂಡಿಹ ಕೋಟೆ ಮೆಱೆದುದು ರಜತನಿರ್ಮಿತದಿ || ೪

ವರಚತುರ್ದಶಭುವನಭಾರವ |
ಕರಿಗಳೆಂಟುರಗೇಂದ್ರಕಮಠರು |
ಧರಿಸಿ ಕೊಂಡಿಹರೆಂಬ ಚಿತ್ರವ ಪುರವನಿತೆ ಮುದದಿ ||
ಆೞ್ತು ಬಹೆಸೆನುತ್ತೈದೆ ಪಥದೊಳ್ |
ಗುರಗನನು ಕಂಡಿತ್ತ ಮರಳಿದ |
ಸರಣಿಯೋ ತಾನೆನಲು ಪರಿಖಾವಲಯವೆಸೆದಿಹುದು || ೫
ವರಪುರಾಲಯಗೋಪುರಾಗ್ರದಿ |
ಮೆಱೆವ ಮಣಿಮಯ ಹೇಮಕಲಶದ |
ಖರರುಚಿಯೊಳೀನಗರದಂಥತೆ ಹರವುದಲ್ಲದಡೆ ||
ತರಣಿಶಶಿಗಳ ಕಿರಣ ಸುೞಿವೊಡೆ |
ತೆರಹುಯೆಳ್ಳನಿತಿಲ್ಲವೆನೆ ತ್ತ |
ತ್ಪುರವರೋನ್ನತದಿರವ ಪೇೞುವನಾವ ಕವಿಯೆಂದ || ೬
ಆಣಿಮೌಕ್ತಿಕಜಾಲ ಲೋವೆಯ |
ಮಾಣಿಕದ ವೈಡೂರ್ಯ ವಜ್ರ |
ಶ್ರೇಣಿ ಗೋಮೇಧಿಕದ ಮುಗಿಲಟ್ಟಣೆಯ ಸಾಲುಗಳ್ ||
ಶೋಣಪವಳದ ತೋರಣದ ಬಿ |
ನ್ನಾಣದೆಸಕದ ಚಿತ್ರಪತ್ರದಿ |
ಕಾಣುತಿರ್ಪುದು ಸಂತತವು ಬಹುರತ್ನಮಯಮಾಗಿ || ೭
ಜಗದುದರನಹ ವಿಷ್ಣು ಭೂಪರ |
ಬಗೆಯನಂಗೀಕರಿಸಿ ನೆಲಸಿದ |
ಹಗರಣವ ಸುರರೆಲ್ಲ ಕೇಳುವುದೆಂದು ಪುರವನಿತೆ ||
ನಗುತ ಸುಕರಂಗಳ ನೆಗಹಿ ತಾ |
ಮಿಗೆ ಭರವಸದಿ ತೋಱುವವೊಲಿಹ |
ಅಗಣಿತೋನ್ನತ ಹರಿಮಯದ ಡೆಂಕಣಿಗಳೊಪ್ಪಿದುವು || ೮
ಕಾಣಿಸಿಹವಾಪುರದ ದೇವ |
ಶ್ರೇಣಿಯಾಲಯಗಳು ಬೞಿಕ ಬಿ |
ನ್ನಾಣಗೆಲಸದ ಪೌಳಿ ಮಂಟಪ ಗರ್ಭಗೃಹದಿಂದ ||
ಮಾಣಿಕದ ವೈಡೂರ್ಯ ಪವಳದ |
ಶ್ರೇಣಿನಿರ್ಮಿತದಿಂ ಸುದರ್ಶನ |
ಪಾಣಿಯರಮನೆಯುದಱ ಮಧ್ಯದೊಳೆಸೆಯುತಿಹುದೆಂದ || ೯

ಅರಮನೆಯ ಬೞಿವಿಡಿದು ಮೆಱೆದಿಹ |
ತರಣಿವೀಧಿಯ ಸೋಮವೀಧಿಯ |
ಪರಿಯನದನೇನೆಂಬೆ ನಾನಾ ತೆಱದ ಚಿತ್ರದಲಿ ||
ವಿರಚಿಸಿದ ಮೞಿಗೆಗಳು ಮಂಟಪ |
ಮೆಱೆಯುಲಿಪೆಗೆಜ್ಜೆಗಳವಡಿಸಿದಂ |
ಬರವಿರಾಜಿತಕೇತನಂಗಳ ಸಾಲ್ಗಳೆಸೆದಿಹವು || ೧೦
ಹರಿಯ ಬರವಿಗೆ ಹಾರವಿಸಿ ತ |
ನ್ನಿರವಿನಲ್ಲಿರ್ದಮಲಮೌಕ್ತಿಕ |
ವಿರಾಜಿತ ವಿದ್ರುಮವರಾಳಿಯ ಸಕಲಸಂಭ್ರಮದಿ ||
ಶರಧಿಪನು ರಂಜಿಸಲು ಬೀದಿಗ |
ಳೆರಡಱಲಿ ಕಟ್ಟಿಸಿದನೆಂಬೊಲು |
ಮೆಱೆದಿಹವು ತೋರಣಗಳೆತ್ತೆಱದಲ್ಲಿ ಸಾಲ್ನೆರೆದು || ೧೧
ದುರುಳ ಮಗಧನುಪದ್ರವದಿನಗ |
ಧರನ ಬೀಡಿಕೆಯೆನ್ನೊಳಾಯ್ತೆಂ |
ದುರುತರದ ಸಂಭ್ರಮದಿ ಬೀಯುವ ಶರಧಿ ಜೋಡಿಸಿದ ||
ತೆಱದಿ ತಂಡುಲ ತೈಲ ಗುಡ ಶ |
ರ್ಕರೆ ಫಲಾಜ್ಯಸಮೇತನೆಸೆದಿಪ |
ವೆರಡು ಸಾಲಿನಲೊಪ್ಪುವಂಗಡಿಗಳು ವಿರಾಜಿಸಿತು || ೧೨
ಪರಿಕಿಸಲು ಚಪ್ಪನ್ನದೇಶದ |
ನರರಿಗಖಿಳಪದಾರ್ಥಗಳ ತ |
ನ್ನಿರವಿಸಿಂದೀವಮಲಶರನಿಧಿ ತನ್ನೊಳಗೆ ಪುರವ ||
ಪರುಠವಿಸಿಕೊಂಡಿರ್ಪ ಕೃಷ್ಣಗೆ |
ತೆಱದಿಹನೆ ನವವಸ್ತುಗಳನೆನೆ |
ಮೆಱೆದಿಹವು ರತ್ನಾಳಿಯಂಗಡಿಗಳು ವಿರಾಜಿಸುತ || ೧೩
ವಿದಿತವರನಾನಾಗಮಪ್ರತಿ |
ಭದವಿರಾಜಿಪ ಹಂಸಗತಿನವ |
ವಿಧದಿ ಮೆಱೆವಾ ಬ್ರಹ್ಮಕುಲಹಯಕುಲಗಳಪರಮಿತ ||
ಅಧಿಕತರದಿಂ ಕುಂಭಿಣೀಪತಿ |
ವಿದಳನಂಗಳಲೆಸೆದು ಶೋಭಿಪ |
ಮದಿತಕ್ಷತ್ರಿಯಜಾಲ ಮದಕರಿಜಾಲವಿಹವಲ್ಲಿ || ೧೪

ಸುತಪ್ತಕಾಂಚನಕೋಟಿ ಕೇತನ |
ವಿತತಚಕ್ರಗಳಿಂದೆಸೆವ ಕೋಮಟಿಗ |
ಚಯ ಸ್ಯಂದನಗಳಖಿಳ ಮಹೋನ್ನತಿಯ ತಳೆದು (?) ||
ಅತಿಶಯದಿ ಪರಜೀವನೋದ್ಧರ |
ಣತೆಯ ಧರ್ಮನಿರೂಢಿಯಲಿ ಬಹು |
ಮತಿಗಳಹ ಪಾದಜರ ಕಾಲ್ಬಲವೆಸೆಯುತಿಹುದೆಂದ (?) || ೧೫

ಆರು ವರ್ಣಿಸಬಹುದಿಸಿತು ಭೂ |
ಸಾರವಾಮುದಕರಿಯ ಮುಱಿಗಳ |
ಸೇಱಿ ಸುರನದಿಯಲ್ಲೆಸೆವ ಕಲಧೌತದಬ್ಜಗಳ ||
ಸಾರಿ ಸೆಳೆಯಲುಬಹುದು ಬಹುಮದ |
ವಾರಣಾಳಿಗಳಾಯತನ ಮದ |
ನಾರಿ ತಾನೇ ಬಲ್ಲನೆಲೆ ಭೂಪಾಲ ಕೇಳೆಂದ || ೧೬

ಮೆಱೆದಿಹವು ಪುರದೊಳಗೆ ಗಣಿಕಾ |
ತರುಣಿಯರ ಗೃಹ ರಾಜವೀಥಿಗ |
ಳೆರಡು ದೆಸೆಯಲಿ ಸಾಲ್ಮೆಱೆದುವತಿಶಯದ ಲೋವೆಗಳು ||
ತರತರಂಗಳೊಳೆಸೆಯೆ ತಿಳಿಯಲು |
ಸ್ಮರನು ಮುನಿಗಳ ಬೇಂಟೆಯಾಡಲು |
ವಿರಚಿಸಿದ ಬೆಳ್ಳಾರವಲೆಗಳ ತೆಱದಿ ನೋಳ್ಪರಿಗೆ || ೧೭

ಸಿತಜಲಂಧರಗಳೊಳು ಕಾಣಿಪ |
ನುತಸುಸೌದಾಮಿನಿಯ ಕಾಂತಿಯೊ |
ಕ್ರತುಹರನ ಶಿರಮಧ್ಯಭಾಗದ ಶಶಿಯ ರೋಚಿಗಳೋ ||
ಅತಿಶಯದ ಸೌಧಾಗ್ರದಲ್ಲಿಹ |
ವಿತತ ನಾರೀಗಣದ ತನುರುಚಿ |
ಯತಿವಿಚಿತ್ರದಿ ಕಾಣಿಸುವುದೇನೆಂಬೆ ಕೇಳೆಂದ || ೧೮

ಅಳಿಸಮೂಹವ ಜರೆವ ಕುಂತಳ |
ಗಿಳಿಯ ನುಡಿಗಳ ಜರಿವ ಮಾತಿನ |
ಜಲಜವನಣಕಿಪ ಮೊಗ ನೈದಿಲ ನಗುವ ನಯನಗಳ ||
ಸುೞಿಯ ಪೞಿವ ಸುನಾಭಿ ರಂಭಾ |
ವಳಿಯನತಿಗಳೆವೂರುಗಳ್ಸ್ತನಿ |
ಮರ್ಗಳದ ಕಾಂತೆಯರಿಹರು ಸೌಧಂಗಳಲಿ ದ್ವಾರಕಿಯ || ೧೯

ವರಮುಹೂರ್ತದೊಳಂಗನೆಯರನಿ |
ಬರನು ಭೋಗಿಸಬೇಕೆನುತತಿ |
ತ್ವರಿತದಿಂ ಸಿತಕರನು ಬಹುಳತ್ವವನು ಕೈಕೊಂಡು ||
ಭರಿತಹರುಷದಿ ಕೂಡಿದಂತಾ |
ತೆಱದಿ ನವನಾಸಾಸುಮೌಕ್ತಿಕ |
ಮೆಱೆಯೆ ಚಂದ್ರಾನನೆಯರಿಹರಾಸೌಧಸೌಧದಲಿ || ೨೦

ಎಲ್ಲಿ ನೋಡಲು ಗಾನವಿದ್ಯವ |
ಸೊಲ್ಲಿಸುವ ತರಳೆಯರು ಗೃಹಗೃಹ |
ದಲ್ಲಿ ನೋಡಲು ನೆತ್ತಚದುರಂಗಗಳನಾಡುವರು ||
ಎಲ್ಲಿ ನೋಡಲು ವಿಟರುಗಳೊಡನೆ |
ಫುಲ್ಲಶರಕೇಳಿಗಳಲಿರುತಿಹ |
ರಲ್ಲದೆ ಪೆಱತಿಲ್ಲ ತಮ್ಮಯ ವೀಧಿಗಳೊಳೊಲಿದು || ೨೧

ಈಪರಿಯ ಸೌಭಾಗ್ಯ ನಗರವ |
ವ್ಯಾಪಿಸಿಹುದದನೇನ ಹೇಱುವೆ |
ನಾಪರಾತ್ಪರವಸ್ತು ದ್ವಾರಾವತಿಯ ನಗರದಲಿ ||
ಭೂಪರಂದವ ವಹಿಸಿ ಚಿನ್ಮಯ |
ರೂಪನಾಗಿಹ ವಿಷ್ಣು ನರರಿಗೆ |
ರೂಪವನು ತೋಱುತ್ತ ನಟಿಸುತ್ತಿಹನು ಕೇಳೆಂದ || ೨೨

ತಂದೆ ತಾಯ್ ಜಗಕೆನಿಸುವಾಗೋ |
ವಿಂದಮೂರ್ತಿಗೆ ತಿಳಿಯೆ ಜಗದೊಳು |
ತಂದೆ ವಸುದೇವಾಖ್ಯ ತಾಯ್ ದೇವಕಿಯ ಗರ್ಭದಲಿ ||
ಬಂದು ಬಱಿಕಗ್ರಜಾನುಜಸುತ |
ವೃಂದಸತಿಯರನೇಕಪರಿಜನ |
ದಿಂದ ಸಾಂಸಾರಿಕನವೊಲು ನೆಲಸಿಹನು ನಗರಿಯಲಿ || ೨೩

ಶರಧಿಶತಗಾಂಭೀರ್ಯ ದಶರಥ |
ವರಸುತನ ಭುಜಶೌರ್ಯ ನಿರ್ಜರ |
ಗಿರಿಯ ಘನಸುಸ್ಥೈರ್ಯವಿಂದ್ರನ ಭೋಗಕೆರಡಯುತ ||
ಉರುತರಾಂಭೋಜಾತಸಂಭವ |
ಪರಮಪದಚಾತುರ್ಯದಿಂ ಮಾ |
ವರನು ಮೆಱೆದನು ತತ್ಪುರದೊಳತ್ಯಂತವೈಭವದಿ || ೨೪

ಮಿಗೆ ಮನೋವಾಕ್ಕಾಯಕರ್ಮಾ |
ದಿಗಳೊಳಸುರಾರಾತಿ ಪಾಲಿಪ |
ನಗರದೊಳ್ ಸ್ತ್ರೀಬಾಲವೃದ್ಧರೊಳಿಲ್ಲ ಪುಸಿನುಸುಳು ||
ಅಗಡುತನವನ್ಯಾಯ ಮೊಱೆ ಸೆಱೆ |
ತಗಪು ಕೊಂಡೆಯ ಕ್ರೋಧವೆಂಬಿವು |
ಬಗೆಗೊಳಿಸಿ ಮೊಳೆದೋಱವೆಲೆ ಭೂಪಾಲ ಕೇಳೆಂದ || ೨೪

ಪೆಚ್ಚುತಿಹವನುದಿನವು ಕಳೆಗಳು |
ಹೆಚ್ಚಿ ಚಂದ್ರಗೆ ಬಪ್ಪ ತೆಱದಲಿ |
ಸಚ್ಚರಿತ ಶುಭ ವಿಭವ ಚತುರತೆ ದಾನಧರ್ಮಗಳು ||
ನಿಚ್ಚಕಲ್ಯಾಣಂಗಳತಿಶಯ |
ದಚ್ಚರಿಯ ತಾಳ್ದಿಹುದು ಕೌತುಕ |
ವಚ್ಯುತನ ನಗರಿಯಲಿ ಪೇೞಲಸಾಧ್ಯವೆನಗೆಂದ || ೨೫

ಧರೆಯೊಳೈವತ್ತಾಱು ದೇಶದ |
ನರಪತಿಗಳೊಳ್ ತಿಳಿಯಲಂತಃ |
ಕರಣ ಪಾಂಡುಜರೈವರಲ್ಲಿಹುದವರೊಳರ್ಜುನನ ||
ವರಶರೀರವೆ ತನ್ನದಾಗಿಪು |
ದರವರಿಸದೀಪರಿಯಲವರನು |
ಕರುಣಿಸುತ್ತಿಹ ಭಕ್ತವತ್ಸಲನೆಂಬುದನು ತೋಱಿ || ೨೬

ಇರುತಿರಲು ಬೞಿಕೊಂದು ದಿನ ಮುರ |
ಹರನಲಂಕಾರದಲಿ ಸರ್ವಾ |
ಭರಣಭೂಷಿತನಾಗಿ ದಿವ್ಯದುಕೂಲಪರಿಮಳವ ||
ಧರಿಸಿ ಸುತಸೋದರರು ಹಿತವರು |
ವರಪುರೋಹಿತ ಮಂತ್ರಿ ಗಾಯಕ |
ಕರಣಿಕರು ಕವಿಜಾಲದೊಡನೈತಂದನೋಲಗಕೆ || ೨೭

ವಿರಚಿಸುವಡಳವಲ್ಲ ಯಾದವ |
ರರಸಗೊಪ್ಪುವ ವರಸಭಾವಿ |
ಸ್ತರದ ಮಂಟಪದತಿಶಯವನಜಸುರಪಭೋಗಿಪರ ||
ಉರುತರದ ಚಾವಡಿಗಳೊಳಗೀ |
ಪರಿಯ ಸಭೆಯನು ಕಾಣೆನೆಲೆ ನೃಪ |
ವರಶಿಖಾಮಣಿಯೆಂದು ವೈಶಂಪಾಯಮುನಿ ನುಡಿದ || ೨೮

ಮರಕತಂಗಳ ಜಗಲಿ ನೀಲದಿ |
ವಿರಚಿಸಿದ ಭಿತ್ತಿಗಳು ಪಳುಕಿನ |
ತರತರದ ನೆಲಗಟ್ಟು ಬಜ್ಜರಮಯದ ಕಂಭಗಳು ||
ಉರುತರದ ವೈಡೂರ್ಯನಿರ್ಮಿತ |
ವರಮದನಕರರಾಜಿಯೆಸೆದಿಪ |
ಪರಿಯನದನೇನೆಂಬೆನಾಚಾವಡಿಯ ಚಿತ್ರವನು || ೨೦

ಜಗಜಗಿಪ ಗೋಮೇದಕದ ಬೋ |
ದಿಗೆಗಳಗಣಿತಪುಷ್ಯರಾಗದ |
ಹೊಗರೊಗುವ ತೊಲೆ ಜಂತೆ ಮಾಣಿಕ್ಯದ ಸುಲೋವೆಗಳು ||
ಬಗೆಬಗೆಯ ಮೌಕ್ತಿಕದ ಸೂಸಕ |
ನಗುವ ಪವಳದ ಪ್ರತಿಮೆಗಳಲೊಗು |
ಮಿಗೆಯ ಸ್ವರ್ಣದ ಪದಕ ರಾಜಿಸುತಿಪುವು ಕೇಳೆಂದ || ೨೧

ಅತಿಶಯದಿ ಮುಕುರಗಳ ನಿಟ್ಟಿಪ |
ಗತಿಗತಿಗೆ ನಾಟ್ಯಗಳನಾಡುವ |
ರತಿಕಲಾಪ್ರೌಢಿಗಳ ಬಂಧವ ತೋರ್ಪ ವೀಣೆಗಳ ||
ಚತುರತೆಗಳೆಡಬಿಡದೆ ನುಡಿಯಿಪ |
ಕೃತಕಪಿಪುಲೋಪಾಯಮಾರ್ಗದ |
ಪ್ರತಿಮೆಗಳು ಸಜ್ಜೀವಭಾವದಲೆಸೆಯುತಿಹುವೆಂದ || ೨೨

ಪಣೆಗೆ ತಿಲುಕವನಿಡುವ ಸ್ಮರಮಾ |
ರ್ಗಣಗಳನು ಕರಗಳಲಿ ಧರಿಸಿಪ |
ಗೆಣೆಯರನು ಕಣ್ಸನ್ನೆಯಲಿ ಮಾತಾಡಿಸುತ್ತಿರುವ ||
ಮಣಿಮಯದ ಹಾರಗಳ ತಿರುಹುವ |
ಗಿಣಿಗಳಿಗೆ ನುಡಿಗಳನು ಕಲಿಸುವ |
ಗಣಿಕೆಯರ ಭಾವಗಳ ಪ್ರತಿಮೆಗಳೆಸೆದುವಗಲದಲಿ || ೨೩

ಕೊನೆವೆರಳ ನೆಲಕೂರಿ ತಪಗಳ |
ನೊನಲಿಸುವ ತಲೆಕೆಳಗುಮಾಡಿಯೆ |
ವಿನುತನಿಷ್ಠೆಗಳನ್ನು ನೆಗಚಿಪ ಯೋಗವೃತ್ತಿಗಳ ||
ಬಿನದಿಸುವ ಭಯಭಕ್ತಿಯಿಂದಲಿ |
ಮನದ ದೃಢದೊಗುಮಿಗೆಯಲರ್ಚಿಸು |
ವನುನಯದ ಭಾವಗಳ ಮುನಿಭಂಜಿಕೆಗಳೆಸೆದಿಹುವು || ೨೪

ವರಮಯೂರ ಮರಾಳ ಸಾರಸ |
ಸರಸಶುಕ ಕೋಕಿಲ ಬಕವ್ರಜ |
ಬುರಲೆ ಟಿಟ್ಟಿಭ ಕೊಂಚ ಕೊಳವಕ್ಕಿಗಳು ಭೇರುಂಡ ||
ಗರುಡಪಕ್ಷಿ ಕಪೋತ ಲಾವುಕ |
ವುರುಜಟಾಯು ಸುಚಕ್ರವಾಕಗ |
ಳರಿದೆನಿಪ ಪಕ್ಷಿಗಳ ಭಾವದ ಪ್ರತಿಮೆಯೆಸೆದಿಹುವು || ೩೫
ಘನವರಾಹ ವ್ಯಾಘ್ರ ವಾರಣ |
ಕನಕಶಶಕ ಮೃಗೇಂದ್ರ ಭಲ್ಲುಕ |
ವನಚರಾಶ್ವ ಕುರಂಗ ದಿಕ್ಪಾಲಕರು ಮೊದಲಾದ ||
ಅನಿಮಿಷರ ವಾಹನಗಳೊಳಗಾ |
ದನಿತು ಮೃಗವಕ್ಕಿಗಳ ಭಾವದ |
ಲನುನಯದ ಭಿತ್ತಿಗಳೆಸೆದುವಾಸಭೆಯೊಳಗಲದಲಿ || ೩೬
ಸಾರಣೆಯ ಕತ್ತುರಿಜವಾಜಿಯ |
ಕಾರಣೆಯ ಕುಂಕುಮದ ವರಪಿ |
ಸ್ತಾರಚಂದನ ಧೂಪವಾಸಿತ ಕಪ್ಪುರಂಗಳಲಿ ||
ತೋಱುತಿಹ ಬೊಂಬಾಳದೀಪ್ತಿಯು |
ಚಾರುಶಸ್ತ್ರಪ್ರಭೆಯಲಾಮುರ |
ವೈರಿಯೋಲಗಸಾಲೆ ನೆರೆ ರಾಜಿಸಿತು ನೋಳ್ಪರಿಗೆ || ೩೭
ಹಳವಿ ಸಂಧ್ಯಾರಾಗ ಮಾದಳಿ |
ಬಿಳಿದು ಪೊಪ್ಪಳಿ ಚಂದ್ರಗಾವಿಗ |
ಳಿಳೆಗೆ ಪೊಸತಪ ಮಂಚಿಟಿಕೆ ಗುಜ್ಜರಿ ದುಕೂಲಗಳ ||
ಅಳವಡಿಸಿ ಮಿಗೆ ಪಟ್ಟುಪಟ್ಟಾ |
ವಳಿಯ ಮೇಲ್ಕಟ್ಟಿನಲಿ ಲಕ್ಷ್ಮೀ |
ನಿಳಯನಹ ಶ್ರೀಕೃಷ್ಣನೋಲಗಸಾಲೆ ರಂಜಿಸಿತು || ೩೮
ವರಪಯೋನಿಧಿವಾಸನೋಲಗ |
ದಿರವನದನೇನೆಂಬೆನೆಲೆ ನೃಪ |
ವರನೆ ಕೇಳೈ ವಿಮಲಚತುರಾಂಬೋಧಿಪರಿವೃತದ ||
ತರಣಿ ಶಶಿಕುಲದರಸುಗಳು ವಿ |
ಸ್ತರದ ಮಣಿಮಯವರಕಿರೀಟಗ |
ಳೊರಸೊರಸಿನಿಂದಿರ್ಪರಗಣಿತ ನೊಸಲ ಕೈಗಳಲಿ || ೩೯

ಮುಡಿಯನೇವರಿಸುತ್ತ ಕಂಕಣ |
ಝಡಪುಗಳ ಕರ್ಣಾಭರಣಗಳ |
ಸಡಗರದ ವರಹಾರಹೀರಾವಳಿಯ ತಿರುಹುತ್ತ ||
ಕುಡಿತೆಗಂಗಳ ಚಪಳದೃಷ್ಟಿಯು |
ಜಡಿವ ಕಬರೀಭಾರದಿಂದಿಹ |
ಮಡದಿಯರು ಶೃಂಗಾರರಸದಿಂದಿರ್ದರೋಲಗದಿ || ೪೦

ಬಲನು ಸಾತ್ಯಕಿ ಮದನ ಸಾಂಬಕ |
ನಲಘುಭುಜನನಿರುದ್ಧನುದ್ಧವ |
ಜಲರುಹಾಕ್ಷನ ದಾಸನಕ್ರೂರಾದಿಯಾದವರು ||
ಹೊಳೆವ ಭೂಷಣಗಳ ದುಕೂಲಗ |
ಳೊಲವು ಮಿಗಲಳವಡಿಸಿ ನಿಜಧನು |
ಗಳ ಧರಿಸಿ ವರವೀರರಸದಿಂದೆಸೆದರೋಲಗದಿ || ೪೧

ಅಱಿಯದಜ್ಞಾನದಲಿ ದೇವರ |
ಚರಣಕಮಲವ ಸೇಱಿ ಬದುಕದೆ |
ತರಿಸುಗೆಡೆದರು ನರಕ ಪೌಂಡ್ರಕ ಮಗಧರೆಂಬವರು ||
ತರುಣರವರಾತ್ಮಜರು ತಾವೆಂ |
ದೊರಲಿಯುಡೆಗೆಡದಿರ್ದಗನು ಹರಿ |
ಪರಮಕರುಣಾರಸದಿ ನೋಡಲು ಕುಳಿತು ಎಸೆದಿಹರು || ೪೨

ಬಿರುದುಗಳನೊಕ್ಕಣಿಸುತ್ತೈತಪ |
ಬಿರಿಸಿನತಿಬಲ ದೊರೆದೊರೆಗಳಖಿ |
ಳರು ನಿಜಾಯುಧಗಳನು ಝಳಪಿಸುತಹಹ ಎಂದೆನುತ ||
ಹರಿಹರಿದು ಸಿಂದಿರುತ ಕೈಮುಗಿ |
ದರಸ ಬಿಡು ಬಿಡು ಮದಕರಿಯು ಮೇ |
ಲರವರಿಸಬೇಕೆನುತ್ತದುಬುತರಸದಿ ಸಿಂದಿಹರು|| ೪೩

ಬಲದ ಭಾಗದ ಭದ್ರಪೀಠಂ |
ಗಳಲಿ ಭಾರ್ಗವರಾಮ ಕೌಶಿಕ |
ಜಲರುಹಾಸನಪುತ್ರ ಜಯಮಿನಿ ಗೌತಮಾಗಸ್ತ್ಯ ||
ಕುಲದಲಧಿಕ ವಸಿಷ್ಠ ಗಾಲವ |
ಸುಲಲಿತಾಂಗವ್ಯಾಸ ಮುನಿ ಕುಲ |
ತಿಲಕರೊಪ್ಪಿದರಖಿಳಶಾಂತರಸಪ್ರಭಾವದಲಿ || ೪೪

ನರಕದೈತ್ಯನ ಪರಿಭವವ ಮಿಗೆ |
ಮುರನ ಸುಪಲಾಯನದ ಭಂಗವ |
ವರಜರಾಸಂಧನು ಮಡಿದ ನಾಟಕದ ಸಂಭ್ರಮವ ||
ಧುರವಿಜಯ ಕಂಸನ ಪರಾಭವ |
ದಿರವನಭಿನಯಗಳಲಿ ನಗಿಸುವ |
ಪರಮಹಾಸ್ಯರಸಪ್ರಭಾವಕರಿರ್ದರೋಲಗದಿ || ೪೫
ತುರಗರೇನಂತರು ಮಹಾಮದ |
ಕರಿಸುರೇಂದ್ರಾರೂಯತರು ರಥಿಕರು |
ಶರಚಮತ್ಕಾರಿಗಳು ಪದಚರ ಹೊಂತಕಾರಿಗಳು ||
ಸುರಗಿ ಕಕ್ಕಡೆ ಪರಿಘ ಖಡ್ಗನ |
ಧರಿಸಿ ಯದುವರನಂಘ್ರಿಗೆಱಗುತ |
ತರತರದಿ ನಿಂದಿಹರು ರೌದ್ರರಸಪ್ರಭಾವದಲಿ || ೪೬
ಮಗಧ ಶಿಶುಪಾಲಕ ಮುರಾಸುರ |
ವಿಗಡ ಬಾಣಾಸುರ ಸುಯೋಧನ |
ನಗಡು ಸಾಲ್ವಾದಿಗಳ ಸ್ಥಾನಾಪತ್ಯವನುದಿನವು ||
ಮುಗಿದ ಕರಗಳ ಬಿಗಿದ ನಡುಸು |
ತ್ತುಗಳನಡಸುವ ವಿಗ್ರಹಂಗಳ |
ಲಗಧರನ ಸಭೆಯೊಳಗೆ ನಿಂದೆಸೆದಿಹರು ಭಯರಸದಿ || ೪೭
ಮುಸುಕಿದರೆ ವಿದ್ವಿಷರ ಮೋಹರ |
ದೆಸಕವನು ಸಂಹರಿಸಿಯವರಿಹ |
ವಸುಧೆಯನು ವರವಸ್ತುವಾಹನತತಿಯನೆಲ್ಲವನು ||
ರಸಿಕತನದಲಿ ತಂದೊಡೆಯಗೊ |
ಪ್ಪಿಸುವ ಬೀಭತ್ಸಾಯತದ ಭಟ |
ರಸುರವೈರಿಯ ಸಭೆಯೊಳಗೆ ನಿಂದಿರ್ಪರಗಣಿತದಿ || ೪೮
ಧರಣಿಗಿಳಿದರೊ ತುಂಬುರರು ಚಾ |
ತುರಿಕ ನಾರದರೆಂಬ ತೆಱದಲಿ |
ವರಮಹಾಸಾಳಂಗ ಭೈರವಿ ಗವುಳ ಕಾಂಬೋಧಿ ||
ತರುಣಿರಾಗ ವರಾಳಿ ಶಿವನಾ |
ಭರಣ ಮೊದಲಾದಖಿಳರಾಗದಿ |
ಸರಸಸಂಗೀತಕಸುಧಾರಸದಿಂದ ಸೊಕ್ಕಿಪರು || ೪೯

ಇವರೊಡನೆ ಪೇರೋಲಗಂಗೊಡು |
ತವೆ ಮುರಾಸುರಮಥನನಿರುತಿರೆ |
ನವಡಿಗೊನೆಗಳ ಕದಳಿಖರ್ಜೂರಾದಿ ಪಣ್ಫಲವ ||
ನೇಮಿಸಿದ ವನರಕ್ಷಕರು ಮಿಗೆ |
ನವಪರಿಮಳದಲೆಸೆವ ಚಂಪಕ |
ನಿವಹದತಿಕುಸುಮಗಳ ಕೊಂಡೈದಿದರು ಶ್ರೀಹರಿಗೆ || ೫೦
ಮೊಲ್ಲೆ ಸುರಗಿಯ ಕುಸುಮ ಕೇತಕಿ |
ಸಲ್ಲಲಿತ ಸೇವಂತಿ ಜಾಜಿಯು |
ಫುಲ್ಲಜಯ ಮುಡಿವಾಳ ಪಾದರಿ ಪಾರಿಜಾತಗಳ ||
ಉಲ್ಲಸದಿ ಕಾಣಿಕೆಯ ಪಿಡಿತಂ |
ದೆಲ್ಲವನು ವನಪಾಲಕರು ಯದು |
ವಲ್ಲಭನ ಪದಕರ್ಪಿಸುತಲೆಡೆಗೆಡದರಾಕ್ಷಣದಿ || ೫೧
ಜಯ ಜನಾರ್ದನ ರಾಮ ಲಕ್ಷ್ಮೀ |
ಪ್ರಿಯ ಮನೋಹರಮೂರ್ತಿ ನಿಗಮಾ |
ಶ್ರಯ ಜಗತ್ಪಾವನ ಸುರೋರಗಭುವನಸಂರಕ್ಷ ||
ಜಯ ಮುಕುಂದ ಮುರಾರಿ ಲೋಕ |
ವ್ಯಯ ಪರಂಜ್ಯೋತಿಸ್ವರೂಪನೆ |
ಜಯತು ಜಯ ತ್ರಿಜಗನ್ನಿವಾಸನೆ ಕರುಣಿಸುವುದೆಂದು || ೫೨
ನರಕ ಕಂಸಾಸುರ ಬಕಾಸುರ |
ಹರಣ ಗೋಪೀರಮಣ ಗೋತ್ರೋ |
ದ್ಧರಣ ಶರಣಾಗತಜನಾಳಿಗೆ ಕಲ್ಪತರು ನೀನೇ ||
ವರಮುನಿವ್ರಜ ಮನು ಸರೋಜಜ |
ತರಣಿ ಶಶಿ ಮುಖ್ಯಾಮರಾಳಿಯು |
ಕರುಣದಲಿ ಸಲಹುವ ಮಹಾತ್ಮನೆ ಕರುಣಿಸುವುದೆಂದು || ೫೩
ಅವಧರಿಸು ಮುರವೈರಿ ಕಿಂಕರ |
ನಿವಹ ಮಾಡುವ ಬಿನ್ನಹವ ಬೞಿ |
ಕವನಿಗಿೞಿದನು ಕುಸುಮಋತುಭೂಪಾಲನವನಿಂದ ||
ನಿವಡಿಸಿದವಖಿಳಾವನೀರುಹ |
ನವವಿಧದಿ ನೆರೆ ಹೂತು ಕಾತಿಹ |
ವರವಿಚಿತ್ರವ ನೋಡಲಚ್ಚರಿಯಾಗಿ ತೋಱುವುದು || ೫೪

ತರುಣಪಲ್ಲವದಾತಪತ್ರವು |
ಪರಭೃತಂಗಳ ಗಾಯಕರು ಮಧು |
ಕರಸುವಾಕ್ಯದಿ ನುಡಿವ ಗಿಳಿವಿಂಡುಗಳ ಪಂಡಿತರು ||
ಉರುತರದ ಚೂತಗಳ ಕರಿಗಳು |
ಪರಿಪರಿಯ ಪಕ್ಷಿಗಳ ನಿಸ್ವನ |
ಮೆಱೆವ ವಾದ್ಯಗಳೆನಲು ರಂಜಿಪ ಮಧುಮಹೀಪಾಲ || ೩೪೫

ಎಳದಳಿರ ತೋರಣದ ಮಿಱುಗುವ |
ಪಳದಿ ಪಸುರ್ಮೇಲ್ಕಟ್ಟುಗಳ ಸುಮ |
ಕುಲವನಖಿಳಲತಾಂಗಿಯರ ಸುಕರಂಗಳಲಿ ಪಿಡಿಸಿ ||
ವಿಲಸಿತದ ಹರುಷದಿ ವಸಂತನ |
ಸಲುವಿನಿಂ ವನದೇವಿಯಿದಿರ್ಗೊಳ |
ಲಳವಡಿಸಿ ನಿಂದಿರ್ಪಳೆನೆ ಫಲಭರಿತವಾಗಿಹುವು || ೩೪೬

ತಳೆಯದಿಹ ವಿಟಪಿಗಳು ಫಲಗಳ |
ತಳೆಯದಿಹ ಶಾಖೆಗಳು ಸುಮಗಳ |
ತಳೆಯದಿಹ ಗಿಡುಲತೆಗಳುಲಿಯದ ಪಕ್ಷಿನಿಕರಗಳು ||
ತಿಳಿಯಲಘ್ರ್ಯೋದಕಗಳೆನಿಸದ |
ಕೊಳಗಳಖಿಲದ್ರುಮವ ಸೇರದ |
ಗಿಳಿಗಳಿಲ್ಲದ ವನಗಳಿಲ್ಲಾರಾಮಭೂಮಿಯಲಿ || ೩೪೭

ಮನುಮಥನ ನಿಜವಾಸ ಹಿಮಕರ |
ನನುವನಲರಿಪ ನೆಲೆ ವಸಂತನು |
ಘನಹರುಷದಿಂದಿರ್ಪ ಕೇಳೀಸೌಧ ಮಾರುತನು ||
ಅನವರತಮಿರುತಿಹ ನಿಜಾಲಯ |
ಜನರ ಭೂರಿಶ್ರಮವ ಹರಿಸುವ |
ವನಗಳಿವೆ ಚಿತ್ತೈಸಿ ನೋಡುವುದೆನುತಲೆಱಗಿದರು ೩೪೮

ಕೇಳಿ ವನಪಾಲಕರಿಗುಡುಗೊಱೆ |
ತಾಳಿ ಚೌಕಳಿಯಿತ್ತು ಹರುಷದಿ |
ಬೀಳ್ಕೊಟ್ಟನು ನಾಳೆ ಬಹೆವೆಂದೆನುತ ನಸುನಗುತ ||
ಸಾಲಮುನಿನೃಪಮೌಳಿ ಪರಿಜನ |
ಜಾಲವನು ಕಳುಹುತ್ತಲಾಗೋ |
ಪಾಲ ಹರಿ ತಿರುವೇಂಕಟೇಶನು ಪೊಕ್ಕನರಮನೆಯ || ೩೪೯

ಅಂತು ಸಂಧಿ ೩ ಕ್ಕಂ ಪದ ೧೧೧ ಕ್ಕಂ ಮಂಗಳಂ,

# ನಾಲ್ಕನೆಯ ಸಂಧಿ

ಸೂಚನೆ॥ ವರಮಹಾರ್ಣವತಕ ಭೂವಿಾ ।
ಧರದ ಸನಿಯದೊಳೆಸಕವೆತ್ತಿಹ ।
ಸುರಚಿರೋದ್ಯಾನವನು ನೋಡುತಲಿರ್ದನಸುರಾರಿ ॥

ನೀತಿಕೋವಿದ ಪಾಂಡುಸುತಸಂ ।
ಜಾತ ಧೀನುತ ಸುಜನಜನಸಂ ।
ಪ್ರೀತಕಲ್ಪದ್ರುಮ ವಿಪಕ್ಷನೃಪಾಲಗಜಸಿಂಹ ॥
ನೂತನಸ್ಮರರೂಪನಗಣಿತ ।
ಭೂತಿಯುತ ಚತುರಾಬ್ಧಿ ಮಿತವಿ ।
ಖ್ಯಾತ ಜನಮೇಜಯನೆ ಕೇಳ್ಮುಂಗತೆಯ ಸಂಗತಿಯ ॥ ೧

ಬೀೞುಕೊಳುತೆಲ್ಲರನು ಲಕ್ಷ್ಮೀ ।
ಲೋಲನೋಲಗಸಾಲೆಯಲ್ಲಿಂ ।
ದೇೞಲುಲಿದುದು ವಂದಿಜನ ಸಪ್ತಾಬ್ಧಿಘೋಷದಲಿ ॥
ಮೇಲೆ ಸುರರುಗ್ಗಡಿಸೆ ದುಂದುಭಿ ।
ಜಾಲ ಮೊೞಗಲು ಬೞಿಕ ವರಕುಸು ।
ಮಾಳಿಗಳ ವೃಷ್ಟಿಗಳ ಸುರಿಯಲು ಪೊಕ್ಕನರಮನೆಯ ॥ ೨

ಅನಿತಱೊಳ್ ಪಶ್ಚಿಮದಿಶಾಂಗನೆ ।
ಯನು ಮನದಿ ನೆನೆದಧಿಕವೇಗದಿ ।
ದಿನಪನಪರಾದ್ರಿಯನು ಸಾರಲು ಮುನಿದು ತರಣಿಯೊಳು ॥
ವನಜಚಯ ಮುಗ್ಗಿತು ಮರಾಳಿಯ ।
ನೆನಹು ನಿಲುಕಡೆಯಾಯ್ತು ಕಾಣುತ ।
ಘನಹರುಷದಿಂ ಕುಮುದಚಯವರಳಿದುವು ಬೇಗದಲಿ ॥ ೩

ಮಾಱುದೋರಣವಾದ ತೆಱದಲಿ ।
ವಾರಿಜಾಪ್ತನು ವರನಭೋವಿ ।
ಸ್ತಾರವನು ಮೂವತ್ತು ಗಳಿಗೆಯೊಳಾೞಿ ತೆರಳಲ್ಕೆ ॥
ವಾರಿಜಾರಿಯು ಬಹಳ ನಿಜಪರಿ ।
ವಾರ ಗಗನಾಂಗಣದಿ ನಿಂದೊಲು ।
ತಾರಕೀಗಣ ಕಾಣಿಸಿದುದೈ ವ್ಯೋಮಮಂಡಲದಿ ॥ ೪

ದೊರೆ ಸರಿಯೆ ಮಗುಳೊರ್ವ ನೃಪನಾ |
ಧರೆಯ ಘನಸರ್ವಾಧಿಪತ್ಯವ |
ಪರುಠವಿಸಿ ವಶವೃತ್ತಿಯನು ಮಾಳ್ಪನಿತಱೊಳ್ ಖಳರು ||
ವರಪುರಂಗಳ ಪೊಕ್ಕು ನಾನಾ |
ಪರಿಯಲಖಿಳವನಾಕ್ರಮಿಸುತಿಹ |
ತೆಱದಿ ಕತ್ತಲೆ ತುಂಬಿತಾಕ್ಷಣ ನೋಡಲೆಣ್ದೆಸೆಯ || ೫

ಆರಜನಿ ವಜ್ರಾಂಗಿಯಾದುದು |
ಜಾರಚೋರಸಮೂಹಕಗಣಿತ |
ವಾರನಾರೀಜನಕೆ ತಮ್ಮಿಷ್ಟಾರ್ಥವಾಯ್ತೆಂದು ||
ಮಾರಜಭ್ರಮೆಯಿಂದ ಕಂಕಣ |
ಚಾರುನೂಪುರಗಳ ಧರಿಸಿ ಕ |
ಸ್ತೂರಿಕುಂಕುಮಗಂಧಲೇಪನದಿಂದಲನುವಾಯ್ತು || ೬

ವಿಟರ ನೆನಹಿನಲಾತ್ಮಪುರುಷರ |
ನಟಮಟಿಸಿ ಜಾರಾಂಗನೆಯರು |
ತ್ಕಟವಿನಾಯಕಗಾಪನಿತು ಪರಕೆಗಳ ಕೈಕೊಂಡು ||
ಪಟುತನದೊಳೋಪರ ನೆರೆಯೆ ನಿ |
ಚ್ಚಟದೊಳೊಪ್ಪುವ ಪಣ್ಪಲವ ಸಂ |
ಘಟಿಸಿ ನಿನಗೊಪ್ಪಿಸುವೆನೆನುತವೆ ನಡೆದರಲ್ಲಲ್ಲಿ || ೭

ಕೆಲರು ದುರ್ಗಿಗೆ ಭೈರವಾಂಕಗೆ |
ಮಲಯಜಾದಿ ಸುಪರಿಮಳಂಗಳ |
ಲಲಿತಭೂಷಣವರದುಕೂಲವನರ್ಪಿಸುವೆನೆಂದು ||
ಅಱಲಿಸದೆ ಕುಸುಮಾಸ್ತ್ರಕೇಳಿಯ |
ಸಲಿಸಿ ಪಂಚೇಂದ್ರಿಯಕೆ ಪ್ರೀತಿಯ |
ತಳೆದು ನಲ್ಲನು ಕಳುಹಲೆನಲೈತಂದರಬಲೆಯರು || ೮

ಮರುಳುಬೂದಿಯನಕ್ಷತೆಮಾವಂ |
ದರಿಗೆಸುತೆ ತಾವು ಬಹ ಪರಿಯಂ |
ತರ ಪುರುಷ ಮಾತಾಡದೇಱದ ಪರಿಯ ಮದ್ದುಗಳ ||
ಮಱವೆಯೌಷಧಿಗಳನು ನಿದ್ರಾ |
ಭರದಲಿಹ ಕಾಹುಗಳ ಬಲಿದ |
ಚ್ಚರಿಯ ಜಾರೆಯರೈದಿದರು ಸಂಕೇತವೆಡೆಗಳಿಗೆ || ೯

ಸಂಜೆಗತ್ತಲೆಯೊಳಗೆಳಸಿ ವಿಟ |
ಕುಂಜರನ ನೆರೆ ಸಾರ್ದು ಷಟ್ಪದ |
ಸಿಂಜನೀಧರಕೇಳಿಯಲಿ ಮಿಗೆ ದಣಿದು ಮರಳಿದೊಡೆ ||
ಭಂಜಿಸುವ ಕುಸುಮಾಸ್ತ್ರನೆನುತವೆ |
ಅಂಜುತಳುಕುತ ನಿಲುತ ಹೊಂಚುತ |
ಕಂಜನೇತ್ರಿಯರೈದಿದರು ಕಾದಿರ್ದ ವಿಟನೆಡೆಗೆ || ೧೦

ಎಡೆಗೆಡೆಗೆ ಸಲೆ ಕಂಡ ನರರಿಗೆ |
ಕಡಗ ಕಂಕಣವಿತ್ತು ಬಚ್ಚಿಕವ |
ರಡಿಗಳಿಗೆ ತಾವೆರಗಿ ತಮ್ಮವರೊಡನುಸಿರದವೊಲು ||
ದೃಢದ ನಂಬುಗೆಗೊಂಡು ಭಯದೊಳ್ |
ನಡನಡುಗುತ್ತೈದುವರು ವಿರಹದ |
ಲೊಡಲುವಿಡಿಯುಲದಾರ ವಶ ಹದಿನಾಲ್ಕು ಲೋಕದಲಿ || ೧೧

ಇನಿತು ಬಗೆಯಲಿ ಜಾರನಾರೀ |
ಜನರನೇಕರು ಜಾರಕಾಂತರ |
ನೆನಹಿನಲಿ ನಡೆನಡೆದು ಕಿಂಚಿತ್ಸಂಭ್ರಮವ ತಳೆದು ||
ಮನೆಗಳಿಗೆ ಮರಳುವರು ಮುಗ್ಧಾಂ |
ಗನೆಯರಂದದಿನುಚಿದ ಕೆಲಸದ |
ನೆನಹುಗಳಲೆಡೆಯಾಡುತಿರ್ದರು ಭೂಪ ಕೇಳೆಂದ || ೧೨

ಅನಿತರೊಳ್ ಜಾರಾಂಗನಾಳಿಯು |
ಮನಕೆ ಚಂಚಲವಾಗೆ ಚೋರರ |
ಮನವು ನೆಗ್ಗಲು ಕಮಲನಿಚಯಕೆ ಖೇದವಿಮ್ಮಡಿಸೆ ||
ವನಧಿಪತಿವುಪ್ಪೇರೆ ರಜನೀ |
ವನಿತೆ ತಳಮಳಗೊಳ್ಳೆ ಶಶಾಂಕ |
ದನುಜಹರನಗ್ರಜನ ದೆಸೆಯೊಳಗುದಿಸಿ ರಾಜಿಸಿದ || ೧೩

ಬಿರಿದುವಾಕ್ಷಣ ಕುಮುದಚಯ ಮಿಗೆ |
ಹೊರೆದುವಮಲಚಕೋರ ಚಂದ್ರಿಕೆ |
ಹರಿದುವಖಿಳದಿಗಂತವನು ಕರಗಿದುವು ಶಶಿಕಾಂತ ||
ಧರೆ ಗಿರಿವ್ರಜ ಗಹನ ದುರ್ಗಗ |
ಹ್ವರ ಮಹಾಂಧತೆಯಡಗಿ ಬೆಳತುದು |
ವಿರಹಿಗಳ ಹೃಮ್ಲಾನ್ನಮೆನೆ ವಿಧು ನಭದಿ ರಾಜಿಸಿದ ೧೪

ಆಸಮಯದೊಳಗಱುಹಿದರು ಹರಿ |
ವಾಸುದೇವ ಮಹಾಮಹಿಮ ದೇ |
ವೇಶ ದೈತ್ಯಾರಾತಿ ಭೋಜನಸಮಯವಾಯ್ತೆಂದು ||
ಭಾಸುರಸ್ತುತಿಮಾಡಿ ಕರೆಯೆ ಮ |
ಹಾಸುಮುಖನಾಲಿಸುತ ಮಿಗೆ ಮೆ |
ಲ್ಲಾಸಿನಲಿ ಮಲಗಿದವನೆದ್ದನು ನಗುತಲಸುರಾರಿ || ೧೫

ಏಱುತೊಡನೈತಂದು ಮುರಹರ |
ಬಾಲೆಯರ ಗಡಣದಲಿ ಭೋಜನ |
ಶಾಲೆಗೈದಲು ಜೋಡಿಸಿತು ತತ್ಕ್ಷಣದೊಳಾಗಲ್ಲಿ ||
ಸಾಲ ಪೊಂಬರಿವಾಣಗಳ ಸುವಿ |
ಶಾಲತರ ಬಟ್ಟಲುಗಳಿಡೆ ಯದು |
ಪಾಲ ಸುತಪೌತ್ರರು ಸಹಿತ ಕುಳ್ಳಿರ್ದ ಕೇಳೆಂದ || ೧೬

ಮಿಸುಪ ಶಾಲ್ಯೋದನವ ಸೂಪವ |
ರಸರಸಾಯನ ಶಾಕಭಕ್ಷ್ಯವ |
ಹಸನೆನಿಪ ಸದ್ಯೋಘೃತವ ಪರಡಿಗಳ ಪಾಯಸವ ||
ಎಸೆವ ಸಕ್ಕರೆ ಕದಳಿಪಣ್ಗಳ |
ರಸಯುತದ ಪಾಲ್ಮೊಸರನೆಲ್ಲವ |
ಶಶಿಮುಖಿಯರೀಯಲ್ಕೆ ದೇವಕಿದೇವಿ ಬಡಿಸಿದಳು || ೧೭

ಅಚ್ಚಸಾಸುವೆಯರೆದುಮಾಡಿದ |
ಪಚ್ಚಡಿಯ ಹರಳುಪ್ಪುಗಾಯ್ಗಳ |
ಚಚ್ಚರದೊಳಬಲೆಯರು ನೀಡುವ ಕಲಸಿದೋಗರವ ||
ಕಚ್ಚಡಿಯ ಸೀಕರಣೆ ಪಳದ್ಯವ |
ನಚ್ಚರಿಯಲಿ ಯಶೋದೆ ಬಡಿಸಿದ |
ಳಚ್ಚುತಗೆ ಸವಿಗೊಳಿಸುತಖಿಳಮನೋನುರಾಗದಲಿ || ೧೮

ಎಡಬಲದವರು ಚಾರುಚಾಮರ |
ಪಡಿಗ ಪನ್ನೀರ್ಗಳನು ಪಿಡಿಯುತ |
ಮಡದಿ ರುಕ್ಮಿಣಿ ಸತ್ಯಭಾಮಾದೇವಿ ಮೊದಲಾದ ||
ಜಡೆಮುಡಿಯಲೆಸೆವಾಷ್ಟಮಹಿಷಿಯ |
ರೆಡೆಗಡೆಗೆ ಸೇವೆಯ ಸಲಿಸುತಿರೆ |
ಪೊಡವಿಪತಿ ಶ್ರೀಕೃಷ್ಣನಾರೋಗಿಸಿದನೊಲವಿನಲಿ || ೧೯

ಭೋಜನಾಂತರದಲ್ಲಿ ಯಾದವ |
ರಾಜನೆಸೆದನು ಮಣಿಖಚಿತವಿ |
ಭ್ರಾಜಿತದ ವರಹಂಸತೂಲಿಕದಲ್ಲಿ ಪರಿಪರಿಯ ||
ಜಾಜಿ ಸೇವಂತಿಗೆ ಶಿರೀಷ ಸ |
ರೋಜ ಚಂಪಕ ಸುಮಕುಲಕ್ಕಧಿ |
ರಾಜನಾಗಿಹ ಪಾರಿಜಾತಸುಮೌಘದಿಂ ಬೞಿಕ || ೨೦

ಚಾರುತರದಿಂದೆಸೆವ ನವಕ |
ಸ್ತೂರಿಕುಂಕುಮ ಸುಮಲಯಜ ಘನ |
ಸಾರಪರಿಮಳಗಂಧವನು ತಂದಧಿಕ ಬೆಡಗಿನಲಿ ||
ವಾರಿಜಾನನೆಯರು ಶುಭಾಂಗಕೆ |
ಪೂರಿತದನಳವಡಿಸಿ ವರಕ |
ರ್ಪೂರವೀಳ್ಯವ ಕೊಟ್ಟು ಸೇವೆಯೊಳಿರ್ದರೊಲವಿನಲಿ || ೨೧

ಅನವರತ ಚೌಶೀತಿಲಕ್ಷದ |
ಘನಗಣಿತಕಹ ಜೀವರಾಶಿಯ |
ನನುನಯದಿ ಸಲಹುತ್ತಲಿಹ ಪರಮಾತ್ಮಗೇನರಿದೆ ||
ಕನಕಪುತ್ಥಳಿಗಳವೊಲೊಪ್ಪುವ |
ವನಿತೆಯರು ದೇವನ ಸಮೀಪದಿ |
ಮನಸಿಜನ ಕಲೆನೆಲೆಯ ತೋಱುತಲಿಹರು ಸೇವೆಯಲಿ || ೨೨

ಈಪರಿಯಲಸಿಬರು ಗೃಹದೊಳಾ |
ಗೋಪಿಕಾವಲ್ಲಭನ ರಸಸ |
ಲ್ಲಾಪದಲಿ ನುಡಿಜಾಣ್ಮೆ ನಿಪುಣತೆ ಲಲ್ಲೆವಾತಿನಲಿ ||
ಆಪನಿತು ರತಿಸುಖವ ಪಡೆದಿ |
ಷ್ಟೋಪಭೋಗದಿ ದಣಿಸಿ ಪವಡಿಸ |
ಲಾಪುರಂದರದೆಸೆಯಲಿನಸಾರಥಿಯು ರಾಜಿಸಿದ || ೨೩

ಅನಿತಱೊಳ್ಚರಣಾಯುಧಾವಳಿ |
ಬಿನದದಿಂ ಸ್ವನಗೆಯ್ಯೆ ಜಾರರಾಂ |
ಗನೆಯರೆದೆ ಜಜ್ಝರಿತವಾಗಲು ಘೋರಸಂಕುಲಕೆ ||
ಘನನಿಶಿತಹೃಚ್ಛೂಲವಾಗಲು |
ಜನರು ನಿದ್ರೆಯನುೞಿದು ಹರಿಯನು |
ವಿನುತಿಸುತಲುಪ್ಪವಡಿಸಿದರಾಗೃಹಗೃಹಂಗಳಲಿ || ೨೪

ಹರೆದುವುಱಿ ತಾರೆಗಳು ತೆಂಬೆಲ |
ರಿರದೆ ಬೀಸಿತು ಸರಸಿಜಾವಳಿ |
ಬಿರಿದುವಾ ಡಿನಿಜಯವಾಕ್ಷಣ ತೆರಳಿ ಧ್ವನಿಮಾಡಿ ||
ಮೆಱಿದವತಿವಿಭವದಲಿ ಚಕ್ರವು |
ನೆರೆದುವಾಗಲೆ ಕೈರವದ ರುಚಿ |
ಮುರಿಯೆ ಮುದದಿಂ ತರಣಿಯಡರಿದನುದಯಪರ್ವತವ || ೨೫
ಭರದಿ ನಿದ್ರೆಯನುಜಿದ ಶ್ರೀಹರಿ |
ಗಿರದೆ ಸಂತಸದಿಂದ ದಿಗ್ವಧು |
ವುರುತರದ ಭಕ್ತಿಯಲಿ ಪಿಡಿದಿಹ ಮುಕುರವೋ ಮೇಣು ||
ವರಕರಾಂಬುಜದಲ್ಲಿ ಧರಿಸ |
ಲ್ಕೊರೆಗಳೆದು ಸಲಿಸಿರ್ಪ ಚಕ್ರದ |
ಸೆರವಣಿಗೆಯೋ ಎನಲು ಭಾಸ್ಕರಬಿಂಬ ಶೋಭಿಸಿತು || ೨೬
ಒದರಿದುವು ದೇಗುಲದ ವಾದ್ಯಗ |
ಳದುರೆ ಸೆಲ ಘನಭೇರಿಗಳು ಪೋಱ |
ಗಿದುವು ಲಕ್ಷ್ಮೀರಮಣನರಮನೆವಾಗಿಲಿದಿರಿನಲಿ ||
ಮುದದಿ ಮಂಗಳಪಾಠಕರು ಬಱಿ |
ಕುದಯರಾಗಂಗಳನು ಪಾಡಲು |
ಯದುಕುಲೋತ್ತಮನೆದ್ದನೊಯ್ಯಾರಿಸುತ ಸಿರಿಮುಡಿಯ || ೨೭
ಎದ್ದು ಕಾಲ್ಮೊಗಗೊಳೆದು ವಿಮಲವಿ |
ಶುದ್ಧ ಸತ್ಕರ್ಮಗಳ ನಡಸುತ |
ವೃದ್ಧ ವರಪಿತೃಮಾತೃನೀಲಾಂಬರಗೆ ವಂದಿಸುತ ||
ಉದ್ಧತರ ಚಾರರನು ಕರೆದು ಸ |
ಮುದ್ಧತದ ಬಲವನು ಕರೆಸಿ ಮುರ |
ಮರ್ದನನು ತನ್ನರಸಿಯರ ಪಯಣಕೆ ನಿರೂಪಿಸಿದ || ೨೮
ನಂದನವ ನೋಡುವನೆನುತ, ಗೋ |
ವಿಂದ ಸರ್ವಾಭರಣಭೂಷಿತ |
ದಿಂದಲಂಕೃತನಾಗಿ ವಿಮಲದುಕೂಲಮಂ ಪೊದೆದು ||
ಚಂದದಿಂದೆಸೆಯುತ್ತ ನಾರೀ |
ವೃಂದದೊಡನೈತಂದು ಕರೆಸಿದ |
ನಂದು ತನ್ನಯ ಪುತ್ರಮಿತ್ರಾಗ್ರಜಸುಬಾಂಧವರ || ೨೯

ಕರೆಸೆ ಬಂದರು ರಾಮ ಸಾತ್ಯಕಿ |
ಧುರವಿಜಯ ಪ್ರದ್ಯುಮ್ನ ಕೃತವರ್ಮ |
ಕರು ಬೞಿಕ್ಕನಿರುದ್ಧ ಸಾಂಬನು ಮುಖ್ಯಯಾದವರು ||
ಪರಮಹರುಷದೊಳನಿಬರೊಡನತಿ |
ತ್ವರಿತದಲಿ ನಡೆಯಿಂದಲೈದುತ |
ಪುರವ ಹೊಱವಂಟಡರಿದನು ವರರತುನನುಯರಥವ || ೩೦

ಕ್ಷೀರಸಾಗರಮಥನ ಹರುಷದಿ |
ಚಾರುವನವೈಭವಕೆ ತೆರಳಲು |
ಸೇರಿತಾಗಷ್ಟಾಂಗನಾಜನವತಿವಿನೋದದಲಿ ||
ಭೂರಿ ಷೋಡಶಸಾಸಿರದ ಶೃಂ |
ಗಾರನಾರೀವೃಂದ ಕಂಕಣ |
ಚಾರುನೂಪುರಝಣಝಣಧ್ವನಿಯಿಂದಲೈದಿದರು || ೩೧

ಅನಿಬರಿಗೆ ನವರತ್ನವಿರಚಿತ |
ಕನಕಪಲ್ಲಕ್ಕಿಗಳ ತರಿಸೆನೆ |
ಮನಸಿಜನ ಪಿತನಾಜ್ಞೆಯಲಿ ಸೇವಕರು ತತ್‌ಕ್ಷಣಕೆ ||
ಅನುವರಿತು ತಂದಿಡಲು ವನಿತಾ |
ಜನರು ಮುದದಿಂದೇಱಿ ನಡೆದುದು |
ತನತನಗೆ ಕೆಳದಿಯರ ವಿವಿಧತರೋಪಚಾರದಲಿ || ೩೨

ಮುರಜ ಡಿಂಡಿಮ ಭೇರಿ ತಂಬಟ |
ಸರಗೊಳಿಪ ಹೆಗ್ಗಾಳೆ ಶಂಖಗ |
ಳುರುತರದ ಘನವಾದ್ಯರಭಸಗಳೆಲ್ಲವೊಂದಾಗಿ ||
ಶರಧಿಯೇೞಱ ಘೋಷವನು ನೆರೆ |
ಮುರಿದು ದಿಕ್ತಟ ಪಿರಿಯಲೊದರುವು |
ವರರೆ ಪೇೞುವೆನೇನನಸುರಾಂತಕನ ಗಮನದಲಿ || ೩೩

ಏನು ನರನಾಟಕವೊ ದೇವಗೆ |
ಮಾನಿನಿಯರೊಡಗೂಡಿ ತಾ ನೆರೆ |
ಮಾನುಷತ್ವದಲಖಿಳವಿಭವಾಸ್ಪದಕೆ ನೆಲೆಗೊಟ್ಟು ||
ಸಾನುರಾಗದಿ ಬರುತಿರಲು ವೈ |
ಮಾನಿಕರು ಕೈಮುಗಿದು ಜಯಜಯ |
ದಾನವಾಂತಕ ಕೃಷ್ಣ ಜಯಜಯ ಎಂದರಭ್ರದಲಿ || ೩೪

ನಡೆದನಾರೈವತಕುಲಾಚಲ |
ದೆಡೆಗೆಯಸುರಾರಾತಿ ಬಳಿಕದು |
ಪೊಡವಿಯೊಳಗುಳ್ಳಖಿಳಪರ್ವತಜಾಲಕತಿಶಯದ ||
ಕಡುವಿಚಿತ್ರದಲಿರಲು ಗಗನವ |
ಬಿಡದಲೆವ ಹಿಂತಾಲತಾಲವು |
ಕಡಸು ತೇಗರುಟಾಳ ಭೂಜವ್ರಜ ವಿರಾಜಿಪುವು || ೩೫

ಮಾತುಲಂಗ ಲವಂಗ ಪಿಪ್ಪಲಿ |
ಜಾತ ವಟ ಕುಟಜಾಮ್ರ ಘನಭ |
ಲ್ಲಾತ ಕುವರಕ ಕೋವಿದಾರ ಪಲಾಶ ಪಿಚುಮಂದ ||
ಜಾತಿ ಸಾಲ ತಮಾಲ ಸರಳ |
ವ್ರಾತ ಚಂದನ ಬಕುಳ ಮುಖ್ಯಮ |
ಹಾತಿಶಯ ತರುಜಾಲವೆಸೆದುದು ಗಿರಿಯ ತಪ್ಪಲಲಿ || ೩೬

ಚಲದಳಗ್ರಾಹಿಯೌದುಂಬುರ |
ಕುಲಕಕಾಂಚನ ಗುಗ್ಗುಳಂಗಳು |
ತಿಲಕರಗ್ವಧನವವಿರಾಜಿತಸಪ್ತಪರ್ಣಚಯ ||
ಕಲಿತವರುಣಸುದಂತಶತಪ್ರ |
ಜ್ವಲಿತಪುರುಷಮಧೂಕಪಿಶನವು |
ನೆಲಸಿಹುವು ರೈವತಗಿರಿಯ ಪ್ರಾಂತದಲಿ ತರುಜಾಲ || ೩೭

ವರಮಧೂಲಕಗೂಷಫಲ ವಿ |
ಸ್ತರಪರಿವ್ಯಾದೌಘ ವೇತಸ |
ಭರಿತ ಫೇನಿಲಪರ್ಣವಕ್ಷೋಟಾಳಿಯಂಕೋಲ ||
ಸುರಚಿರಾಮ್ಲ ಶಿರೀಷ ಶೀವ್ರೋ |
ತ್ಕರವುಶೀರ ಪ್ಲಕ್ಷಕ್ರಮುಕದಿ |
ನೆರೆ ವಿರಾಜಿಸಿತೇನನೆಂಬೆನು ವನದ ಸಂಭ್ರಮವ || ೩೮

ಶಮಿತವೀರಸ್ವಾದುಕಂಟಕ |
ವಿಮಲಶೋಭಾಂಜನವಿಭೀವ |
ಲ್ಲಮೃತ ಸಹಕಾರೌಘ ಸಜ್ಜಕ ಸರ್ವತೋಭದ್ರ ||
ಅಮಲಶ್ಲೇಷ್ಮಾತಕವಿಶಾಲ |
ದ್ರುಮ ಪ್ರಿಯಕ ಜಂಬೀರ ಬದರಿಗ |
ಳಮಿತ ರೈವತವನಾಂತರದೊಳಗಿಹುವು ರಾಜಿಸುತ || ೩೯

ಶಿವಗಣಕೆ ನೆಲೆಯಾಗಿ ಪರಿಕಿಸೆ |
ಭವಮಹೀಧರಮಲ್ಲ ವಿದ್ರುಮ |
ನಿವಹದಿಕ್ಕೆಯದಾಗಿ ರತ್ನಾಕರವು ತಾನಲ್ಲ ||
ಅಮಿತವರಗಾಯತ್ರಿಯಿಂದೊ |
ಸಿಪ್ಪುವುದು ನೆರೆ ಬುಧನಲ್ಲವಂತದು|
ವಹದಾಣ್ಮನ ಮುಂದೆ ಗಿರಿ ವೈಭವದಿ ಕಾಣಿಸಿತು || ೪೦

ಪಂಡಿತಕವಂಗಾರವಲ್ಲರಿ |
ಪುಂಡ್ರ ಬಿಲ್ವಜವೀರನಾಳಿಯು |
ಖಂಡದರಾಶ್ಮಕುಷ್ಮಬರ್ಹದವೃಕ್ಷಗಂಧಜಯು
ಕುಂಡಲಿಗಳುಕವಾಕತೃಣಶಿಂ |
ಹುಂಡಚಿತ್ರಲಚಿತ್ರಗನ್ನಿಲ |
ಮಂಡಲೀರುಹಮುಖ್ಯಗಂಧಗಳೆಸೆದುವಾವನದಿ?|| ೪೧

ಸ್ಯಂದನವ್ರಜಮಿರ್ದು ರಥಕುಲ |
ದಂದಮದು ತಾನಲ್ಲ ಶಕ್ರರ |
ವೃಂದಮಿರೆ ಸುರನಾಥನಲ್ಲ ಕುಬೇರಕಾಳಿಯಿರೆ ||
ಇಂದುಧರಸಖನಲ್ಲ ಪಿಸುಣರ |
ಮುಂದೆಯಿರೆ ಅಪಕಾರಿಜನಮು |
ಲ್ಲೆಂದುವೊಪ್ಪಿಹುವಗಣಿತೌಷಧಿಲತೆಗಳತಿಮುದದಿ || ೪೨

ಕಪಿಲ ಗಾಲವ ಕೌಶಿಕಾನ್ವಯ |
ವಿಪುಲಮತಿ ಶಾಂಡಿಲ್ಯರಿರೆ ವರ |
ಜಪಿತ ಮುನಿಗಣಮಲ್ಲವೈರಾವತವು ನೆಲಸಿಯಿರೆ ||
ಸಿಪ್ರಾಸುರಗಜಮಲ್ಲ ಭೃಂಗಗ |
ಳಪರಮಿತಮಾಗಿರ್ದು ಚಂಪಕ |
ರಿಪ್ರವದಲ್ಲೆನಿಸಿರ್ದ ತರುಲತೆಗಿಡಗಳೆಸೆದಿಹುವು || ೪೩

ಹೈಮವತಿಯಲ್ಲಿರ್ದು ಒಜಿಕಭಿ |
ರಾಮಪಾರ್ವತಿಯಲ್ಲ ಪರಿಕಿಸ |
ಲಾಮಹಾವೈದೇಹಿಯುದಿಸಿರೆ ಜನಕಸುತೆಯಲ್ಲ ||
ಭೂಮಿಗಧಿಕಸುಷೇಣನಿರೆ ಪಿ |
ಶ್ರಾಮುಕಪಿಗಣಮಲ್ಲ ಚಂದ್ರ |
ಸ್ತೋಮಮಿರೆ ಹಿಮಕಿರಣನಲ್ಲೆನಿಸಿಹುವು ವನದೊಳಗೆ || ೪೪

ತಿಳಿಯೊಲಪಿಳ ಸುಪುಂಡರೀಕವ್ರ |
ನೆಲಸಿರಲು ಮುನಿಮಲ್ಲ ತರುಸಂ |
ಮಿಳಿತ ಪಾನಪ್ರಸ್ತಜಯಮಿರೆ ಯೋಗಿಗಣಮಲ್ಲ ||
ಲಲಿತಪಿಮಲೇಕ್ಷಾಕುಕುಲಮಿರೆ |
ಜಲಜನಾಭವಂಶಜರದಲ್ಲೆಂ |
ಬೊಲು ವನದಿ ರಾಜಿಸಿತು ತರುಕುಲವರಸ ಕೇಳೆಂದ || ೪೪

ಇನಿತು ಬಗೆಯಲಿ ಮೆರೆವ ತರುಜಯ |
ವನಲತಾಳಿಯ ಸಿರಿಯ ನೋಡುತ |
ದನುಜಹರ ಯದುಜಾಲದೊಡನ್ಯೈತರಲು ಸಂಚರಿಪ ||
ಘನ ತರಕ್ಷುವನೇಭ ದಂಷ್ಟ್ರಿಯು |
ಜಿನತಮೂರು ಉಲಾಯು ಕಂದಳಿ |
ಯೆನಿಪ ಮೃಗಸಂಕುಲಗಳೆಸೆದಿರೆ ಕಂಡನಾವನದಿ || ೪೫

ನಯಸರದ ಕೋಗಿಲೆಯ ಭಟರತಿ |
ಶಯದ ವಾಕ್ಪ್ರೌಢಿಯುಲುಲಿವ ಶುಕ |
ಮಯದ ಪಂಡಿತರಿಂದ ನಾನಾಪಕ್ಷಿಮೃಗಕುಲದ ||
ಹಯಮದೇಭವರೂಥಪದಚರ |
ಜಯದಲೊಪ್ಪುವ ಮಧುನೃಪನು ನಿ |
ರ್ಭಯದಲಿಹ ವನಮೆಸೆದುದಾಯದುವರನ ಕಣ್ಮನಕೆ || ೪೬

ನೆರೆದ ಯದುಬಲದೊಡನೆ ಹೊಕ್ಕನು |
ವರಮುರಾಸುರಭೇದಿ ವನವನ |
ದಿರವ ನೋಡಲು ಜನನಿಜನಕಾಗ್ರಜತನೂಭವರು ||
ತರುಣಿಯರು ಹಿತ ಬಂಧು ಭಟಮು |
ಖ್ಯರು ಸಹಿತಲೇನೆಂಬೆನಾವನ |
ದಿರವನಭಿವರ್ಣಿಸುವಡಚ್ಚರಿಯುಪ್ಪುದೆನಗೆಂದ || ೪೭

ನಿರತ ಧಾರಿಣಿಗಖಿಳವಸ್ತುವ |
ಸುರಿದು ಸಕಲೌಷಧಿಯ ದಯದಿಂ |
ಹೊರೆದ ಸುರಪಗೆ ತನ್ನೊಳಿರ್ದ ಫಲಾತಿಶಯಗಳನು ||
ಅರಸಿ ಕಳುಹಲು ಬೇಕೆನುತ ಭೂ |
ತರುಣಿ ಜೋಡಿಸಿ ನಿಲಿಸಿದಂತಂ |
ಬರವ ಮಿಗೆಯುಳ್ಳಿರವ ತೆಂಗಿನ ಮರಗಳೆಸೆದಿಹುವು || ೪೮

ನಿಲವ ನೋಡಲು ಲಕ್ಷಯೋಜನ |
ದಳತೆಯಲ್ಲಿಹ ಮೇರುಗಿರಿ ನಿ |
ಜ್ಞಾಳದಲಿಳೆ ಹದಿನಾಲ್ಕ ಧರಿಸಿಹುದರಿದೆ ಕಿಱುವಿನೊಳು ||
ಸುಲಲಿತದ ಸಾಸಿರದ ಸಂಖ್ಯೆಯು |
ನೊಲಿದು ಧರಿಸಿಹೆವೆನುತಲಲ್ಲಿಯು |
ವಿಲಸದುಪವನಕಂಟಕಿಗಳೊಪ್ಪಿಹುವು ಫಲಭರದಿ || ೨೪೦
ಗೊನೆಗೊನೆಯು ಹಾರಗಳ ಮಿಱಿದ |
ಪೊನೆಮುಗುಳ್ಗಳ ಕುಜಗಳಲಿ ಬಿಸಿ |
ಲ್ಮೊಸೆಗೆ ಮಿಂಚುತ ಚಲಿಸುತಿಪ ಪರ್ಣಾಳಿ ಕುರುಳಾಗೆ ||
ಘನತರದ ನಿಲವೆಸೆವ ತೊಡೆಗಳ |
ವನಿತೆಯುರು ರಂಭಾಕೃತಿಯೊಳಾ |
ವನದೊಳಗೆ ನಿಂದಿರುವವೊಲ್ಕದಳಿಗಳು ನೆಱದಿಹುವು || ೨೪೧
ವರಪಯೋನಿಧಿವಾಸ ತನ್ನಯ |
ತರುಣಿಯುರು ಸಹಿತೈದಿ ನಡೆತರೆ |
ಹರುಷದಿಂದಲ್ಲಿಹ ವಸಂತನೃಪಾಲಸಾಕ್ಷಣಕೆ ||
ಭರಿತ ಫಲಗಾಣಿಕೆಯ ಕೊಂಡೈ |
ತರುತಲಿಹನೆನೆ ಕಿಕ್ಕಿಱಿದು ಬೆಳೆ |
ದುರುತರದ ಮಾದಲದ ತರುಗಳು ವನದೊಳೆಸೆದಿಹುವು || ೨೪೨
ಮಣಿಮಯುದ ಸೋಪಾನ ಹಂಸೀ |
ಗಣದ ವರಸಂಚಾರ ಸ್ಮರವಾ |
ರ್ಗಣಗಳಾಡುಂಬೊಲ ಮದಾಳಿಯ ಜಾಲದರಮನೆಯು ||
ಎಣೆಯೆನಿಪ ವರಚಕ್ರಯುಗದಲಿ |
ಫಣಿಶಯನನರಸಿಯ ವಿಹಾರಾಂ |
ಗಣಮೆನಿಪ ಕಮಲಾಕರಂಗಳು ಮೆಱೆದುವಾವನದಿ || ೨೪೩
ಇೞಿದು ಕಾಲ್ಮೊಗದೊಳೆದು ಸಲೆ ಮು |
ಕ್ಕುಳಿಸಿ ವಾರಿಯನೀಂಟಿದಾಕ್ಷಣ |
ತೊಲಗುತಿಹ ಜನದಸುಗಳತಿಜವದಿಂದ ತಿರುಗುವುವು ||
ಸುೞಿಸುೞಿದು ಬೞಿಕಿೞಿದು ಜನಗಳು |
ಲಳಿತಜಲಕೇಳಿಗಳ ವಿಹರಿಸೆ |
ಜಳಜಭವಕಲ್ಪಾಂತಕೞಿವಿಲ್ಲೆಂಬ ಕೊಳನಿಹುವು || ೨೪೪

ನಗೆಯು ಮಲ್ಲಿಗೆ, ದಂತಪಙ್ಕ್ತಿಯು |
ಹೊಗರುಮೊಲ್ಲೆಯು, ಸುಮವಧರ ಬಂ |
ದುಗೆ, ನಯನ ನೈದಿಲು, ಕರಾಳಿ ಶಿರೀಷ, ಎಮಲತೆಯ ||
ಮೊಗವೆ ತಾವರೆ, ನಾಸಿಕವೆ ಸಂ |
ಪಗೆಯುದಾಗಿರೆ ವನದೊಳಿಹ ಕುಸು |
ಮಗಳ ಬಟ್ಟೆಯುದೇಕೆನುತ ಸಂಚರಿಪರಬಲೆಯರು || ೨೪೫
ವರುಣದಿಗ್ವಧು ನವಲಿಪಿ ದ್ವಿಜ |
ಸುರರಿಪು ನರಾಧಿಪನೊಲನುದಿನ |
ಸುರುಚಿರಾಂಜನೆ ತಾರದೀರ್ಘಾಯತ ನತಾಸಿಮಿಷ ||
ಸ್ಫುರಿತಶ್ರುತಿಯುತಕುವಲಯಾಖ್ಯದಿ |
ಮೆಱೆವ ಸೌದಾಮಿನಿನ್ವೊಂತಿವಿ |
ಸ್ತರದಪಾಂಗದಿ ನಯನವೆಸೆದಿಹುವಷ್ಟಯುವತಿಯರ || ೨೪೬
ಈತೆಱದಿ ನಾರಿಯರಖಿಳಸಂ |
ಪ್ರೀತಿಯಲಿ ವನವನದಿ ತಿರಗುತ |
ಭೂತಳದೊಳುಳ್ಳಖಿಳಕುಸುಮಫಲಂಗಳನು ತಿಱಿದು ||
ಖ್ಯಾತವಹ ಜಡೆಮುಡಿಗಳಿಗೆ ವಿಭ |
ವಾತಿಶಯದೊಳ್ಮುಡಿದು ಸವಿದು ಮ |
ಹಾತಿಜವದಲಿ ವಾರಿಕೇಳಿಗೆ ನಡೆದರಾಕ್ಷಣದಿ || ೨೪೭
ಅಂಗಜನ ಮದದಂತಿಗಳು ಮಿಗೆ |
ಯುಂಗವಿಪ ತೆಱನಂತೆ ಮೆಱೆವು |
ತ್ತುಂಗಕುಚಕಚಭಾರದಲಿ ಕೃಶವಾಗಿ ಬಳುಕುತ್ತ ||
ಉಂಗರದೊಳಳವಡುವ ನಡುಗಳ |
ಸಿಂಗರದ ಸೊಬಗೆಸೆಯೆ ರುಕ್ಮಿಣಿ |
ಮಂಗಳಾನನೆ ಸತ್ಯಭಾಮೆಯರೈದಿದರು ಕೊಳನ || ೨೪೮
ಅನುದಿನವು ನಡೆನಡೆದು ಬೞಿಕೀ |
ವನಿತೆಯರ ನಡೆಗಳನು ಕಲಿವೆವು |
ಯೆನುತಲಿರ್ದಡೆ ದೊರಕದಿರಲಂಚೆಗಳು ನಡೆಯುಡುಗಿ ||
ಮನದ ಬತಿಯಿಂದಭ್ರಕೈದಿದು |
ವೆನಲು ನಾರೀಗಣದ ರಭಸಕೆ |
ಘನಮನೋವೇಗದಲಿ ಹಾಱಿದುವೆಂಟು ದೆಸೆಗಳಿಗೆ || ೨೪೯

ಕೇಳು ಭೂಪತಿ ಬಳಿಕಲಾಶ್ರೀ |
ಲೋಲ ರುಕ್ಮಿಣಿಸತ್ಯಭಾಮಾ |
ಬಾಲೆಯರು ಸಹಿತಂಬುಕೇಳಿಯಲೊಂದು ಕೊಳನೊಳಗೆ ||
ಸಾಲಶೋಭಿತವೆಸೆಯಲಿರ್ಪರ |
ಮೇಲೆ ಪೂರಿತಜಲವನಾವಸ |
ಮಾಲ ಚೆಲ್ಲುತಲಿರ್ದನತ್ಯಾಹ್ಲಾದಕರನಾಗಿ || ೬೦

ಅಂಬರವನುಳಿದಿಂದು ಮಿಗೆ ಯಾ |
ಡಂಬರದಿ ಲಲನಾಳಿಸಹಿತ ವ |
ನಾಂಬುಕೇಳಿಯೊಳೆಸೆವವೊಲು ವಿಮಲಾಂಗದರಸಿಯರ ||
ಜೊಂಬಡದೆ ವಾರಿಯನು ಯದುವಂ |
ಶಾಂಬುನಿಧಿಸಂಜಾತಚಂದ್ರನು |
ಸಂಭ್ರಮದಿ ತುಂಬಿದನು ನಿಜಕರಕಂಜಕುಟ್ಮಲದಿ || ೬೧

ಬಲುಕುಚದ್ವಯಮಲುಗೆ ಮೇಲುದು |
ಸೊಲಗೆ ವರಹಾರಾಳಿಯಂಗ |
ಸ್ಥಳದಿ ಪಲ್ಲಟವಾಗೆ ಕಂಕಣರಾಜಿ ಧ್ವನಿಗೊರೆಯೆ ||
ಜಲಜದಯ ನಡನಡುಗೆ ನಿಜಕರ |
ಜಲಜಪೂರಿತದಿಂ ಸುವಾರಿಯ |
ಜಲಜಮುಖಿಯರು ಚೆಲ್ಲಿದರು ಜಲಜಾಕ್ಷನಂಗದಲಿ || ೬೨

ಸಹಜಗತಿಯಲಿ ಜಲಧಿ ತಪವನು |
ಸಹಸದಲಿ ಪಲಕಾಲ ಮಾಡಿದ |
ಮಹಿಮೆನಿಸಲಚ್ಯುತನ ಸತಿಯರ ನಯನವೈರಿಗೆ ||
ವಿಹಿತದಿಂ ತಲೆಕೆಳಗದಾಗಿಯೆ |
ಬಹುತಪದ ಕೈಕೊಂಡೆನೆಂಬೊಲು |
ರಹಕೆ ಸೇರದೆ ಮುಳುಗಿದುವು ಮೀನುಗಳು ಕೊಳನೊಳಗೆ || ೬೩

ಮುಳಿನ ಪೂರ್ಣೇಂದುಚಂದ್ರನಾದದ |
ಸ್ಫುರಿಪಪಾಂಗವೆ ಚಪಲಭೂಷಣ |
ನಾದ ರವವೆ ಘನಸ್ತನದ ಜಲಯುಂಗವೆ ಪಯೋಧರವು ||
ಮೆರೆವ ವರುಷಾಕಾಲದಂದದಿ |
ಹರಿಯೊಡನೆ ನಾರಿಯರು ನಲಿಯುತ |
ವಿರಚಿಸಿದರಾಗಮುದ ಜಲಕೇಳಿಯ ವಿನೋದದಲಿ || ೬೪

ಕುರುಳುಕುಂತಳ ನಯನಮತ್ಸ್ಯದ |
ವರತಿವಳಿ ತೆರೆಯಾಸ್ಯತಾವರೆ |
ಮೆಱೆವ ಕಂಧರ ಶಂಖಪತಿಜಿಡಗಿನ ಪುಲಿನದಲಿ ||
ಗುರುಸಿತಂಬದ ಪುಳಿನ ನೆರೆ ಸೊಂ |
ದರಕೆ ವಾರಿಯ ಕುಚಯುಗ ವಿಮಲ |
ಲರಿದೆನಲು ಸರಸಿಯಲಿ ಮೆಱೆದರು ದೇವಸರಸಿಯರು || ೭೫

ಈತೆಱದಿ ಜಲಕೇಳಿಯೊಳು ಪಥ |
ಪಾತಿಶಯದಿಂ ನಲಿದು ಸಲಿ ಲ |
ಖ್ಯಾತನಾರೀಗಣಸಹಿತಬೊಪ್ಪಿದರ್ನತಿಮುದದಿ ||
ಪ್ರೀತಿಯಿಂದೋರೊರ್ವರುಡಿಸಿ ನಂ |
ಭೂತವಹ ನಾನಾವಿಚಿತ್ರದ |
ಪೋತು ಜೀಕೊರ್ಜಳಿಗಳಲ್ಲೀಡಾಡಿದರು ಸಂತಸದಿ || ೭೬

ರಾಮ ರೇವತಿಯೊಡನೆ ವರರತಿ |
ಕಾಮನನಿರುದ್ಧಂಗುಷಾಸತಿ |
ಭಾಮಿನೀಮಣಿ ದೇವಕೀವಸುದೇವರುಸ್ಸಬಸ ||
ಸೌಮನಸ್ಯದಿ ವಾರಿಕೇಳಿಯ |
ಲಾವಹೋತ್ಸವದಿಂದೆಸೆಯುತಳ |
ರಾಮರಾಗದಿರಿದರು ತಡಿಗಳನತಿವಿಚಿತ್ರದಲಿ || ೭೭

ಬಗೆಬಗೆಯ ಚಿತ್ರಾಂಬರಂಗಳ |
ನಗುತ ನತಿಪತಿಯರು ವಿದಾಯದ |
ತೆಗೆದುಡುತ ಮಣಿಹಾರಕನಕಾಭರಣಭೂಷಣದ ||
ಝಗಝಗಿಸುವಂತಳವಡಿಸಿ ಕುಸು |
ಮಗಳ ಬನಮಾಲಿಗಳಿಗೆ ಸೇರಿಸಿ |
ಮಗಮಗಿಪ ಕಸ್ತೂರಿಬಣ್ಣವಿಯ ಲೇಪಿಸಿದರೊಲಿದು || ೭೮

ಪರಮಸಂತಸದಿಂದ ಯಾದವ |
ರರಸ ವನಮಧ್ಯದೊಳಿರುತ್ತಿರೆ |
ಸರಸಿತೀರದೊಳಿಪ್ಪ ತರುಗಳ ನೆಳಲನೆ ಕುಳಿತು ||
ಸರಸಮೃದುವಚನಗಳನಾಡುತ |
ನೆರೆದ ಬಲ ಸಹಿತಲ್ಲಿ ನಿಂದಿರೆ |
ತರಣಿಯುನಿತಱಿಕೊಳಸ್ತಶೈಲವ ನಾರಿದನು ಬಳಿಕ || ೭೯

ಜಗದೊಳಿರ್ದಮರಾರಿಸಂಘವ |
ದಿಗುಬಲಿಯ ಕೊಟ್ಟಮಲಚಕ್ರವ |
ನಗಧರನು ಮುನ್ನಿನವೊಲಸಿತಾಂಬರದಿ ವಿರಚಿಸಿದ ||
ಝುಗಝುಗಿಪ ಗವಸಣಿಗೆಗೈದಿಸಿ |
ಬಿಗಿದನೆಂಬೊಲು ಪಶ್ಚಿಮಾಬ್ಧಿಯ |
ಬಗೆದು ಹೊಕ್ಕನು ಕಮಲಬಾಂಧವನತಿ ಸರಾಗದಲಿ || ೭೦

ವರನಭಕೆ ದ್ವಿಜರಾಣ್ಮ ಬಹನೆಂ |
ದುರತರದ ಶೋಣಾಂಬರಂಗಳ |
ಭರದಿ ಮೇಲ್ಕಟ್ಟುಗಳ ರಜನೀಸಾರ ಕಟ್ಟಿಸಿದ ||
ತೆಱನೊ ಪಶ್ಚಿಮಶರಧಿ ತರಣಿಗೆ |
ಮೆಱೆವ ಮಾಣಿಕ್ಯಗಳ ಕಾಣಿಕೆ |
ಗಱೆದನೋ ಎನೆ ಬೞಿಕ ಸಂಧ್ಯಾರಾಗ ರಂಜಿಸಿತು || ೭೧

ಹಾಱಿದುವು ಹಕ್ಕಿಗಳು ಗೂಡಿಗೆ |
ವಾರಿಜಗಳುಱೆ ಮುಗಿದುವರ್ಕನ |
ಚಾರುಕಿರಣಪ್ರಭೆಯುಲಡಗಿದುರ್ಡುಗಣಗಳೆದ್ದು ||
ಓರಣದಿ ಕಾಣಿಸಿದುವೆಂತೆನೆ |
ವಾರಿಜಾಸನಜನಕಗಮರರು |
ಸಾರಮುತ್ತಿನ ಚಪ್ಪರವನಿಕ್ಕಿದೊಲು ನಭ ಮೆಱೆಯೆ || ೭೨

ಧರೆಯೊಳೆಣೆ ತನಗಿಲ್ಲ ನೀನೇ |
ಸರಿ ಸಮಾನವು ಎಂದು ಕೃಷ್ಣನ |
ಸುರುಚಿರದ ಸತ್ಕೀರ್ತಿ ದುಗ್ಧಾರ್ಣವವ ಪೊಗೞಲ್ಕೆ ||
ಪಿರಿದು ಹರುಷದೊಳುಬ್ಬಲಾತಂ |
ತುರುಗಳಗಲಕೆ ನೆಗೆದು ಗಗನದಿ |
ತಿರದಿ ನಿಂದವೊಲೊಪ್ಪಿದುವು ತಾರಾಳಿ ಚೆಲುವಿನಲಿ || ೭೩

ಪಿಂತೆ ತಮ್ಮನು ಕೊಲಲೆಣಿಸಿ ನಿ |
ಶ್ಚಿಂತರಾಗಿಹ ತರಣಿಶಶಿಗಳ |
ಪಂತದೊಳ್ ನುಂಗುವೆವೆನುತ ಮಿಗೆ ರಾಹುಕೇತುಗಳ ||
ಸಂತಸದೊಳವರಿರ್ವರನು ಜಠ |
ರಾಂತರದೊಳಿಂಬಿಡಲಿಕಂಧತೆ |
ನಿಂತಿತೋ ಜಗಕೆನಲು ಕತ್ತಲೆ ತುಂಬಿತೆಣ್ದೆಸೆಯ || ೭೪

ಹೆೞುವ ಸಾರಥಿ ಗಾಲಿಯೊಂದೇ |
ಬಲುರಥಕೆ ಹಯವೇೞು ಸಾಲದು |
ಜಲಜಭವನಾಜ್ಞೆಯಲಿ ಮೇರುವ ತಿರುಗಲಶ್ಯಮಗೆ ||
ಆಳವಹುದೂ ಅಳವಡದೊ ವೇಗದಿ |
ತಿಳಿದು ಬಹುದೆಂದೀಶ ಕಳುಹಲು |
ಚಳಕದಲಿ ಬೆಂಬಿಡದೆ ಬಂದಂತಿಂದುವುದಯಿಸಿದ || ೭೫
ಇಳೆಯ ದುರ್ಜನಕುಲವ ಶಿಕ್ಷಿಸಿ |
ಲಲಿತಸುಜನರ ಸಲಹಿ ತಾ ನಿ |
ರ್ಮಲನೆನಿಪುದದು ರಾಜರ ನೀತಿಯೆಂದು ನಡೆತರುತ ||
ತೊಲಗಿಸಿದ ತಾಮಸಿಯ ನಿಜಕರ |
ಗಳಲಿ ಮುದದಿಂ ಕುಮುದಿನೀಸಂ |
ಕುಲವನುಱೆಯರಳಿಸುತ ಚಂದ್ರಮನಡರಿದನು ನಭವ || ೭೬
ಆಗಲತಿಮುದದಿಂದಲೆಲ್ಲರು |
ಬೇಗ ರವಿಗರ್ಘ್ಯವನು ಕೊಟ್ಟು ಸ |
ರಾಗದಿಂ ಭೋಜನಗಳನು ಮಾಡಿದರು ಹೆಲುಪಿನಲಿ ||
ನಾಗರಥಹಯಪಾಯದಳ ಸಹಿ |
ತಾಗಲಿರೆ ತಿರುವೇಂಕಟೇಶನು |
ಭೋಗಿಶಯನದೊಳೆಸೆದನೈ ಭೂಪಾಲ ಕೇಳೆಂದ || ೭೭

ಅಂತು ಸಂಧಿ ೪ ಕ್ಕಂ ಪದ ೧೮೮ ಕ್ಕಂ ಮಂಗಳಂ.

*

# ಐದನೆಯ ಸಂಧಿ

ಸೂಚನೆ: ಪುರಿಗೆ ಪೋಗ್ಯಿರಲು ಮಾಡಿ ಭಯದಲಿ |
ನರನೀಶಾರ್ನನಲ್ಲಿ ಪ್ರಿಯಲು |
ಸುಯಪುಲಿ ತರುಣಿಯ ಗಯುನನು ನಯುವೆಣಿಸಿಬುವಭವ |

ಬಿವರಿಸುವ ಕೇಸರದ ಸರಸಿಜ |
ಭವನಿಪನ ಜಲತಾಗಮುನಸೆ |
ಭವನುದೇಂದ್ರಾದಿಗಳು ನೆರುಹಿದ ತೆರದಿ ನಾಸಿದನು ||
ಭುವನಕಭವತಿಯನಾದ ಚಕ್ರ್ಯಿ |
ಧವನು ರಾತ್ರಿಯ ಕಳಿದನಾಸನ |
ಕುನಲಿಯುದಿ ನರನಾಟಕವ ನಟಿಸುತ್ತ ಸೋಜ್ಜರಿಗ ||
ತಿಳಿಯೆ ಕಳ್ಳನ ಸಿರಿಯು ತೆರದಲಿ |
ಗಗಗಗಗೆಗೆ ಸಿಲ್ಲದಾಗಳೆ |
ಕೊಲಗು ಚಮುದಪ್ಪುತಾಂಬುಜಿನ ಕಿರಣಾಳಿ ನಭದಿಂದ ||
ಬಿಟಿ ಕಿರಟ ನಾಗಿದುವ್ರ ಮುಪದಿಂ |
ದುಳಿಯುತಿರ್ದುವ್ರ ಬಗಿಕರಗಳು |
ಜಲರುಹಾಪ್ತನ ಸೂತ ನುಡಿಯಿಸಿದನು ಸರಾಗದಲಿ ||
ಅನಿತರ ಕೊಕ್ಕಂಕೇಜವಧುಗಳ |
ಘನತಪೋನಿಷ್ಠೆಯನರಿದು ಪರ |
ಪನು ಪ್ರಸಾದನವೇಕೆನುತ ಭರದಿಂದ ನಡೆತಹನೋ ||
ಎನೆ ಜಿಹಾಜದಿಶಾಂಗನಾರತಿ |
ಯುನುನಯುದೊಳನುಕಲಿಸಿ ಭಾಸ್ಕರ |
ಮನದ ಹರುಷದಲಡರಿದನು ಬಿಟಿಕುದಯ ಪರ್ವತವ ||
ಪರೆದುವಾಗಲೆ ತಾರೆ ಕುಮುದಿನಿ |
ಕೊರಗಿದುವು ಮುಗಿದಿರ್ದ ತಾವರೆ |
ಬಿರಿದುವಾರ್ದಿಸಿಜಯ ಝೇಂಕಾರದಲಿ ದೆಸೆದೆಸೆಗೆ ||
ಪರಿದುವಗಣಿತ ಯದುಜಲಾಂಬುಧಿ |
ಸ್ಮರಪಿತನ ಸೆನೆಯಿಂದ ನಾದು |
ಸ್ಮರಣೆಗಳ ಜಪಿಸುತ್ತಲಿರೆ ರವಿ ಮೂಡಲುದಯಿಸಿದ ||

ಮೈಮುರಿದು ಕೊಂಡೆದ್ದು ಕುಳಿತಾ |
ಶ್ರೀಮನೋಹರಮೂರ್ತಿಯಾಶ್ರಿತ |
ಕಾಮಧೇನು ಮನೋಜಶತಸಾಹಸ್ರಲಾವಣ್ಯ ||
ಕೋಮಲಾಂಗನನಾಥರಕ್ಷಕ |
ಸಾಮಗಾನವಿನೋದಿ ಕೃಷ್ಣನು |
ಪ್ರೇಮದಿಂ ತೊಡವುಗಳನೊಯ್ಯಾರಿಸುತ ನಿಂದಿರ್ದ || ೨೧

ಬಂದು ಸರಸಿಯ ತೀರದಲಿ ಹರಿ |
ನಿಂದು ಸೋಪಾನಗಳನಿಳಿದೈ |
ತಂದು ಕಾಲ್ಮೊಗದೊಳೆದು ಕುಳ್ಳಿರ್ದು ಸರಸೀರುಹದ ||
ಬಂಧುವಿಂಗರ್ಘ್ಯವನು ಕೊಡುತಿರ |
ಲೊಂದು ಚಿತ್ರವದಾಯಿತದನೇ |
ನೆಂದು ವಚನಿಸಬಪ್ಪುದೆಲೆ ಭೂಪಾಲ ಕೇಳೆಂದ ||

ವರನಭೋಮಾರ್ಗದಲಿ ನಾನಾ |
ಪರಿಯ ಮೌಕ್ತಿಕರತ್ನದಿಂದವೆ |
ವಿರಚಿಸಿದ ನವಹೇಮಪುಷ್ಪಕದಿಂದ ಗಯನೆಂಬ ||
ಉರುತರದ ಗಂಧರ್ವಪತಿ ಸರ |
ಸಿರುಹಭವನೋಲಗಕೆ ಗಮಿಸುವ |
ಭರದಿನುಗುಳುತ ಹೋದನಾರಸದಂಬುಲವನಿಳೆಗೆ ||

ಅದು ಬಳಿಕ ವಿಧಿವಶದೊಳಾಕ್ಷಣ |
ಪದುಮನಾಭನ ನಲಲಿತೋಜ್ವಲ |
ಮೃದುಕರಾಂಜಲಿಯರ್ಘ್ಯದುದಕದ ಮಧ್ಯದೊಳೆ ಬೀಳೆ ||
ಕೆದರಿ ಹರಿ ಕೋಪಿಸುತಲಂಬರ |
ಸದನವನು ಮಿಗೆ ನೋಡಿ ಕಾಣದೆ |
ಹೃದಯದೊಳು ತಳವೆಳಗುಗೊಂಡಾಶ್ಚರ್ಯಮನನಾದ ||

ಮೂಗಿನಲಿ ಬೆರಳಿಟ್ಟು ಮಗುಟವ |
ತೂಗಿದನು ಕಡುಚಿತ್ರವಿದು ಚೆ |
ನ್ನಾಗಲರಿಯದೆನುತ್ತ ಲಕ್ಷ್ಮೀರಮಣ ಕೋಪಿಸಲು ||
ಬೇಗ ಭಯದಿಂದೆದ್ದು ಕರುಣಾ |
ಸಾಗರನೆ ಚಿತ್ತೈಸು ಪೇಳುವೆ |
ನಾಗನುವ ನಿಮಗೆಂದು ನುಡಿದಳು ನಗುತ ಜಲದೇವಿ ||

ಅವಧರಿಪುದೆಲೆ ದೇವದೇವನೆ |
ಕುವಲಯೇಶ ಸುರಾರಿಶಾತ್ರವ |
ಭುವನಪಾವನಮೂರ್ತಿ ಮನ್ಮಥಜನಕ ಭವಮಿತ್ರ ||
ಇವನು ಗಂಧರ್ವಾಧಿಪನು ಬೞಿ |
ಕಿವನು ಮಗ ಮಣಿಮಂತನೆಂಬಗೆ |
ಇವನ ಮಹಿಮೆಯ ಪೇೞುವೆನು ಕೇಳೆಂದಳಾಸರಸಿ || ೧೦

ಇಳೆಗಿವನ ಪುರವಿಹುದು ನಿಷಧಾ |
ಚಲದೆಡೆಯ ತಪ್ಪಲಲಿ ಮೇಣಾ |
ಹೊೞಲು ಮಣಿಪುರವೆಂಬುದಿವನದನಂಕ್ಷ್ವ ಗಯನೆಂಬ ||
ಬಳಕೆ ಸೇರಿಹುದಿವನು ಕಮಲಜ |
ನೊಳು ತಪವ ನೆರೆ ಮಾಡಿ ಸುರನರ |
ಬಲುಭುಜಂಗರ ಸರಕುಮಾಡನು ಬೞಿಕಲಾವರದಿ || ೧೧

ಸರಸಿಜಾಸನನಿತ್ತ ವರದಲಿ |
ಮಱಿದಿಹನು ದೇಹವನು ಬೞಿಕೀ |
ಪರಿಯವನ ದೆಸೆಯಿಂದಲಾದುದು ಕೇಳಿ ಸೀವೆಂದು ||
ಸರಸಿವಧು ಬಿನ್ನೈಸಲಾಮುರ |
ಹರನದೆಲ್ಲವ ಕೇಳಿ ರೌದ್ರ |
ಸ್ಫುರಿತನಾದನು ಬಹಳಲಯದುಗ್ರಾಂಬಕನ ತೆಱದಿ || ೧೨

ಶಿವಶಿವಾ ಗಂಧರ್ವಕನ ಗ |
ರ್ವಪನದೇನೆಂದೆಂಬೆ ಸರಸಿಜ |
ಭವನು ತನಗೊಲಿದಿತ್ತ ವರವುಂಟೆಂದು ಬಿಂಕದಲಿ ||
ಅವನಿಯಿದು ಪಾತಾಳವಿದು ಸುರ |
ಭುವನವಿದು ತಾನೆಂಬ ಬುದ್ಧಿಯ |
ಹವಣ ಕಾಣದೆ ಬಱಿದೆ ತೊೞಲುತ್ತಿಹನಲಾ ಎಂದ || ೧೩

ಕಾಯ ಬಲಿದಿಹುದೆಂದು ಬೆಟ್ಟವ |
ಪಾಯೆ ಕೆಡುತಿಹ ಬಹಳ ಪಾಪಿಯ |
ದಾಯ ಬೞಿಕಿವಗಾಯ್ತು ಹೇೞುವುದೇನು ತಾನಿನ್ನು ||
ಬಾಯಿಒಡಿಕನ ತಂದು ದಿಗುಬಲಿ |
ಗಾಯತವ ಮಾಡುವೆನು ಈಗಳು |
ಮಾಯವಾದಡೆ ಬಿಡುವೆನೇ ತಾನೆನುತ ಘರ್ಜಿಸಿದ || ೧೪

ಒಳ್ಳಿತಾಗಯನೆಂಬ ಖಳ ಬಲು |
ಸುಳ್ಳುತನದಿಂ ತನ್ನ ದೇಹವ |
ನೆಳ್ಳಿಸಿತು ತಾನಱಿಯದೆನ್ನ ಕರಾಂಜಲಿಯೊಳುಗುೞ ||
ಕಳ್ಳನೋಡಿದ ತೆಱದಿ ಪೋಗು |
ತ್ಫುಲ್ಲಸಳಿನೋದ್ಭವ ಶಿವಾಧವ |
ರಲ್ಲಿ ಮಱೆವೊಕ್ಕಡೆಯು ಕೊಲ್ಲದೆ ಬಿಡುವೆನೇ ಎಂದ || ೧೫

ಅತಳಲೋಕವ ಹೊಗಲಿ ಮೇಣಾ |
ವಿತಳಲೋಕದೊಳಿರಲಿ ನಿಲ್ಲದೆ |
ಸುತಳಲೋಕವ ದಾಂಟಿ ಬೇಗ ತಳಾತಳಂಗಳಲಿ ||
ಗತಿವಿಹೀನತೆಯಿಂದಲಮರಾ |
ವತಿಯರಸನನು ಮಱೆಯ ಹೊಕ್ಕಡೆ |
ವಿತತಚಕ್ರದೊಳವನ ತರಿಯದೆ ಮಾಣೆನಕಟೆಂದ || ೧೬

ಕೇಳಿರೈ ಬಲರಾಮ ಸಾತ್ಯಕಿ |
ಕೇಳಿ ಮನ್ಮಥ ಸಾಂಬನುದ್ಧವ |
ಕೇಳಿರೈ ಕೃತವರ್ಮಮುಖ್ಯ ಸಮಸ್ತಯದುಸೇನೆ ||
ಕೇಳಿ ನೀವೀಭಾಷೆಯನು ಬಹು |
ಖೂಳ ಖಚರನೆನಿಪ್ಪ ಗಯನನು |
ಸೀಳುವೆನು ಚಕ್ರದಲಿ ನಿಜ ವಸುದೇವನಾಣೆಂದ || ೧೭

ಇತ್ತಲೀಹದನಾಗಲಾಗಯ |
ನತ್ತ ಪುಷ್ಪಕದಿಂದ ನಭದೊಳ್ |
ಮತ್ತನಾಗೈದುತ್ತಲಿರೆ ನುಡಿದುದು ನಭೋನಿನದ ||
ಬಿತ್ತರಿಸುವೆನು ಕೇಳಿದೈ ಗಯ |
ಕತ್ತಲೆಯ ಪೆಸರುಳ್ಳವನ ಬಗೆ |
ಕತ್ತರಿಸಿ ಕೆಡಹಿದ ಮಹಾತ್ಮ್ಯಮ ನೆನೆದ ಕಾರ್ಯವನು || ೧೮

ಸರಸಿಯೊಳು ಬೞಲಿ ಮುರಾಂತಕ |
ಸರಸಿಜಾಪ್ತಂಗರ್ಘ್ಯವನು ಕೊಡು |
ತಿರೆ ಕರಾಂಜಲಿಯುದಕದೊಳ್ತಂಬುಲದ ರಸ ಬೀೞೆ ||
ಅಱಸಱಸಿ ಗೋಪಾಲಕೃಷ್ಣನು |
ಹರಿಪದವ ಮೇಲ್ ನೋಡಿ ಕಾಣದೆ |
ಭೆಱಗುಗೊಳುತಿರೆ ನುಡಿದುದೈ ಜಲದೇವಿ ಇಂತೆಂದು || ೧೯

ಗಯನ ದೆಸೆಯಿಂದೀಪರಿಯ ದು |
ರ್ನಯುವದಾಯಿತು ಕೇಳಿಸಲು ವಿ |
ಸ್ಮಯವನುಱಿದಸುರಾರಿಯತ್ಯಂತಕೋಪದಲಿ ||
ನಿಯಮಿಸಲ್ಕಸದಳದ ಭಾಷೆಯ |
ನಯವಿದರ ಮುಂದೊಕ್ಕಣಿಸಿ ತ |
ನ್ನಯ ನಿವಾಸಕೆ ಸಯಲುದ್ಯೋಗಿಸುತಲಿರುತಿಹನು || ೨೦
ಎಲ್ಲಿ ಗಯನೆಂಬವನು ಸುೞಿದರೆ |
ಅಲ್ಲಿ ತಲೆಯನು ತರಿವೆ ಚಕ್ರದೊ |
ಳೆಲ್ಲ ಸುಭಟರು ಕೇಳಿ ನೀವೆಂದುಗ್ರಭಾಷೆಯನು ||
ಬಲ್ಲಿದರ ಮುಂದಾಡಿಕೊಂಡಿಪ |
ನಿಲ್ಲದದಕೊಂದನುವ ಕಂಡಾ |
ತಲ್ಲಣವ ಪರಿಹರಿಸಿಕೊಳ್ಳೆಂದುದು ನಭೋಸಿನದ || ೨೧
ಎಂದ ನುಡಿಯನು ಕೇಳಿ ಗಯ ಭಯ |
ದಿಂದ ತನಗೀಪರಿಯ ಸಂಕಟ |
ಬಂದುದೇ ಶಿವಶಿವ ವಿಧಾತ್ರನ ಮೊಗಲಾರ ವಶ ||
ಇಂದು ಮನದಱಿಕೆಯಲಿ ತಾ ಗೋ |
ವಿಂದನಡಿಗಪರಾಧಿಯೇ ಹಾ |
ಎಂದು ಚಿಂತಿಸಿ ತನ್ನೊಳಗೆ ಮಿಗೆ ಮಱುಗುತಿಂತೆಂದ || ೨೨
ಎಲ್ಲಿ ತನಗೀಗಮನವಾಹರಿ |
ಯಲ್ಲಿ ಮಾಹಂಕಾರವೇ ಬಱಿ |
ಕೆಲ್ಲಿ ತಾನುಗುಱಿದೆನು ಪರಿಕಿಸಲೆತ್ತ ತಾನೆತ್ತ ||
ಅಲ್ಲಿಗಲ್ಲಿಗೆ ದೈವ ಮಾಡಿದ |
ಗಲ್ಲಣೆಯ ಬಲುಮಾಯಕಿದಕಿ |
ನ್ನೆಲ್ಲಿಗೈದುವೆನಾರು ಸಲಹುವರೆನ್ನ ವಿಗ್ರಹವ || ೨೩
ಹರಿಯ ಕೋಪವ ನಿಲಿಸ ಬಲ್ಲವ |
ಸರಸಿಜಾಸನನೊಬ್ಬನವನಲಿ |
ಹರಿಯ ದಿರ್ದಡೆಯಭವನಲ್ಲದೆ ಕಾಣೆ ಮೂಜನೆಯ ||
ಪುರುಷನನು ತಾನೆಂದು ಮನದಲಿ |
ಪರಿಕಿಸುತ ಕಮಲಜನ ಹೊರೆಗತಿ |
ತ್ವರಿತದಿಂ ಪುಷ್ಪಕದೊಳೈತಂದನು ವಿಷಾದದಲಿ || ೨೪

ಬರುತ ಕಂಡನು ಸತ್ಯಲೋಕದ |
ಪರಿವಿಡಿಯ ಸಂಭ್ರಮವ ನಾನಾ |
ತರದ ಚಿತ್ರಂಗಳನು ಹೊಗಳುತ ವರಸಭಾಂತರವ ||
ಸರಸದಲಿ ಪುಷ್ಪಕವನಿಳಿದನು |
ಸರಸಿಜೋದ್ಭವನೋಲಗಕೆ ತಾ |
ಭರದಿ ಬಂದನು ಪೇಳ್ವೆನೇನಾಸಭೆಯ ಸಂಭ್ರಮವ || ೨೫

ವರವಸಿಷ್ಠನು ಸನಕ ನಾರದ |
ಪರಮಮುನಿ ಮೈತ್ರೇಯ ಗೌತಮ |
ಪರಶುರಾಮನ ತಾತ ಜೈಮಿನಿ ಕಶ್ಯಪಾಗಸ್ತ್ಯ ||
ಸುರಗುರು ಭರದ್ವಾಜ ಗಾಲವ |
ವರಮೃಕಂಡುವು ಕಂಕ ಕೌಶಿಕ |
ವರರು ಮೊದಲಾಗೆಸೆದರಾಕಮಲಜನ ಸಭೆಯೊಳಗೆ || ೨೬

ಶುಕ ಪರಾಶರ ಪುಂಡರೀಕನು |
ಕುಟಿಲನು ದುರ್ವಾಸ ಶಾಂಡಿ |
ಲ್ಯಕ ಭೃಗುವು ಕೌಂಡಿನ್ಯನನುಪಮ ಮಹಾಮುನಿಯತ್ರಿ ||
ಸಕಲಮುನಿಗಳು ಸಕಲದಿಕ್ಪಾ |
ಲಕರು ಕಿನ್ನರಗರುಡಗಂಧ |
ರ್ವಕರು ತಾವೋಲೈಸುತಿರ್ದರು ನೊಸಲ ಕೈಗಳಲಿ || ೨೭

ಒಳಿಕಲೀಪರಿ ಬ್ರಹ್ಮದೇವರ |
ಬಲುಸಭೆಯ ತಾನೋಡಿ ಗಯ ಕರ |
ಗಳ ಮುಗಿದು ಸಾಷ್ಟಾಂಗಯುತನಾಗಧಿಕಭಕ್ತಿಯಲಿ ||
ಹಲವು ಬಗೆಯಲಿ ನುತಿಸ ತೊಡಗಿದ |
ನೆಲೆ ಮಹೀಪತಿ ಕೇಳಿದೈ ನಿ |
ಷ್ಫಲವಿದೆಂದೇ ತಿಳಿಯದವ ಜಯಜಯನಿನಾದದಲಿ || ೨೮

ಜಯ ಚತುರ್ದಶಭುವನನಿರ್ಮಿತ |
ಜಯ ಮುನೀಂದ್ರಸುರೇಂದ್ರಸನ್ನುತ |
ಜಯ ನಿಗಮಸಂವೇದ್ಯ ಜಗಕತಿಜನಕ ಪರಮೇಷ್ಠಿ ||
ಜಯ ಮರಾಳವರೂಥ ರಕ್ಷಿಸು |
ಭಯನಿವಾರಣಮೂರ್ತಿ ತಾ ಮಿಗೆ |
ಭಯದಲೈದಿಪೆ ತನ್ನ ಹರಣವ ಸಲಹಬೇಕೆಂದ || ೨೯

ಶಾರದಾಪತಿ ಸಲಹು ಕೃಪೆಯಲಿ |
ವಾರಿಜಾಸನ ಸಲಹು ಶರಣನ |
ನಾರದನ ಪಿತ ಸಲಹು ಬಹಳ ಭಯಾರ್ತನಾಗಿಹನ ||
ಘೋರಸಭಯವ ಕೊಟ್ಟು ಸಲಹುವ |
ರಾರು ಕಾವವರೆನ್ನ ದೇವರ |
ದಾರು ಚಿತ್ತೈಸಾನು ಮಾಡುವ ಬಿನ್ನಪವನೆಂದ || ೩೦

ಏನು ಹದನಾರಿಂದ ಬಂದುದ |
ದೇನು ಕಾರಣ ಪೇಳು ತಮ್ಮಿಂ |
ದೇನು ಕಾಣಲು ಬಂದೆ ಪೇಳೆನಲೆದ್ದು ಕೈಮುಗಿದು ||
ಏನನೆಂಬೆನು ದೇವರೋಲಗ |
ಕಾನು ಬರುತಿರಲೊಂದು ತಪ್ಪನು |
ಶ್ರೀನಿವಾಸಗೆ ಮಾಡಿದೆನು ಬಿನ್ನೈಸೆ ಹುರುಳಿಲ್ಲ || ೩೧

ಆವ ಪರಿಯಲಿ ಬಿಡದೆ ತನ್ನಯ |
ಜೀವವನು ಜವನಗರಿಗೈದಿಪ |
ಭಾವದಿಂದ ಮುರಾಂತಕನು ನಿರ್ಣೈಸಿಕೊಂಡಿಹನು ||
ಕಾವರಿಲ್ಲದನಾಥರಿಗೆ ನೀ |
ಕಾವ ಕರುಣಿಯೆನುತ್ತ ಬಂದೆನು |
ಕಾವುದೈ ಕರುಣಾಳು ನೀನೆಂದೆನುತ ಪೊಡೆಮಟ್ಟ || ೩೨

ನಗುತಲಬುಜಾಸನನು ಗಯ ಕೇ |
ಳಗಧರನ ವೀರಪ್ರತಿಜ್ಞೆಯ |
ಮಗುಳೆ ಮರಳಿಸ ಬಲ್ಲನಾವನು ಲೋಕ ಮೂಱಱಲಿ ||
ಹಗರಣದ ಮಾತಲ್ಲ ನುಡಿಯಿದು |
ನಿಗಮಮತವೆಂದಱಿತಿಹುದು ಬಱಿ |
ಕಗಡುದೇವನ ತೋಟಿಗಾನು ಸಮರ್ಥನಲ್ಲೆಂದ || ೩೩

ಧರೆಯ ಭಾರವ ತವಿಸಲೋಸುಗ |
ಹರಿ ಮನುಜವೇಷವನು ಕೈಕೊಂ |
ಡುರುತರದ ಖಳವರ್ಗವನು ನಿರ್ಣೈಸುತಿಹನಿಳೆಯ ||
ನರರ ಪಡಿಯಿವನೆಂದು ಕೃಷ್ಣನ |
ಮಱೆದು ಕನಸಿನೊಳಾದೊಡಂ ಮಿಗೆ |
ಇರಲು ಬೇಡಾ ನಿನ್ನ ಮನಸಿನಲೆಂದನಬುಜಭವ || ೩೪

ಆದಿಪುರುಷನು ವಿಶ್ವಪೂಜ್ಯನು |
ವೇದವೇದ್ಯನು ಲಯವಿಹೀನನು |
ಮೇದಿನಿಯ ಮೇಲೀಪರಿಯ ನರನಂತೆ ಜನಿಸಿಹನು ||
ಹೋದುದೇ ಪಥವಾಮಹಾತ್ಮಗೆ |
ಕಾದೆವೆನ್ನಲು ಬಹುದೆ ಹರಣವ |
ಮಾಧವನ ಕಠಿನೋಗ್ರಭಾಷೆಯ ತವಿಸಲರಿದೆಂದ || ೩೪

ಅವನೀಜಗದುದರನೊಳು ಮಿಗೆ |
ಭಾವಿಸಲು ವೈರವನು ಬೆಳಸಿಯೆ |
ಜೀವಿಸುವನೆಲೆ ಮರುಳೆ ಗಯ ಹರಿಯಾಜ್ಞೆಯಿಂದಿನಿತು ||
ಭೂವಲಯವನು ನಿರ್ಮಿಸುವ ಕಾ |
ರ್ಯಾವಲಂಬನನಾಗಿಹೆನು ಬಳಿ |
ಕಾವ ಸ್ವಾತಂತ್ರ್ಯಂಗಳೆನಗಿಲ್ಲೆಂದನಬುಜಭವ || ೩೫

ಹರಿಯ ಶಪಥವ ಬಿಡಿಸ ಬಲ್ಲವ |
ನೆರೆ ಚತುರ್ದಶಭುವನಪರಿಯಂ |
ತರದೊಳೊರ್ವನ ಕಾಣೆನಾತನು ಪತಿಕರಿಸಿದವರ ||
ನರಸುರಾಸುರವರ್ಗದೊಳು ಸಂ |
ಹರಿಸಲಾಪ ಸಮರ್ಥರುಂಟೇ |
ಪರಿಕಿಸಲು ಪರಿಹಾಸಕವಿದೇನೆಂದನಬುಜಭವ || ೩೬

ಎನಲು ಮುಣಿಮಂತಾತ್ಮಜನು ಮಿಗೆ |
ಮನದೊಳಗೆ ಚಿಂತಿಸಿಯಕಟಕಟ |
ವನಜಸಂಭವ ರಕ್ಷಿಸಲು ಭಯಗೊಂಡು ಕಳುಹಿದನು ||
ತನಗೆ ಗತಿಯಿನ್ನಾರು ಪಿಮವಂ |
ತನ ತನೂಜೆಯರಸನ ಮರೆಹೊಗು |
ವೆನು ನಿದಾನವಿದೀಗೆನುತ ಬೀಳ್ಕೊಂಡನಬುಜಜನ || ೩೭

ಅಭವನನು ಮರೆಹೊಗುವೆ ತಾನತಿ |
ವಿಭವದಿಂ ಬಳಿಕಾತನಿಂ ದು |
ರ್ಲಭವದಾದೊಡೆ ಕಂಡುದನು ಮಿಗೆ ಕಾಂಬೆನೆಂದೆನುತ ||
ಸಭೆಯನುಳಿದಲ್ಲಿಂದ ರವಿಸಂ |
ನ್ನಿಭದ ಪುಷ್ಪಕವೇರಿ ಲಕ್ಷ್ಮೀ |
ವಿಭುವೆನಿಪ ತಿರುವೇಂಕಟೇಶನ ಭಯದಿ ನಡೆತಂದ || ೩೮

# ಆಱನೆಯ ಸಂಧಿ

ಸೂಚನೆ || ವಾರಿಜಾಕ್ಷನ ಭಯದಿ ಖಚರನು ।
ನೂರವೈರಿಯ ಮಱೆಗೊಳಲ್ಕಾ ।
ಗೌರಿಯರಸನನುಚಿತವಚನವ ಕೇಳಿ ಮಱಳಿದನು ||

ಎಲೆ ಮಹೀಶನೆ ಕೇಳಿದೈ ಬೞಿಕ |
ಕಲಘುಭುಜಬಲ ಗಯನು ಮಱಳಿದ |
ಜಲಜಸನ್ನಿಭನಲ್ಲಿ ಫಲವನು ಕಾಣದಾಕ್ಷಣದಿ ||
ಸುಲಭನೇ ವರ ದೇವ ನಿಜಪದ |
ನಳಿನಸೇವಕನಿಚಯರಕ್ಷಕ |
ಕಲುಷಹರ ಕಾಮಾಂತಕನನೈದಲ್ಕೆ ಮನದಂದ || ೧

ಮುಱಿಯೊಗುವೆ ಶಂಕರನ ಪದಯುಗ |
ಸರಸಿಜವನಾತನಲಿ ಸಲಹುವ |
ತೆಱನದಿಲ್ಲದಡನಿತಱಲಿ ಕಂಡನುವ ನೆರೆ ಕಾಂಬೆ ||
ಬಱಿದೆ ಚಿಂತಿಸಲೇಕೆನುತಲ |
ಲ್ಲಿರದೆ ವರಕೈಲಾಸಸೀಮಾ |
ವರುಷಭೂಮಿಗೆ ಬಂದನತಿಚಿತ್ರಗಳ ನೋಡುತ್ತ || ೨

ಆಗಿರಿಯ ತಪ್ಪಲಲಿ ಕರುಣಾ |
ಸಾಗರನ ನೆನಹಿನಲಿ ಕಲುಷ |
ತ್ಯಾಗಿಗಳು ಮುನಿನಿಕರ ಬಹುವಿಧತಪಗಳನು ಮಾಡಿ ||
ಭೋಗಿಭೂಷಣನಖಿಳಭಕ್ತಿಯ |
ಲಾಗ ಸಾಕ್ಷಾತ್ಕಾರವನು ಲೇ |
ಸಾಗಿ ಪಡೆವ ಮಹಾತ್ಮರಿರುತಿಪರೆಂದನಾಮುನಿಪ ||

ಒಂದು ಕಡೆಯಲಿ ಸೂಜಿಯಗ್ರದಿ |
ನಿಂದು ತಪಗಳ ಮಾಡುವರ್ಮ |
ತ್ತೊಂದು ಕಡೆಯಲಿ ತಪವನೊಂದೇ ಪಾದದೊಳ್ನಿಂದು ||
ಕಂದುಕಸರಿಕೆಯಿಲ್ಲದೇ ಸಲೆ |
ಸಂದು ಕಠಿನೋಗ್ರದ ತಪಂಗಳ |
ಬಂಧುರದ ಮುನಿನಿಕರ ಮಾಡುತ್ತಿಹುದು ಕೇಳೆಂದ || ೪

ಬಱಿಕಲೊಂದೆಸೆಯಲ್ಲಿ ಯಾಗಂ |
ಗಳನು ಯಾಜಿಸುತಿಹರು ಪುನರಪಿ |
ಕೆಲಕಡೆಯ ವೇದಾಗಮಾದಿಸಮಸ್ತಶಾಸ್ತ್ರಗಳ ||
ಲಲಿತಸಾರಪದಾರ್ಥವಂ ಪಿಗೆ |
ಕಲಿವ ಶಿಷ್ಯರಿಗಱುಹುತಿಹ ಯತಿ |
ಕುಲಲಲಾಮರು ಇರುತಲಿರ್ದರು ಗಿರಿಯ ಬಳಸಿನಲಿ || ೫೪
ಇನಿತು ಚಿತ್ರವ ನೋಡುತೈತಂ |
ದನು ಖಚರ ಕೈಲಾಸಪರ್ವತ |
ವನು ನುತಿಸಿ ಬಲುಹರುಷಮುಖದಲಿ ಗಿರಿಯ ತಾನೇಱಿ ||
ಘನಮನೋವೇಗದಲಿ ಗೌರೀ |
ವನಿತೆಯರಸನ ಬಱಿಗೆ ಗಮಿಸುವ |
ಮನದೊಳಲ್ಲಿಹ ಚಿತ್ರಗಳ ನೋಡುತ್ತಲೈತಂದ || ೬
ಆಮಹಾಗಿರಿಯಗ್ರದೊಳಗತಿ |
ಸೌಮನಸ್ಯರು ಬಱಿಕ ನಿರ್ಜಿತ |
ಕಾಮರಾಗಿಹರಲ್ಲಿ ಯಕ್ಷರು ಗರುಡಕಿನ್ನರರು ||
ಸೋಮಶೈವಾಗಮಮತದಲಭಿ |
ರಾಮರಾಗಿಹ್ಹರವರ ನೋಡುತ |
ಸೋಮಶೇಖರನೋಲಗಕೆ ನಡೆತಂದನಾಖಚರ || ೭
ಓಲಗಿಸಿಕೊಂಡಿಹರು ಪಾಣೀ |
ಲೋಲರೆಂಬವರ್ಗಗಣಿತರು ಸುರ |
ಪಾಲ ಮುಖ್ಯಾಮರರನೆಂತೆಂದೆಣಿಸಬಹುದಲ್ಲಿ ||
ಶೂಲಪಾಣಿಯ ಮಹಿಮೆಯನು ತಾ |
ಪೇೞಲಸದಳಮೆನೆ ಮಹೀಶರ |
ಮೌಳಿಮಣಿ ಕೇಳೆನನುಸಿರುವೆ ಸಭೆಯ ಸಂಭ್ರಮವ || ೮
ಶ್ರುತಿತತಿಗೆ ಸಿಲುಕದ ಗುಣತ್ರಯ |
ಮತಿಹೊಗದ ಮಾಯಾಸುಶಕ್ತಿಯ |
ಕೃತಕಗೊಳಗಾಗದ ಸುಸಮ್ಯಜ್ಞಾನಿಗಳ ನಿಜದ ||
ಮತಿಗಗೋಚರನಾದ ಜನನ |
ಸ್ಥಿತಿಲಯಂಗಳ ಬಲೆಗೆ ಸೋಕದ |
ಕ್ರತುಭುಜಾದಿಸ್ತುತ್ಯಹರನೆಸೆದಿರ್ದನೋಲಗದಿ || ೯

ಪರಮತತ್ವದ ಬಿತ್ತಿನೊಳಗಂ |
ಕುರಗಳೈದಾದಂತೆ ರಾಜಿಪ |
ವರದ ಸದ್ಯೋಜಾತ ಘನತತ್ಪುರುಷ ನಾಮಕದ ||
ಸ್ಫುರಿಪ ಘೋರೇಶಾನಮುಖದಲಿ |
ಮೆಱೆವ ಮಂಗಳಮೂರ್ತಿ ಪರಮೇ |
ಶ್ವರನೆಸೆದನಗಜಾಸಮೇತದಿ ಸಭೆಯ ಮಧ್ಯದಲಿ || ೧೦
ಉರಗಕುಂಡಲದುತ್ತುಮಾಂಗದಿ |
ಮೆಱೆವ ಚಂದ್ರನ ಬಾಳನಯನದ |
ಗರಳಕಂಠದ ವರಕರಾಭಯಕರದ ತನುರುಚಿಯ ||
ಕರಿಮೃಗಾಜಿನವಸನದಂಗ |
ಸ್ಫುರದ ಡಮರುಗ ಕಪಾಲದ |
ವುರುತ್ರಿಶೂಲಾಯುಧದಿ ರಂಜಿಸುತಿರ್ದನಗಜೇಶ || ೧೧
ನಿಗಮವೇದಾಗಮಪುರಾಣಾ |
ದಿಗಳು ಪಾಠಕರಾಗೆಯಣಿಮಾ |
ದಿಗಳು ತಾವನ ಚರರು ಸ್ಮೃತಿಗಳು ಕಂಚುಕೀವ್ರಾತ ||
ಜಗವ ನಿರ್ಮಿಪ ಬ್ರಹ್ಮನಂಗನೆ |
ಬಗೆಬಗೆಯ ನುತಿಮಾಡುತಿರೆ ಮೂ |
ಜಗದ ದೇವರದೇವನಿದ್ದನು ಸಭೆಯ ಮಧ್ಯದಲಿ || ೧೨
ಗಿರಿಜೆಯರಸನ ಸಭೆಯಲಿರುತಿಹ |
ಕರಿವದನ ಬಲಯುತ ಷಡಾನನ |
ಧುರವಿಜಯ ವರವೀರಭದ್ರಾದ್ಯಖಿಳ ಭೂತಗಣ ||
ಹರನ ವಾಹನವಾದ ವೃಷಭೇ |
ಶ್ವರನು ಮೆಱೆದಿರಲಾಗ ಭೃಂಗೀ |
ಶ್ವರನ ನಾಟ್ಯವದೆಸೆಯುತಿಹ ಸಮಯಕ್ಕೆ ನಡೆತಂದ || ೧೩
ಕಂಡು ಪುಳಕಿತನಾಗಿ ಗಯನಾ |
ಖಂಡಪರಶುವಿನಿದಿರಿನಲಿ ಸಲೆ |
ದಿಂಡುಗೆಡಹಿದನೊಸಲ ಜಯಜಯಜಯನಿನಾದದಲಿ ||
ಕಂಡೆನೋ ಕರುಣಾರಸಾಬ್ಧಿಯ |
ಕಂಡೆನೋ ಕಾರುಣ್ಯಮೂರ್ತಿಯ |
ಕಂಡೆನೆನುತೋಲಾಡಿ ಹರುಷದಿ ನುತಿಸಿದನು ಖಚರ || ೧೪

ಶರಣು ಗಿರಿಜಾನಾಥ ಪುರಹರ |
ಶರಣು ಗಂಗಾಧರ ವೃಷಧ್ವಜ |
ಶರಣು ಸುರಸಂರಕ್ಷದಕ್ಷ ಸುಶೀಕ್ಷ ಭಾಳಾಕ್ಷ ||
ಶರಣು ಸುರನಗಚಾಪಶಂಕರ |
ಶರಣು ರವಿಶಶಿವಹ್ನಿಲೋಚನ |
ಶರಣು ಶರಣಘಕುಲವಿನೋಚನ ಶರಣು ಶರಣೆಂದ || ೧೪

ಶರಣು ನಾನಾ ಭೂತಪಾಲಕ |
ಶರಣು ಡಮರುಗಶೂಲಹಸ್ತನೆ |
ಶರಣು ಬಾಣಾಸುರನಿವಾಸಾಶ್ರಿತ ಜಗದ್ವಂದ್ಯ ||
ಶರಣು ವಾಣೀನಾಥಸನ್ನುತ |
ಶರಣು ವಿಶ್ವವರೂಥ ಶಂಕರ |
ಶರಣು ಶಾಶ್ವತಮೂರ್ತಿ ಸ್ಮರಹರ ಶರಣು ಶರಣೆಂದ || ೧೭

ಶರಣು ಮೃತ್ಯುಂಜಯ ಸನಾತನ |
ಶರಣು ನಿಗಮವಿದೂರ ಭರ್ಗನೆ |
ಶರಣು ವರಶುಭ್ರಾಂಗ ರಜತಗಿರೀಶ ಭವನಾಶ ||
ಶರಣು ಭಕ್ತಾಪಾಯನಘಕುಲ |
ಗಿರಿಕುಲಿಶ ಸರ್ವೇಶ ಗೌರೀ |
ವರಕೃಪಾಸಿದ್ಧಿ ಶರಣು ಶರಣಾಗತನ ಸಲಹೆಂದ || ೧೭

ವಿಶ್ವಮಯ ವಿಶ್ವೇಶ ರಾಜಿತ |
ವಿಶ್ವಪೂಜಿತ ವಿಶ್ವಮೂರ್ತಿಯೆ |
ವಿಶ್ವವಿಶ್ರುತ ಜನಕಸುರಮುನಿಸನ್ನುತಾಂಘ್ರಿಯುಗ ||
ಶಾಶ್ವತಾಮಲದೇಹ ವರಪರ |
ಮೇಶ್ವರನೆ ಪುರಾರಿಯಭವನೆ |
ವಿಶ್ವಪಾಲಕ ಶಿವನೆ ರಕ್ಷಿಪುದೆನುತಲೆಱಗಿದನು || ೧೮

ಏನು ಖಚರಾಧೀಶ ವದನವ |
ದೇನು ಕಳೆಗುಂದಿದೆ ನಿರೋಧವ |
ದೇನು ನಿನಗೊದಗಿದ ಮಹಾಯಸವೇನು ಲೋಕಗಳ ||
ನೀ ನಿಮಿಷದೊಳ್ ಚರಿಸಿ ಜಗ |
ದೊಳು ಸಾನುರಾಗದಿ ಮರಳಿ ಬಪ್ಪ ಸ |
ಮಾನಸಾಹಸಿಗಿನಿತು ದೈನ್ಯವದೇನು ಹೇಳೆಂದ || ೧೯

ಅವಧರಿಸು ಪರಮೇಶ ಗೌರೀ |
ಧವ ಪುರಾರಿ ಸುರೇಶ ಪದ್ಮೋ |
ದ್ಭವನ ಪಿತನಡಿಗಳಿಗೆ ಮಿಗೆಯಪರಾಧಿ ತಾನಾಗೆ ||
ವಿವಿಧಗತಿಯಲಿ ಕೋಪಿಸುತಲೆ |
ನ್ನುವನು ಕೊಲುವವನಾಗಿ |
ಸಂಕಲ್ಪವ ಮಹಾಗ್ರಹದಿಂದ ಮಾಡಿಹೆನೆಂದನಾ ಖಚರ || ೨೦

ಆವ ದೇಶದೊಳಾವ ದಿಕ್ಕಿನ |
ಲಾವ ದೇವರ ಮಱೆಯ ಪೊಕ್ಕರೆ |
ಕಾವನಲ್ಲ ಸುದರ್ಶನದಿ ತಲೆಗೊಂಬೆನೆಂದೆನುತ ||
ಕಾಮನಯ್ಯನು ಮಾಡಿಕೊಂಡಿಪ |
ಕಾಪಡನ್ಯರ ಕಾಣೆ ನೀನೇ |
ಕಾವುದೈ ಕರುಣದಲಿ ಶರಣಾಗತನನೆನುತಿರ್ದ || ೨೧

ಎನಲು ಗೌರೀವರನು ನಗುತೆಂ |
ದನು ಖಚರ ಕೇಳೆಮ್ಮ ನುಡಿಯನು |
ದನುಜಹರನವ್ಯಕ್ತ ಸನವದ್ಯನು ಮಹಾಮಹಿಮ ||
ಘನತರಾಭೇದ್ಯನು ಮಹಾವ್ಯಯ |
ನನುಪಮಿತನಚ್ಯುತನನಾಶ್ರಯ |
ನೆನಿಪ ಗೋವಿಂದನ ಪ್ರತಿಜ್ಞೆಯ ತಪಿಪರಾರೆಂದ || ೨೨

ಸಗುಣನಿರ್ಗುಣರೂಪನೆನಿಸುವ |
ನಗಧರನು ತ್ರಿಗುಣಾತ್ಮಕನು ತ್ರೈ |
ಜಗವ ಧರಿಸಿದ ಮಹಿಮನೆನಿಸುವ ಸತ್ವಗುಣದೊಡೆಯ ||
ಅಗಣಿತದ ಭೂಭಾರವಿಳುಹೀ |
ಯುಗಕೆ ಕೃಷ್ಣನೆಂದೆನಿಸಿ ಜನಿಸಿಹ |
ನಗಡುದೇವರ ದೇವನಾತಂಗಿದಿರದಾರೆಂದ || ೨೩

ಮುನ್ನ ಬಾಣಾಸುರನ ಯುದ್ಧದೊ |
ಳೆನ್ನ ಮೋಸವ ಮಾಡಿ ಜೈಸಿದ |
ನೆನ್ನಳವೆ ಹರಿಯೊಡನೆ ಪಂಟಿಸಿ ನಿನ್ನ ಸಲಹುವುದು ||
ಗನ್ನಗತಕವದಲ್ಲ ಖಚರ ಜ |
ಗನ್ನಿವಾಸನು ಕೃಷ್ಣನಿಂ ವಿ |
ತ್ಪನ್ನರುಂಟೇ ಜಗಕೆ ತನ್ನಲಿ ಹರಿವುದಲ್ಲೆಂದ || ೨೪

ಹಲವು ಮಾತಿನ್ನೇಕೆ ಲಕ್ಷ್ಮೀ |
ಲಲನೆಯುರಸನನ್ಯೆದಿ ಪದಯುಗ |
ಜಲಜಕಾನತನಾಗಲಸಿತದೊಳಚ್ಯುತನು ನಿನಗೆ ||
ಒಲಿದು ಪಾಲೊಳು ದಯದಿ ಮುಳುಗಿಸ |
ಲಳುಪಿ ನೀರೊಳು ಮುಳುಗಿಸಲಿ |
ನೀನಳುಕದಲ್ಲಿಗೆ ಪೋಗು ಕಾವನು ಎಂದನಗಜೇಶ || ೨೫

ಭೀಕರದ ಕಠಿನೋಗ್ರಭಾಷೆಯು |
ಲೋಕವಿಭು ಮಾಡಿರ್ದನೇನಾಯ್ತು |
ಆಕೆವಾಳರನೇಕದ್ರೋಹವ ಮಾಡಿ ಮರೆವುಗಲು ||
ಏಕಚಿತ್ತದಿ ಕರುಣಿಸಿಹನ |
ವ್ಯಾಕುಲಿತೆಯಿಂದೈದು ನೀನು ಏ |
ನೇಕಿಯುಲ್ಲದೆ ತಳುವ ಮಾಣದೆ ಹೋಗು ನೀನೆಂದ || ೨೬

ಎನಲು ಭಂಗಿತನಾಗಿ ಮಣಿಮಂ |
ತನ ತನಯ ಚಿಂತಿಸುತಲೀಶನ |
ಘನತನಪ್ಪುವಾಕ್ಯವನು ಮಿಗೆ ಕೇಳಿ ತಲೆದೂಗಿ ||
ಘನಭಯಾಸ್ವಿತನಾಗಿ ಬೀಳ್ಕೊಂ |
ಡನು ಪುರಾಂತಕಗೆರಗಿ ಕೇಳೈ |
ಜನಪ ಜನಮೇಜಯನೆ ಖಚರಂಗಡಸಿದಾಯಸವ || ೨೭

ಆರು ಗತಿ ತನಗಿನ್ನು ಕೃಷ್ಣನ |
ವೈರವನು ಸಲೆ ವಹಿಸಿ ತನ್ನನು |
ಸಾರತರದಿಂ ಕಾವವರು ಪದಿನಾಲ್ಕು ಲೋಕದಲಿ ||
ವಾರಿಜಾಸನನಭವರೆಂಬರು |
ಭೂರಿಭಯಸಂಕಟಗಳಲಿ ಹೇಳಿ |
ಸಾರಿ ತನ್ನನು ಕಾಯಲಾರದೆ ಬಿಟ್ಟರಕಟೆಂದ || ೨೮

ಕಾಯಲಾರದೆ ಶಿವನು ತನ್ನನು |
ಮಾಯವನು ಮಾಡಿದನದಲ್ಲದೆ |
ನ್ಯಾಯವೇ ಹರಿಪದಕೆ ದ್ರೋಹವ ಮಾಡೆ ಮಗುಳೆಂದ ||
ಕಾಯಬೇಕೆಂದಮಲಸರಸಿರು |
ಹಾಯತಾಕ್ಷನ ಮುಂದೆ ಬೀಳುವ |
ಘಾಯಸವು ತನಗೆಂದು ಸುಯ್ದನು ಖಚರ ಶೋಕಿಸುತ || ೨೯

ಹುಲಿ ಸಮಾರಾಧನೆಯ ಮಾಡುವ |
ನೊಲವಿನಿಂದೈತಹುದು ಜನವೆಂ |
ದೊಲಿದು ವಾಚಿಪ ಧ್ವನಿಯ ಕೇಳುತಲೆಂತದಱ ಬೞಿಗೆ ||
ಸುೞಿಯಬಹುದೇ ತನುವಿಡಿದು ಹರಿ |
ಯೊಲವನಱಿಯದೆ ಮೂಢನಂದದಿ |
ಬಲಿಮಥನನಡಿಗೆಂತು ಬೀೞುವೆ ತಾನದಕಟೆಂದ || ೩೦

ಅಕಟ ಸುರನರರುರಗದಾನವ |
ನಿಕರವೆಲ್ಲವ ಗೆಲಿದವರ ದುಃ |
ಖಕರವಾರ್ಧಿಯೊಳಾೞಿಸಿದೆ ಕೇಳೆಂಬೆನೇ ಪಿತಗೆ ||
ವಿಕಳತನವನು ಹರಿಗೆ ಮಾಡಲು |
ಪ್ರಕಟಿಸದೆ ಹರಿ ಮುನಿದ ವಾರ್ತೆಯ |
ಯುಕುತಿಯಿಂದಲಿ ಪೇೞ್ವೆನೋ ಹಾಯೆನುತ ಚಿಂತಿಸಿದ || ೩೧

ಧುರದೊಳೆಲ್ಲರನೊರಸಿ ರಿಪುಗಳ |
ವರವಿಭೂಷಣಸವ್ಯದವ್ಯಾಂ |
ಬರಗಳನು ತಂದಿಹೆನು ಕೋಯೆಂದೀವೆನೇ ತಾಯ್ಗೆ ||
ಹರಿ ಸುದರ್ಶನಗಿಂದ ತನ್ನಯ |
ಶಿರಕೆ ಮಿಗೆ ನಿರ್ಣಯವ ಕಂಡಿಹ |
ಪರಿಯನುಸಿರುವೆನೇ ಶಿವಾಯೆನುತಿರ್ದನಾ ಖಚರ || ೩೨

ನಳಿನತರಣಿಯ ಕುಮುದಶಶಿಯನು |
ಲಲಿತಪತಿವ್ರತೆಯಾತ್ಮನನು ಮಿಗೆ |
ಹೊೞಿಲ ಜನ ದಯವುಳ್ಳ ಭೂಪನ ಬರವ ಹಾರುವೊಲು ||
ಪುಳಕಹರುಷದೊಳಿದಿರುನೋಡುತ |
ಕಳಕಳಿಸಿ ನಗುತಿರ್ಪ ಕಾಂತೆಗೆ |
ಜಲಜನಾಭನ ವೈರ ಕೈಗಾಣಿಕೆಯದಾಯ್ತೆಂದ || ೩೩

ಬರಲಿದಿರ್ವಂದಪ್ಪಿ ತನುವನು |
ಕರಗಳಲಿ ನೇವರಿಸುತಾಜಿಯ |
ಲರಿದ ಶತ್ರುಗಳಾಭರಣವ ನವ್ಯವಸನಗಳ ||
ಧರಿಸಿ ನಸುನಗೆಯಿಂದೆ ಎನ್ನೊಡ |
ವೆರಸಿ ಮನೆಗೈತಪ್ಪ ಕುವರಗೆ |
ಹರಿಯ ಕಠಿನೋದಗ್ರಭಾಷೆಯ ಪೇೞ್ವೆನೆಂತೆಂದ || ೩೪

ಎಲ್ಲಿಗೈದುವೆನಾರಿಗುಸಿರುವೆ ।
ನೆಲ್ಲಿ ನಿಂದೊಡೆ ಹರಿಸುದರ್ಶನ ।
ಘಲ್ಲಿಸುತ ಬೆಂಬತ್ತಿ ಬಂದಡದಾರು ಕಾವವರು ॥
ಇಲ್ಲವಾತಿರುವೇಂಕಟೇಶನ ।
ಸಲ್ಲಲಿತಭಾಷೆಯನು ತವಿಸಲು ।
ಬಲ್ಲ ದೇವನ ಕಾಣೆನೆಂದನು ಖಚರ ಚಿಂತಿಸುತ ॥ ೩೫

ಅಂತು ಸಂಧಿ ೬ ಕ್ಕಂ ಪದ ೨೬೨ ಕ್ಕಂ ಮಂಗಳಂ.

## ಏಳನೆಯ ಸಂಧಿ

ಸೂಚನೆ॥ ಅಜಹರರು ಪರಿಹರಿಸರಲ್ಲಿಂ ।
ಭುಜಪರಾಕ್ರಮಿ ಗಯನು ಬರುತಬು ।
ಜಜನಸುತನತು ನಾರದಂಗುಸಿರಿದನು ಸಂಕಟವ ॥

ಸೋಮವಂಶಾಂಭೋಧಿಚಂದ್ರನು ।
ಭೀಮವಿಕ್ರಮ ಸಕಲಶತ್ರುವಿ ।
ರಾಮ ಕವಿಜನಕಾಮಧೇನು ಪ್ರತಾಪವರರುದ್ರ ॥
ಕಾಮಿನೀಜನಪಂಚಬಾಣ ಮ ।
ಹಾಮಹಿಮ ಘನಭರತಕುಲಕೆ ಲ ।
ಲಾಮ ಜನಮೇಜಯನೆ ಕೇಳ್ಮುಂದಣ ಕಥಾಗಮವ ॥ ೧
ಏನನೆಂಬೆನು ಕೇಳಿದೈ ನೃಪ ।
ಮಾನನಿಧಿ ಗಂಧರ್ವಚಿಂತಾಂ ।
ಭೋನಿಧಿಯೊಳದ್ದಂತೆ ಕಮಲಜಭವರು ಕೈವಿಡಿದು ॥
ಸಾನುರಾಗದಿ ಸಲಹಲಂಜಿದ ।
ಮಾನಭಂಗಸ್ಥಿತಿಯ ನೆನೆನೆನೆ ।
ದೇನುಗತಿ ತನಗೆಂಬ ಸಮಯಕೆ ಮುದದಿ ದನಮರಮುನಿ ॥ ೨

ವರಚತುರ್ದಶಲೋಕದವರಿಗೆ |
ನಿರುತ ಬೆಳಗನು ಕಾಣಿಸಲ್ಕೀ |
ತರಣಿಗೊರ್ವಗೆ ತೀರದಿದೆ ನೀ ಕೆಲವು ದೆಸೆಗಳಿಗೆ ||
ತ್ವರಿತದಿಂ ಗೋಚರಿಪುದೆನುತಜ |
ಭರದಿ ಪ್ರತಿಸೂರ್ಯನನು ಕಳುಹಿದ |
ತೆಱದಿ ತನುಕಾಂತಿಯಲಿ ನಾರದನೈದಿ ಬರುತಿರ್ದ || ೩

ಹರಿಪದವ ತೊಳೆಯಲ್ಕೆ ಬ್ರಹ್ಮನು |
ಸುರನದೀತೋಯವನು ಧರಿಸಿದ |
ಕರದ ಪಾತ್ರೆಯ ತೆಱದಿ ರಾಜಿಪ ಕರಕಮಂಡಲದಿ ||
ಭರಿತಶೋಣಜಪಾಕ್ಷಮಾಲೆಯ |
ಕರದಿ ವಿಷ್ಣುಸ್ಮರಣೆಯಿಂ ನಿ |
ರ್ಭರದಿ ಬಹ ಮುನಿವರನ ಕಂಡಡೆಗೆದನಾಖಚರ || ೪

ಶರಣು ಶಾಂತಾಕಾರಮೂರ್ತಿಯೆ |
ಶರಣು ರವಿಶಶಿಕಿರಣಮೂರ್ತಿಯೆ |
ಶರಣು ಶಾಶ್ವತಪುಣ್ಯಮೂರ್ತಿಯೆ ಶರಣು ಮುನಿನಾಥ ||
ಶರಣು ಶಂಕರ ಹರಿಪರಾಯಣ !
ಶರಣು ಶರಣರ ಪೊರೆವ ಕರಣದ |
ಕರುಣಿ ಕಾವುದು ಸರಸಿಜಾಸನಪುತ್ರ ಎನುತಿರ್ದ || ೫

ಕಾವರಿಲ್ಲೆನ್ನುವನು ನೀ ನೆರೆ |
ಕಾವುದೈ ಕರುಣಾಳು ಜಗದಲಿ |
ಕಾವವರ ಮಿಗೆ ಪೇಳ್ ಸಲಹಲುಬೇಕುಯೆನ್ನುವನು ||
ತಾನರೆಯ ಸಖ ಚಂದ್ರರುಳ್ಳನ |
ಕೀವಸುಧೆಯೊಳ್ ಕೀರ್ತಿ ನಿನುಗೆಯು |
ಸ್ಥಾವರವದಾಗಿಹುದು ರಕ್ಷಿಪುದೆಂದು ನುತಿಸಿದನು ||

ಎತ್ತಿದನು ಮಣಿಮಂತತನಯನ |
ನೆತ್ತಿಯನು ಪಿಡಿದೇನು ನಿನಗೆ ನಿ |
ಮಿತ್ತ ದುಃಖಿತನಾದೆ ಕಾರಣವೇನು ಪೇಳೆಂದ ||
ಬಿತ್ತರಿಸೆ ಹುರಳಿಲ್ಲ ದೇವರು |
ಚಿತ್ತವಿಸಿ ತನಗೊಂದುಪಾಯವ |
ನಿತ್ತು ಕರುಣಿಸಬೇಹುದೆನುತಿಂತೆಂದನಾಖಚರ ||

ಹರಿಪದದ ಮಾರ್ಗದಲಿ ತಾನಾ |
ಹರಿಸುತನ ಸಭೆಗಾಗಿ ನಡೆತರೆ |
ಹರಿಗೆ ಮಱಹಿನಲೆನ್ನದೆಸೆಯಲಿ ಒಂದು ತಪ್ಪಾಗೆ ||
ಹರಿ ಮಹಾಕೋಪದಲಿ ವರ ನರ |
ಹರಿ ಹಿರಣ್ಯಕಶಿಪುವ ಸೀೞಿದ |
ತೆಱದಲೆನ್ನನು ಕೊಲಲೆಣಿಸಿ ಕೊಂಡಿಹನು ಕೇಳೆಂದ || ೮
ಇದಱ ದೆಸೆಯಿಂದಾನು ಬೇಗದಿ |
ಸದಮಲಾತ್ಮಕ ಬ್ರಹ್ಮದೇವರ |
ಪದಸರೋಜವ ಕಂಡು ಬೞಿಕೀಕ್ಷೆಱನ ಬಿನ್ನೈಸಿ ||
ಪದುಳಿಗನ ಮಾಡೆನಲು ಕೃಷ್ಣನ |
ಹದನಱಿತು ತಾ ಸಲಹಲಾಱದೆ |
ಹೆದಱುತೆನ್ನನು ಕಳುಹೆ ಕಂಡೆನು ಹರನ ಪದಯುಗವ || ೯
ಬೞಿಕಲೆಲ್ಲವ ಹರಗೆ ಪೇೞಲು |
ಜಳಜನಾಭನೆ ತಾನೆನುತಲಾ |
ಬೞಿಯಲಿರಗೊಡದೆನ್ನನಟ್ಟಲು ಬಂದೆ ದೇಸಿಗರ ||
ಬಳಕೆಯಲಿ ಮಿಗೆ ನಿಮ್ಮ ಪದಯುಗ |
ನಳಿನವನು ನೆರೆ ಕಂಡು ಬದುಕಿದೆ |
ನಿಳೆಯೊಳೆನಗಾರುಂಟು ರಕ್ಷಿಸುವವರು ಪೇೞೆಂದ || ೧೦
ಎನಲು ಮನದಲಿ ನೋಡಿ ಕೊಂಡನು |
ವನರುಹಾಸನಸೂನುವೀಭೂ |
ವನಿತೆ ಪೊತ್ತಿಹ ಪೊಱೆಯನಿೞುಹಲು ಹರಿ ವಿನೋದದಲಿ ||
ಮನುಜನಾಗುದಿಸಿಹುದ ಮುನ್ನ |
ರ್ಜುನನ ಕೈಯಲಿ ಬಹಳ ದುರ್ಯೋಧ |
ಧನನೃಪಾಲಾವಳಿಯ ಸಂಹರಿಸುವುದನೆಲ್ಲವನು || ೧೧
ಅದಱಿಂದರ್ಜುನನ ದೋರ್ಬಲ |
ದದಟನಾತನ ಮನದ ಧೈರ್ಯವ |
ವಿದಿತಚಾತುರ್ಯವನು ಶರಸಂಧಾನಕೌಶಲವ ||
ಕದನದಾಳಾಪವನು ಪೊಂದಿಹ |
ಮದನಹರ ಬ್ರಹ್ಮಾದಿಗಳ ಶರ |
ದದಟುಗಳ ನೋಡಲ್ಕೆ ಹರಿ ಯೋಚಿಸಿದ ಕಾರಿಯವ || ೧೨

ತಿಳಿದು ನಾರದನೆಂದನವನೊಳು |
ಜಳಜನಾಭನು ಮಾಡಿಕೊಂಡಿಹ |
ಬಲುಪ್ರತಿಜ್ಞೆಯು ತವಿಸಿ ನಿನ್ನನು ಸಲಹಲಾಪವನು ||
ಇಳೆಗೆ ಫಲುಗುಣನಲ್ಲದನ್ಯರ |
ಬಳಿಕ ತಾಸೀರೇಳುಲೋಕಂ |
ಗಳಲಿ ಪರಿಕಿಸೆ ಕಾಣೆ ನರನೆಡೆಗೈದು ನೀನೆಂದ || ೧೩

ಇಹನವನು ತಾ ದ್ವೈತಕಾನನ |
ಗಹನಮಧ್ಯದೊಳಗ್ರಜಾನುಜ |
ಸಹಿತ ನೀನರ್ಜುನನ ಬಳಿವಿಡಿವೇಗಿ ನುತಿಗೈದು ||
ಸಹಸಿ ಜಗದೊಳಗೆಂದು ಬಂದೆನು |
ವಹಿಸಿಕೊಂಡೆನ್ನನುವ ಸಲಹ್ಯೆ |
ವಿಹಿತದಲಿ ನೀನೆಂದು ಬನ್ನೈಸೆಂದನಾಮುನಿಪ || ೧೪

ಅವಧರಿಸು ಮುನಿಪೋತ್ತಮನೆ ತಾ |
ನವನ ಬಲುಹನು ಕಾಣದಾತನ |
ಹವಣನರಿಯದೆ ಪೋಗಿ ಶರಣೆನಲದಕೆ ಮನಗೊಡದೆ ||
ತೆವರುವನೊ ಕೈವಿಡಿದು ಕೃಷ್ಣಗೆ |
ಸುವಿನಯದಿ ಬಿಡದೊಪ್ಪಿಸುವನೋ |
ಭುವನಭೀಕರಚಕ್ರದುರುಬೆಗೆ ನಿಲುವರಾರೆಂದ || ೧೫

ಅವನ ಮಹಿಮೆಯ ಪೇಳಲಜ್ಞರಿ |
ಭುವನ ಮೂರರೊಳಧಿಕ ಹೆಚ್ಚಿನ |
ಪವಣುಗಾರನು ಸತ್ಯವಂತನು ದೃಢಪ್ರತಿಜ್ಞೆಯಲಿ ||
ಭವಕಮಲಜಾಚ್ಯುತರನಲ್ಲದೆ |
ಒವರದೊಳಗಿತರರನು ಬಗೆಯನು |
ದಿವಿಜಪತಿನಂದನನ ಮರೆವೊಗು ಸಂಶಯವನುಳಿದು || ೧೬

ಎನಲು ಮುನಿಪಗೆ ಕೈಮುಗಿದು ಖಚ |
ರನು ಮಹಾತ್ಮನೆ ಫಲುಗುಣನ ಮರೆ |
ಯನುನಯದಿ ಪೊಗುವಂದವನು ಕರುಣಿಸಿದಿರೆನಗವನ ||
ಜನಪದವು ತಾನೆಲ್ಲಿ ಪಿತನಾ |
ರಿನಕುಲವೊ ಶಶಿಕುಲವೊ ಕೃಷ್ಣನ |
ಘನಪ್ರತಿಜ್ಞೆಯನುತ್ತರಿಸಲಾಪವನೆ ಹೇಳೆಂದ || ೧೭

ಆಱುಹುವೆನು ಕೇಳ್ಮಗನೆ ವಾರಣ |
ಪುರದರಸು ಪಾಂಡುವಿನ ತನಯನು |
ಧರೆಗೆ ಶಶಿವಂಶೋದ್ಭವನು ಕಲಿ ಪಾರ್ಥನೆಂಬುವನು ||
ಕುರುಪತಿಯು ವೈರೋಧದಿಂ ನಿಜ |
ಧರೆಯನೆಲ್ಲವನವರಿಗೊಪ್ಪಿಸಿ |
ಪರಮಸತ್ವವ ಪಾಲಿಸುತ ಗಹನಾಂತರದೊಳಿಹನು || ೧೮
ಎನಲು ನಕ್ಕನು ಖಚರ ನಾರದ |
ಮುನಿಯ ಮಾತಿಗೆ ಶಿವಶಿವಾ! ನೀ |
ಎನಿತು ಪಾರ್ಥನ ಘನವ ಮಾಡುವಿರೇಕೆ; ಸಲಹೆನಲು ||
ವನಜಭವನಂಜಿದನು ಮಾಧವ |
ತನಗೆ ಹಿತಕರನೆಂದನಭವನು |
ಮನುಜಮಾತ್ರನು ತನ್ನ ಕಾವನೆ ಕವಡಿದೇಕೆಂದ || ೧೯
ವಿವರಿಸುವಡಿಂತಪ್ಪ ಘನಕಾ |
ರ್ಯವ ಮನುಜ ಕೈಕೊಂಬನೇ ಖೞ |
ಕವನು ಕೈವಿಡಿದರೆಯು ವಿಗ ಕೊನೆಸಾಗಿ ಲೇಸಹುದೆ ||
ಶಿವಶಿವೆತ್ತಣ ಮಾತು ಪರಿಕಿಸೆ |
ನಿವಗೆ ಪಾರ್ಥನ ಮಱೆಹೊಗುವ ಕ |
ಜ್ಜವ ನಿದಾನಿಸಲುಚಿತವೇ ಹೇೞೆಂದನಾಖಚರ || ೨೦
ಮಱೆವೊಗಲು ಲೇಸೆನುತ ಫಲುಗುಣ |
ಹರಿಗೆ ತನ್ನನು ಮುದದೊಳೊಪ್ಪಿಸಿ |
ದರೆ ಖೞಿಕ ತಾನೇನ ಮಾಡಲು ಬಹುದು ಮಗುಳವನ ||
ನರನ ಬಗೆಯಿಂತೆಂಬ ದೃಢ ಗೋ |
ಚರಿಸದಿದೆ ತನಗಿದಱ ಬುದ್ಧಿಯ |
ತೆಱನ ಕರುಣಿಸಿ ಸಲಹಬೇಕೆಂದನು ಮುನೀಂದ್ರಂಗೆ || ೨೧
ಗಹಗಹಿಸಿದನು ಸುರಮುನೀಶ್ವರ |
ನಹುದು ಹಗರಣವಲ್ಲ ಪಾರ್ಥನು |
ಸಹಸಿ ತ್ರೈಜಗದೊಳಗೆ ಮದ್ವಚನಾರ್ಥಕೆರಡುಂಟೆ ||
ವಹಿಸಿಕೊಂಬನು ಖಚರ ಕೃಷ್ಣನ |
ಕುಹಕಮಂ ನೀ ಮುನ್ನ ಪೇೞದೆ |
ಬಹಳ ನಂಬುಗೆಗೊಂಡುಸಿರುವುದು ಆದ ಸಂಗತಿಯ || ೨೨

ಕೇಳು ಮಿಗೆ ಗಂಧರ್ವಪತಿ ಸಿರಿ |
ಲೋಲ ಕೃಷ್ಣನ ಪ್ರತಿಜ್ಞೆಯನು ನರ|
ಮೇಳದಲಿ ಪರಿಹರಿಸಲಾಪನು ಬಹಳ ಧೃತಿಯುತನು ||
ಮೇಲೆ ಮಱೆವೊಕ್ಕವನ ದೃಢದಲಿ |
ಜಾಳ ಒಗೆಯಲಿ ನಂಬಿ ಮಱೆವೊಗು |
ಪಾಲಿಸುವ ತಿರುವೇಂಕಟೇಶನ ಚಕ್ರದರುಬೆಯನು || ೨೩

ಅಂತು ಸಂಧಿ ೭ಕ್ಕಂ ಪದ ೨೮೫ಕ್ಕಂ ಮಂಗಳಂ.

## ಎಂಟನೆಯ ಸಂಧಿ

ಸೂಚನೆ|| ಪೇಳಿದನು ಮುನಿನಾಥನರ್ಜುನ |
ನೇಳಿಗೆಯ ಸಾಹಸವನಾತನ |
ತೋಳ ಬಲುಹನು ಮನದ ದೃಢವನು ಗಯಗೆ ವಿನಯದಲಿ ||೮||

ಕೇಳಿದೈ ನೃಪಮೌಳಿಮಾಣಿಕ |
ನೇೞಿಗೆಯ ಸಿರಿಕೃಷ್ಣರಾಯನ |
ಲೀಲೆಯುಹ ಸತ್ಕಥೆಯ ಕೇಳಿದ ನರರ ಪಾಪೌಘ ||
ಬೀೞುವುದು ಸುತಳದಲಿ ರಾಜ್ಯವ |
ನಾಳುವರು ಚಿರಕಾಲ ಸಂಪದ |
ದೇೞಿಗೆಯು ತಾನಪ್ಪುದಿದು ಶ್ರುತಿಮತದ ಸಿದ್ಧಾಂತ ||

ಎನಲು ಜನಮೇಜಯನು ಕೇಳಿದ |
ಮುನಿಪ ವೈಶಂಪಾಯನನೆ ಪೇ |
ೞಿನಗೆ ಮುನ್ನಿನ ಜನ್ಮಜನ್ಮಾಂತರದಲಾರ್ಜಿಸಿದ ||
ಘನತರದ ಪಾಪೌಘಗಳ ಮಿಗೆ |
ನೆನೆದ ಮಾತ್ರದಿ ಪರಿಹರಿಸಿ ನವ |
ಕನಕಮಯರಥವಾರಣಾಳಿಯ ಕೊಡುವ ಹರಿಕಥೆಯ ||

ಆದಡಾಲಿಸು ಗಯನ ಮನದೊಳ |
ಗಾದ ಸಂಶಯ ಹರಿವ ತೆಱದಲಿ |
ಮಾಧವನ ಮೈದುನನು ಮಾಡಿದ ಬಹಳ ಸಾಹಸವ ||
ಆದರದಿ ಪೇೞ್ದನು ಖಚರನಿ |
ಗಾದಯಾಂಬುಧಿ ನಾರದನು ನೀ |
ನಾದರಿಸು ಫಲುಗುಣನು ನೆಗೞ್ದ ಕಾರ್ಯದುನ್ನತಿಯ || ೩

ದ್ರುಪದಜಾತೆಯ ಮದುವೆಯಿಂದೀ |
ನೃಪಕುಲವ ಸದೆಬಡಿದು ತಂದನು |
ಚಪಲನಯನೆಯ ಬೞಿಕಲಾಕೃಷ್ಣನ ಸಹೋದರಿಯ ||
ಗುಪಿತದಲಿ ತರಲಾಗ ಹಲಧರ |
ಕುಪಿತನಾಗೈದಲ್ಕೆ ಬಲನನು |
ನಿಪುಣತೆಯಲೇ ಗೆಲಿದು ಬಂದವ ಪಾರ್ಥ ಕೇಳೆಂದ || ೪

ತ್ರಿದಶನಗರವನಾಳ್ವ ಸುರಪಗೆ |
ಮುದವನಲರಿಪ ಖಾಂಡವದ ವನ |
ಕದುಬತೋಪಮನೈದಿ ಬಾಣಶಿಖಾಗ್ನಿಯಿಂದಾಗ ||
ಒದವಿದನಲಂಗಶನವಿಕ್ಕಿಯೆ |
ಕದನಕರ್ಕಶ ಸುರರನೆಲ್ಲರ |
ಸದೆಬಡಿದು ಮರಳಿದನು ಫಲುಗುಣ ಖಚರ ಕೇಳೆಂದ || ೫

ವಿಶಿಖಮಂತ್ರದಿನಿಂದ್ರಕೀಲದೊ |
ಳಸಮನೇತ್ರನ ಭಜಿಸಿಯತಿಸಾ |
ಹಸದಿ ತಪವನು ಮಾಡೆ ಪುರಹರ ಗುಪ್ತರೂಪಿನಲಿ ||
ಎಸೆದು ಸೆಣಸಲು ಕಾದಿ ಮೆಚ್ಚಿಸಿ |
ಪಶುಪತಿಯು ಹಿಡಿವಂಬ ತಂದಿಹ |
ವಸುಮತೀಶನು ವಿಜಯ ಸದರನೆ ಗಯನೆ ಕೇಳೆಂದ || ೬

ನಡೆದು ಸುರಪನ ಪೊೞಲಿಗಮರರ |
ಹೊಡೆದು ಹೊಡೆಸೆಂಡಾಡುವ ಸುರರ |
ಕಡಿದು ರಣದಲಿ ನಾಲ್ಕುದಿಕ್ಕಿನಲಾನೆವರಿವರಿದು ||
ಪೊಡವಿಗಧಿಕ ಸುರಾರಿಸಂಘವ |
ಮಡುಹಿ ಚಿತ್ತದೊಳಮರರಾಯಗೆ |
ಬಿಡಿಸಿದನು ಭೀತಿಯನು ಗಯ ಕೇಳೆಂದನಾಮುನಿಪ || ೭

ಸುರರಿಗಲಗಣಸಾದರನು ಸಂ |
ಹರಿಸಿ ಸುರಪತಿಯಿಂ ಶಬಾಸನು |
ಹರುಷಮುಖದಿಂ ಪಡೆದು ದಿಕ್ಪಾಲಕರ ಕೈಯಿಂದ ||
ವರಮಹಾಮಂತ್ರಾಸ್ತ್ರಚಯವನು |
ಗರಗರಿಕೆಯಲಿ ತಂದ ಪಾರ್ಥನ |
ಪರಿಯನೇನೆಂದರಿಯೆ ಹೋಗೆಲೆ ಮರುಳೆ ನೀನೆಂದ || ೮

ಹಿಂದೆ ವನದಲಿ ಚಿತ್ರಸೇನನು |
ಬಂದು ಕೌರವ ತತ್ಸಹೋದರ |
ವೃಂದವನು ರಥದಗ್ರದೊಳಗಿಂಬಿಟ್ಟು ಚಿತ್ರದಲಿ ||
ಬಾಂದಳವನಡರಲ್ಕೆ ಬೆಂಬಿಡ |
ದೊಂದು ನಿಮಿಷದೊಳವನ ಗೆಲಿದೈ |
ತಂದು ಪಗೆಯನು ಸಲಹಿದರ್ಜುನ ಸದರನೇ ಎಂದ || ೯

ಅನುಪಮಾಂಗನು ಮಗನೆ ಕೇಳಾ |
ನರನು ಸುರನರಭುಜಗಲೋಕದ |
ಪರಿವಿಡಿಯ ನಡೆವಳಿಕೆಯೆಲ್ಲವನಂಘವಣೆ ಬೇರೆ ||
ಹರಿಹರ ಬ್ರಹ್ಮಾಮರೇಂದ್ರರ |
ಸರಕುಮಾಡನು ತಿಳಿಯೆ ನೀ ಹೋ |
ಗರವರಿಸಬೇಡೆಂದು ನುಡಿದನು ಗಯಗೆ ಮುನಿನಾಥ || ೧೦

ಅಂಬುಜದ ಪರಿಮಳಕೆ ಗಮಿಸುವ |
ತುಂಬಿಗಳು ಚಂಪಕದ ವಾಸನೆ |
ಗೊಂಬೆವೆಂದಂಗೈಸುವುವೆ ಮುನಿನಾಥ ನರನಿಳೆಯ ||
ಡೊಂಬಿನವನಿಪರನು ಗೆಲಿದಡಹು |
ದೆಂಬೆನೇ ಹರಿವೈರಕಳುಕದೆ |
ನಂಬುಗೆಯನಿತ್ತೆನ್ನ ಸಲಹಲಸಾಧ್ಯ ನರಗೆಂದ || ೧೧

ಅವನಿಪರ ಗೆಲಬಹುದು ನಿರ್ಜರ |
ರವಗಡಿಸೆ ನಿಲಬಹುದು ಕೃತಕದ |
ಭವನೊಡನೆ ಸಂಗರವ ಮಾಡಿಯೆ ಶರವ ತರಬಹುದು ||
ಪವನಸಖಗುಣಲಿಕ್ಕಬಹುದಾ |
ಭುವನಗರ್ಭನ ಕರದ ಚಕ್ರದ |
ರವಕೆ ನಿಲುವವನಾವನೈ ತ್ರೈಭುವನದೊಳಗೆಂದ || ||೧೨||

ಕೇಳಿ ಬಲ್ಲೆನು ಹರಿಯ ಚಕ್ರ |
ಜ್ವಾಲೆಯತಿಶಯ ಮಹಿಮೆಯನು ಮುನಿ |
ಪಾಲ ದುರ್ವಾಸನನು ಬೆಂಬಿಡದೈದಿ ವಹಿಂದಲಿ ||
ಫಾಲಲೋಚನ ಬ್ರಹ್ಮಮುಖ್ಯರ |
ಪಾಳೆಯಂಗಳ ತಿರುಗಿಸಿಯೆ ಜ |
ನ್ಮಾಳಿ ಸಾಕೆನಿಸಿದುದನೆಲ್ಲವ ಮುನಿಪ ಕೇಳೆಂದ || ೧೩

ಹರಿವಿರಂಚಿಗಳಿಸಲಾಗದ |
ಚರಿತಕಾರ್ಯವನಿಳೆಯೊಳುದಿಸಿದ |
ನರನು ತಾ ನಿರ್ವಹಿಪನೆಂದೇನಯುವ ಬೋಧಿದಿರಿ ||
ಪರಿಕಿಸಲು ಸುರನರಭುಜಂಗಮ |
ಸುರರಿಪುಗಳೆನಗೊಂದು ತೃಣ ಮುನಿ |
ದರೆಸು ತ್ರೈಮೂರ್ತಿಗಳ ಭಯಕಂಜುವೆನೆ ತಾನೆಂದ || ೧೪

ಹರಗಸಾಧ್ಯವದೆನಿಪ ಕಾರ್ಯವು |
ನರಿಯ ಮುಳಿಗೊಳೆ ತೀರುವುದೆ ಮದ |
ಕರಿಯುಪದ್ರವ ನೆಗಳಿಚಲು ತಪ್ಪಿಪುದೆ ಮುಳಿಹುಲ್ಲೆ ||
ಗರುಡಗನದಳವಪ್ಪ ಕಜ್ಜವ |
ಪರಿಹರಿಸಲಾಪುದೆ ಗುಬಚಿ ನರ |
ಹರಿಯ ಕೋಪವನೆಂತು ನರನುತ್ತರಿಪ ಹೇಳೆಂದ || ೧೫

ಮರುಳುಮಗನೇ ಕೇಳು ಫಲುಗುಣ |
ಹರಿಹರಬ್ರಹ್ಮಮಹೇಂದ್ರರ |
ನರೆನಿಮಿಷದೊಳ್ಗೆಲ್ವನಿತು ಚಾತುರ್ಯವುಳ್ಳವನು ||
ಸರಸದಲಿ ಘನಯುಕ್ತಿ ಶಕ್ತಿಯೊ |
ಳರಿಯ ಗೆಲುವಗ್ಗಳಿಯತನದಲಿ |
ಸರಿಮಿಗಿಲದಾರುಂಟು ಸುರನರನಾಗಲೋಕದಲಿ || ೧೬

ಶಕ್ತಿಯನಿತುಂಟಾಗೆ ಪರಿಕಿಸೆ |
ಯುಕ್ತಿಯುಗಣಿತವಿದ್ದೊಡೆಯು ನರ |
ಶಕ್ತಿ ಜಗದುದರನಲಿ ಕೊಂಬುದೆ ಮುನಿಪ ಹೇಳೆನಲು ||
ಯುಕ್ತಮಪ್ಪಂತುಸಿರುವೆನು ಕೇಳ್ |
ಶಕ್ತಿಯುಕ್ತಿಯ ಮೀರಿದರೆ ಘನ |
ಭಕ್ತಿಯಲಿ ಜೈಸುವನು ತ್ರೈಮೂರ್ತಿಗಳ ನರನೆಂದ || ೧೭

ಮುನಿಸಿನಲಿ ಕೊಯ್ದೊಡನೆ ಮೂಗನು |
ವಿನಯದಿಂ ಪೊಂದಿಸಲು ಬೆಸೆವುದೆ |
ಜನವಱಿಯಲೆಚ್ಚಾಡಿ ಮೀರ್ದೊಡೆ ಭಕ್ತಿಯಲಿ ಗೆಲುವ ||
ನೆನಹು ಕೊಂಬುದೆ ಮುನಿಪ ಹೇೞ್ಕೈ |
ವನಜನಾಭನ ಮುಂಗೆ ಶಕ್ಕಿನ |
ಮನದ ಭಕ್ತಿಗಳೇನ ಮಾೞ್ಪುವುನಗೆಯದಾಕೆಂದ || ೧೮

ಹರಿಸುದರ್ಶನ ಹರಮಹಾಯುಧ |
ಸರಸಿಜಾಸನನಸ್ತ್ರವೆಂಬಿವು |
ಶರಣರನು ಕಂಗೆಡಿಸಲರಿಯವು ಖಚರ ಕೇಳ್ಮುನ್ನ ||
ಸುರನದೀನಂದನನು ಪಾರ್ಥನು |
ಮರುತಸುತರಿವರಲ್ಲವೇ ಸುರ |
ನರರ ಸಾಕ್ಷಿಯಲೊಲಿಸಿಕೊಂಡವರೆಂದನಾಮುನಿಪ || ೧೯

ಎನಿತ ಪೇೞಿದಡಱಿಯೆ ನೀನ |
ರ್ಜುನನ ಮಾನಸನೆಂದು ಬಗೆದೈ |
ವನರುಹಾಂಬಕನಿಳೆಯ ಭಾರವ ಕಳೆಯಲಿಕೆ ತನ್ನ ||
ತನುವೆರಡು ರೂಪಾಗಿ ಲೀಲಾ |
ಮನುಜವೇಷವ ತಾಳಿ ಮಿಗೆ ಸಂ |
ಜನಿಸಿ ತೋಱುವನಿಳೆಗೆ ನರನಾರಾಯಣಾಖ್ಯದಲಿ || ೨೦

ಏತಕವತಾರಗಳನೆತ್ತಿದ |
ಜಾತವಿರಹಿತನೆಂದು ಖಚರನು |
ಶಾತ ಹೇೞಿನಗದಱ ವೃತ್ತಾಂತವನು ವಿಸ್ತರದಿ ||
ಮಾತ ಕೇಳಿದು ಮನದ ಹರ್ಷದೊ |
ಳಾತನನು ಮಱಿಗೊಂಬೆನೆನೆ ವಿ |
ಖ್ಯಾತಮುನಿಯಱುಹಿದನು ತಿರುವೇಂಕಟನ ಲೀಲೆಯನು || ೨೧

ಅಂತು ಸಂಧಿ ೮ ಕ್ಕಂ ಪದ ೩೦೬ ಕ್ಕಂ ಮಂಗಳಂ

*

# ಒಂಭತ್ತನೆಯ ಸಂಧಿ

ಸೂಚನೆ|| ಅರುಹಿದನು ನಾರದನು ಡಂಭಾ |
ಸುರನ ಗರ್ವವ ಪರಿಹರಿಸಲಾ |
ಹರಿಯೆರಡು ರೂಪಾದುದನು ವಿಸ್ತರಿಸಿ ಖಚರಂಗೆ ||

ಕೇಳು ಜನಮೇಜಯಧರಿತ್ರೀ |
ಪಾಲ ಸುರಮುನಿ ಪೇಳಿದನು ಸಿರಿ |
ಲೋಲ ಡಂಭಾಸುರರ ಕದನದ ಕಥೆಯ ವಿಸ್ತರವ ||
ಕೇಳುತಾಕ್ಷಣ ಖಚರ ನರಸಿಂಹ |
ಪಾಳೆಯಕೆ ನಡೆತಂದು ಮುಳಿದ್ವೊಗೆ |
ಪಾಲಿಸಿದನರ್ಜುನನನು ನಿನ್ನನು ಕಾವೆ ತಾನೆಂದು || ೧

ಎಲೆ ಮುನಿಪ ಬಹುಕಥೆಯ ಕೇಳಿದೆ |
ಹಲವು ಮಂದಿಯ ಕೈಲಿ ಡಂಭನ |
ಜಲಜನಾಭನ ಕಾಳೆಗವನಾರರುಹಿದವರಿಲ್ಲ ||
ತಿಳಿಯೆ ಹರಿಕಥೆಯೊಳಗೆ ಹೆಚ್ಚಿನ |
ಬಲುಕತೆಯದಾಗಿಹುದು ನೀವಿದ |
ನೊಲಿದು ಪೇಳುವುದೆನುತ ಭಕ್ತಿಯೊಳವನಿಪತಿ ನುಡಿದ || ೨

ಆಲದೆಲೆಯಲಿ ಪವಡಿಸಿದ ಸಿರಿ |
ಲೋಲನುರುಕರ್ಣದಲಿ ಜನಿಸಿದ |
ಖೂಳ ಮಧುಕೈಟಭರು ಹರಿಯೊಳ್ಕಾದಿದರು ಸುರರ ||
ಮೇಲುವರುಷಸಹಸ್ರವವರ್ಗಿಂ |
ದೇಳಿಗೆಯ ಖಳನಾದ ಡಂಭನು |
ಕೇಳಬೇಕೀಕಥೆಯ ವಿಸ್ತರದಿಂದ ಹೇಳೆಂದ ||

ಎನಲು ಜನಮೇಜಯಗೆ ಪೇಳಿದ |
ನನುಪಮಿತನಹ ತಾಪಸಾಗ್ರಣಿ |
ವಿನುತವೈಶಂಪಾಯಮುನಿಪನು ಹರುಷಮುಖನಾಗಿ ||
ಜನಪ ಕೇಳೈ ಹರಿಯುಪರಮಿತ |
ವೆನಿಸುವವತಾರಂಗಳೊಳಗಿದು |
ಜನಮನೋಹರರೂಪಿನಭಿನವಕಥೆಯು ಕೇಳೆಂದ || ೩

ಒಂದು ರೂಪವೆ ಬೞಿಕ ಸಾಸಿರ |
ಬಂಧುರದ ಅವತಾರವಾಂತತಿ |
ಭಂದದಲಿ ಬೇಸಱಿಕೆ ತೋಱದೊಲಭವ ದೇವೇಂದ್ರ ||
ಅಂದದಲಿ ಸುರಬ್ರಹ್ಮಮನುಮುನಿ |
ವೃಂದವೀಕ್ಷಿಸಲವರ ನಯನಕೆ |
ಸಂದ ನಿಮಿಷವದಾಗೆ ಕಾದಿದ ವರುಷ ಸಾಹಸ್ರ || ೫

ಈತೆಱದೊಳಸುರಾರಿಯೆಲ್ಲರ |
ಚೇತಕತಿಶಯವಾದ ರೀತಿಯ |
ಪ್ರೀತಿಯನು ಪುಟ್ಟಿಸುತ ನಲವನು ಬೀಱುತಾಕ್ಷಣದಿ ||
ಭೂತಳಕ್ಕಾಶ್ಚರ್ಯವಾಗಲು |
ಖ್ಯಾತರೂಪವ ಧರಿಸಿ ತರಿದನ |
ರಾತಿ ಡಂಭಾಸುರನ ವರಸಾಹಸ್ರಕವಚಗಳ || ೬

ಹರಿಯ ರೂಪವ ನೋಡಿ ನಲಿವರು |
ಹರಿಯ ಶರಗಳ ನೋಡಿಯುಲಿವರು |
ಹರಿಯ ಮೂದಲೆಗಳನು ಕಿವಿಯಲಿ ಕೇಳಿ ಹರುಷಿಪರು ||
ಹರಿಯ ಚತುರತೆಗಳಿಗೆ ಕುಣಿವರು |
ಹರಿಯ ಮಾಯಕೆ ಮಗ್ನರಾಗುತ |
ಲರಸ ಕೇಳೈ ಸುರರು ನೋಡುತಲಿರುವರಾರಣವ || ೭

ಈಪರಿಯಲಮರಾರಿ ಪಡೆದ ಮ |
ಹಾಪರಮ ಕವಚಗಳ ತರಿತರಿ |
ದಾಪರಾಪರವಸ್ತುವುೞುಹಿದನೊಂದು ಕವಚವನು ||
ಭೂಪ ಕೇಳೈ ಖಳನು ತಿಳಿದತಿ |
ತಾಪದಲಿ ತಾನೈದಿ ರವಿಯನು |
ಆಪದೋದ್ಧಾರಕನೆ ಸಲಹೆನುತವನು ಮಱೆಹೊಕ್ಕ || ೮

ತಿಳಿದು ಹರಿಯಂದೈದಿ ಡಂಭನ |
ತಲೆಯನೊಪ್ಪಿಸಿ ಕೊಡುವುದೆನೆ ರವಿ |
ನಳಿನನಾಭಂಗೆಱಗಿ ಮುಂದಣ ಜನ್ಮದಲಿ ತಮಗೆ ||
ಖಳನಿವನ ಬಿಡದೀವೆನೆನ್ನಲು |
ಒಳುನುಡಿಗೆ ಸಂಭ್ರಮಿಸಿ ಮುರಳಿದ |
ಬಲುಪಯೋನಿಧಿಮನೆಗೆ ಜನಮೇಜಯನೆ ಕೇಳೆಂದ || ೯

ಎಂಬ ಮುನಿವಚನವನು ಕೇಳುತ |
ಸಂಭ್ರಮಿಸಿ ಜನಮೇಜಯನು ಮಿಗೆ |
ಅಂಬುಜಾಕ್ಷನು ಪಲವರುಷಪರಿಯಂತ ಬಹುವಿಧದಿ ||
ಡಂಭನೊಳು ಬಲುರಣವ ಮಾಡಿದ |
ನೆಂಬವೊಲ್ ಸಂಕ್ಷೇಪಿಸಿದಿರಿ ವಿ |
ಜೃಂಭಣೆಯೊಳಱುಹಿದಡೆ ಕೇಳುವೆನೆತಿಮನೋಮುದದಿ || ೧೦
ಎನಲು ವೈಶಂಪಾಯಮುನಿಪತಿ |
ಜನಪ ಜನಮೇಜಯಗೆ ಪೇೞ್ದ |
ಮನಹರುಷದಿಂ ನಾರದನು ಗಂಧರ್ವಕಗೆ ಪೇೞ್ದ ||
ಘನಮನೋಹರವಾದ ಚರಿತೆಯ |
ವಿನಯದಲಿ ಪೇೞ್ದನು ಕೇಳಿದ |
ಮನುಜರಘವನು ಹರಿಸಿ ಸಂಪದವೀವ ಸತ್ಕಥೆಯ || ೧೧
ಮತ್ತೆ ಕೇಳವನೀಶ ಸುರಮುನಿ |
ಪೋತ್ತಮನು ಗಂಧರ್ವಪತಿಯೊ |
ಳ್ಬಿತ್ತರಿಸಿದನು ಭಾವಜನ ಪಿತನೆರಡು ರೂಪಿನಲಿ ||
ಎತ್ತಿದನು ದೇಹಗಳ ದೈತ್ಯನ |
ಚಿತ್ತ ಜರ್ಜ್ಜರವಾಗೆ ತಾ ಮಿಗೆ |
ಕತ್ತರಿಸಿ ಕವಚವನು ಡಂಭನ ಗೆಲಿದ ಸತ್ಕಥೆಯ || ೧೨
ಅಱುಹುವೆನಸುರನಂತರವ ಬಿ |
ತ್ತರಸಿ ಕೇಳ್ ಖಚರೇಶ ಡಂಭಾ |
ಸುರನದೆಂಬವ ಮುನ್ನಲೀಶನ ಭಜಿಸಿ ಬಹುತಪವ ||
ವರುಷ ಸಾಸಿರಗಳಲಿ ಮಾಡಲು |
ಹರನು ನಿಷ್ಠೆಗೆ ಮೆಚ್ಚಿ ದಯದಿಂ |
ವರವ ಬೇಡೆನಲವನು ಬೇಡಿದ ಪರಿಯ ಕೇಳೆಂದ || ೧೩
ಇಂತು ಡಂಭಾಸುರನು ಮಿಗೆ ನಿ |
ಶ್ಚಿಂತನನು ಪೂಜಿಸಲು ಪ್ರತ್ಯ |
ಕ್ಷಾಂತರಾಯದಿ ನಿಂದು ಕಾಮ್ಯವದೇನು ಬೇಡೆನಲು ||
ಕಂತುಹರ ಕರುಣಾಮಹಾರ್ಣವ |
ದಂತಿಚರ್ಮಾಂಬರ ಮಹೇಶ್ವರ |
ಸಂತಸದೊಳಾಲಿಪುದು ಭಜಕನ ಬಿನ್ನಪವನೊಲಿದು || ೧೪

ಕರುಣಿಸೆನಗೆಲೆ ಭೋಗಿಭೂಷಣ |
ಹರುಷದಿಂದ ಸಹಸ್ರಕವಚವ |
ಚಿರದೊಳಿಪ್ಪಂತೊಲಿದು ಬೞಿಕ ವಿರೋಧಿಗಳು ಸೆಣಸೆ ||
ಹರಿಯದಂದದಲೆನಗೆಯೆಂದಿಗು |
ಮರಣವಿಲ್ಲದ ತೆಱದಿ ವರವನು |
ಪರಮಪುರುಷನೆ ಎನಲು ಹರ ಯೋಚಿಸಿದನೊಂದನುವ || ೧೫

ಹುಲಿಗೆ ಧೈರ್ಯವ ಚೋರನಿಗೆ ಸು |
ಸ್ಥಳವ ಪಾತಕಿಗಧಿಕದಾಯುವ |
ನೊಲಿದು ಕೊಟ್ಟರೆ ಇಳೆಯ ಜನರನು ಬದುಕಲೀಸುವರೆ ||
ಗಳಿಗೆಗಾದರು ಎಂದು ತನ್ನೊಳು |
ತಿಳಿದು ಬೞಿಕೀಮಾತನೆಂದನು |
ಖಳನೊಡನೆ ತ್ರಿಪುರಾರಿ ಹರುಷದಿ ಗಯನೆ ಕೇಳೆಂದ || ೧೬

ವಜ್ರಕವಚಸಹಸ್ರವನು ನಿನ |
ಗಾರ್ಜಿಸಿತ್ತೆನು ನರಸುರಾಸುರ |
ರೂರ್ಜಿತಾಸ್ತ್ರಗಳಿಂದ ಕಡಿಯಲು ಹರಿಯದುಱಿ ಮುಳಿದು ||
ಆರ್ಜವದಿ ಸಂಗರದಿ ನಿನ್ನೊಳು |
ಘುರ್ಜಿಸುತ ಪಗಲಿರುಳು ಕಾದಲು |
ನಿರ್ಜರಾಬ್ದಸಹಸ್ರಕೊಂದನು ತಱಿದು ತಾನಱಿವ || ೧೭

ಈತೆಱದ ಕವಚಗಳನೆಲ್ಲವ |
ಖ್ಯಾತಪುರುಷನದಾವನಾಗಲಿ |
ಭೀತಿಯಿಲ್ಲದೆ ಸಮರದೊಳಿಱಿಯಲಿವನ ಕೈಯಿಂದ ||
ಆತತುಕ್ಷ್ಣ ಹಾನಿಯಪ್ಪುದು |
ಭೂತಳದೊಳಿದು ತಪ್ಪದೆಂದಾ |
ಭೂತನಾಥನು ನುಡಿಯಲದ ಕೈಕೊಂಡನಾಖಳನು || ೧೮

ಒಂದು ಕವಚವ ದಿವ್ಯಸಾಸಿರ |
ಬಂಧುರಾಬ್ದಂಗಳಿಗೆ ಕಡಿಯು |
ಲ್ಬಂದವನ ಕಂಧರವು ಸಾಸಿರ ಭಾಗವಹುದೆಂದು ||
ಮುಂದೆಯೀಪರಿ ರಣವ ಜಯಿಸುವ |
ಕಂದನನು ಪಡೆವಧಿಕರೆನಿಸುವ |
ತಂದೆತಾಯ್ ಹುಸಿಯೆನುತಲೀಶಂಗೆಱಗಿ ಬೀೞ್ಕೊಂಡ || ೧೯

ಈಪರಿಯುಲವನಖಿಳವರವನು |
ತಾ ಪಡೆದು ಸಂತಸದಿ ಸದ್ವೀ |
ರ್ಯೋರ್ವಪಲಾಲಿತನಾಗಿ ಸಕಲಾವಸಿಗಳನು ಹಿೞಿಯೆ ||
ಗೋಪಮುಖ್ಯಾಮರವಿರಂಚಿ |
ಶ್ರೀಪತಿಗಳಳುಕುತ್ತಲಿಹರದ |
ನಾಪಿನಾಕಿಗೆ ಮುಗುಳೆ ತಪ್ಪಿಸಬಾರದಾಯ್ತೆಂದ || ೨೦

ಏನ ಹೇಳುವೆ ಖಚರ ಡಂಭನ |
ನೂನಸುಮ್ಮಾನವನು ಮಾನವ |
ದಾನವಾಮರ ಯಕ್ಷಕಿನ್ನರರೊರ್ವರಿದಿರಿಸದೆ ||
ಧ್ಯಾನಿಸುತ ದೆಸೆದೆಸೆಗೆ ಹಾಯ್ದ್ದುೞಿ |
ಕಾನನದೆ ಗಿರಿಗಹ್ವರಗಳಲಿ |
ದೀನತೆಯೊಳಡಗುತ್ತಲಿಹರನವರತ ಕೇಳೆಂದ || ೨೧

ಇರಲವನು ಭೂಜನರ ದಿವಿಜರ |
ಪುರಗಳೆಲ್ಲವನಾಕ್ರಮಿಸಿ ಸಂ |
ಹರಿಸ ತೊಡಗುತ ಬರಲು ದೂೞಿದರಮರವಲ್ಲಭಗೆ ||
ಸುರಪನಾನಿರ್ಜರರುಸಹಿತಜ |
ಗೊರೆಯೆ ಬೞಿಕಾ ಬ್ರಹ್ಮನಾಸುರ |
ರೆೞಿಯುಸಹಿತವೆ ಬಂದು ಮೊರೆಯಿಟ್ಟರು ರಮಾಧವಗೆ || ೨೨

ತ್ರಾಹಿ ಕ್ಷೀರಾಂಬೋಧಿವಾಸನೆ |
ತ್ರಾಹಿ ದಾನವಶರಧಿಬಡಬನೆ |
ತ್ರಾಹಿ ರಾಕ್ಷಸತಿಮಿರಸೂರ್ಯನೆ ತ್ರಾಹಿ ಸುರವಂದ್ಯ ||
ತ್ರಾಹಿ ಜಗದಾಧಾರಕರ್ತೃವೆ |
ತ್ರಾಹಿ ಸುಜನೋದ್ಧಾರಮೂರ್ತಿಯೆ |
ತ್ರಾಹಿ ತ್ರಾಹಿ ಯೆನುತ್ತ ತುತಿಸುತ್ತಿರ್ದರಮರಗಣ || ೨೩

ರಕ್ಷಿಸೈ ರಾಜೀವಲೋಚನ |
ರಕ್ಷಿಸೈ ರಾಜೀವನಾಭನೆ |
ರಕ್ಷಿಸೈ ರಾಜೀವಸಂಭವಜನಕ ಗೋವಿಂದ ||
ರಕ್ಷಿಸೈ ರಘುರಾಮಚಂದ್ರನೆ |
ರಕ್ಷಿಸೆಮ್ಮನು ದಯದಲನುದಿನ |
ಪಕ್ಷಿವಾಹನ ಪರಮಪುರುಷನೆ ರಕ್ಷಿಸುವುದೆಂದ || ೨೪

ಸಲಹುವುದು ಸರ್ವೇಶ ಸಾಸಿರ |
ತಲೆಗಳುಳ್ಳಖಿಳೇಶ ಸಾಗರ |
ನಿಳಯ ಸನಕಾದ್ಯಖಿಳಸುರಮುನಿವಿನುತ ಲಕ್ಷ್ಮೀಶ ||
ಬಲಿ ವಿಭೀಷಣ ವ್ಯಾಸ ನಾರದ |
ನಲಘುಬಲಪ್ರಹ್ಲಾದರೆಂಬಿತಿ |
ಬಲರ ಸಲಹಿದ ತೆಱದಲೆಮ್ಮನು ಸಲಹು ಸರ್ವೇಶ || ೨೫

ಎಂದು ಸಾಷ್ಟಾಂಗದಲಿ ಸುರಮುನಿ |
ವೃಂದ ಕಿನ್ನರ ಯಕ್ಷ ರಾಕ್ಷಸ |
ದಂದಶೂಕ ಪಿಶಾಚ ಗುಹ್ಯಕ ಗರುಡ ಗಂಧರ್ವ ||
ಇಂದು ಸೂರ್ಯ ಸುರೇಶ ಫಣಿಪತಿ |
ಬಂಧುರದ ದಿಕ್ಪಾಲರಜನೊಡ |
ನಿಂದಿರೇಶಂಗೆಱಗಿ ಬಿನ್ನೈಸಿದರು ವಿನಯದಲಿ || ೨೬

ಮಾನಭಂಗಿಗಳಾದೆವಿಂದಿಗೆ |
ಹೀನವೃತ್ತಿಗೆ ಸಂದೆವಿಂದಿಗೆ |
ಸ್ಥಾನಪಲ್ಲಟವಾದೆವಿಂದಿಗೆ ಮೃತಿಗೆಯುಣಿಸಾಗೆ ||
ಧ್ಯಾನಮುಖದಲಿ ತಿಳಿದು ರಕ್ಷಿಪ |
ಮಾನನಿಧಿ ನೀನಿರಲು ಬಂದವು |
ದಾನವಾಂತಕ ನಮ್ಮ ರಕ್ಷಿಸು ಎಂದುದಮರಗಣ || ೨೭

ಏೞಿರೈ ನೀವೆಲ್ಲ ನುತಿಗಳ |
ಬಾಳ ಮಾಡುವಿರೇಕೆ ಬಂದುದ |
ಹೇೞಿ ಕಷ್ಟಗಳೇನು ನುಡಿವುದು ನಮ್ಮ ಕೂಡೀಗ ||
ದಾೞಿಯಾರಿಂದಾಯ್ತು ನಿಮ್ಮಯ |
ಮೋೞಿಗವದೇನೆಂದು ಕೇಳಿದ |
ಫಾಳಲೋಚನಸಖನು ಪದ್ಮಜನಾನನವ ನೋಡಿ || ೨೮

ದೇವ ಬಿನ್ನಹ ಡಂಭದಾನವ |
ನೀವಸುಧೆಯೊಳ್ ಹರನ ಭಜಿಸಿಯೆ |
ಸಾವು ಯಾರಿಂದಾಗದಂದದಿ ವಜ್ರಕವಚಗಳ ||
ಸಾವಿರವನವ ಪಡೆದು ಜೀವರ |
ಜೀವಹಿಂಸೆಯ ಮಾಡಿಯಳಲಿಪ |
ನೀವಿಪತ್ತನು ತಡೆಯಲಾಱದೆ ಬಂದೆವಾವೀಗ || ೨೯

ಒಳ್ಳಿತಾದರೆಯೆನುತ ದಾನವ |
ದಲ್ಲಣನು ಪಶುಪತಿಯು ಕೇಳುವೆ |
ನಲ್ಲಿಗೈತಹುದೆಮ್ಮ ಸಂಗಡಲೆನುತ ಖಗಪತಿಯ ||
ಹಲ್ಲಣವ ಮೇಳೈಸಲೇಱಿ ಮ |
ಹೋಲ್ಲಸದಿ ಜಗದೊಡೆಯ ಬಂದನು |
ಫುಲ್ಲಸಂಭವಸಹಿತ ರಜತಾಚಲಕೆ ಸಂಭ್ರಮದಿ || ೩೦

ಲೆಕ್ಕವಿಲ್ಲದ ಬ್ರಹ್ಮರುದ್ರರು |
ಲೆಕ್ಕವಿಲ್ಲದ ಯಕ್ಷರುರಗರು |
ಲೆಕ್ಕವಿಲ್ಲದ ಗರುಡಗಂಧರ್ವಕರು ಕಿನ್ನರರು ||
ಲೆಕ್ಕವಿಲ್ಲದ ಸಿದ್ಧಸಾಧ್ಯರು |
ಲೆಕ್ಕವಿಲ್ಲದ ಸುರಪವಸುಗಳು |
ಲೆಕ್ಕವಿಲ್ಲದ ಸುರರು ನಡೆದರು ಹರಿಯ ಬಳಸಿನಲಿ || ೩೧

ಚಂದ್ರಸೂರ್ಯರನೇಕ ಸುರಮುನಿ |
ವೃಂದವಗಣಿತ ಸೂತಮಾಗಧ |
ದಂದಶೂಕಪಿಶಾಚಗುಹ್ಯಕರಮಿತ ದಿಗಧಿಪರು ||
ಒಂದೆ ಹೆಸರಿಗೆ ಬಹಳವಿರುತಿಹ |
ರಿಂದುಧರನೇ ಬಲ್ಲನಲ್ಲದೆ |
ಬಂದಿಹರ ಸಂದಣಿಯ ಲೆಕ್ಕವನಱಿವರಾರೆಂದ || ೩೨

ಬಂದರಭ್ರದ ಪಥದಿ ಶುಭ್ರದ |
ಸಿಂಧುರಂಗಳ ರತ್ನಖಚಿತ |
ಸ್ಯಂದನಂಗಳ ದಿವ್ಯಹಯತತಿ ಶರಭಶಾರ್ದೂಲ ||
ಬಂಧುರದ ಸಿಂಹಗಳ ಹಂಸೆಗ |
ಳಂದದಲಿ ತಾವೇಱಿ ಸಂಭ್ರಮ |
ದಿಂದಲಾಹರಿಯೊಡನೆ ವರಕೈಲಾಸಗಿರಿಗಾಗಿ || ೩೩

ಗಿಳಿಗಳನು ನವಿಲುಗಳ ವೃಶ್ಚಿಕ |
ಗಣಗಳನು ನಂದೀಶ ತಗಱಿನ |
ದಣಿಬೆಗಳ ವರಹುಲೆ ಮೊದಲಾಗಿರ್ದ ಮೃಗಗಣವ ||
ಕುಣಿವ ಮೂಷಿಕವತಿಶಯದ ನರ |
ಗಣದ ವಾಹನವೇಱಿ ಬಲುಸಂ |
ದಣಿಯಲೈದಿತು ವಾಸುದೇವನ ಉಭಯಪಾರ್ಶ್ವದಲಿ || ೩೪

ಅಹುದು ಮುನಿಪೋತ್ತಮನೆ ನಿಮ್ಮಯ |
ವಿಹಿತವಾಕ್ಯವು ತಪ್ಪದಾದಡೆ |
ಬಹುವಿಚಿತ್ರವದಾಯ್ತು ತನ್ನಯ ಶ್ರವಣಗಳಿಗೀಗ ||
ಮಹಿಯೊಳಜಹರರಿಬ್ಬರನು ಕೇ |
ಳಿಹೆನನೇಕರನೀಗ ಪೇಳ್ದಡೆ |
ಸಹಜವಾಗಿರದೆನಗೆ ವಿವರಿಸಿ ತಿಳುಹಬೇಕೆಂದ || ೪೫

ಆದಡಾಲಿಸು ಒಬ್ಬ ಯದುವಂ |
ಶೋದಧಿಯ ಪರಿಪ ಸುಧಾಕರ |
ನಾದ ಶ್ರೀಹರಿಯಾದಿಮೂರ್ತಿಯ ರೋಮಕೂಪದಲಿ ||
ಭೇದಿಸಿರುತಿಹುವಂಡಕೋಟಿಗ |
ಳಾದರದೊಳಿರುತಿಹುವು ಸತತವ |
ನಾದಿಪುರುಷನ ಮಹಿಮೆಯಲಿ ಭೂಪಾಲ ಕೇಳೆಂದ || ೪೬

ಅದಱಿಂದವೆ ಯಾಮಹಾತ್ಮನು |
ಮುದದೊಳೈದಲು ಕೂಡೆ ಬಹರ |
ಭ್ಯುದಯದಲಿ ಸಂಭ್ರಮವ ಕೊಂಡಾಡುವಡೆ ಶೇಷನಿಗೆ ||
ಒದಗವಾಜಿಹ್ವೆಗಳು ಮಿಕ್ಕಿನ |
ಸದೆಗರಿಂದಾಬ್ರಾದ್ಯರಿಗೆ ತೀರದು |
ಪದುಮನಾಭನ ಬಹಳ ಬಳಗದ ಭರವನೆಣಿಸುವಡೆ || ೪೭

ನೂಱು ಕೋಟಿ ದಿವಾಕರರು ಮಿಗೆ |
ನೂಱು ಕೋಟಿ ಶಶಾಂಕರುದಿಸಲ |
ಪಾರದೀಧಿತಿ ಜಗವ ಬೆಳಗಿದ ತೆಱದಿ ತತ್ಪ್ರಭೆಯು ||
ಮೂಱು ಲೋಕವ ತುಂಬಿ ತುಱುಕಲು |
ಸೂರಿಯನ ಚಂದ್ರಮನ ಕುಱುಹನ |
ದಾರುಮಱಿಯದೊಲಾಯ್ತು ಜನಮೇಜಯ ಮಹೀಪಾಲ || ೪೮

ಅಮಿತವೈಭವದಿಂದ ಲಕ್ಷ್ಮೀ |
ರಮಣ ಶರಣರ ಕಾಯಲೋಸುಗ |
ವುಮೆಯರಸನಿರುತಿರುವ ವರಕೈಲಾಸಪರ್ವತಕೆ ||
ಗಮನಲಿದಿರಿನೊಳೊಪ್ಪಿದುದು ಹರಿ |
ಗಮಲಕೀರ್ತಿಸುಧಾಮಯೋದಿತ |
ರಮಣಿಯೆನೆ ರಾಜಿಸಿತು ರಜತಾಚಲವು ಕಣ್ಮನಕೆ || ೪೯

ಜಗದುದರನತಿಮುದದಿ ದ್ವಾಪರ |
ಯುಗದ ತುದಿಯಲಿ ಕೃಷ್ಣನಾಮದೊ |
ಳೊಗೆದು ಭೂಭಾರವನು ತವಿಸುವನವಗೆ ಬೆಣ್ಣೆಯನು ||
ಒಗುಮಿಗೆಯೊಳೊದವಿಸಿಯೆ ಕಮಲಜ |
ನಗಣಿತೋನ್ನತರಾಶಿಯನು ತಾ |
ಮಿಗೆ ರಚಿಸಿದಂತೆಸೆದುದಾಶ್ವೇತಾದ್ರಿ ಜೆಲ್ವಿನಲಿ || ೪೦

ಕ್ಷೀರಸಾಗರಶಯನನನುದಿನ |
ಘೋರದಾನವಕೋಟಿಗಳ ಸಂ |
ಹಾರವನು ಮಿಗೆ ಮಾಡುತಿಹನಿದಿರಿಲ್ಲ ಹರಿಗೆನುತ ||
ಧಾರಿಣಿಯ ಮಧ್ಯದಲಿ ರಜತದಿ |
ಚಾರುತರದಿಂದಜನು ರಚಿಸಿದ |
ವೀರವಿಜಯಸ್ತಂಭದೊಲು ಕೈಲಾಸ ಮೆಱೆದಿಹುದು || ೪೧

ಇರ್ದರನುಪಮಸಿದ್ಧಸಾಧ್ಯಕ |
ರಿರ್ದರಖಿಳಾಮ್ನಾಯಪಾಠಕ |
ರಿರ್ದರಗಣಿತ ಮೋಕ್ಷಸಾಧಕಮುನಿಜನವ್ರಾತ ||
ಹೃದ್ಯದಂತರ್ಭಾವವೇದ್ಯಕ |
ರಿರ್ದರಖಿಳಪುರಾಣಗೋಷ್ಠಿಕ |
ರಿರ್ದರಾಕೈಲಾಸಗಿರಿಯಗಲದಲಿ ಕೇಳೆಂದ || ೪೨

ಹರಿಣನೊಡನಾಡುತ್ತಲಿಹ ದು |
ರ್ಧರದ ವ್ಯಾಘ್ರಮದೇಭದೊಡನನ |
ವರತ ವಿಹರಿಪ ಸಿಂಗ ಮುಂಗುಸಿಯೊಡನೆ ಕಾಳಿಂಗ ||
ಸರಸವಾಡುತ್ತಲಿಹ ಸ್ಮರಹರ |
ನುರುಮಹಿಮೆಯಲ್ಲಾಯೆನುತ ಹರಿ |
ಸುರಪಪದ್ಮಜರೀಕ್ಷಿಸುತಲೈತಂದರೊಲವಿನಲಿ || ೪೩

ಜಾತಿವೈರಂಗಳು ಕೆಗದ ಮೃಗ |
ಜಾತಿ ಪಕ್ಷಿಸಮೂಹವನುದಿನ |
ಪ್ರೀತಿಯಲ್ಲಿಹುವಖಿಳಸಂಭ್ರಮದಿಂದಲಾನಗದಿ ||
ಶೀತಳೋದಕವಿರುವ ಸರಗಳು |
ಚೂತಪನಸದ್ರಾಕ್ಷಿಖರ್ಜೂ |
ರಾತಿಶಯಜಂಬೀರಜಂಬೂಕ್ರಮುಕತರುವಿಹುವು || ೪೪

ಮಲ್ಲಿಗೆಯು ವರಜಾಜಿ ಪಾದರಿ |
ಮೊಲ್ಲೆ ಸಂಪಿಗೆ ಪಾರಿಜಾತವು |
ಸಲ್ಲಲಿತ ಕರವೀರಕೇತಕಿಯು ಮಿತವಾಗಿಹುವು ||
ಪಲ್ಲವಂಗಳೊಳೆಸೆವ ತರುಗಳು |
ವಲ್ಲಿಗಳು ಬಹುವಾಗಿ ಮೆಱೆದಿಹು |
ವೆಲ್ಲಿ ನೋಡಲು ರಜತಶೈಲದ ಸುತ್ತುವಳಯದಲಿ || ೪೫

ತರುಗಳೆಲ್ಲವು ಕಲ್ಪವೃಕ್ಷವು |
ಹರಿವ ಬಳ್ಳಿಗಳೆಲ್ಲ ಸುರಲತೆ |
ಚರಿಪ ವರಧೇನುಗಳು ಸುರಪಶುವುರುತರದ ಶಿಲೆಯು ||
ಮೆಱೆವ ಚಿಂತಾಮಣಿಯುಯೆಂಬೊಲು |
ನಿರತ ಕಾಮಿತಫಲವನೀಯುತ |
ಹರುಷದಿಂದೆಸೆದಿಹುವು ದೇವತ್ವವನು ಮಿಗೆ ಧರಿಸಿ || ೪೬

ಆಗಿರಿಯ ಸಂಭ್ರಮವ ನೋಡುತ |
ಭೋಗಿಶಯನನು ಬಹಳಮುದದಲಿ |
ಭೋಗಿಭೂಷಣನಿರುವ ಸದನಕ್ಕಾಗಿ ಬರುತಿರಲು ||
ಭೋಗಿಗಳು ಗಂಧರ್ವಯಕ್ಷರು |
ಮಾಗಧರು ತುಂಬುರರು ಸುರಪತಿ |
ನಾಗರಿಕಸುರಗುರು ವಸಿಷ್ಠರು ನುತಿಸುತ್ತೈದಿದರು || ೪೭

ಆದಿಮೂರುತಿ ಬಂದನಗಣಿತ |
ವೇದಸಿದ್ಧನು ಬಂದ ಶರಣರ |
ಕಾದ ಕರುಣಾವನಧಿ ಕಮಲದಳಾಕ್ಷ ತಾ ಬಂದ ||
ಮೇದಿನೀಪತಿ ಬಂದನಜರು |
ದ್ರಾದಿಗಳ ಪರಿಭವವನನುದಿನ |
ಸಾದರದಿ ಪರಿಹರಿಪ ಬಂದನೆನುತ್ತ ಹೊಗಳ್ದರು || ೪೮

ದೇವ ಬಂದನು ಸಕಲದೇವರ |
ದೇವ ಬಂದನು ಭಕತಜನರನು |
ಕಾವ ಕರುಣವಾರ್ಧಿ ಬಂದನು ಕಮಲಜನ ಜನಕ ||
ಭಾವಭವಪಿತ ಬಂದ ಬ್ರಹ್ಮನು |
ರಾವಳಿಯು ಗೋದ್ವಿಜರ ಸಂತತ |
ಮೋವಿ ಸಲಹುವ ದೇವ ಬಂದನು ಎಂದು ಹೊಗಳ್ದರು || ೪೯

ಸಿಂಧುಶಯನನು ಬಂದ ಶರಣರ |
ಬಂಧುಬಳಗವು ಬಂದ ಘನಸುರ |
ಸಿಂಧುವನು ಪಡೆದತುಳಪಾವನಪಾದಪದ್ಮಯುಗ ||
ಬಂದನಘಕುಲಸಿಂಧುಬಾಡಬ |
ಬಂದನಗ್ಗದ ಗಂಧಸಿಂಧುರ |
ಬಂಧನವ ಪರಿಹರಿಸಿದಚ್ಯುತನೆಂದು ಹೊಗಳ್ದರು | ೫೦

ವಂದಿಜನದುಗ್ಗಡಣೆ ಮಾಗಧ |
ವೃಂದದಬ್ಬರ ಸುರರ ಭೇರೀ |
ಧಂಧಣದ ಘನರಾವ ಮದ್ದಳೆ ತಾಳಗಳ ರಭಸ ||
ಮಂದಿಗಳ ನುತಿಯುಲುಹು ಗಜಹಯ |
ಸ್ಯಂದನದ ಬಹುನಿನದ ಕೂಡಲು |
ಮಂದರದೆ ಶರಧಿಯನು ಮಥಿಸಿದ ರವಕೆ ಮಿಗಿಲಾಯ್ತು || ೫೧

ಹರಿಯ ಗಮನಕೆ ಮೆಚ್ಚಿ ಶರಧಿಗ |
ಳುರುತರದ ಸಂಭ್ರಮದಿ ತಾವತಿ |
ಭರದೊಳೊಂದೇ ಬಾರಿ ಮೊರೆವವೊಲಿವಱ ಘನರಭಸ ||
ಧರೆಯನಾಕ್ರಮಿಸಲ್ಕೆ ಗಿರಿಜಾ |
ವರನು ತಿಳಿದೈತಂದ ತನ್ನಯ |
ತರುಣಿ ಶಿವಗಣಸಹಿತಲೋಲಗದಿಂದಲಿದಿರಾಗಿ || ೫೨

ನಾರಿಯರು ತಮತಮಗೆ ಮುತ್ತಿನ |
ವಾರತಿಗಳಿಂದೊಡನೆ ಬರೆ ಜಂ |
ಭಾರಿ ಮಣಿಗಣವಾದಿಯಾದ ಸಮಸ್ತರತುನಗಳ ||
ಸಾರತರಮೃಗಮದಜವಾಜಿಯ |
ಮೇರುಸಮ ಕರಿಘಟೆಗಳನು ವಿ |
ಸ್ತಾರದಿಂ ಹರಿಗೊಪ್ಪಿಸುವೆನೆನುತಭವನೈತಂದ || ೫೩

ಬಂದನೇ ಕರುಣಾಳು ಭಕತರ |
ಮಂದಿರಕೆ, ಮನದೊಳಗೆ ತಾ ಗತಿ |
ಯೆಂದು ಸಂತತ ನೆನೆವ ಸಜ್ಜನರುಗಳ ನೆಱೆ ಕಾವ ||
ಬಂಧನದ ಭವಭವದ ಕಲ್ಮಷ |
ವೃಂದವನು ಪರಿಹರಿಸಿ ಶರಣರಿ |
ಗಂದದಲಿ ಶಾಶ್ವತದ ಪದವಿಯನೀವ ಸಂಜೀವ || ೫೪

ಈಪರಿಯ ನುತಿಗಳಲಿ ಹರ ಹರು |
ಷಾಪಗಾಂಚಿತನಾಗಿ ತ್ವರಿತದ |
ಲಾಪರಾಪರವಸ್ತುವಿನ ಬರವಿಂಗೆ ಹಿಗ್ಗುತಲಿ ||
ಗೋಪತಿಯ ತಾನೇಅದ್ವೈವಿದ |
ಶ್ರೀಪತಿಯ ದರುಶನಕೆ ಚಿದಚಿ |
ದ್ರೂಪತೇಜೋಮಯನವಾಙ್ಮಯನಭವನೈತಂದ || ೫೫

ಹರನ ಬರವನು ಕಂಡು ಲಕ್ಷ್ಮೀ |
ವರನು ಹರುಷಿತನಾಗಿ ಜವದಲಿ |
ಗರುಡನನು ತಾನಿಳಿದು ಕಾಲ್ನಡೆಯಿಂದಲೈತರಲು ||
ಸ್ಮರಹರನು ನುತಿಸುತಲಿ ಶ್ರೀನರ |
ಹರಿಗೆ ವಂದನೆಯಿಂದ ತಾ ತಂ |
ದುರುತರದ ವಸ್ತುಗಳನೆಲ್ಲವನಿತ್ತನೊಲವಿನಲಿ || ೫೬

ಮತ್ತೆ ಸುರಿದನು ದಿವ್ಯರತ್ನಗ |
ಳತ್ಯಧಿಕರಾಶಿಗಳ ಸುರಕುಸು |
ಮೋತ್ಕರದ ಸದ್ಗಂಧಮಾಲ್ಯಾದ್ಯಖಿಳಪರಿಮಳವ ||
ಉತ್ತಮದ ಪೀತಾಂಬರಂಗಳ |
ತೆತ್ತಿಸಿದ ಭೂಷಣವ ಹರಿಪದ |
ಕಿತ್ತು ನಮಿಸುತಲೀಶ ನುತಿಸಿದನಾಜಗನ್ಮಯನ || ೫೭

ತ್ರಾಹಿ ತ್ರೈಲೋಕೇಶ ಭವಹರ |
ತ್ರಾಹಿ ಬ್ರಹ್ಮೇಂದ್ರಾದಿವಂದಿತ |
ತ್ರಾಹಿ ವೇದಾಗಣಿತಸನ್ನುತ ತ್ರಾಹಿ ಲಕ್ಷ್ಮೀಶ ||
ತ್ರಾಹಿ ತ್ರೈಮೂರ್ತಿಸ್ವರೂಪನೆ |
ತ್ರಾಹಿ ವಿಶ್ವಾತ್ಮಕ ಮಹಾತ್ಮನೆ |
ತ್ರಾಹಿ ಚೈತನ್ಯಾತ್ಮನೆನುತ ರಮೇಶ ನುತಿಸಿದನು || ೫೮

ಏಕೆ ನೂತನ ಪರಿಯಿದೇತಱ |
ಜೋಕೆ ನೀವಾವೆಂಬ ಭೇದವ |
ನೇಕ ಕಾಲದೊಳಿಲ್ಲವೇಸುರರಱಿಯರೇ ನಮ್ಮ ||
ಏಕ ಶಿವಕೇಶವರೆನುತ ತ್ರೈ |
ಲೋಕದೊಳು ವಾಚಿಸುವ ವೇದಾ |
ನೀಕದುಗ್ಗಡಣೆಗಳ ವಾಙ್ನವಱಿಯವೇ ಎಂದ || ೫೯

ಅನಿತಱೊಳು ಗಿರಿಜಾತೆ ಬಂದಳು |
ಘನಹರುಷದಿಂದಾಗ ತನ್ನಯ |
ಮನದೊಳನುದಿನ ನೆನೆವ ಶ್ರೀಹರಿ ತಾನೆ ಕೃಪೆಮಾಡಿ ||
ಮನೆಗೆ ಬಂದನೆನುತ್ತ ಮಂಗಳ |
ವೆನಿಪ ವಸ್ತ್ರೋತ್ಕರವ ಕಾಣಿಕೆ |
ಯನು ಸರಾಗದೊಳಿರಿಸಿ ನಮಿಸಿದಳಾಗ ಹರಿಪದಕೆ || ೭೦

ತಾಯೆ ಬಾರೌ ತಂಗಿ ಪಾರ್ವತಿ |
ಯಾಯತಾಂಬಕಿ ಸಿದ್ಧಸಾಧ್ಯಕಿ |
ಮಾಯೆ ಮಂಗಳಗಾತ್ರೆ ಶಕ್ತಿತ್ರಯೆ ಮಹಾದೇವಿ ||
ಈಯವನಿಗಾಧಾರೆ ಶಂಕರ |
ಪ್ರೀಯೆ ಶಾಶ್ವತಕಾಯೆ ಶಾಂಭವಿ |
ಬಾಯೆನುತ ಕರವಿಡಿದು ಹರಿ ಮನ್ನಿಸಿದನುಚಿತದಲಿ || ೭೧

ಅಱಸಿ ಕಾಣವು ನಿಗಮಸಂಕುಳ |
ವಱಸಿ ಕಾಣರು ಬ್ರಹ್ಮರುದ್ರರು |
ಅಱಸಿ ಕಾಣರು ಸಕಲಸುರಸಂದೋಹ ಮೌನಿಜನ ||
ಅಱಸಿ ಕಾಣರು ನಿಮ್ಮಪಾವನ |
ಚರಣಕಮಲದ ದರುಶನವ ತಾ |
ವರರೆ ಕಂಡೆವು ಕೃಪಾವಾರ್ಧಿಯನೆಂದಳಗಜಾತೆ || ೭೨

ಏಸು ಧನ್ಯರೊ ತಾವು ತಮ್ಮಯ |
ವಾಸದೆಡೆಗೈದಿದಿರಿ ಭಕತರ |
ಲೇಸು ಕಷ್ಟಕ್ಕೊಡೆಯರಾಗಿಹರಾದ ಕಾರಣವು ||
ದಾಸಸಂಘವ ಸಲಹಲೋಸುಗ |
ವಾಸಿ ಮನದೊಳಗಿಲ್ಲದಿಲ್ಲಿಗೆ |
ಕೇಶವನೆ ನೀ ಬಂದೆಯೆನುತಗಜೇಶ ಹರುಷಿಸಿದ || ೭೩

ಎಲೆ ಸದಾಶಿವಮೂರ್ತಿ ತನಗೀ |
ಬಲುಹೊಱೆಯನಾರೋಪಿಸಲು ತಾ |
ನಿಳೆಗೆ ನಿಮ್ಮಿಂದಧಿಕನೇ ಪರಮೇಷ್ಠಿಯೊಳಗಾಗಿ ||
ನಳಿನನಾಭನ ದಿವ್ಯಮೂರ್ತಿಯ |
ಬಳಿವಿಡಿದು ಬಂದವರಿಗಿನಿತೇ |
ಕೊಳುನುಡಿಗಳುಪಚಾರವೇಕೆಂದೆನುತ ಹರಿ ನುಡಿದ || ೭೪

ಬಂದು ಹರ ಹರಿಕರವ ಪಿಡಿದತಿ |
ಛಂದದಲಿ ಹಣೆಗೊತ್ತಿ ಕೊಳುತಾ |
ನಂದದಲಿ ತಾ ನುಡಿದ ಘನದವತಾರ ಹತ್ತಱಲಿ ||
ಮಂದಬುದ್ಧಿಯ ದುಷ್ಟಖಳಜನ |
ವೃಂದವನು ಸಂಹರಿಸಿ ಜಗವನು |
ನಿಂದಿರಿಸಿದವರಾರು ಲೋಕದೊಳೆಂದು ನುತಿಸಿದನು || ೭೫

ತಮಗೆ ಯಾಕಮಲಜಗೆ ಸುರಮುನಿ |
ಯಮರತತಿಸಹಿತೀಚರಾಚರ |
ವಮಿತಕೆಲ್ಲವದಾರು ಕರ್ತರು ನೀವು ಹೊಱತಾಗಿ ||
ಮಮತೆಯಿಂ ನೀವುಳುಹಲಿಲ್ಲವೆ |
ಯಮರರಿಪು ಭಸ್ಮಾಸುರನ ಸಂ |
ಭ್ರಮವನುಡುಗಿಸಿ ಬಱಿಕಲೆಂದಗಜೇಶ ಹರುಷಿಸಿದ || ೭೬

ಎಂದಡಭವನ ತೆಗೆದು ತಕ್ಕೈಸಿ |
ಚೆಂದವಾಯ್ತ್ತು ನಮ್ಮೊಳಗೆ ಭೇದವ |
ನಿಂದು ಮಾಡುವಿರೇಕೆ ನಿಮಗೆಮಗಿಲ್ಲವೆರವುಗಳು ||
ಎಂದಿಗುಂ ಒಂದೆಂದು ಕರುಣಾ |
ಸಿಂಧು ಕಾಮವಿರೋಧಿಯನು ನಯ |
ದಿಂದ ಕೈವಿಡಿದ್ಯೆದುತಾತನ ನಿಜವ ಬಣ್ಣಿಸಿದ || ೭೭

ನಿಮ್ಮ ಮಹಿಮೆಯ ವೇದಕೋಟಿಗ !
ಳುಮ್ಮಹದಿ ಬಹು ಕಾಲ ವರ್ಣಿಸಿ |
ನಿಮ್ಮ ನೆಲೆಯನು ಕಾಣರಾಸನಕಾದಿ ಮುನಿನಿಕರ ||
ನಿಮ್ಮ ನಿಜವನು ಕಾಣರನುದಿನ |
ನಿಮ್ಮ ಸಮಯವನಜಸುರೇಂದ್ರರು |
ಬ್ರಹ್ಮಋುಷಿಗಳು ಕಾಣರಮಲನಿಜಾಂಘ್ರಿಪಂಕಜವ || ೭೮

ಕೋಟಿ ಯಜ್ಞವ ಮಾಡಿದವರಿಗೆ |
ಕೋಟಿ ವರ್ಷವು ತಪವ ಮಾಡಿಯೆ |
ಕೋಟಿ ಜನ್ಮವು ದೇವದ್ವಿಜರನು ಭಕ್ತಿಪೂರ್ವಕದಿ ||
ಮಾಟನಿಪ ಪೂಜೆಯಲಿ ಮೆಚ್ಚಿಸಿ |
ದಾಟವಿಕರುಗಳಿಂಗೆ ಫಲಿಪುದು |
ನೀಟನಲಿ ನಿಮ್ಮಂಘ್ರಿದರುಶನವೆಂದನಬುಜಾಕ್ಷ || ೭೯

ಅನಿತರೊಳಗಜನಿಂದ್ರನಗ್ನಿಯು |
ವಿನುತಯಮ ನೈಋತ್ಯ ವರುಣನು |
ಘನತರದ ವಾಯುವ್ಯ ಧನಪರು ಸಕಲಸುರನಿಕರ ||
ಮನುಮಥಾರಿಯ ಚರಣಕಮಲಕೆ |
ವಿನತಿಪೂರ್ವಕದಿಂದ ವಂದಿಸಿ |
ವಿನುತಿಸುತ ಕಾಣಿಕೆಯನಿತ್ತರು ಬಹಳ ಹರುಷದಲಿ || ೭೦
ತ್ರಾಹಿ ಗೌರೀನಾಥ ಶಂಕರ |
ತ್ರಾಹಿ ಬ್ರಹ್ಮೇಂದ್ರಾದಿವಂದಿತ |
ತ್ರಾಹಿ ಶಬ್ದಬ್ರಹ್ಮ ಶಾಶ್ವತಮೂರ್ತಿ ಶಶಿಮೌಳಿ ||
ತ್ರಾಹಿ ನಾಗಾಭರಣ ಪುರಹರ |
ತ್ರಾಹಿ ಶರಣಜನಾಳಿಪಾಲಕ |
ತ್ರಾಹಿ ತ್ರಾಹಿ ಎನುತ್ತ ನುತಿಸಿದರಾಮಹೇಶ್ವರನ || ೭೧
ಬಳಿಕಲಾತ್ರಿಪುರಾರಿ ತನ್ನಯ |
ನಿಳಯಕಾಶ್ರೀಪತಿಯನೊಡಗೊಂ |
ಡೊಲವಿನಿಂದಾತಿಥ್ಯಪೂಜೆಯ ಮಾಳ್ಪ ಹರುಷದಲಿ ||
ಜಲಧಿಶಯನನೆ ನಮ್ಮ ಸದನ |
ಕ್ಕೊಲವಿನಲಿ ನೀ ಬಂದು ಪದಯುಗ |
ನಳಿನಗಳ ತೋರಿಸಲು ತಾವ್ಮಿಗೆ ಧನ್ಯರಲೆ ಎಂದ || ೭೨
ವಂದಿಸಿದನಾಹರಗೆ ಹರಿ ಹರ |
ವಂದಿಸಿವನವ್ಯಯಗೆ ಹರಿಹರ |
ರಂದು ತಾವ್ತಮ್ಮೊಳಗಣನ್ಯೋನ್ಯಾನುಭಾವದಲಿ ||
ಸಂದ ಹರುಷದಿ ಕೈಗಳನು ಪಿಡಿ |
ದಂದದಲಿ ಕರೆತಂದು ತನ್ನಯ |
ಬಂಧುರದ ಕೇಸರಿಯ ಪೀಠದಲಿರಿಸಿದನು ಹರಿಯ || ೭೩
ತರಿಸಿದನು ನವರತ್ನಖಚಿತದ |
ಹರಿವಣವ ನಡುಸಿರದ ಗಂಗೆಯ |
ನಿರಿಸಿದನು ಕುಂದಣದ ಗಿಂಡಿಯೊಳಾಗ ಗೌರಿಯನು ||
ಕರೆದು ನೀರೆರೆಯೆಂದು ಹರಿಪದ |
ಸರಸಿಜವ ತಾ ತೊಳೆದು ಪೂಜಿಸಿ |
ಪರಮಹರುಷವ ತಾಳ್ದು ನುಡಿದನು ಧನ್ಯರಾವೆನುತ || ೭೪

ಗಂಧಪುಷ್ಪಾಕ್ಷತೆಯ ಬಹುವಿಧ |
ದಿಂದ ಪಣ್ಫಲವಖಿಳವಸ್ತುವ |
ನಂದದಿಂದರ್ಪಿಸುತ ಕರ್ಪೂರಧೂಪದೀಪಗಳ ||
ಹೊಂದಳಿಗೆಯಾರತಿಯನಧಿಕಾ |
ನಂದದಿಂದೆತ್ತಿಸುತ ಹರನೊಲ |
ವಿಂದ ನಲಿದಾಡಿದನು ಹರಿಪದಭಕ್ತಿಭಾವದಲಿ || ೭೫

ರಕ್ಷಿಸೆಮ್ಮನು ರಮೆಯ ವಲ್ಲಭ |
ರಕ್ಷಿಸೆಮ್ಮನು ರಾವಣಾಂತಕ |
ರಕ್ಷಿಸೆಮ್ಮನು ರಾಕ್ಷಸಾರಿಯೆ ರಾಮ ರಾಘವನೆ ||
ರಕ್ಷಿಸೈ ರಾಜೀವಲೋಚನ |
ರಕ್ಷಿಸೈ ವೇದಾಂತವೇದ್ಯನೆ |
ರಕ್ಷಿಸೈ ನರಹರಿ ತಮೋಗುಣಭರಿತನನು ಎಂದ || ೭೬

ಎಂದು ಪಲವಗೆಯಿಂದಲಾಗೋ |
ವಿಂದನನು ಕೊಂಡಾಡಿ ಸಮ್ಮುದ |
ದಿಂದ ಸರ್ವಾತ್ಮಕನ ಸನಕಾದ್ಯಖಿಳಮುನಿನುತನ ||
ಮಂದರಾಚಲಧರನ ಮನಸಿಜ |
ನಿಂದಧಿಕಸೌಂದರ್ಯವುಳ್ಳಮ |
ಲೇಂದುದೀಧಿತಿನಖಚರಣನೊಳಗಭವನಿಂತೆಂದ || ೭೭

ಶ್ರೀನಿವಾಸನೆ ಪೇಳು ನಮ್ಮೊಳು |
ಸಾನುರಾಗದೆ ಬ್ರಹ್ಮಸುರಪತಿ |
ಮೌನಿಸುರಗಣ ಸಿದ್ಧವಿದ್ಯಾಧರರು ಕಿನ್ನರರು ||
ದಾನವರು ಘನಯಕ್ಷಗುಹ್ಯಕ |
ರೀನಗಕೆ ಸಹ ಬಂದ ಕಾರ್ಯವ |
ದೇನು ನಾವಿಂದಿನಲಿ ಧನ್ಯರು ಎಂದನಗಜೇಶ || ೭೮

ನಾವು ನೀವೆಂದೆಂಬ ಭೇದವ |
ದಾವ ಕಾಲದೊಳುಂಟು ಶ್ರುತಿನಿಗ |
ಮಾವಳಿಗಳೊಳಗಿಲ್ಲ ನೋಡೆ ನಪೇನವಿಂದೇಕೆ ||
ನಾವು ನೀವಿದ್ದಲ್ಲಿಗೆಯ್ದಲು |
ನೀವು ನಾವಿದ್ದಲ್ಲಿಗೆಯ್ದಿದ |
ರಾವುದೂಣೆಯುವೆನುತಲುಪಚರಿಸಿದನು ಪುರಹರನ ೭೯

ಒರವು ಬೇಱೇನುಂಟು ನಿಮ್ಮಯ |
ವರದಿ ಡಂಭನು ಸಕಲಲೋಕವ |
ಹುರಿಕರಿಯಮಾಡಿದನು ಹೇೞುವುದೇನು ತಾವಿನ್ನು ||
ವರಗಳನು ಕರುಣಿಸಿದಿರವನಿಗೆ |
ಹರಣದೞಿವೆಂತಹುದು ಸುರರಿಗೆ |
ಹರುಷ ಸಮನಿಪುದೆಂದಿಗೆಂದನು ದಾನವಧ್ವಂಸಿ || ೮೦
ಎನಲು ಗಂಗಾಧರನು ನುಡಿದನು |
ದನುಜವೈರಿಯ ಕೂಡೆ ಡಂಭನು |
ಘನತಪವ ಮಾಡಿದಡೆ ಕೊಟ್ಟೆವು ದುಸ್ತರದ ವರವ ||
ಮನುಜದನುಜಭುಜಂಗದಿವಿಜರಿ |
ಗನುವರದಿ ಗೆಲಲರಿದು ಎಮ್ಮಯ |
ಮನಕೆ ಸಂಶಯವಾಗಿ ತೋಱದೆ ಹೇೞಲೇನೆಂದ || ೮೧
ಎನಲು ದನುಜಾಂತಕನು ನುಡಿದನು |
ಮನುಮಥಾರಿಯೊಳಭವ ನೀವನು |
ದಿನವು ಖಳರಿಂಗತಿಮನೋಹರವಾದ ಅಘಟಿತದ ||
ಘನಪ್ರಯಾಸದ ವರವನೀವಿರಿ |
ತನಗೆ ಪರಿಹರಿಸಲ್ಕೆ ಬಹುದಿನ |
ತನಕ ಹಿಡಿವುದಸಾಧ್ಯವಿದು ಬೞಿಕೆಂದನಸುರಾರಿ || ೮೨
ದೇವ ನಿಮಗೇನಿದಕಸಾಧ್ಯವು |
ಭಾವಿಸಲು ಬೞಿಕಿದನು ಬ್ರಹ್ಮನ |
ನೀವಸುಧೆಯೊಳಗಿಹ ಚರಾಚರಜೀವಚೇತನವ ||
ಓವಿ ಸಲಹುವರಾರು ಜಗದಲಿ |
ನಾವಱಿಯೆವೆ ನಿಮ್ಮಮಹಿಮೆಯ |
ಕಾವರಾರ್ ನೀ ಮುಳಿಯೆ ಲೋಕವನೆಂದನಾಹರನು || ೮೩
ಸುರರು ವರುಷಸಹಸ್ರ ಕಾದಲು |
ಹಱಿವುದಾತನ ಕವಚ ತಱಿದನ |
ಶಿರವು ಸಾಸಿರ ಶಕಲವಾಗಿಯೆ ಲಯವನೈದುವುದು ||
ಧರೆಯೊಳಿನ್ನಾರಿವನೊಡನೆ ಸಂ |
ಗರಕೆ ನಿಲುವವರು ಸುರನರರುರ |
ಗರೊಳು ಕಾಣೆನೆನುತ್ತ ನುಡಿದನು ದಾನವಧ್ವಂಸಿ || ೮೪

ಭೀಕರದ ವರವಿತ್ತು ಜಗವನು |
ಕಾಕುಮಾಡುವಿರೀಖಳನ ಮುಂ |
ದೋಕರಿಸದಿದಿರಪ್ಪ ಸುಭಟರ ಕಾಣೆವೆಂದೆನಲು ||
ಆಕಸದ ಗಂಗೆಯನು ಪೊತ್ತ ಪಿ |
ನಾಕಿಯೆಂದನು ಲೋಕ ನಗುವಂ |
ತೇಕೆ ನುಡಿವಿರಿ ನಿಮಗೆ ದೊಡ್ಡಿತೆ ಎಂದ ಹರಿಯೊಡನೆ || ೭೫

ಇದು ನಿಮಗೆ ಬಲುಸದರವಾಯಿತೆ |
ತ್ರಿದಶವರುಷಸಹಸ್ರಬೞಿಕಂ |
ತದುವೆಯಲ್ಲದೆ ನಿದ್ರೆಯಾಹಾರಗಳ ತೊಱೆದನಿಶ ||
ಮದಮುಖನೊಳಿದಿರಾಗಿ ಕಾದುವ |
ಚದುರನನು ತಾ ಕಾಣೆ ಹೇೞೆಲೆ |
ಮದನರಿಪು ನೀನೆಂದು ಬೆಸಗೊಂಡನು ಪುರಾಂತಕನ || ೭೬

ಅಹುದು ನೀವೀಗೆಂದ ಯೋಚನೆ |
ಮಹಿಯ ಜನರಿಗೆ ಸಹಜ ನೀವಿವ |
ನಹವ ಮುಱಿಯಲು ನಿಮ್ಮ ಮಾನಕೆ ನಿಮಿಷ ತಾನಿಲ್ಲ ||
ಕುಹಕಿಯನು ಸಂಹರಿಸಿ ಲೋಕದ |
ಬಹಳಜೀವರ ಸಲಹಿ ನಿಮ್ಮಯ |
ವಿಹಿತಗುಣವನು ಮೆಱೆಯಬೇಹುದು ಎಂದನಗಜೇಶ || ೭೭

ಆದೊಡಿದಕೊಂದನುವ ಪೇೞಿಲು |
ಕಾದುವೆನು ಖಳನೊಡನೆ ಯೆನಲಾ |
ಮಾಧವಗೆ ಮದನಾರಿಯೆಂದನು ನಿಮ್ಮ ಮಹಿಮೆಗಳ ||
ಮೇದಿನಿಯೊಳಾರಱಿವರೆಮ್ಮನು |
ಕಾದಲನುವನು ಕೇಳೆ ಹೇೞ್ವೆ |
ವಾದರಿಪುದೆನೆ, ನಗುತ ಹರಿಯೆನಗಱುಹಬೇಕೆಂದ || ೭೮

ಆದಡದಕೊಂದನುವ ಕೇಳ್ ಮಧು |
ಸೂದನನೆ ನೀನೆರಡು ರೂಹ ವಿ |
ನೋದದಿಂದಲೆ ತಾಳಿಯೊಂದಱೊಳವನೊಡನೆ ರಣದಿ ||
ಕಾದುವುದು ಮತ್ತೊಂದು ರೂಹಲಿ |
ಸಾದರದೊಳೆಮ್ಮನು ಭಜಿಸಿದ |
ಡಾದರದೊಳಿತ್ತಪೆವು ಸತ್ತ್ವವನಸುವನಾಕ್ಷಣದಿ || ೭೯

ಈತೆಱದೊಳವನೊಡನೆ ಘನಸ |
ತ್ವಾತಿಶಯದಲಿ ದಿವ್ಯಸಾಸಿರ |
ಖ್ಯಾತವೂದಬ್ದಂಗಳಲಿ ಸಂಗರವ ನೆಱೆ ಮಾಡೆ ||
ಪಾತಕನ ಬಹುಕವಚಗಳು ನಿ |
ರ್ಧೂತಮಪ್ಪುವು ಬೞಿಕಲಾಕ್ಷಣ |
ಕಾತನುರುತರತನುಸಹಸ್ರದ ಶಕಲವಹುದೆಂದ || ೯೦
ಹೋಗಲಾತನು ನಮ್ರನರ್ಚಿಪ |
ಯೋಗಪುರುಷನ ನುತಿಗೆ ಮೆಚ್ಚಿದು |
ಬೇಗದಿಂದಲಿ ಕೊಡುವೆವೞಿದನು ಜೀವಿಸುವ ವರವ ||
ಜಾಗು ಶಂಕರಯೆನುತಲೆದ್ದವ |
ನಾಗ ತಪಸಿಗೆ ನಿಲಲು ಮುನ್ನ ಸು |
ರಾಗದಿಂ ಭಜಿಸಿದನು ಕಳನೊಡನೈದುವನು ರಣಕೆ || ೯೧
ಬೞಿಕಲೞಿದವರುಗಳ ರೂಪವ |
ನೆಲೆಗೊಳಿಪೆನೀತೆಱದಿ ಮಾಡುವು |
ದೊಲಿದು ಡಂಭಾಸುರನು ಬಹುವಿಧದಿಂದಲಾರ್ಜಿಸಿದ ||
ಬಲುಕವಚ ಸಾಸಿರವ ತೞೆಯಿಂ |
ದೊಳಗನೆಲ್ಲವ ವಿಸ್ತರಿಸಿ ಹರ |
ಜಳಜನಾಭಗೆ ಬೋಧಿಸಿದನೆಲೆ ಖಚರ ಕೇಳೆಂದ || ೯೨
ಶಂಭುವಿನ ಮಾತುಗಳ ಕೇಳು |
ತ್ತಂಬುಜಾಕ್ಷನು ಬೞಿಕ ನುಡಿದ ತ್ರಿ |
ಯಂಬಕನೆ ಕೇಳ್ ನನಗೆ ಶತಸಾಸಿರದ ಮೃತಿಜನನ ||
ಸಂಭವಿಸೆ ಕೈಕೊಳಲು ಬೇಕೀ |
ಕುಂಭಿನಿಯ ಜನರೆಲ್ಲ ನಗುವಂ |
ತಂಬಿಕಾಪತಿಯೆನುತ ಕೇಳ್ದನು ನೋಡಿ ಸುರರುಗಳ || ೯೩
ಆದೊಡಾಗಲಿ ನೀವು ದಯದಿಂ |
ದಾದರಿಸಿ ಮನ್ನಿಸಿದ ವರದಿಂ |
ದಾದ ಬಹಳಾಯಾಸ ನಿಮ್ಮಯ ಸೇವೆಯೆಂದೆನುತ ||
ಈಧರಿತ್ರಿಯೊಳೊಲಿದು ಮಾಡುವೆ |
ನಾದರದಿ ಮಿಗೆ ನೋಡಿ ತಾನಿಂ |
ತೈದುವರೆ ಸಂಗರವ ಸಕಲಸುರೌಘಸಹಿತೀಗ || ೯೪

ಎಂಬ ಹರಿವಚನವನು ಕೇಳಿ ತ್ರಿ |
ಯಂಬಕನು ನಿಮ್ಮಿಂದ ಸೇವೆಯು |
ಕೊಂಬ ಪಾಟಿಯು ಮಹಿಮರಾರೀಲೋಕ ಮೂಜಜಲಿ ||
ನಂಬಿದವರನು ಸಲಹಲೋಸುಗ |
ಕುಂಭಿನಿಯೊಳಮಿತಾವತಾರದಿ |
ಸಂಭ್ರಮದಿ ನೀವೆಯ್ದಿ ನಟಿಸುವಿರೆಂದನಗಜೇಶ || ೯೫

ತಾವು ಜಗದಲಿ ಶರಣಜನರನು |
ಓವಿ ಸಲಹುತ್ತಿರಲು ನಿಮ್ಮಯ |
ಪಾವನಾಂಘ್ರಿಯ ಕರುಣದಲಿ ದುರ್ಜನರು ಬಹುವರವ ||
ಈವಸುಧೆಯೊಳ್ ಪಡೆದು ಸಜ್ಜನ |
ದೇವದಾನವ ಮನುಜರುರಗರು |
ಜೀವಿಗಳ ನೆರೆ ಕೊಂದು ಬಾಧಿಸರೀಜಗತ್ರಯುವ || ೯೬

ಮನುಮಥಾರಿಯು ನುಡಿದ ನಿಮ್ಮೊಲು |
ಮನದೊಳೊಂದನು ಬಾಲ್ಯದಲಿ ನೆನೆ |
ವನುವದೊಂದಾವರಿಯು ಪೆಸ್ತ್ರನು ಭಜಿಸಲವರುಗಳ ||
ಘನದಿ ಬಯಸಿದ ವರವನೀವೆನು |
ಧನುಜವೈರಿಯೆಯೆನಲು, ನಗುವೆ |
ವಿನಯದಿಂದಲಿ ನುಡಿದ ನಾವ ಕಪಟಿಗಳೆ ಹೇಳಿತೆಂದ || ೯೭

ಕಪಟನಾಟಕಸೂತ್ರಧಾರಕ |
ನಪರಿಮಿತಮಹಿಮಾತಿಶಯ ಬಹು |
ನಿಪುಣ ಮಿಗೆ ನೀಸಕಲಾವನೀತಳದಾಗುಹೋಗುಗಳ ||
ಉಪಮೆಯೊಳಗಾರೈದು ಸಲಹುವೆ |
ಚಪಳತನದಲಿ ನಿನ್ನ ಪೋಲುವ |
ವಿಪುಳಮತಿಗಳದಾರು ಲೋಕದೊಳೆಂದನಾಶಿವನು || ೯೮

ಎನಲು ನಗುತ ರಮೇಶನಿದಕೊಂ |
ದನುಪ ಕಾಣಲು ಬೇಕೆನುತ ನಿಜ |
ತನುವನೆರಡಂಗದಲಿ ಧರಿಸಿದನಾಗ ಡಂಭನೊಳು ||
ಘನತರಾಜಿಯುನೊಂದು ರೂಪಿನ |
ಲನುವಱಿತು ಮಾಡಲ್ಕೆ ನಿಂದೆರ |
ಡನೆಯ ರೂಪದಿ ತಪಕೆ ಕುಳಿತನು ಹರನ ಸನಿಯದಲಿ || ೯೯

ಜನಪ ಜನಮೇಜಯನು ಕೇಳಿದ |
ಮುನಿವರೋತ್ತಮ ವಿಷ್ಣುವಾಕ್ಷಣ |
ತನುಗಳೆರಡನದೆಂತು ಧರಿಸಿದನದಱ ವಿಸ್ಮಯವ ||
ಮನವರಲಲಱುಹುವುದು ಕೇಳುವೆ |
ಮನುಮಥನ ಪಿತ ಬಱಿಕ ತಾನಾ |
ವನುವಿನಲಿ ಮೆಱೆದಿರ್ದನದ ವಿಸ್ತರಿಸಿ ಹೇಱೆಂದ || ೧೦೦

ವೋದದಿಂ ಕೇಳ್ ನೃಪತಿ ಹರಿಯ ವಿ |
ನೋದಮಹಿಮೆಯ ತಿಳಿಯಲಾಬ್ರ |
ಹ್ಮಾದಿಗಳಿಗಸದಳವು ಪೇಳುವಡಾರಿಗಳವಹುದು ||
ಆದಡಾಗಲಿ ಕೇಳ್ದಪೆನು ನಾ |
ನಾದಯಾಂಬುಧಿ ಭವನು ಪದ್ಮಜ |
ರಾದಿವೌಕಸರರಿದೆನಲು ಹರಿ ಮೆಱೆದನೆರಡೆನಿಸಿ || ೧೦೧

ತಳತಳಿಪ ನಗೆಮೊಗದ, ಕಂಗಳ |
ಬೆಳಗು ರವಿಶಶಿಗಳನು ನಾಚಿಸ |
ಲೊಳುಭುಜದ್ವಯ ಬಾಹುಯುಗ ಜಾನುಪ್ರದೇಶದಲಿ ||
ಇಱಿದಿರಲು, ವಿಸ್ತೀರ್ಣವಕ್ಷದಿ |
ಹೊಳೆವ ಪದಕದ, ಸಿಂಹಮಧ್ಯದ |
ಗಳದ ನಾಸದ(?)ಲೊಂದುಪಾದದ ಚೆಲುವು ಮೆಱೆದಿಹುದು || ೧೦೨

ಮೇರುಸಮಕೋದಂಡ ಶರಗಳ |
ಪಾರವಿರುತಿರುವಮಲಮೂಡಿಗೆ |
ಚಾರುತರದಿಂದೆಸೆದು ಬೆನ್ನಿನಲೊಳೆದು ಮೆಱೆದಿರಲು ||
ಭೂರಿ ಖಡ್ಗ ಕಠಾರಿ ಕಕ್ಕಡೆ |
ಭಾರಿಗದೆ ಮೊದಲಾದ ಶಸ್ತ್ರದ |
ಸಾರಣೆಯ ಸನ್ನಾಹದೊಂದವತಾರ ಕಾಣಿಸಿತು || ೧೦೩

ಸುರರ ಕಾಹಿಂಗರಸನಾಗಿಹ, |
ದುರುಳರಾಕ್ಷಸಶಿಕ್ಷೆಗತಿಭೀ |
ಕರತರದ ಯಮರಾಜನಾಗಿಹನಣಕ ಸೂತರ್ಗೆ ||
ಅರಿಯದಾಗಿಹ, ಶರಣಜನರಿಗೆ |
ಕರುಣಿಯಾಗಿಹ, ನಂಬಿದವರಿಗೆ |
ಪುರುಷನಾಗಿಹನನವರತ ತೆಱನಱಿತು ಮುರವೈರಿ || ೧೦೪

ಒಂದು ರೂಪವಿದೀಗ ಕೇಳೈ |
ಕಂದ ಜನಮೇಜಯನೆ ನೀ ಮ |
ತ್ತೊಂದು ರೂಪವು ನೋಡೆ ಮನ್ಮಥಕೋಟಿಸೌಂದರದಿ ||
ಮಂದರಾಯತಗಾತ್ರ ಮುನಿಜನ |
ವೃಂದಹೃದಯಪವಿತ್ರನಾಗೋ |
ವಿಂದಸನ್ನಿಭರೂಪ ಮೆಱೆದಿಹುದತಿವಿಚಿತ್ರದಲಿ || ೧೦೫

ಫಾಲದೇಶದ ಭಸಿತ ಕರದಲಿ |
ಮಾಲೆ ರುದ್ರಾಕ್ಷಿಗಳು ದೇಹದ |
ಧೂಳಿ ಶುದ್ಧಸ್ಫಟಿಕಸನ್ನಿಭದಿಂದಲೊಪ್ಪಿರುವ ||
ಲೋಲಲೋಚನಯುಗಳದಿಂದ ವಿ |
ಶಾಲಬಾಹುಗಳಿಂದ ಶ್ರೀಗೋ |
ಪಾಲನೆಸೆದನು ಸಕಲತಾಪಸಮೌಳಿಯಂದದಲಿ || ೧೦೬

ಹಣೆಯ ಕಣ್ಣೊಂದಿರಲು ಸಾಕ್ಷಾತ್ |
ತ್ರಿಣಯನೆಂಬರು ಶಿರಚತುಷ್ಟಯ |
ವೆಣಿಕೆಗಿರೆ ಪ್ರತ್ಯಕ್ಷವಾಗಿಯೆ ಬ್ರಹ್ಮನೆಂದೆನುತ ||
ಪ್ರಣುತವರಭುಜನಾಲ್ಕು ಮೆಱೆದಿರೆ |
ಫಣಿಶಯನ ತಾನೆಂದು ಪೊಗಱುವ |
ರಣಕವಲ್ಲೀಮಾತು ಜನಮೇಜಯಮಹೀಪಾಲ || ೧೦೭

ಕಾಣುತಾಕ್ಷಣ ಸಕಲದೇವ |
ಶ್ರೇಣಿ ಹರಕಮಲಜರು ದೇಹವ |
ಕ್ಷೋಣಿಗೊಱಗಿಸಿ ನುತಿಯ ಮಾಡಿದರಧಿಕ ವಿಧಿಗಳಲಿ ||
ಪ್ರಾಣಿಗಳ ರಕ್ಷಿಪುದು ನೀವತಿ |
ತ್ರಾಣಿಗಳು ತ್ರೈಜಗಕೆ ನಾವ್ ನಿ |
ತ್ರಾಣಿಗಳು ತಮ್ಮವನು ರಕ್ಷಿಸಬೇಕು ತಾವೆನುತ || ೧೦೮

ಜಯಜಯೆಂದುದು ಸಕಲಮುನಿಗಳು |
ಜಯಜಯೆಂದುದು ಸಕಲದಿವಿಜರು |
ಜಯಜಯೆಂದುದು ಬ್ರಹ್ಮರುದ್ರಾದಿಗಳು ಕೈಸೆಗಹಿ ||
ಭಯನಿವಾರಣಮಪ್ಪ ತೆಱದಲಿ |
ಜಯಿಸಿ ಡಂಭಾಸುರನ ತಮ್ಮನು |
ನಯದಿ ರಕ್ಷಿಪುದೆಂದು ನುತಿಮಾಡಿದರು ಶ್ರೀಪತಿಯ || ೧೦೯

ಕೇಳುತೀಸ್ತುತಿಗಳನು ಲಕ್ಷ್ಮೀ |
ಲೋಲನಮರರ ಕರೆದು ಡಂಭನ |
ಕಾಳೆಗಕೆ ಕರೆತನ್ನಿ ನೀವೆಂದಟ್ಟಿದನು ಶರವ ||
ಮೇಳವಿಸುತತಿಪುರುಷದಲಿ ಸ |
ಲ್ಲೀಲೆಯಲಿ ರೂಹೊಂದ ಹರನನು |
ಬಾಳ ಬಗೆಯಲಿ ಭಜಿಸಿ ತಪಸಿಗೆ ಕುಳಿತನೀಜಿಯಲಿ || ೧೧೦
ನಾಕಪತಿ ನಿಜದಿಂದ ನಿರ್ಜರ |
ಮೂಕೆಯನುವೊಡಗೊಂಡು ಭುಜಬಲ |
ದಾಕೆವಾಳಿಕೆಯಿಂದ ತಿರುವೇಂಕಟನು ತಾನಾದ ||
ಲೋಕನಾಯಕನಾದ ವಿಷ್ಣುವ |
ನೇಕಕೃಪೆಯಲಿ ಕಾವನೆಂಬ ವಿ |
ವೇಕ ಮನದಲಿ ಚಲಿಸಲೈದಿದ ಖಳನ ಪಟ್ಟಣಕೆ || ೧೧೧

ಅಂತು ಸಂಧಿ ೯ ಕ್ಕಂ ಪದ್ಯ ೪೩೭ ಕ್ಕಂ ಮಂಗಳಂ

## ಹತ್ತನೆಯ ಸಂಧಿ

**ಸೂಚನೆ** || ಸಂಭ್ರಮದಿ ನರಹರಿಯು ರಣದಲಿ |
ಡಂಭದೈತ್ಯನ ಹಳಚಿ ಕವಚವ |
ಕುಂಭಿನಿಗೆ ಕೆಡಹಿದನು ಸಲಹಿದ ಸಕಲಲೋಕಗಳ ||

ಕೇಳಿದೈ ಶಶಿವಂಶದರಸರ |
ಮೌಳಿಮಾಣಿಕ ಸಕಲಭೂಸುರ |
ಜಾಲದಾಶೀರ್ವಾದಪಂಜರದರಗಿಣಿಯದೆನಿಪ ||
ಶ್ರೀಲತಾಂಗಿಯ ರಮಣನಮಲಪ |
ಶಾಲಪಾದಸರೋಜಜಂಭರ |
ಶೀಲ ಜನಮೇಜಯನೆ ಮುಂದಣ ಕಥೆಯ ಲಾಲಿಪುದು || ೧
ಹರಿಯ ನೇಮವ ಪಡೆದು ಸುರಪತಿ |
ಕರಿರಥಾಶ್ವಪದಾತಿಯಿಂ ಗಂ |
ಧರುವ ಗರುಡರು ತ್ರೈತ್ರಿಂಶತ್ಕೋಟಿದೇವತತಿ ||
ಮೊರೆವ ರಣಭೇರಿಗಳ ಕಹಳೆಯ |
ಮುರಜಜರ್ಝರಕಾಯಗಿಡಿಬಿಡಿ |
ಭರದಿ ಮದ್ದಳೆ ಶಂಖ ಭೋರೆನಲೈದಿದನು ಕಣನ || ೨

ಕರಿಗೆ ಶತಸಾಹಸ್ರವಿಂದ್ರಗೆ |
ಸರಳ ಸಾಹಸ್ರವನು ಉಱುಬುವ |
ಗರುಡರಿಗೆ ಐದು ಸಾವಿರ ಗಂಧರ್ವಕರು ಸಹಿತ ||
ಕಱುಬುತಿಹ ಕಿನ್ನರರು ಕಿಂಪುರು |
ಷರಿಗೆ ಸಿದ್ಧರು ಸಾಧ್ಯಮೊದಲಾ |
ದರಿಗೆ ಹಾಯ್ಕಿದನೆರಡೆರಡು ಸಾವಿರ ಕಳಂಬಗಳ || ೧೩
ನಿಲ್ಲದಾಬಲವೋಡಿ ದಾನವ |
ದಲ್ಲಣನ ಮಱೆಯೊಗಲು ನೋಡಿದ |
ನೆಲ್ಲರವಧ್ಯಿಯನವರ ಮೃತಿಯನು; ಖಳನು ದುರ್ಜನನು ||
ಅಲ್ಲದಿರ್ದೊಡೆ ಸಕಲಸುರಕುಲ |
ಮೆಲ್ಲ ದೂಱನು ತಹದೆ; ತಾವಿ |
ನ್ನಿಲ್ಲಿ ಕಾಣಿಸಿಕೊಳಲುಬೇಕೆನುತಸುರಗಿದಿರಾದ || ೧೪
ನಿಲ್ಲು ದೈತ್ಯಾಧಮರೊಳಗ್ಗಳ |
ಖುಲ್ಲ ಸಮರದೊಳೋಡಿದವರನು |
ಬಲ್ಲವನು ಬೆಂಬಿಡದೆ ತಱುಬಿದಡದು ವಿಚಿತ್ರವಲಾ! ||
ಸಲ್ಲದೀಗುಣ ನಿನಗೆ ಸಮ್ಮುಖ |
ದಲ್ಲಿ ನಿಂದವರೊಡನೆ ಕಾದಲು |
ಬಲ್ಲವಿಕೆ ವೀರನಿಗೆ ತಮ್ಮೊಳು ಸೆಣಸು ಬಾ ಎಂದ || ೧೫
ಎನಲು ಡಂಭಾಸುರನು ನಿಂದನು |
ಘನಹರುಷಮುಖನಾಗಿಯನುವರ |
ಕೆನಗೆ ನೀನಿದಿರಾದೆ ತನ್ನಯ ಪುಣ್ಯ ಫಲಿಸಿತಲಾ ||
ಎನುತ ಖಳ ಕೋಪದಲಿ ಗರ್ಜಿಸಿ |
ಬಿನುಗನಿವನುಱೆ ತಡೆದನೆಂದತಿ |
ಮನಕತದೆ ನೋಡಿದನು ಮಾನವವೇಷದಚ್ಯುತನ || ೧೬
ರಾಕ್ಷಸಾಂತಕನಾಗಿ ತೋಱುವ |
ಸೂಕ್ಷ್ಮವಾಗಿಕ ರೂಪನೆಸಗುವ |
ನಾಕ್ಷಣದೊಳಾಗಸವ ಮುಟ್ಟುವ ನಿಜವ ತಾ ತಾಳ್ದು ||
ರಾಕ್ಷಸರೊಳಿವನೊಬ್ಬನೆನಿಸುವ |
ರೂಕ್ಷೆಯನು ಪುಟ್ಟಿಸುವನಸುರಗೆ |
ಶಿಕ್ಷೆರಕ್ಷೆಗೆ ಕರ್ತನೆನೆ ರಂಜಿಸುವ ನೋಱ್ಪರಿಗೆ || ೧೭

ಸಕಲಸುರರೊಳಗೊರ್ವನೆಂಬೊಲ್ |
ಸಕಲಶಸ್ತ್ರಾಸ್ತ್ರಗಳ ಪಿಡಿದುರು |
ಸಕಲಗುಣಸಂಪನ್ನ ಸಾರಿದ ಸಕಲಸುರರುಲಿಯೆ ||
ಮಕರಕುಂಡಲಧರನು ದೈತ್ಯ |
ಪ್ರಕರ ಕಂಪಿಸೆ ತಿರುವನೇಱಿಸಿ |
ಸಕಲಜಗವಲ್ಲಾಡೆ ನುಡಿಸಿದನಾಶರಾಸನವ || ೧೮

ಘುಮ್ಮೆಡುವ ಬಿಲುದನಿಗೆ ಲೋಕವು |
ದಿಮ್ಮುಹಿಡಿವಂದದಲಿ ಜಱಿದುದು |
ಝುಮ್ಮೆನುತಲಾಕಾಶ ಕೂಗಿತು ದೆಸೆಗಳೞಚಿದುವು ||
ಹಮ್ಮುಯಿಸಿ ಯಸುರಾಳಿ ಮೂರ್ಛೆಯ |
ನೆಮ್ಮಿದುದು ಸುರನಿಕರ ಮನದೊಳ |
ಗುಮ್ಮುಹವ ತಾಳಿದುದು ಶಾರ್ಙ್ಗಧ್ವನಿಗೆ ಶ್ರೀಹರಿಯ || ೧೯

ಸಾಮಗಾನಧ್ವನಿಯೊಳಿರ್ದುದು |
ಭೀಮವಿಕ್ರಮಶಾರ್ಙ್ಗರವ ಮಿಗೆ |
ರಾಮಣೀಯಕರಾಗರಸದಂತಿರ್ದುದಮರರಿಗೆ ||
ಸೌಮನಸ್ಸಿನಲಭಯನಿಸ್ವನ |
ವಾಮಹಾಭಕ್ತರಿಗೆ ಬೞಿಕಲಿ |
ತಾಮಸವು ಬಲುಹಾಯ್ತು ಖಳರಿಗೆ ಸಿಡಿಲು ಹೊಡೆದಂತೆ || ೨೦

ಸಿಡಿಲ ರವವನು ಕೇಳುತಾಕ್ಷಣ |
ದಡವಿಯೊಳಗಣ ಸಿಂಹ ಗರ್ಜಿಸಿ |
ಕಡುಹಿನಿಂದುಬ್ಬರದೊಳೈತಹ ತೆಱದಿ ಖಳನುಲಿದು ||
ಕಡಿದು ಹಲುಗಳ ಬಹಳಕೋಪದಿ |
ಘುಡುಘುಡಿಸಿಯಾರ್ಭಟಿಸಿ ಕಂಗಳು |
ಕಿಡಿಯನುಗುೞಲು ನೋಡಿಯೌಡಗಿಯುತ್ತ ನಡೆತಂದ || ೨೧

ಕಂಗಳಲಿ ಕೆಂಗಿಡಿಯು ಮುಖದಲಿ |
ಯಿಂಗಲಗಳುದುರಿದುವು ದನುಜನ |
ಅಂಗದಲಿ ತೊಟ್ಟಿರ್ದ ವಜ್ರದ ಕವಚ ವೀಧಿಯಲಿ ||
ಕಂಗೆಡಿಸಿತಮರರನು ಬೞಿಕು |
ತ್ತುಂಗವಿಕ್ರಮ ಶ್ರೀಶನಿದಿರಲಿ |
ಸಂಗರಾಂಗಣಮಧ್ಯದಲಿ ನಿಂದಿರ್ದನಸುರೇಂದ್ರ || ೨೨

ಪ್ರಳಯಕಾಲದ ರುದ್ರಗಿಮ್ಮಡಿ |
ಪ್ರಳಯಕಾಲದ ಯಮನಿಗೈಮಡಿ |
ಪ್ರಳಯಕಾಲದ ಭೈರವಗೆ ಪಡಿಯಿಡಲು ನೂಱುಮಡಿ ||
ಪ್ರಳಯಕಾಲಾನಲಗೆ ನೂರ್ಮಡಿ |
ಪ್ರಳಯವಾಗಿಹ ಖಳನ ಪಡಿಯಿಡ |
ಉಳವದಾಗದು ಮುನ್ನಲುದಿಸಿಹ ಖಳರ ಗಡಣದಲಿ || ೨೩

ನೋಡಿದನು ಸುರರುಗಳ ಮರಳಿದು |
ನೋಡಿದನು ರಾಕ್ಷಸರ ಯಕ್ಷರ |
ನೋಡಿದನು ಕಿಂಪುರುಷಕಿನ್ನರಗಣವನುರಗರನು ||
ನೋಡಿದನು ಸಿದ್ಧರನು ಸಾಧ್ಯರ |
ನೋಡಿದನು ನರವೃಂದವನು ಖಳ |
ನೋಡಿದನು ದಶದಿಕ್ಕನಾವರಿಸಿಹ ಮಹಾಬಲವ || ೨೪

ಎತ್ತ ನೋಡಿದೊಡತ್ತ ಗಜಗಳ |
ಮೊತ್ತ ತುಂಬಿಹುವೆತ್ತ ನೋಡಿದೊ |
ಡತ್ತ ಹಯಕುಲವೆತ್ತ ನೋಡಿದಡತ್ತ ಮಣಿರಥವು ||
ಎತ್ತ ನೋಡಿದಡತ್ತ ಮನ ಹರಿ |
ವುತ್ತಲಿಡಿದಿಹ ಪಾದಚಾರಿಗ |
ಳೆತ್ತ ನೋಡಲು ಛತ್ರಚಾಮರವೆಸೆದುದಗಲದಲಿ || ೨೫

ನರರ ಮಯ ಸಕಲೋರ್ವಿಯಾಗಸ |
ಸುರರ ಮಯ ದಶದಿಕ್ಕು ಪಿಡಿದಿಹ |
ವರಪತಾಕ ಸುಛತ್ರ ಚಾಮರ ರಥದ ಟೆಕ್ಕೆಯದ ||
ಹರಿಮಯವು ಲೋಕಗಳು ಆವದಿರ |
ದುಱದ ಸಿಂಹಧ್ವಾನದಬ್ಬರ |
ಮೆಱೆಯಲೀಕ್ಷಿಸಿ ನುಡಿದನಸುರಾರಾತಿಯಿದಿರಿನಲಿ || ೨೬

ಆರು ನೀನೆಲೆ ಮನುಜ ನಿನ್ನನ |
ದಾರು ಪಡೆದವರವನಿಯಲಿ ನಿನ |
ಗಾರು ದಿಕ್ಕೀಭುವನದೊಳಗಿನ್ನಾರು ಕಾವವರು ||
ಮಾರಿಯಿದಿರಲಿ ನಿಂದ ಕುಱಿಯನ |
ದಾರುಯೆಱೆದೊಯ್ಯುವರು ಹೇೞಿ |
ನ್ನಾರ ಮಱೆಯನು ಹೊಗುವೆಯೆಂದನು ಡಂಭ ಶ್ರೀಹರಿಯ || ೨೭

ಆರು ಎಂದಱುಹುವೆನು ತನ್ನನು |
ವಾರಿಜಾಸನರುದ್ರರಱಿವರು |
ಸಾಱಬಲ್ಲರು ತಾನು ನಿಸ್ಪೃಹನೆಂದು ದಿಗಧಿಪರು ||
ಆರು ತಾಯ್ತಂದೆಗಳು ಇಲ್ಲದ |
ಧೀರನೆಂಬುದ ದಿಕ್ಕುದೆಸೆ ತನ |
ಗಾರು ಇಲ್ಲೆಂಬುದನು ಕಂಡಿಹುದಮರಸಂದೋಹ || ೨೮
ಕಾವರಾರೆನಗಿಲ್ಲ ನುಂಗಲು |
ಭಾವಿಸುತ ಬಂದಿರುವ ಮಾರಿಗೆ |
ಸಾವು ಸಮನಿಸೆ ಸಲಹಿಕೊಂಬವರಿಲ್ಲ ತನ್ನುವನು ||
ಕಾವಡೆಯು ಕೊಲುವಡೆಯು ಲೋಕದ |
ಜೀವ ವಿಷ್ಣುವದೊಬ್ಬನಲ್ಲದೆ |
ದೇವರಿಲ್ಲೆಲೆ ಖೂಳ ಖಳ ಎಂದವನು ಗರ್ಜಿಸಿದ || ೨೯
ಅಱಿವನೇ ದುರ್ಮಾರ್ಗ ರಕ್ಕಸ |
ಹಱಿಯ ವಚನವನಱಿವನೇ ಈ |
ಪಱಿಯ ಧ್ವನಿಪದವಾಗಿ ಮೂಡಲಿಸುವುದ ಮನದಲ್ಲಿ ||
ಅಱಿವನೇ ಸುರರೆಲ್ಲ ನೊಱೆಯಿಡ |
ಲರಿಯ ಬಂದಿಹ ಕವಚಗಳನೆಂ |
ದಱಿವನೇ ಮದಮುಖನು ಕೇಳೈ ಖಚರ ನೀನೆಂದ || ೩೦
ದಿಕ್ಕುದೆಸೆ ತನಗಿಲ್ಲವೇ ಬಱಿ |
ಕಕ್ಕಱಾಗಿಹ ತಂದೆತಾಯಿಗ |
ಳಕ್ಕಟಕ್ಕಟಯಿಳೆಯೊಳಿಲ್ಲವೆ ಸಲಹತಕ್ಕವರು ||
ಅಕ್ಕಜವದಾಗಿಹುದು ಯಿಾಪರಿ |
ಚಿಕ್ಕಮನುಜನು ತನ್ನ ಸಮರಕೆ |
ತಕ್ಕನಲ್ಲಿವನೆಂದು ಖಳನೆಚ್ಚನು ರಮಾಧವನ || ೩೧
ಎಚ್ಚ ಶರವನು ಕಡಿದು ಹರಿ ಮಿಗೆ |
ಮುಚ್ಚಿದನು ಸಾಹಸ್ರಕವಚವ |
ಚುಚ್ಚಿದನು ಬಾಣೌಘ ಕವಚವನೊಡೆಯಲಾಗದಿರೆ ||
ಮೆಚ್ಚಿದನು ಹರನಿತ್ತ ವರಗಳ |
ಗಚ್ಚ್ಯುತನು ಬಹುವಾಗಿ ಡಂಭನು |
ಹೊಚ್ಚಿಸಿದ ಹೊಱೆಯಂಬಲಂಬರ ತುಂಬಲಾಕ್ಷಣದಿ || ೩೨

ಸರಳ ಸವಱುವನಸುರರಿಪು ಬಳಿ |
ಸರಳನಾಖಳನಿಸುವ ನರಹರಿ |
ತಱಿವ ದಾನವನಿಸುವನಂಬರ ತುಂಬಲಂಬುಗಳ ||
ಮುರಿವನಚ್ಯುತನೊಡನೆ ಡಂಭನು |
ಸುರಿವ ಶರಗಳ ಬಳಿಕ ಕಡಿವನು |
ಸರಸಿಜಾಕ್ಷನು ಕೇಳು ಜನಮೇಜಯಮಹೀಪಾಲ || ೫೩

ಮತ್ತೆ ಸುರಿವನು ಸರಳಸಾರವ |
ಹತ್ತುಸಾಸಿರ ಲಕ್ಷಕೋಟಿಯ |
ತುತ್ತುಮುಱುಮಾಡಿದನು ಕಡಿದನು ತಱಿದನಸುರಾರಿ ||
ಹೊತ್ತಿಹೊಗುವಗ್ನಿಯವೊಲಸುರನು |
ಮತ್ತೆ ಮತ್ತೊತ್ತರಿಸಿ ಸುರಿದ ವಿ |
ಯತ್ತಳವು ಮೇದಿನಿಯು ದಿಕ್ಕುಗಳಱಿಯಗೊಡದಂತೆ || ೩೪

ಅವನ ಬಾಣವ ತಱಿದು ಶ್ರೀಹರಿ |
ಯವನ ಮುಸುಕಿದಡವನು ಖಂಡಿಸಿ |
ಕವಕವಿಸಿ ಖಳನೆಚ್ಚನವನರಿದವನಿದುವನಿಸಲು ||
ತೆವಱಿ ಸರಳನು ದನುಜನೆಚ್ಚನು |
ಭವವಿದೂರನನವನ ಸರಳನು |
ಕವಲುಗೋಲಲಿ ಮುರಿದು ಬಳಿಕೆಚ್ಚನು ಮದಾಂಧಕನ || ೩೫

ಇಸಲು ಸರಳನು ಸವಱಿ ಸಂಗಡ |
ಲೆಸೆವನಸುರಾಂತಕನು ಮುಗುಳವ |
ಕುಸುರಿದಱಿನಾಖಳನನೆಚ್ಚನು ಸಾಸಿರಾಂಬಕದಿ ||
ವಿಷಮವೀರನು ಮತ್ತೆ ಸರಳಿನ |
ವಸನವನು ಹೊದಿಸಿದನು ಬೇಗದ |
ಲಸುರಹರನಾಸರಳ ಖಂಡಿಸಿ ಖಳನ ಮುಗುಳೆಚ್ಚ || ೩೬

ಹರಿಯಯೆಸುಗೆಗೆ ಸುರರು ಹರುಷಿಸಿ |
ಶಿರವ ತೂಗುವರುಱುವ ಡಂಭಾ |
ಸುರನ ಸರಳಿಗೆ ಬೆರಳನೊಲೆವರು ಮೇಲೆ ರಾಕ್ಷಸರು ||
ಸಿರಿಯುರಸನಿಸುವೆಸುಗೆಗಾಮುನಿ |
ವರರು ಕೊಂಡಾಡುವರು ಕರ್ಬುರ |
ನರವರಿಸದಿಸುವೆಸುಗೆಗಚ್ಚರಿವಡುವರಾಖಳರು ||

ಚಿತ್ತ ಬಳೆದದ್ರಿಗಳ ತೆಱದಲಿ |
ಯಿತ್ತರದ ಕಡಿವಡೆದ ಬಾಣಗ |
ಳತ್ಯಧಿಕ ಗಿರಿಗಳೊಲು ಮೆಱೆದುವನೇಕ ನೋಳ್ಪರಿಗೆ ||
ಮತ್ತೆ ಕೇಳೈ ಗಯನೆ ಕಾಳೆಗ |
ತತ್ತುದವರಿಬ್ಬರಿಗೆ ಪೂರ್ವದ |
ವೊತ್ತ ದಾನವರೊಳಗೆಯಿಾಖಳಗೆಣೆಯದಾರೆಂದ || ೩೮

ಮುಚ್ಚಿದುವು ಕಡುಗಣೆಗಳಸುರನ |
ನಿಚ್ಚಟದ ಕವಚದಲಿ ಮುರಿದುವು |
ಪೊಚ್ಚಪೊಸಮುಸೆಯುಂಬ ಹೊದಿಸಿದರವನಿತಳವಡಗೆ ||
ಬಿಚ್ಚಿದನು ಶರಪಂಜರವ ಖಳ |
ನೆಚ್ಚು ಶರದಲಿ ಕೈಟಭಾರಿಯ |
ಹೊಚ್ಚ ಬೊಬ್ಬಿಱಿಯುತ್ತಲಿಂತೆಂದನು ಸರೋಷದಲಿ || ೩೯

ಖ್ಯಾತಪುರುಷನದಾದಡವನೊಳು |
ಖ್ಯಾತಿಯುಹ ಬಹುರಣವ ಮಾಡುವ |
ಪ್ರೀತಿಯುಂಟಾಗಿಹುದು ಆನಂದದಲಿ ತಾಗಿಹನು ||
ಭೂತಳದೆ ವಿಸ್ತರವ ಮಾಡುವ |
ನಾತನೇ ಸರ್ವಜ್ಞನೆಂಬರು |
ನೀತಿಪೌರುಷನಲ್ಲ ನಿನ್ನೊಳು ಸಮರವೇಕೆಂದ || ೪೦

ಖ್ಯಾತಿ ತಮಗೆಲ್ಲಿಯದು ನಿನ್ನೊಲು|
ಪಾತಕನೆ ತಾನೀಗ ಜನರೊಳು |
ಸೋಕು ನಡುವುವು ಅದಱಿಂದವೆ ಕೀರ್ತಿ ತಮಗಿಲ್ಲ ||
ಭೂತಲದಿ ನಿನ್ನೊಡಲ ಸಲಹಿಯೆ |
ಘಾತಿಸುವೆ ಸಜ್ಜನರನದಱಿಂ |
ನೀತಿಯುತನೀನಪ್ಪೆ ಖಳರೊಳಗೆಂದನಾಶೌರಿ || ೪೧

ಅಪ್ರಕಾಶದ ಮಹಿಮನಾಗಿಯೆ |
ಸುಪ್ರಸಿದ್ಧತೆಯಿಲ್ಲವೆಂದಿಗೆ |
ಈಪ್ರತಿಯ ದೇವಾಳಿಯಲಿ ನಿನ್ನೆಣಿಕೆಯನು ಕಾಣೆ ||
ಸರ್ಪಶಯನನು ಬ್ರಹ್ಮನಾಕಂ |
ದರ್ಪಮಥನೊಳಾಜಿಯನು ಬಲ |
ದರ್ಪದಿಂದಲಿ ಮಾಡಿದಡೆ ಸತ್ಕೀರ್ತಿ ಘಟಿಸುವುದು || ೪೨

ಅವರೊಳಗೆ ತಾನೊಬ್ಬನೆಂದೇ |
ದಿವಿಜರಿಪು ನಿಶ್ಚೈಸು ಮನದೊಳ |
ಗವನಿಪತಿಗಳೊಳೆಮ್ಮನೆಣಿಸದಿರಧಿಕಗರ್ವದಲಿ ||
ಭವಕಮಲಜಾಚ್ಯುತರ ಶೌರ್ಯದ |
ಹವಣೆನದಟನು ತೋಱುವೆವು ನೀ |
ನವಗಡಿಸಿ ಸಂಗರವ ಮಾಡೆಂದೆಚ್ಚನಸುರಾರಿ || ೪೩
ಕವಚರಕ್ಷೆಯೊಳಿಂದು ದೇಹ |
ಕ್ಕವಿರಳದ ಶರನಾಂಟವದಱಿಂ |
ದಿವಗೆ ಹರುವವನ ಕಾಣೆನೆಂತೆಂದಾಮಹಾತುಮನು ||
ದಿವಿಜರಿಪುವಿನ ನಖದ ಸಂದಿನೊ |
ಳವಗಡದ ಬಾಣಗಳನೇಱಿಸ |
ಲವನಿಗೊಱಗಿದ ಮೂರ್ಛೆಯಲಿಯರೆಜಾವ ಪರಿಯಂತ || ೪೪
ಒದೆದು ಕೊಂದನು ನಖದ ಸಂದಿಲಿ |
ಹುದುಗಿದಸ್ತ್ರಪರಂಪರೆಯ ಗಾ|
ಯದ ಮಹಾವೇದನೆಗೆ ಮಹಿಗೊಱಗಿದನು ಮೂರ್ಛೆಯಲ ||
ಗದಗದಿಸಿ ಕಂಗಳನು ಮುಚ್ಚಿದ |
ನೆದೆಯ ಹೊಯ್ಲಲಿ ತೊದಲುನುಡಿಯಿಂ |
ದದುಬುತಾಕಾರದಲಿ ಕೆಡೆದನು ಕುಲಗಿರಿಯ ತೆಱದಿ || ೪೫
ಬಿದ್ದ ತಾಣದೊಳವನ ಭಾರಕೆ |
ಹೊದ್ದಿತತಳಕೆ ಭೂಮಿ ಕೂಪದೊ |
ಳದ್ದುದ್ದೈಗಾವುದದ ಘಾತದೊಳಸುರನರೆಜಾವ||
ಒದ್ದುಕೊಂಡವನೆದ್ದು ಕಾಣುತ |
ಸಿದ್ಧಪುರುಷನನಧಿಕಖತಿಯಲಿ |
ತಿದ್ದಿತೀತನ ಲಿಖಿತವೆಂದನಲೆನುತ ಹಲುಮೊರೆದ || ೪೬
ಮತ್ತೆ ಚೇತರಿಸಸುರ ಸರಳನು |
ಕಿತ್ತುಮುದ್ದನು ಹಾಯ್ಕಿ ಸಂವರಿ |
ಸುತ್ತ ಧನುವನು ಕೊಂಡು ಬಾಣವ ಹೂಡಿ ತ್ವರಿತದಲಿ||
ತೆತ್ತಿಸಿದನಂಬುಗಳ ನಭ ದೆಸೆ |
ಯೆತ್ತಲವನಿಯದೆತ್ತಲೆಂಬೋಲ್ |
ಮುತ್ತಿದುವು ಶರಜಾಲ ಸಾಗರಶಯನನಂಗದಲಿ || ೪೭

ಬಾಣಗಳ ಬಱಿಕೈದು ಮಧುರಿಪು |
ಕೇಣದಲಿ ಕರ್ಬುರನನೆಸೆಯಲು |
ಕ್ಷೋಣಿಯಾಗಸ ದಿಕ್ಕು ನಭ ಪಾತಾಳ ಲೋಕಗಳ ||
ಹೂಣುವಂದದಿ ಸರಳು ಕವಿಯಲು |
ಕಾಣದಾಖಳ ಹರಿಯನಱಸಿದ |
ನೇಣಧರಧರಮುಖ್ಯ ಬ್ರಹ್ಮಾದಿಗಳು ಬೆಱಗಾಗೆ || ೪೮

ನೋಡಿದನು ವಿಸ್ಮಯದಿ ಬಱಿಕ |
ಲ್ಲಾಡಿದನು ಮಕುಟವನು ಶಿವಶಿವ ! |
ರೂಢಿಪುರುಷನದಾವನೋ ತಾನಱಿಯೆನೀವರೆಗೆ ||
ಈಡಿವಗೆ ಮುನ್ನಿಲ್ಲ ಜಗದಲಿ |
ಜೋಡಿ ಪರಮೇಶ್ವರನೆ ಅಲ್ಲದೆ |
ನಾಡ ಜನದೊಳಗಿವಗೆ ಸರಿಯಿಲ್ಲೆಂದನಾಡಂಭ || ೪೯

ಇಂತು ಬಲುಬಗೆಯಿಂದ ತಮ್ಮಯ |
ಪಂತ ಪೌರುಷ ಮೆಱೆಯೆ ಮೂದಲೆ |
ಹೊಂತತನ ಕಡುಜಾಣ ಜಾಗ್ರತೆ ಚಾಪದಗ್ಗಳಿಕೆ ||
ನಿಂತು ಕಾದುವ ಚಲವ ಸಕಲದಿ |
ಗಂತದರಸರು ಮೆಚ್ಚೆ ಖಳದನು |
ಜಾಂತಕರು ಕಾದಿದರು ಪಯಪಾಡಿನಲಿ ಸಮವಾಗಿ || ೫೦

ಮತ್ತೆ ಮಂತ್ರಾಸ್ತ್ರಂಗಳನು ಖಳ |
ನೆತ್ತಿ ಹಾಯ್ಕಿದನವಕೆ ನರಹರಿ |
ಯುತ್ತಮದ ಬಾಣಂಗಳನು ಪರಿಹರಿಸಲದ ನೋಡಿ ||
ಎತ್ತಣಿಂದವೆ ಬಂದನಿವನೆಂ |
ದತ್ಯಧಿಕರೋಷದಲಿ ಭೃಗು ತನ |
ಗಿತ್ತ ರಾಕ್ಷಸಬಾಣವನು ಹೂಡಿದನು ಧನುವಿನಲಿ || ೫೧

ಎಲವೊ ಮರ್ತ್ಯನೆ ಇದಕೊ ರಾಕ್ಷಸ |
ಸಲಲಿತೋಜ್ಜ್ವಲಬಾಣವಿದು ತಾ |
ನಳಿನಸಂಭವಶಂಕರರು ಸಕಲಾಮರೋರಗರು ||
ಉಱುಹಲರಿಯದು ಲೋಕ ಮೂಱನು |
ಘುಳಿಗೆಯರ್ಧಕೆ ನುಂಗಿ ತೇಗುವ |
ಬಲುಸರಳು ನೋಡೆಂದು ಹೂಡಿದನಂಬ ಧನುವಿನಲಿ || ೫೨

ಮಂತ್ರಪೂತದಲದನುಮಂತ್ರಿಸಿ |
ಮಂತ್ರದಧಿದೇವಿಯನು ಧ್ಯಾನಿಸಿ |
ಮಂತ್ರಮಾರ್ಗದಿ ರಾಕ್ಷಸಾಂಬಕವನು ಪ್ರಯೋಗಿಸಲು ||
ಅಂತ್ರಮಾರ್ಗದಲಸುರಬಲತಳ |
ತಂತ್ರವೆಲ್ಲವು ನೆರೆದು ಕಾಣಿಸಿ |
ತಂತ್ರವಾಹಕನಿದಿರಿನಲಿ ಕೇಳೆಂದನಾಮುನಿಪ || ೫೩

ಸ್ಮರಿಸಿದನು ಡಂಭಾಖ್ಯ ತಮ್ಮಯ |
ಹಿರಿಯರೆಲ್ಲರ ವಂಶಪಾರಂ |
ಪರೆಯಖಿಳದುರ್ಮಾರ್ಗರನು ಮಧುಕೈಟಭಾದಿಗಳ ||
ದುರುಳ ಸೋಮಕ ಭಸ್ಮದಾನವ |
ನುರುಹಿರಣ್ಯಕ ಹೇಮಕಶ್ಯಪ |
ನಿರುಳ ಹೆಸರಿನ ದಾನವರನುಚ್ಚರಿಸಿ ಹಾಯ್ಕಿದನು || ೫೪

ಒಂದು ಹೆಸರಿಗೆ ಕೋಟಿ ದೈತ್ಯರು |
ಬಂದು ರೌದ್ರಕರಾಳರೂಪವ |
ನೊಂದಿ ಯುದಿಸಿದರಖಿಳ ಶಸ್ತ್ರಾಸ್ತ್ರಗಳನುದ್ಧರಿಸಿ ||
ಸ್ಯಂದನೌಘ ಗಜಾಶ್ವ ಖಗ ಮೃಗ |
ವೃಂದಗಳ ತಾವೇಱಿಯತಿಭಯ |
ದಿಂದಲಮರರು ಹೆದಱಿ ಘರ್ಜಿಸುತೈದಿದರು ರಣಕೆ || ೫೫

ಕಡಿಯಿವನ ಹಿಡಿಯೆನುತ ರಾಕ್ಷಸ |
ಗಡಣ ಕತ್ತಿ ಕಠಾರಿ ಡೊಂಕಣಿ |
ಕಡುಗ ತೋಮರ ಭಿಂಡಿವಾಲ ಗದಾದಿ ಮುಸಲಗಳ ||
ಕೊಡಲಿ ಮೊದಲಾದಖಿಳ ಶಸ್ತ್ರವ |
ಪಿಡಿದು ಬತ್ತೀಸಾಯುಧಂಗಳ |
ಕಿಡಿಯನುಗುಳುತಲಾಗ ಕವಿದುದು ಕಮಲಲೋಚನನ || ೫೬

ಕೆಂಡಗಳನುಗುಳುತ್ತ ತಮತಮ |
ಗಂಡಿಸದೆ ಮನದಲ್ಲಿ ದಾನವ |
ದಿಂಡೆಯರು ಕೋಪದಲಿ ಬಹುಳಾರ್ಭಟಗಳನು ಮಾಡಿ ||
ಖಂಡಿಪೆವು ತಾವೆನುತ ಕತ್ತಿಯ |
ಹಿಂಡು ದಿಂಡಾಗಸುರಬಲದೋ |
ರ್ದಂಡಸಾಹಸ ಹರಿಯ ಮುತ್ತಿತು ರಣದೊಳಗಲದಲಿ || ೫೭

ನೋಡಿದನು ದೈತ್ಯಾರಿ ಶಿರವ |
ಅಲ್ಲಾಡಿದನು ರಕ್ಕಸನ ತಪದ ಸ |
ಗಾಢಸಿದ್ಧಿಯ ಶರದ ಮಹಿಮೆಯಸದೞ ವಿಸ್ಮಯದ ||
ಮಾಡಿದನು ಯೋಜನೆಯನಿದಕೆ ನಿ |
ರೂಢಿ ವೈಷ್ಣವಶಕ್ತಿಯಲ್ಲದೆ |
ಕೂಡದಿದಕೆಂದೆನುತ ಮೂಡಿಗೆಯಿಂದ ಒರೆಸೆೞೆದ || ೫೮

ನಡುಗಿತಬುಜಭವಾಂಡವಜಮೃಡ |
ರೊಡನೆ ಹಾಯ್ದರು ಕಂಡ ಕಡೆಗೆಡೆ |
ವಿಡದೆ ಬಹುಮೂರ್ಛೆಯಲಿ ಹಂವ್ಯೈಸಿದುದು ದೇವಗಣ ||
ಸಿಡಿದು ಬಿದ್ದುವು ತಾರೆ ಕುಲಗಿರಿ |
ನಡುಗೆ ದಿಕ್ತಟ ಕಮತರೆದೆಗಳು |
ವೊಡೆಯೆ ಹರಿ ಮೂಡಿಗೆಯ ಶಕ್ತಿಯ ಹೂಡಲಾಕ್ಷಣದಿ || ೫೯

ಗಾಳಿ ಬೀಸಲು ಪ್ರಳಯದಂದಿನ |
ದೂಳು ಮುಸುಕಲು ಲೋಕವೆಲ್ಲವು |
ಘೀಳಿರೆನಲಾಕಾಶ ಕೂಗಲು ಸೂರ್ಯ ಬೆಮೆಗೊಳಲು ||
ಕೇಳಿದೈ ಖಚರೇಶ ನರಹರಿ |
ಬಾಳ ಕೋಪದೊಳತುಳತೀಕ್ಷ್ಣಕ |
ರಾಳವೈಷ್ಣವಶಕ್ತಿಯನು ತೆಗೆದಿಟ್ಟು ಜೊಬ್ಬಿಱಿದ || ೬

ಹೊಗೆಹೊಗೆದು ಹೂಂಕರಿಸಿ ದಳ್ಳುರಿ |
ನೆಗೆದು ಕಿಡಿಗಳನುಗುೞಿ ಬಾಯನು |
ತೆಗೆದು ಬ್ರಹ್ಮಾಂಡವನು ನುಂಗುವ ತೆಱದಲಬ್ಬರಿಸಿ ||
ವೊಗೆವೊಗೆದು ಮುಕ್ಕಿದುದು ದೈತ್ಯರ |
ನಗಣಿತರನರೆನಿಮಿಷಮಾತ್ರದೊ |
ಳಗಜೆಯರಸನು ಬ್ರಹ್ಮನಮರಾದಿಗಳು ಭಳಿರೆನಲು || ೬೧

ಏನ ಹೇಳುವೆ ಖಚರ ಡಂಭನ |
ದಾನವಾಸ್ತ್ರದ ವಿಧಿಯನೆಂತೆನೆ |
ಭೂನಭೋಂತರ ತುಂಬಿರುವ ಬಹು ರಾಕ್ಷಸವ್ರಜದ ||
ಕಾನನವನಾಗಱಸಿ ಶಿಖಿಯನು |
ಮಾನವಲ್ಲದೆ ಬೇಯಿಸಲು ಮಿಗೆ |
ದಾನವರು ಬಯಲಾಗಲಸುರನು ಬೆದಱಿದಿಂತೆಂದ || ೬೨

ಆದಡೇನಾಸರಳು ಹೋದರೆ |
ತೀದುದೇ ತನ್ನ ಧಟು ನೋಡೆಂ |
ದಾದುರಾಗ್ರಹಿ ದಾನವಾಗ್ರಣಿ ಘೋರಮಾಯೆಗಳ ||
ಆದಿವೌಕಸರಳುಕೆ ರವಿಶಶಿ |
ಯಾದಿಯಾದ ನವಗ್ರಹಂಗಳು |
ಬೀದಿವರಿದಿರದೋಣೆ ಕಲ್ಪಿಸುತಾಗ ಬೊಬ್ಬಿರಿದ || ೬೫

ಕೋಟಿ ಸಿಡಿಲಾಗೆಱಗಿದನು ಶತ |
ಕೋಟಿ ಗಿರಿಯಾಗುರುಳಿದನು ದಶ |
ಕೋಟಿ ಹರಿಯಾಗಟ್ಟಿದನು ಬಹುಭೂತಭೇತಾಳ ||
ಕೋಟಿಕೋಟಿಗಳಾಗಿ ಹೊಡೆದಸು |
ಕೋಟಿ ಬ್ರಹ್ಮಾಂಡಗಳ ಧರಿಸಿದ |
ನಾಟಕದ ಹರಿಯುಳುಕಲೆಂದಾಡಂಭ ಕಪಟದಲಿ || ೬೬

ಕಾಳಸರ್ಪಗಳಾಗಿ ಚಟುಲಕ |
ರಾಳಭೇರುಂಡಗಳು ಸಿಂಗಗ |
[ಳಾಳಿ] ಮದಗಜಘಟೆಗಳಗಣಿತ[ವಾಗಿ] ಬಹುವ್ರಾತ ||
ಬಾಳ ತಗಱುಗಳಾಗಿ ವೃಶ್ಚಿಕ |
ಜಾಳ ಕಪಿವಿಂಡಾಗಿ ಪ್ರಳಯದ |
ಕಾಲದಗ್ನಿಯದಾಗಿಯುರೆಯಟ್ಟಿದನು ಚಿನ್ಮಯನ || ೬೭

ಕೊಂಬವೇ ಖಳಮಾಯವಮಿತಾ |
ಡಂಬರಗಳಾಮ್ನಾಯದೂರನೊ |
ಳಿಂಬುಗೊಂಡತಿಕೃತಕನೆಲ್ಲವನೆಚ್ಚು ಬಱಿಕೈದ ||
ಅಂಬುಜೋದ್ಭವನೆಣಿಸಿ ಕೊಂಡಿಹ |
ನಂಬರದ ಮಣಿ ಸಾಕ್ಷಿಯಾಗಿರ |
ಲಂಬುಜಾಕ್ಷನು ಹೋರ್ದ ದಿವ್ಯ ಸಹಸ್ರವರ್ಷಗಳ || ೬೮

ಒದಗಿದರು ಮಧುಕೈಟಭರೊಳಾ |
ಮದನಪಿತನೆಚ್ಚಾಡಿದಂದದಿ |
ಮದಮುಖ ಹಿರಣ್ಯಾಕನೊಳಾನರಸಿಂಹನಿದಿರಿಸಿದ ||
ವಿಧದಿನಂಧಾಸುರನೊಳಭವನು |
ತ್ರಿದಶವೈರಿಗಜಾಸುರನೊಳಾ |
ಸದುಹೃದಯನೀಶ್ವರನ ರಣರವುಕುಳಕೆ ಮಿಗಿಲಾಯ್ತು || ೬೯

ಡಂಭರಕ್ಕಸನೊಡನೆ ಕಾದಿದ |
ನಂಬುಜಾಕ್ಷನು ಪಲವರುಷವೇ |
ನೆಂಬೆನೆಲೆ ಖಚರೇಶ ಕೇಳು ವಿಚಿತ್ರದನುವರವ ||
ಶಂಬರಾರಿಯ ರತಿಯು? ಮೆಚ್ಚಿ ದಿ |
ಗಂಬರನು ಹಾರೈಸೆ ಸುರರು ವಿ |
ಜೃಂಭಿಸಲು ಪರಮೇಷ್ಠಿ ಹೊಗಳಲು ಹೋರಿದನು ಬಿಡದೆ || ೭೮
ವಜ್ರಶರವನು ಹೂಡಿ ಕೋಪದಿ |
ಗರ್ಜಿಸುತ ನಿಜಬಾಣದೊಡನಾ |
ನಿರ್ಜರಾರಿಯು ಕೊಟ್ಟ ಹಿಂ[illegible]ವಳಿಯ ಕವಚವನು ||
ದುರ್ಜನರು ಧೃತಿಗೆಡಲು ದೇಹವಿ |
ಸರ್ಜನೆಯ ಮಾಡೆಂದು ಹೇಳುತ |
ನಿರ್ಜರಾಧಿಪವಂದ್ಯನೆಚ್ಚನು ಲೋಕ ಕಂಪಿಸಲು || ೭೯
ಕೋಟಿಸೂರ್ಯದ್ಯುತಿಯನುಗುಳುತ |
ಮೀಟೆನಿಪ ವಜ್ರಾಸ್ತ್ರ ಬಂದುದು |
ನೋಟಕರ ಕಂಗಳನು ಮುಚ್ಚಿಸಿ ಬಹಳ ತೇಜದಲಿ ||
ತಾಟಕನ ಒಲುಕವಚವರಿದತಿ |
ಘಾಟದಲಿಯವನುರವ ಹೊಳ್ಳಿಸಿ |
ನಾಟಿದುದು ಭೂತಳದಿ ಧೂರ್ಜಟಿಯುಜರು ಸಂಭ್ರಮಿಸೆ || ೮೦
ಕಡಿದು ಬಿಸುಟನು ಖಳನ ಸಾಸಿರ |
ದೃಢಕವಚದೊಳಗೊಂದ ಉಳಿಕವೆ |
ಪೊಡವಿಗೊರಗಿತು ವಿಷ್ಣುರೂಪವು ಶಿರದ ಸಾಸಿರದ ||
ಕಡಿಗಳಾಕ್ಷಣವಿಳೆಗೆ ಬೀಳಲು |
ಕಡೆಯೆನುತ ಸಂತಸದಿ ರಾಕ್ಷಸ |
ರೊಡೆಯ ಡಂಭನು ಕೆದರಿದನು ಕಳಕಳದ ರಭಸದಲಿ || ೮೧
ಹರನ ವರದ ಕಟಾಕ್ಷದಿಂದಲಿ |
ದುರುಳದೈತ್ಯನುಪುರದ ಗಾಯವ |
ತರಹರಿಸಿ ತಾನುಳಿದನಲ್ಲದೆ ಕವಚಸಾಸಿರವು ||
ಇರುವನಕಲಾಯುಷ್ಯ ತೀರದು |
ಧುರದ ಬಲಿಕೆ ತೋರದದರಿಂ |
ಹರಿಶಿರದ ಹೋಲ್ಗಳನು ನೋಡುತ ಖಳನು ಹರುಷಿಸಿದ || ೮೨

ಕಂಡನಾಡಂಭಾಖ್ಯ ಮಡಿದಿಹ |
ಪುಂಡರೀಕಾಕ್ಷನನು ಜಱಿಕವೆ |
ಖಂಡಪರಶುವ ವರದ ಬಲುಮೆಯ ನೆನೆದ ಹರುಷದಲಿ ||
ಅಂಡಲೆದು ನಿರ್ಜರರ ತಲೆಗಳ |
ಚೆಂಡನಾಡದೆ ಬಿಟ್ಟನಾದಡೆ |
ಮಂಡಲದ ದಾನವರ ಕಾಲ್ಗಳ ಕೆಳಗೆ ನುಸುಳಿದವ || ೭೩

ಹಾಯೆನುತ ಬೊಬ್ಬಿಱಿದು ಕರ್ಬುರ |
ನಾಯಕನು ದಿವಿಜರ ನಿಕಾಯದ |
ಕಾಯಗಳ ಚರ್ಮಗಳನೆಲ್ಲವ ತೆಗೆಸಿ ತಂಬಟಕೆ ||
ಹಾಯಿಕಿಸೆ ಯುವರುಗಳ ಜಗದಲಿ |
ಕಾಯಲಾಪವರುಂಟೆ ದಿಂಡೆಯ |
ಬಾಯ ಬಡಿದನನೆಚ್ಚು ಕೆಣಕಿದರೆಂದು ಹಲುಮೊರೆದ || ೭೪

ಅವನ ತಲೆ ಸಾಹಸ್ರಶಕಲದೊ |
ಳವನಿಗೊಱಗಿಸಿ ಮತ್ತೆ ಭುಜಬಲ |
ದವಿರಳಕೆ ಸರಿಯಾಗಿ ತನ್ನೊಳು ಕಾದಲಾಪವರು ||
ದಿವಿಜ ದನುಜ ಭುಜಂಗ ನರರೊಳ |
ಗವಗಡಿಸಿ ನಿಲುವವರ ಕಾಣೆನು |
ಇವನ ತೂಕದ ಭಟರನೆನುತಾದನುಜ ಹರುಷಿಸಿದ || ೭೫

ಅನಿತಱೊಳು ಪರಮೇಶ ತನ್ನನು |
ಘನತರದ ವರತಪವ ಮಾಡುವ |
ವನಜಲೋಚನನಧಿಕಭಕ್ತಿಗೆ ಮೆಚ್ಚಿಯಱಿದಿರ್ದ ||
ವಿನುತರೂಪವ ಬದುಕಿಸಿದಡಾ |
ದನುಜವೈರಿಯು ತಪಕೆ ಕುಳಿತನು |
ಮನಸಿಜಾರಿಯು ಭಜಿಪ ರೂಪವು ಕದನಕೈದಿದುದು || ೭೬

ಕಳಕಳಿಸುತತ್ಯಧಿಕಕೋಪದಿ |
ಖಳನನಱಸುತ ನಳಿನಲೋಚನ |
ಪೆಳಪೆಳನೆಯಾರ್ಭಟದಿ ಪ್ರಳಯದ ಸಿಡಿಲ ಮಿಗಿಲಿಸುತ ||
ಹೊಳೆವ ಕುಂಡಲದಿವ್ಯಭೂಷಾ |
ವಳಿಯ ದೀಧಿತಿಯಿಂದ ನಟಿಸುತ |
ಕಳನ ಮಧ್ಯದಿ ನಿಂದು ಕರೆದನು ಡಂಭನನು ರಣಕೆ || ೭೭

ಎಲವೊ ದೈತ್ಯಾಧಮನೆ ನಿನ್ನಯ |
ತಲೆಯ ತಱಿಯಲು ವೀರಕಂಕಣ |
ವಳವಡಿಸಿ ಬಂದಿರ್ಪ ಗರ್ವದಿ ನೀನು ಗಳಹಿದೆಲಾ ||
ಅಱಿದು ಹೋದನು ವೈರಿಯೆಂದೇ |
ತಿಳಿದು ಸುರನನು ವಿಕಳತನದಲಿ|
ಸೆಱೆವೆ ಚರ್ಮವನೆಂಬ ಮಾತನು ಮತ್ತೆ ನುಡಿಯೆಂದ || ೭೮
ಎನಲು ಮಿಗೆ ಸಾಹಸ್ರಕವಚಿಯು |
ಮನುಮಥನಪಿತನೆಂದು ತಿಳಿಯದೆ |
ಮನುಜಮಾತ್ರದ ಸುಭಟನೆಂಗೇ ತಿಳಿದು ಗರ್ವದಲಿ ||
ಬಿನುಗುಸಾಹಸಿ ನೀನು ನಿನ್ನನು|
ಅನುವರಕೆ ಬಲಿಗೊಟ್ಟು ಬಂದಿರು |
ವನಿಮಿಷರ ಸಂಹರಿಪೆನೆನುತವೆ ಧನುವನೊದರಿಸಿದ || ೭೯
ದನುಜರಿಪುವೆಂಬುದನು ತಿಳಿವನೆ |
ಮನುಜವೇಷದ ಹರಿಯ ಡಂಭನು |
ಘನತರದ ಮತ್ತೊಂದು ಕವಚವ ತೊಟ್ಟು ರೋಷದಲಿ ||
ತನಗೆಯಿದಿರಾರವನಿತಳದೊಳ |
ಗೆನುತ ಬಾಣಾಸನವ ಜಡಿಯು |
ತ್ತನುನಯದಿ ಸಂವರಿಸಿ ನಿಂದನು ಮತ್ತೆ ಕಾಳೆಗಕೆ || ೮೦
ಸೃಷ್ಟಿಯುದಯಕೆ ಮುನ್ನ ಹರಿ ತಾ|
ದುಷ್ಟಮಧುಕೈಟಭರೊಳಾಂತೊಲು |
ಭ್ರಷ್ಟಹಿರಣ್ಯಕಶಿಪುವ ಸೀಱಲು ನಿಂದ ನರಹರಿಯ ||
ಹೃಷ್ಟರೂಪವಿದೆನಲು ಡಂಬನೂ |
ಳಷ್ಟಮೂರ್ತಿಯಜಾದಿಗಳ ಕ |
ಣ್ಗಿಷ್ಟಮಾಗುವ ತೆಱದಿ ನಿಂದನು ದಾನವಧ್ವಂಸಿ || ೮೧
ಜಯಜಯೆಂದುದು ಸಕಲಮುನಿಗಳು |
ಜಯಜಯೆಂದುದು ನಿಖಿಳವಿಬುಧರು |
ಜಯಜಯೆಂದುದು ಗರುಡಗಂಧರ್ವಾಳಿ ಜಯ ಎನುತ ||
ಭಯಭರಿತಭಕ್ತಿಯಲಿ ಬ್ರಹ್ಮನು |
ಜಯ ಎನುತ ನರಹರಿಗೆ ಡಂಭನ |
ಜಯಿಸಿ ತಮ್ಮನು ಸಲಹಬೇಕೆಂದೆನುತ ನುತಿಸಿದನು || ೮೨

ಕೋಟಿಮನ್ಮಥರೂಪವೀತನ |
ಮಾಟನಿಪ ಚೆಲುವಿಕೆಗೆ ಸರಿಯೇ |
ಕೋಟಿಪ್ರಳಯದ ರುದ್ರರೀತನ ಕೋಪಕೆಣೆಯುಹರೆ ||
ಕೋಟಿ ಕಮಲಜಜಾತರೀತನ |
ಪಾಟಿಯೇ ಈ ಹರಿಯ ಚತುರತೆ |
ಗಾಟವಿಕತನವಿಲ್ಲವೆಂದುದು ಮೇಲೆ ಸುರಕಟಕ || ೮೩
ಮತ್ತೆ ಯುದ್ಧಕೆ ನಿಂದ ಭಟರುಗ |
ಳತ್ಯಧಿಕಕೋಪಕೆ ಜಗತ್ರಯ |
ತತ್ತರಿಸಿ ಕೂಗಾಡಲಬುಧಿಗಳಿರದೆ ಕಲಸಿದುವು ||
ಹೊತ್ತಿ ಹೊಗೆದುವು ದೆಸೆಗಳುಡುಗಣ |
ಕಿತ್ತುಬಿದ್ದುವು ಧರೆ ನಡುಗಲಾ |
ದಿತ್ಯಚಂದ್ರರು ಹೊಲಬುದಪ್ಪಿದರೇನ ಹೇಳುವೆನು || ೮೪
ಗಿರಿಗಳೊಲೆದಾಡಿದುವು ದಿಕ್ಕಿನ |
ಕರಿಗಳುಱಿ ಚೀರಿದುವು ಶೇಷನ |
ಶಿರವಣಿಗಳರಳಿದುವು ದಿಗಧಿಪರಳುಕಿ ಭಯಗೊಳಲು ||
ಉರವಣಿಸಿದುವು ಧೂಮಕೇತುಗ |
ಳರರೆ ನಭದೆಡೆಗಳಲಿ ಮೇಘದ |
ಲರುಣವಾರಿಯ ಸುರಿದುವಿಬ್ಬರ ಕದನದುರವಣೆಗೆ || ೮
ಈಪರಿಯಲಸುರಾರಿ ಹೋರಿದ |
ನಾಪರಾಕ್ರಮಿಯೊಳು ದುರಂತಾ |
ಟೋಪದಗ್ಗಳಿಕೆಯಲಿ ಮೂದಲೆಗಳಲಿ ಮುಳಿಸಿನಲಿ ||
ಕೋಪ ಸ್ಮರಣೆ ಸಾಧನೆಯ ಬಲು |
ಕೋಪದುರವಣೆಗಳಲಿ ತ್ರಿದಶರು |
ಭಾಪೆನಲು ಬಿಡದೆಚ್ಚು ಕಡಿದನು ಖಳನ ಕವಚವನು || ೮೬
ಕಡಿಯಲಾಕ್ಷಣ ಹರಿಯ ಕಂಧರ |
ಕಡಿ ಸಹಸ್ರಗಳಾಗಿಯಾರಣ |
ದೆಡೆಗೆ ಬಿದ್ದುವು ಶೋಣಕಮಲದ ದಳ ಸಳುಡಿದಂತೆ ||
ಮೃಡನು ತಾಸಿದನೀಕ್ಷಿಸುತ ತ |
ನ್ನೆಡೆಯ ತಪಸಿಯ ನೋಡಿ ಮೆಚ್ಚಿದೆ |
ಧೃಡಕೆ ತಾನೆಂದೆನುತಲೆತ್ತಿದನಱಿದ ರೂಪವನು || ೮೭

ಱಣದೊಳಟ್ದೊಡನೆದ್ದ ರೂಪವು |
ತ್ರಿಣಯನೊಳ್ತಪಕಾಗಿ ಕುಳ್ಳಿರ |
ಲಣುಗ ಕೇಳ್ ಮುನ್ನೀಶನನು ಭಜಿಸಿರ್ದ ಹರಿಯಿರದೆ ||
ರಣಕೆ ನಿಂದತಿಘೋರತರದಿಂ |
ಸೆಣಸಿ ದಿವ್ಯಸಹಸ್ರವರುಷವು |
ಒಣಗು ದೈತ್ಯನ ಮೂಱನೆಯ ಕವಚವನು ಖಂಡಿಸಿದ || ೮೮
ಮುಂತೆ ಡಂಭಾಸುರನು ಹರವರ |
ವಾಂತು ಪಡೆದ ಸಹಸ್ರಕವಚವ |
ನಿಂತು ತೊಂಬೈನೂಱು ತೊಂಬತ್ತೊಂಬತನು ಒಡದೆ ||
ಕಂತುಪಿತ ಖಂಡಿಸಿದನೊಂದುೞಿ |
ವಂತೆ ಶಿವನೊಲುಮೆಯಲಿ ತ್ರೈಜಗ |
ಸಂತಸಂಗೊಳಲೇನ ಹೇೞುವೆ ಗಯನೆ ಕೇಳೆಂದ || ೮೯
ನೋಡಿ ಡಂಭಾಸುರನು ಶಿರವ |
ಲ್ಲಾಡಿಸುತ ಕವಚಗಳ ಹರಿ ಹೋ |
ಗಾಡಿದನು ಬೞಿಕಿವನ ಸನಿಯದಲರ್ದಪುೞಿದಿರ್ದ ||
ರೂಢಿಯುಹ ಕವಚವು ಇದೊಂದೆ ಏ |
ಭಾಡಿಸದೆ ಬಿಡೆನೆನುತಲವನಿರ |
ದೋಡಿದನು ಸರಸಿರುಹಬಾಂಧವನೆಡೆಗೆ ಭರದಿಂದ || ೯೦
ಬಂದು ಭಯದಿಂದೆಱಗಿ ಖಳ ತ |
ನ್ನಂದವನು ಬಿನ್ನೈಸಿ ಸಲಹೆನ |
ಲಿಂದು ನಿನ್ನನು ಕಾವೆನಂಜದಿರೆನುತ ಕೈಪಿಡಿದು ||
ಸಿಂದಿರಲ್ಕನಿತಱೊಳು ಬೆಂಬೞಿ |
ಯಿಂವಲ್ಲೈದಿದನಸುರಹರನರ |
ವಿಂದಸಖನೊಳು ನುಡಿದನವನನು ಬಿಟ್ಟುಕಳುಹೆಂದು || ೯೧
ಎನಲು ಹರಿಯಡಿಗೆಱಗಿ ನುತಿಸಿದ |
ವನರುಹಾಕ್ಷ ರವಾಮನೋಹರ |
ಮನುಮುನೀಂದ್ರಸುರೇಂದ್ರಪಾಲಕ ಶರಣಜನರಕ್ಷ ||
ವನಜಭವಸುರರಾಜಪೂಜಿತ |
ತನುಘನಶ್ಯಾಮಾಂಗ ಚಿತ್ತಾವಿ |
ಸನುನಯದಿ ಬಿನ್ನಪವನೆಂದನು ಭಾನು ಭಕ್ತಿಯಲಿ || ೯೨

ಇವನ ಸಾಸಿರ ಕವಚದೊಳಗೊಂ |
ದುವನು ನಿಲಿಸಿಯೆ ಮಿಕ್ಕ ಕವಚವ |
ನವನಿಗೊಱಗಿಸಿದಧಿಕದೇವರದೇವ ನಿನಗಿದನು ||
ಸವಱುವುದು ವೆಗ್ಗಳವೆ ಕರುಣಾ |
ರ್ಣವನೆ ಲಾಲಿಪುದೆನ್ನ ಬಿನ್ನಹ |
ವಿವನು ನನ್ನಲ್ಲಿರಲೆನುತ ರವಿ ನಮಿಸಿದನು ಹರಿಗೆ || ೯೩

ಈತನುವು ಖಳಗಿರಲಿ ಬೇಕು ಮ |
ಹಾತಿಬಲ ಕೇಳಿವನು ಮುಂದಿಕೆ |
ಜಾತನೆನಿಸುವನೆನಗೆ ಕರ್ಣಾಖ್ಯನೊಂದು ಕವಚದಲಿ ||
ಖ್ಯಾತಿಯಿಂದೊಪ್ಪಿಸುವೆ ಒಱಿಕೀ |
ಭೂತಳದ ಭಾರವನು ತವಿಪ ವಿ |
ಖ್ಯಾತನರನಾರಾಯಣರು ನೀವಾಗುತಿಹಿರೆಂದ || ೯೪

ಅದಱೊಳಗೆ ನಾರಾಯಣನು ನೀ |
ಸದಮಲಾತ್ಮಕನೆನಿಪ ನರನೀ |
ಮುದದಲರ್ಜುನನಾಗೆಸೆವನೀಯೆರಡು ರೂಪಿನಲಿ ||
ಒದಗಿ ಸಮರದೊಳಂದು ಸಂಹರಿ |
ಸಿದದುಭುತನಹ ಡಂಭ ಕರ್ಣಾ |
ಖ್ಯದಲಿ ರಂಜಿಪನಿವನ ಕೊಲು ನೀನೆನುತ ವಂದಿಸುತ || ೯೫

ತಿಳಿಯಲಷ್ಟಾದಶ ದಿನಂಗಳೊ |
ಳಿಱಿಹುವೈ ನಿಜಮಾಯೆಯಿಂದಲಿ |
ನಳಿನನೇತ್ರನೆ ನಟನೆ ಮಿಗೆ ಕೃಷ್ಣಾವತಾರದಲಿ ||
ಗೆಳೆಯನರ್ಜುನನೆನಿಸಿ ನಿನ್ನಯ |
ಕಳೆವೆರಸಿ ದ್ವಾಪರದಿಯವನೀ |
ತಳದ ಭಾರವನವನ ಕೈಯಿಂದೆಂದು ನಮಿಸಿದನು || ೯೬

ಇವನು ಬಹುದುರ್ಮಾರ್ಗನಿವ ತಾ |
ದಿವಿಜರನು ಬಾಧಿಸದ ಪರಿಯಲಿ |
ಯಿವಗೆ ನೀ ಹೊಣೆಯಾಗಲಿರಿಸುವೆ ನಿನ್ನ ವಶದಲ್ಲಿ ||
ಇವನನಿರಿಸುವೆ ಬಾಧೆಯಿವನಿಂ |
ದವನಿಯಲಿ ಬರಲೀಯೆನೆಂದಾ |
ಭುವನಲೋಚನನೆಱಗಿ ಬಿನ್ನೈಸಿದನು ಶ್ರೀಹರಿಗೆ || ೯೭

ಎಂಬ ಸೂರ್ಯನ ವಚನರಚನೆಯ |
ಸಂಭ್ರಮವ ಮಿಗೆಯೊಪ್ಪಿ ಬೞಿಕಾ |
ಶಂಬರಾರಿಯ ಪಿತನು ಮರಳಿದು ಬಂದನಜಹರರ ||
ತುಂಬುರರ ನಾರದರ ಋಷಿಗಳ |
ಜಂಬಭೇದಿಯ ಸುರರನೆಲ್ಲರ |
ಕಂಬುಚಕ್ರಗದಾಬ್ಜಧರನುಪಚರಿಸುತಿಂತೆಂದ || ೯೮

ನೀವು ನಮಗೋಸುಗವು ಬಹು ದಿವ |
ಸಾವಳಿಗಳೆಡೆಬಿಡದೆ ಬಂದಿರಿ |
ದೇವತಾರಾಧನೆಗಳಿಗೆ ನಿಲುಕಡೆಗಳಿಲ್ಲದಕೆ ||
ಭಾವದಲಿ ಬೇಸಱದೆ ಡಂಭನ |
ಹಾವಳಿಯ ಪರಿಹರಿಸಲೋಸುಗ |
ಕೋವಿದತ್ವವ ಬಿಡದೆ ಬೞಲಿದಿರೆಂದನಸುರಾರಿ || ೯೯

ಎನಲು ಹರ ಬ್ರಹ್ಮೇಂದ್ರರೆಲ್ಲರು |
ವಿನುತಿಸಿದರಚ್ಯುತನ ನೀನೇ |
ಜನನಿ ಜನಕನು ಜ್ಯೇಷ್ಠ ದೈವವು ಪರಮಗುರುವೆನಿಸಿ ||
ಅನುನಯದಿ ಬಾಂಧವನು ಭ್ರಾತನು |
ವಿನಯಸಖದಾತಾರನಾಗಿಯೆ |
ದಿನದಿನಕೆ ಬಂದವಘಡವ ಪರಿಹರಿಸಿ ಬೞಿಕೆನುತ || ೧೦೦

ಡಂಭದಾನವನಿಂದ ಬಂದತಿ |
ಡೊಂಬಿನಾಯಾಸವನು ಖಂಡಿಸಿ |
ಯಂಬುಜೋದರ ಬೞಿಕಲೆಮ್ಮನು ಸಕಲಖೇಚರರ ||
ಬೆಂಬಿಡದೆ ರಕ್ಷಿಸಿದೆ ದಯದಲಿ |
ಕುಂಭಿಣಿಗೆ ನೀನಲ್ಲದನ್ಯರು |
ನಂಬಿದವರನು ಸಲಹಲಾಪರೆ ಎಂದರಜಹರರು || ೧೦೧

ಭಕುತವತ್ಸಲನೆಂಬ ಬಿರುದನು |
ಪ್ರಕಟದಲಿ ನೀ ಮೆಱೆಯಲೋಸುಗ |
ಸಕಲಸುರಸಮುದಯದ ಬೞಿಕೀರೇೞು ಭುವನಗಳ ||
ಸುಕರವಪ್ಪೊಲು ಕಾದು ಡಂಭನ |
ವಿಕಳತನವನು ಮುಱಿದು ನೀ ಘನ |
ಶಕುತಿಯನು ಕಾಣಿಸಿದೆ ಎಂದರಶೇಷ ಮುನಿವರರು || ೧೦೨

ಕ್ಷೀರಪಾರಾವಾರದಲ್ಲಿಯು |
ದಾರಫಣಿತಲ್ಪದಲಿ ಶಯನಿಸಿ |
ಭೂರಿ ಬೇಸಱಿಂದಲಿದ್ದೆವು ಹೊತ್ತನೀಕ್ಷಿಸುತ ||
ವೀರಡಂಭಾಸುರನ ದೆಸೆಯಲಿ |
ತೀರಿದುದು ನಿಮ್ಮಯ ನಿವಾಸಕೆ |
ಸಾರುವುದು ಮುದದಿಂದಲೆನುತಾಶಿವನ ಬೀೞ್ಕೊಟ್ಟ || ೧೦೩

ಕರೆದು ಬ್ರಹ್ಮೇಂದ್ರಾದಿ ಸುರಮುನಿ |
ವರರಿಗಱುಹಿದನೀಚರಿತ್ರೆಯ |
ನಿರತ ಪ್ರಾತಃಕಾಲದಲಿ ನಿಜಭಾವಶುದ್ಧಿಯಲಿ ||
ಸ್ಮರಿಸಿದವರಿಗೆ ಇಹದಿ ಸುಖವನು |
ಪರದಿ ಸಾಲೋಕ್ಯವನು ಕರುಣಿಪೆ |
ನೞ್ದಿಹುದು ನೀವೆಂದು ಕಳುಹಿದನಭಯಗಳನಿತ್ತು || ೧೦೪

ಹರಿಯು ದೇವಾದಿಗಳನೈದೆಂ |
ದಱುಹಿಯಂತರ್ಧಾನವಾಗಿಯೆ |
ತೆರಳೆ ಸುಕ್ಷೀರಾಂಬುಧಿಯು ನಿಜವಾಸಕಹಿಪತಿಯ ||
ಸುರುಚಿರದ ಹಾಸಿಗೆಗೆ ಗಯ ಕೇ |
ಳರವರಿಸದೀಕಥೆಯ ಕೇಳ್ದಡೆ |
ದುರಿತಕೋಟಿಯು ಹರೆದು ಇಹಪರದೊಳಗೆ ಸುಖವಹುದು || ೧೦೫

ಜನಪ ಚಿತ್ತೈಸಿತ್ತ ಡಂಭನ |
ನಿನನ ಸನಿಯದಲಿರಿಸಿ ಮರಳಿದು |
ವನಜನಾಭನು ಕೃಷ್ಣರೂಪಿನೊಳವತರಿಸಿ ತನ್ನ ||
ತನುವಿನೊಳಗೊಂದಂಶವರ್ಜುನ |
ನೆನಿಸಿ ಬೞಿಕುದಿಸಿದನು ಸಂಶಯ |
ವನು ತಿಲಾಂಶವ ಮಾಡದಾತನ ಬೞಿಗೆ ನಡೆಯೆಂದ || ೧೦೬

ಎನಲು ಹರುಷಿತನಾಗಿ ಖಚರನು |
ಮುನಿಪತಿಗೆ ಕೈಮುಗಿದು ಸಂಶಯ |
ವನು ನಿವಾರಿಸಿ ಸಲಹಿದ್ಯೆ ಬದುಕಿಗೆನದಂತಿರಲಿ ||
ವನಜರಿಪುವಂಶಜನ ಕುಱುಹನು |
ತನುವಿನಾಕಾರವನು ಠೀವಿಯ |
ನೆನಗೆ ವಿವರಿಸೆ ತಿಳಿದುಕೊಂಬೆನು ಪೇೞಬೇಕೆಂದ || ೧೦೭

ಇದಡೆಲೆ ಗಯ ಕೇಳು ಶಶಿವಂ |
ಶೋದಧಿಯ ಪೆರ್ಚಿಪ ಸುಧಾಕರ |
ನಾದನರ್ಜುನನಿರುವ ನೆಲೆಯಲಿ......ಪಕ್ಷಿಗಳ ||
ಸಾದರದಲಾಡಿಸುತ ಮನದಲಿ |
ವೇದವೇದ್ಯನ ಪದವ ನೆನೆಯುತ |
ಮಾಧವನ ರೀತಿಯಲಿ ಮೆಱೆದಿಹನೋರ್ವನಾನರಸು || ೧೦೮

ಶರಧನುವನೆಡಗೈಯಲಾವಗ |
ಮೆಱೆಯುದಿಹ ಬೆನ್ನಿನಲಿ ನಿಷಂಗವ |
ಧರಿಸಿಹನು ಕರಿಕರನಿಭಾಯುತಹಸ್ತಯುಗಳದವ ||
ನಿರತ ಭಾಳದಲೆಸೆವ ಭಸಿತದ |
ಉರುತರದ ಶ್ಯಾಮಾಂಗದಿಂದವೆ |
ಮೆಱೆವನರ್ಜುನನೆಂದು ತಿಳಿದಿಹುದೆಂದನಾಮುನಿಪ || ೧೦೯

ಎನೆ ಹಸಾದವೆನುತ್ತ ಮಣಿಮಂ |
ತನ ಕುವರನಾಮುನಿಯ ಬೀೞ್ಕೊಂ |
ಡೆನಗೆ ಬದುಕುವ ಪಥವ ಕರುಣಿಸಿದೈ ಮಹಾತ್ಮನಲಾ ||
ಘನತರದ ಸುಖವಾಯ್ತು ಹೋಹೆನು |
ದನುಜಮರ್ದನ ಮೈದುನನ ಮುಖ |
ವನಜವನು ಕಾಣ್ಬುದಕೆನುತಲಲ್ಲಿಂದ ತೆರಳಿದನು || ೧೧೦

ಎನಲು ಜನಮೇಜಯನು ಕೇಳಿದ |
ಮುನಿವರನೆ ಗಂಧರ್ವನಲ್ಲಿಂ |
ನೆನೆದ ಕಾರ್ಯವದಾವುದಾತನ ಶ್ವೇತವಾಹನನು ||
ಘನತರದಿ ಕೈವಿಡಿದು ಕಾದನೆ |
ವಿನುತಚಕ್ರಿಯ ಚಕ್ರದದುಬುತ |
ದನಲದುರಿಯನು ತವಿಸಿದನೆ ಹೇಳೆಂದನಾಮುನಿಪ || ೧೧೧

ಅರಸ ಕೇಳಲ್ಲಿಂದ ಖಚರನು |
ನರಸನಜಸುತ ತನ್ನ ಮನದಲಿ |
ಹರಿಯ ಚಕ್ರವು ಬೆಸಸೆ ಬಹುದೆಂದಧಿಕಚಿಂತೆಯಲಿ ||
ಭರದಿ ದೆಸೆಗಳನೀಕ್ಷಿಸುತ್ತವೆ |
ಪರಮಮೂರುತಿ ಭಕ್ತವತ್ಸಲ |
ನಿರುಪಮನ ತಿರುವೇಂಕಟೇಶನ ನೆನೆಯುತೈತಂದ || ೧೧೨

ಅಂತು ಸಂಧಿ ೧೦ ಕ್ಕಂ ಪದ ೫೨೯ ಕ್ಕಂ ಮಂಗಳಂ.

# ಹನ್ನೊಂದನೆಯ ಸಂಧಿ

ಸೂಚನೆ || ಸುರಮುನಿಯು ಮತವಿಡಿದು ಖಚರನು |
ಶರಣುಹೊಗೆ ಪತಿಕರಿಸಿ ಕಾದನು |
ಧರಣಿಯಲಿ ಸತ್ಕೀರ್ತಿವಡೆದನು ವೀರಕಲಿ ಪಾರ್ಥ ||

ಮಾಡಿದಗ್ಗದ ಘೋರಪಾತಕ |
ಪೋಡುವುವು ಶ್ರೀಹರಿಯ ನೆನೆದಡೆ |
ನಾಡ ದೈವಗಳೊಡೆಯನಹ ವಸುದೇವನಂದನನು ||
ರೂಢಿಸಿದ ಭಕ್ತಿಯಲಿ ಪೂಜಿಸಿ |
ಬೇಡಿಕೊಳಲಿಹಪರವ ಕೊಡುವನು |
ಆಡಲೇನಾಹರಿಯ ಮಹಿಮೆಯನೆಂದನಾಮುನಿಪ || ೧
ಎಂದನಾಖಚರೇಶ ಕುಂತೀ |
ನಂದನನ ಬಳಿಗಾಗಿ ಮನದಲಿ |
ನೊಂದುಕೊಳುತಳಲುತ್ತ ಬಳಲುತ ವಿಧಿಯ ದೂಱುತ್ತ ||
ಇಂದಿಗೀಪರಿಯಾಯ್ತೆ ಹಾ ಹಾ |
ಎಂದು ಚಿಂತಿಸಿ ಪುಷ್ಕರಾಗ್ರದೆ |
ಬಂದು ದ್ವೈತವನಾಂತರದ ಚಿತ್ರಗಳ ನೋಡುತ್ತ ||
ಕ್ರಮುಕ ಕದಳಿ ಶಿರೀಷ ಪಾದರಿ |
ವಿಮಲಕೇತಕಿ ನಾಗ ಮಾದಳ |
ಸುಮುಗಳೆಸೆದಿಹ ಚಂಪಕಾಂಭೋಜಾತಕರವೀರ ||
ಅಮಿತನವಪುನ್ನಾಗ ಶ್ವೇತ |
ದ್ರುಮಗಳಿಂದವೆ ಕಾಣಿಸಿಪು ಸಂ |
ಭ್ರಮದಿ ದ್ವೈತವನಾಂತವಾಖಚರೇಶನಿದಿರಿನಲಿ ||
ಜನಪ ಹೇಳುವೆನೇನ ಖಚರನು |
ವನದ ಸಿಂಗರಕತುಳ ಹರುಷದೊ |
ಳನುನಯದಿ ತಲೆದೂಗಿ ನೋಡುತ ಮುಂದೆ ನಡೆತರಲು ||
ಘನಮರಾಳ ರಥಾಂಗ ಬಕಚಯ |
ವನಜಭೃಂಗಾಳಿಗಳಿಗಿಕ್ಕೆಯ |
ದೆಸಿಪ ಕೊಳಗಳು ಕಾಣಿಸಿದುವಾರಾಮಭೂಮಿಯಲಿ ||

ಅಂಗಿಳಿಯ ಸವಿನುಡಿಗೆ ಯಾಮಧು |
ಕರನ ಗೀತಕೆ ಪಾರಿವಂಗಳ |
ಕೊರಳುಲಿಗೆ ಹರುಷಿಸಿದ ಪರಭೃತಚಯದ ಸುಸ್ವರಕೆ ||
ಶಿರವನೊಲೆಯುತ, ನಲಿದು ನರ್ತಿಪ |
ವರಮಯೂರವನೀಕ್ಷಿಸುತ, ನಿ |
ರ್ಭರದಿ ಪುಷ್ಪಕದಿಂದಲೈತರುತಿರ್ದನಾಖಚರ || ೫
ಬರುತ ಕಂಡನು ಮುಂಪೆ ಹುಲ್ಲೆಯ |
ಮಱಿಗಳನು ಸಾರಂಗವೃಕ ಕುಂ |
ಜರಶಿಶುವ ಸೈರಿಭವನೇಕಮೃಗಾರ್ಭಕವ್ರಜವ ||
ಹರಿ ಮೃಗೇಂದ್ರ ವ್ಯಾಘ್ರ ಚಮರಿಯು |
ಶರಭಕಲಭಗಳಿರಲವಱ ಪರಿ |
ಪರಿಗತಿಯ ಚಿತ್ರದ ವಿನೋದವ ನೋಡುತೈತಂದ || ೬
ಮತ್ತೆ ನಡೆತರುತೀಕ್ಷಿಸಿದ ವಿ |
ಪ್ರೋತ್ತಮವ್ಯೂಹವನು ಸ್ಮೃತಿಗಳ |
ಚಿತ್ತರಿಪರಾಮ್ನಾಯನಿಚಯವ ಪಠಿಪರಣುಗರ್ಗೆ ||
ಉತ್ತಮದ ಸ್ವಾಧ್ಯಾಯಗಳ ಕಲಿ |
ಸುತ್ತಲಗಣಿತರಲ್ಲಿರಲು ಬೞಿ |
ಕೆತ್ತಣದು ವನವಾಸವಿವರಿಗೆನುತ್ತ ನಡೆತಂದ || ೭
ಬರಲು ಬೞಿಕೊಂದೆಸೆಯಲಾಮುನಿ |
ವರರ ಮಾನಿನಿಯರನು ಪತಿಗಳ |
ವಿರಚಿಸುವ ಹರಿಹರರ ಪೂಜೆಗೆ ವಿವಿಧಸುಮಕುಲವ ||
ತ್ರಿಱಿತರುವ ತದ್ದೇವತೆಗಳುಪ |
ಕರಣಗಳ ಬೆಳಗುವ ಪತಿವ್ರತೆ |
ಯರ ಸಮೂಹವ ಕಂಡನಾಕಾನನದಿ ಖಚರೇಂದ್ರ || ೮
ಅವರ ಮಧ್ಯದೊಳೆಸೆದಳಾಪಾಂ |
ಡವಮನೋರಥಸಿದ್ಧಿಗಾಸ್ಪದ |
ಭವನವಾಗಿಯೆ ವರಪತಿವ್ರತೆಯರಿಗೆ ಗುರುವೆನಿಸಿ ||
ಪವನಸಖನೊಳಗುದಿಸಿ ಮಾನುಷ |
ನಿವಹದಲಿ ವರ್ತಿಸುತ ಲಕ್ಷ್ಮೀ |
ಧವನ ಮೈದುನನರಸಿ ದ್ರೌಪದಿಯಿರ್ದಳೊಲವಿನಲಿ || ೯

ಸುರವಧೂನಿಕುರುಂಬಮಧ್ಯದಿ |
ಮೆಱೆವುಮಾಸತಿಯಂತೆ ನಾನಾ |
ಪರಿತರಂಗಿಣಿಮಧ್ಯದಿಂದೆಸೆವಮರನದಿಯಂತೆ ||
ಹರಿಪದದ ತಾರೆಗಳ ಮಧ್ಯದ |
ಲಿರುವ ರೋಹಿಣಿಯಂತೆ ಮುನಿಸತಿ |
ಯರ ನಡುವೆ ಪಾಂಚಾಲಿಯೆಸೆದಿರೆ ಕಂಡನಾಖಚರ || ೧೦

ರತಿಯ ಸೊಬಗತಿಗಳೆದು ಸುರಪನ |
ಸತಿಯ ರೂಪನು ಪಱಿದು ವರಮುನಿ |
ಸತಿಯರುಂಧತಿಯಾಕೃತಿಯ ಪತಿಭಕ್ತಿಯನು ತಾಳ್ದು ||
ವ್ರತ ಹರಿಧ್ಯಾನದಲಿ ಸುರಪತಿ |
ವ್ರತೆಯರಿಗೆ ತಾಯೆನಿಸಿ ದ್ರೌಪದಿ |
ಸತಿಯಿರಲು ಖಚರೇಶ ಕಂಡಚ್ಚಱಿಯ ತಾಳಿದನು || ೧೧

ಖ್ಯಾತಿಯಲಿ ವರ್ತಿಸಿದ ನಳ ಮಾಂ |
ಧಾತ ಸಗರ ದಿಲೀಪ ಮುಖ್ಯ ಮ |
ಹೀತಳೇಂದ್ರರ ಪತ್ನಿಯರ ರೂಪಂಗಳನು ಗೆಲುವ ||
ಸಾತಿಶಯ ಸೌಂದರ್ಯವತಿಯಾ |
ದೀತಳೋದರಿ ಪಾಂಡುರಾಯನ |
ಜಾತರಿಗೆ ಸತಿಯಹಳೆನುತ ಗಯ ಸೋಜುಗೈತಂದ || ೧೨

ಕಂಡನಾಚೆಯಲಖಿಳಧರಣೀ |
ಮಂಡಲೇಶ್ವರಮೌಳಿಮಣಿಯನ |
ಖಂಡಿತದ ಸತ್ಯಸ್ವರೂಪನನನೃತವಿರಹಿತನ ||
ಚಂಡವಿಕ್ರಮಭೀಮನಕುಲರ |
ತಂಡದಲಿ ಕುಳ್ಳಿರ್ದ ಯಮಜನ |
ಕಂಡು ಸಂಶಯದಿಂದ ತನ್ನೊಳಗೆಂದನಾಖಚರ || ೧೩

ಇವರು ನಾಲುವರಿರ್ಪರಿವರೊಳು |
ಭುವನಜಾಸನ ಸುತನು ಹೇಱಿದ |
ವಿವಿಧಚಿತ್ರದ ಕುಱುಹುಗಳ ಘನಮಹಿಮನಿಲ್ಲಿಲ್ಲ ||
ಅವನಿಪತಿ ಮರುತಜನು ಮಾದ್ರೀ |
ಯುವತಿಯಾತ್ಮಜರಿವರಹರು ನರ |
ನಿವರೊಳಿಲ್ಲನುಮಾನವೇಕಿದಕೆಂದನಾಖಚರ || ೧೪

ಇದಱಿಕೊಳೆಲ್ಲಿಹನೋ ಮುನೀಶ್ವರ |
ಮುದದಿ ಪೇಳಿದ ಮಹಿಮನಂತನ !
ಸದನವನು ಬಳಿಕರಸುಹುವರ ಮಿಗೆ ಕಾಣೆನಕಟೆನುತ ||
ಮದನಹರ ಮುರವೈರಿಗಳ ನಿಜ |
ಹೃದಯಕಮಲದೊಳಿಟ್ಟು ಜಾನಿಪ |
ತ್ರಿದಶಪತಿಯಾತ್ಮಜನ ಕಾಂಬೆನದೆಂತೊ ತಾನೆಂದ || ೧೫

ಕರುಣಿಪನೊ ಕರುಣಿಸನೊ ಒಳಿಕಾ |
ಮಱಿಯು ಹೊಕ್ಕರೆ ಮಧುರವಚನೋ |
ತ್ಕರದಿ ತನ್ನನು ಲಾಲಿಪನೊ ಹೋಗೆಂದು ಕಳುಹುವನೊ ||
ಕುಱುಹ ತೋಱುವರಿಲ್ಲ ಪಾರ್ಥನ |
ಪರಿಯನೇನೆಂದಱಿವೆ ತಾನೆನು |
ತಱಸುತಾಳೋಚನೆಯ ಮಾಡುತ ಕಂಡನರ್ಜುನನ || ೧೬

ಲಲಿತನೀರದವರ್ಣಗಾತ್ರನ |
ಕಲಿತಸಿತಭಸಿತಾಂಕಫಾಲನ |
ಉಲಿತದಿಗ್ವಾರಣ........................ ||
ವಿಲಸಿತೋನ್ನತವಾಪ ವಕ್ಷ |
ಸ್ಸ್ಥಳದವನನಭಯಪ್ರದಾತನ |
ಕೊಳುಗುಳದ ಲವಲವಿಕೆಯಾಳನ ಕಂಡನಾಖಚರ || ೧೭

ವರಗುಣಧ್ವನಿಯಿಂದ ಸಚರಾ |
ಚರವನೆಡೆಗೆಡೆವಂತೆ ಮಾಡುವ |
ಗಿರಿನಿಭದ ಗಾಂಡಿವವನೆಡಗೆಯ್ಯಲ್ಲಿ ಪಿಡಿದಿಪನ ||
ಹರ ಕಮಲಭವ ಸುರಪ ಮುಖ್ಯರು |
ಭರದಿ ಕೊಟ್ಟಸ್ತ್ರಗಳಿನೊಪ್ಪುವ |
ವರನಿಷಂಗವ ತಾಳ್ದ ಪಾರ್ಥನ ಕಂಡನಾಖಚರ || ೧೮

ಆಸಮಯದಲಿ ಪೂದಳಿರ ಮೆ |
ಲ್ವಾಸಿನಲಿ ಬಾಱಿಗಳ ನೆಱಲಲಿ |
ಭಾಸುರದ ಮೃಗಪಕ್ಷಿಗಳ ಮೇಳದಲಿ ಪರಿಣತರು ||
ಸೂಸುವಮಲಪುರಾಣಕಥನೋ |
ಲ್ಲಾಸಗಳನೆಡೆವಿಡದೆ ಕೇಳುತ |
ವಾಸವಾತ್ಮಜನಿರ್ದನುತ್ಸವವಿಗ್ರಹದ ತೆಱದ || ೧೯

ಸೋಮವಂಶದೊಳುದಿಸಿದಧಿಕಸು |
ನಾಮ ಪಾಂಡುವಿನಣುಗನೆನಿಪ ಸು |
ರಾಮರಾದಿಗಳನು ಸದೆವ ಸಾಹಸಿಗನೆಂದೆನಿಸಿ ||
ಭೂಮಿಯನು ಪಾಯಿಗಳಿಗೊಪ್ಪಿಸಿ |
ಸೌಮನಸ್ಯದೊಳಿರ್ಪ ವಿಪ್ರ |
ಸ್ತೋಮವಿಹ ಕಾನನಕೆ ತಂದುದೆ ವಿಧಿಯೆನುತಲಿರ್ದ || ೨೦

ಧರೆಯೊಳರಿಗಳನಿಱಿದು ಮೆಱೆವುರು |
ತರದ ಭುಜಕಂಡೂತಿಗುಱೆ ಪಲ |
ವರುಷದಿಂದಾಹವವೆ ಕನಸಾಯ್ತೆನಗೆ ಶಿವಯೆನುತ ||
ಸಿರಿದು ಚಿಂತಿಸಿ ಬಾಡಿ ಬಳುಕುತ |
ಕರಗಿ ಕೈ ಗಲ್ಲದಲಿ ಬಾಗಿದ |
ಶಿರದೊಳಿಪ್ಪರ್ಜುನನ ಕಂಡನು ಖಚರ ನಡೆತರುತ || ೨೧

ನೋಡಿದನು ಖಚರೇಶ ಪಾರ್ಥನ |
ಮಾಡಿದನು ಹರುಷವನು ನಾಗದ |
ರೂಡಿಸಿದ ಮಾತೆಲ್ಲ ದಿಟ ಗಂಭೀರಪುರುಷನಿವ ||
ಜೋಡಿಯಿಲ್ಲದ ಘನಪರಾಕ್ರಮಿ |
ಪಾಡುಪಂತವ ಬಲ್ಲ ರಸಿಕನು |
ಬೇಡಿದರಿಗಿಷ್ಟಾರ್ಥವೀವ ಸಮರ್ಥನಹನೆಂದ || ೨೨

ಕರಚತುಷ್ಟಯವಿಲ್ಲದಚ್ಯುತ |
ನಿರವೊ ಶಿರವೈದಿಲ್ಲದಂಗಜ |
ಹರನೊ ನಾಲ್ಕಾನನಗಳಿಲ್ಲದ ಸರಸಿಜೋದ್ಭವನೋ ||
ಕಿರಣನಯನಸಹಸ್ರವಿಲ್ಲದ |
ತರಣಿ ಸುರಪರ ಪರಿವಿಡಿಯೊಲುರು |
ತರದ ವೀರರ ದೇವನಹುದೆಂದೆನುತ ಬೆಱಗಾದ || ೨೩

ಎನುತಲಭ್ರಾಂಗಣದಿ ಖಚರನು |
ವಿಸುತಿಸುತ ಬೆಱಗಿಂದ ಬರುತಿರೆ |
ಘನವಿಮಾನದ ಕಾಂತಿ ದಶದಿಕ್ಕುಗಳನಾವರಿಸೆ ||
ಮನದೊಳಗೆ ಗದಗದಿಸಿತಾಕ್ಷಣ |
ಮನದೊಳಚ್ಚರಿವಟ್ಟು ನರ ಮೊಗ |
ವನು ನೆಗಹಿಯನಿಮಿಷರ ದೃಷ್ಟಿಯಲೀಕ್ಷಿಸಿದ ನಭವ || ೨೪

ಏಸಿದಭ್ರದೊಳೆಸೆವ ಕಾಂತಿ ನ |
ಪೀನವಾಗಿವೆ ನಿನದವದ್ಭುತ |
ವೇನು ನನ್ನುತಿಗ್ಮೈವವನೊ ದಾನವನೊ ಮಾನವನೋ ||
ತಾಸಿದಾರೆಂದಱಿಯೆ ನಯನ ಮ |
ನೋನುರಾಗವನೈದುತಿದೆ ಬಿಡ |
ದಾನಿದಾನಿಪೆನೆಂದು ನೋಡಿದನಡಿಗಡಿಗೆ ಪಾರ್ಥ || ೨೫

ತರಣಿರಥ ತಾನೆಂಬೆನೇ ಘನ |
ತುರಗ ಸಾರಥಿಯಿಲ್ಲ ವರಸರ |
ಸಿರುಹಸುತ ತಾ ಸುಳಿವನೆಂಬೆನೆಯುಂಚೆ ತಾಸಿಲ್ಲ ||
ಸುರರಿಗೆಱಿಯನದೆಂಬೆನೇ ಸಿತ |
ಕರಿಯ ಪರಿವಿಡಿಯಿಲ್ಲ ಕಂಗಳಿ |
ಗುರುವಿಮಾನಾಕೃತಿಯೊಲಿದಿದೆಯಚ್ಚರಿಯದೇನೆಂದ || ೨೬

ಅನಿತಱೊಳ್ ನಿರ್ಭರದಿ ಪುಷ್ಪಕ |
ವನು ಮಹೀತಳಕಿೞುಹಿ ಘನಕಾ |
ನನದ ಮಧ್ಯದೊಳಿರಿಸಿ ಬೞಿಕಿೞಿತಂದು ಫಲುಗುಣನ ||
ಸನಿಯದಲಿ ನಿಂದಧಿಕದೈನ್ಯದಿ |
ವಿನಯಪರನಾಗಿರ್ದನೈ ಕೇಳ್ |
ಜನಪ ಜನಮೇಜಯನೆ ಮುಂದಣ ಕಥಾವಿಸ್ತರವ || ೨೭

ಶರಣುಹೊಗುವೆನು ಸುರಪಸೂನುವ |
ತರಪರವದೇಕೆಂದು ಲಕ್ಷ್ಮೀ |
ವರನ ಮೈದುನನಿದಿರಿನಲಿ ನಿಂದೆಱಗಿ ಕೈಮುಗಿದು ||
ಕರುಣಿಸೈ ಭೂಪಾಲತಿಲಕನೆ |
ಕರುಣಿಸೈ ಭೂಪಾಲರಕ್ಷಕ |
ಕರುಣಿಸೈ ಭೂಪಾಲನಾಯಕರತ್ನ ನೀನೆಂದ || ೨೮

ತ್ರಾಹಿ ಸೋಮಕುಲಾಬ್ಧಿಚಂದ್ರನೆ |
ತ್ರಾಹಿ ಪಾಂಡುಕುಮಾರ ಭೂನುತ |
ತ್ರಾಹಿ ರಾಜೋತ್ತಮ ಕೃಪಾನಿಧಿ ತ್ರಾಹಿ ರಣವೀರ ||
ತ್ರಾಹಿ ಪದವಾಕ್ಯಪ್ರಮಾಣನೆ |
ತ್ರಾಹಿ ಸಕಲಗುಣಾಭಿರಾಮನೆ |
ತ್ರಾಹಿ ನಿಶ್ಚಲಹೃದಯ ಕೃಪೆಮಾಡೆಂದನಾಖಚರ || ೨೯

ವೀರ ರಣಗಲಿ ಶೂರರುಪುಸಂ |
ಹಾರ ಕದನವಿಹಾರ ಪಾಪವಿ |
ದೂರ ಕರುಣಾಸಾರ ಗುಣಗಂಭೀರ ನಗಧೀರ ||
ವೈರಿಗಜಪಂಚಾಸ್ಯ ಗರ್ವಿತ |
ಘೋರಮಣತಿಮಿರಾರ್ಕ ಶಾತ್ರವ |
ವಾರವಿಕ್ರಮಶರಧಿಬಾಡಬ ಸಲಹ ಬೇಕೆಂದ || ೨೦

ಅಭಿನವದ ಸದ್ವರವನಗ್ನಿಗೆ |
ವಿಭವದಿಂದಲೆ ಕೊಟ್ಟು ನಿರ್ಜರ |
ವಿಭುವಿಗೊಪ್ಪುವ ಖಾಂಡವದ ವನವನು ಕ್ಷಣಾರ್ಧದಲಿ ||
ಅಭವ ಮೆಚ್ಚಲು ಬೇಳ್ದಿಯಿದಱಂ |
ತುಭಯಲೋಕಕೆ ಕೀರ್ತಿಯುಹವೊಲು |
ಅಭಯಮಂ ತನಗಿತ್ತು ಕರುಣಿಪುದೆಂದನಾಖಚರ || ೨೧

ಭುವನಮೂಱಱ ಗಂಡನೆಂದೇ |
ಭುವನಜನ ಪೊಗೞಲ್ಕೆ ಬಂದೆನು |
ಶಿವಕಮಲಜಾದಿಗಳ ಕೈಯಲಿ ತನ್ನ ಪಾಲಿಸುವ ||
ಹವಣು ಸಾಲದು ಭೂಪ ನೀನೆ |
ನ್ನುವನು ರಕ್ಷಿಸಲೀಚತುರ್ದಶ |
ಭುವನದೊಳ್ ಸತ್ಕೀರ್ತಿ ಘಟಿಸುವುದೆಂದನಾಖಚರ || ೨೨

ಕಂಡು ಬೆಱಗಾದನು ಧನಂಜಯ |
ನಂಡಲೆವ ಗಂಧರ್ವಪತಿಯನ |
ಖಂಡವಿಕ್ರಮಶಾಲಿಯಪನಿವನೆಂದು ಮಿಗೆ ಮುಳಿಯೆ ||
ಚಂಡಸುರನರದಾನವರ ಕಟಿ |
ಖಂಡವನು ಮಾಱ್ಪನು ಮಹಾದೋ |
ರ್ದಂಡಪಟುಭಟನಱಿಯಬಹುದಿಂಗಿತದೊಳೆಂದೆನುತ || ೨೩

ಇದೆ ವಿಗಳಿಗೆಯೊಳವಿಳವಿಕೃತಿ |
ಸದನಗಳ ಸಂಚರಿಪ ಪುಷ್ಪಕ |
ವಿದೆ ಕ್ಷಣಾರ್ಧದೊಳವರ ಸಾಹಸಶರಧಿಗಳ ಪೀರ್ವ ||
ಅದುಭುತೋಪಮ ತೀವ್ರಶಸ್ತ್ರಾ |
ಘದಲಿ ರಾಜಿಪ ಬತ್ತಳಿಕೆ ತಾ |
ನಿದೆ ಸುರಾಚಲದಾಯತೋನ್ನತಕಾಯವಿದಯೆಂದ || ೨೪

ಶಿರದೊಳಿದೆ ಸುರನಾಥನಿಕ್ಕುವ |
ನಿರುಪಮದ್ಯುತಿಮಣಿಖಚಿತವಿ |
ಸ್ತರಮಹಾಕೋಟೀರ ದಿವಸಾಧಿಪನು ಮಿಗೆ ಧರಿಪ ||
ಸುರುಚಿರಾಮಲರತ್ನಮಾಲಿಕೆ |
ಕೊರಳೊಳಿದೆ ತಾ ಬಡವನೇಯಾ |
ಶ್ಚರಿಯವಲ್ಲಾ ತಮ್ಮ ಮಱಿವುಗಬಹುದಿದೇನೆಂದ || ೩೫

ಹರಿಹರಬ್ರಹ್ಮಾಖ್ಯರೊಳಗೊ |
ಬ್ಬರಲಿ ಬಂದಾಯುಸವ ನಾಲ್ಕನೆ |
ಪುರುಷ ತಾನಿಲ್ಲಳಿಕಿಸಲು ಮಿಗೆಯವದಿರುಪಟಳವ ||
ಪರಿಹರಿಪಡವರಲ್ಲದುೞಿದರ |
ನಱಿಸಿ ಕಾಣೆಸಿದೇನಿದಚ್ಚರಿ |
ನರರ ಖಚರನು ಮಱಿವುಗಲು ಕಾರಣವಿದೇನೆಂದ || ೩೬

ವಿಸಜವರಾದಡೆಯು ಬಹಳಾ |
ಯಾಸಕಿಕ್ಕದೆ ಜಡದಲಾ ವಿಧಿ |
ವಾಸುದೇವನ ಮಹಿಮೆಯನು ಮಿಱಲ್ಕದಾರ ವಶ ||
ಈಸು ಘನವಾದಂಗಿಸಿತು ಜರ |
ಲೇಸು ದೊಡ್ಡಿತು ತಿಮ್ಮ ಪಾಡದು |
ಸುರಾಸುರೋರಗತರಣಿಚಂದ್ರರಿಗೆಡರದುಂಟೆಂದ || ೩೭

ಈತೆಱದೊಳಾವಿರಲಿ ತಮ್ಮ ಮ |
ಹಾತಿಬಲ ಮಱಿವೊಕ್ಕನೆಂದೆನ |
ಲೀತನನು ಪರಿಹರಿಸಿ ಕಳುಹಲು ಬಾಱಿಕ್ಕೆ ದೃಢವಲ್ಲ ||
ಮಾತೆಯುದರದಿ ಬಂದು ಪೊಕ್ಕವು |
ಖ್ಯಾತಿವಡೆಯಲು ಬೇಕೆನುತ ಹರು |
ಷಾತಿಶಯದಲಿ ಸಲಹಲುದ್ಯೋಗಿಸಿದ ಮನದಂದ || ೩೮

ಒಂದು ಬೇಡಲು ಕೊಡೆನಜಗೆ ಹರ |
ಒಂದು ಸೆಣಸಿದಡೀಯನಾಗೋ |
ಎಂದ ತಾನೆಯ್ತಂದು ಖಚರನನೊಪ್ಪಿಸುವುದೆಂದು ||
ಸಿಂಧುರಾಶ್ವಪದಾತಿಯಲಿ ನಡೆ |
ತಂದಡಾಜಿಯುಲಹುದೆನಿಪೆ ಸುರ |
ವೃಂದಸಾಕ್ಷಿಯಲೇದು ನಿಶ್ಚಿತನಾದನಾಪಾರ್ಥ || ೩೯

ಆರು ನೀನೆಲೆ ಮಹಿಮ ನಿನ್ನನ |
ದಾರು ಕಳುಹಲು ಬಂದೆ ಜನಕನ |
ದಾರು ಜನಪದವಾವುದನ್ವಯ ನಾಮಧೇಯವನು ||
ವೀರ ವಿಸ್ತರವಾಗಿ ತಿಳುಹೈ |
ಯಾರು ನಮ್ಮಿಂದೇನು ನಿನಗುಪ |
ಕಾರ ಸುಮ್ಮನೆ ನುತಿಸಲನುಚಿತವೆಂದನಾಪಾರ್ಥ || ೪೦
ನಾವು ಭೂಚರರಾಗಸೆವೆವೈ |
ನೀವು ಖೇಚರರೆಮ್ಮ ಕೈಯ ಮ |
ಹಾವುಪದ್ರವಗಳ ಹರಿವ ಬಗೆಯೆಂತು ಬಱಿಕಿದಱು ||
ಭಾವಭೇದವನಱುಹಿ ಕಳುಹಿದ |
ನಾವನೀಕದನಪ್ರಪಂಚವ |
ನಾವಧಾನದಿ ನುಡಿವುದೆಂದನು ನಗುತ ಕಲಿ ಪಾರ್ಥ || ೪೧
ಏನು ಕಾರಣ ಪ್ರಾಣಭಯ ನಿನ |
ಗೇನನಾರೆಣಿಸಿದರು ಮಿಗೆ ಮ |
ತ್ತೇನು ತಪ್ಪನದಾರಿಗೊದವಿಸಿ ಬಂದೆಯೆಲ್ಲವನು ||
ಸಾನುರಾಗದಲಱುಹೆನಲು ವೈ |
ಮಾನಿಕನು ಕೈಮುಗಿದು ತನ್ನಯ |
ಮಾನಭಂಗಸ್ಥಿತಿಯನಱುಹುವೆ ಒಱಿಕಲಿಂತೆಂದ || ೪೨
ಅರಸ ಚಿತ್ರೈನಿನ್ನು ಬಂದಿಹ |
ಪರಿಯನೆಲ್ಲವ ವಿಸ್ತರಿಸುವೆನು |
ಮಱೆಯ ಹೊಕ್ಕನ ಕಾದೆನೆಂದೇ ತನಗೆ ನಂಬುಗೆಯ ||
ತ್ವರಿತದಿಂ ಕೊಟ್ಟಂಜಬೇಡೆಂ |
ದರವರಿಸದೀಮಾತ ಮಾಡಲು |
ಹರುಷದಲಿ ತಿಳುಹುವೆನು ಕೃಪೆಮಾಡೆಂದು ಕೈಮುಗಿದ || ೪೩
ಎನಲು ನಕ್ಕನು ಪಾರ್ಥ ಮನದಲಿ |
ಘನಭಯಾನ್ವಿತನಾಗಿ ಬಂದಿಹ |
ನೆನುತ ಖಚರನ ನೋಡಿ ಕೇಳ್ಳೈ ಮತ್ಪ್ರತಿಜ್ಞೆಯನು ||
ಜನರುಹಾಕ್ಷನು ಬ್ರಹ್ಮ ಪುರಹರ |
ನನಿಮಿಷಾಧಿಪಮುಖ್ಯರೆಲ್ಲರು |
ತನತನಗೆ ಒಂದೊಪ್ಪಿಸೆನೆ ಕೊಡೆ ನಿನ್ನನಂಜದಿರು || ೪೪

ಶರಣು ಹೊಕ್ಕಿಹೆ ನಿನ್ನ ಒಳಿಕವೆ ।
ಪರರಿಗಾನೊಪ್ಪಿಸಿದೆನಾದಡೆ ।
ಧರಣಿಪತಿ ಪಾಂಡುವಿನ ಮಧ್ಯಮತನುಜ ತಾನಲ್ಲ ॥
ಕರದಿ ಪಿಡಿದಿಹ ಧನುವಿದಲ್ಲೀ ।
ಪರಿಯ ದಾರಿಂದಾದುದೆಂಬುದ ।
ವಿರಚಿಸೈ ಗಂಧರ್ವ ನಿನಗಾದಪಜಯಸ್ಥಿತಿಯ ॥ ೪೫
ಅಂಜದಿರು ಗಂಧರ್ವ ತಮ್ಮದು ।
ರಂಜಕದ ಮಾತಲ್ಲ ನಿನ್ನನು ।
ಭಂಜಿಸಲು ಬಂದವನನಟ್ಟುವೆ ನಿನ್ನ ರಕ್ಷಿಸುವೆ ॥
ಕಂಜನಾಭಕಪರ್ದಿಗಳ ಪದ ।
ಕಂಜಗಳ ಮೇಲಾಣೆ ದಿಟವಿದು ।
ವಂಜ ಬಿಡು ತಡಹಿರಲಿ ಮನದೊಳಗೆಂದನಾಪಾರ್ಥ ॥ ೪೬
ಅವಧರಿಸು ಶಶಿವಂಶಶರನಿಧಿ ।
ಭವಶಶಾಂಕನೆ ತನ್ನ ನಗರವು ।
ಭುವನದೊಳ್ ಪೆಸರುಳ್ಳ ಮಣಿಪುರವೆಂಬರದನಾಳ್ವ ॥
ಅವನಿಪತಿ ಮಣಿಮಂತನಾತನ ।
ಲವತರಿಸಿದವ ತಾನು ತನಗೀ ।
ಗವಿರಳದ ಗಯನಾಮಧೇಯವು ಭೂಪ ಕೇಳೆಂದ ॥ ೪೭
ಬಳಿಕ ತಾ ಕಮಲಜನ ವರವನು ।
ತಳೆದುರಗಸುರಮುಖ್ಯರೆಂಬರ ।
ಗಳಿಗೆಯರ್ಧಕೆ ಗೆಲುವೆ ಪುಷ್ಪಕದಿಂದ ಭುವನಗಳ ॥
ಸುಳಿದು ಬಲಯುತನೆನಿಸಿ ಯೌವನ ।
ನೆಳತೃಣಕೆ ಲೆಕ್ಕಿಸದೆ ಚರಿಸುತ ।
ಮಲೆತರನು ಮರ್ದಿಸುತಲಿಹೆನನುದಿನವು ಕೇಳೆಂದ ॥ ೪೮
ಏನ ಹೇಳುವೆನರಸ ತನ್ನ ಸ ।
ಮಾನದಲಿ ನಿಂದಿರುವದಾಸುರ ।
ಮಾನವಾಧಿಪಭುಜಗರಿಂಗಸದಳವು ಸಮರದಲಿ ॥
ಏನ ಮಾಡುವನೆಲ್ಲಿ ಬಹನೋ ।
ಏನು ಕಾಂಬನೊ ಎನುತಲಿಹರದು ।
ತಾನಹುಹಲೇಕಿಳೆಯೊಳಾತ್ಮಸ್ತುತ್ಯವಹುದೆಂದ ॥ ೪೯

ಎಂದಿನಂತೆ ವಿರಂಚಿಯೋಲಗ |
ಕೆಂದು ಪುಷ್ಪಕಮೇಱಿಯೊಲವಿನ |
ಬಂಧುರದೊಳಾಕಾಶವೀಧಿಯೊಳೈದುವತಿಮುದದಾ ||
ಸಂದಣಿಯೊಳಾನುಗುಱಿಲೆಂಜಲು |
ಬಂದು ವಿಧಿವಶದಿಂದ ಪುರಹರ |
ಬಂಧುವಿನ ಕರದಲ್ಲಿ ಬಿದ್ದುದು ಜೇಯ ಕೇಳೆಂದ || ೫೦

ತರಣಿಗರ್ಘ್ಯವನೀಯುತಿರಲಾ |
ಸರಸಿಜಾಕ್ಷನ ಕರದಲಿಂತೀ |
ಪರಿಯುಲೆಂಜಲು ಬೀೞಲುಗ್ರಾಕಾರಮುಖನಾಗಿ ||
ಸುರನರೋರಗಭುವನದೊಳು ಗಯ |
ನಿರಲು ತನ್ನಯ ಚಕ್ರದಿಂದಲಿ |
ಕೊರಳನರಿಯದೆ ಮಾಣೆನೆಂದೊಕ್ಕಣಿಸಿ ಕೋಪದಲಿ || ೫೧

ಅಸಿತಱಿೊಳಗಾಸೇನನಱಿಯದೆ |
ಘನನಭೋಮಾರ್ಗದಲಿ ಬರುತಿರೆ |
ನಿನದವಾಕಾಶದಲಿ ನುಡಿದುದು ಗಯನೆ ಕೇಳೆಂದು ||
ವನಜನಾಭನ ಪದಕೆ ದ್ರೋಹವ |
ನೊನರಿಸಿದೆ ನೀನದಱಿಂದವೆ |
ಮನುಜನೇಷುದ ಹರಿಯ ವೈರದಿ ಕೆಟ್ಟ ನೀನೆಂದು || ೫೨

ಹರಿ ಪ್ರತಿಜ್ಞೆಯ ಮಾಡಿಕೊಂಡತಿ |
ತ್ವರಿತದಿಂ ನಿಂದಹನೆ ನೀಸಿದ |
ಪರಿಹರಿಸಿ ಕೊಳ್ಳೆನುತ ನುಡಿಯಲು ಹೋಗೆ ಕಮಲಜನ ||
ಹೊರೆಗದೆಲ್ಲವ ಪೇೞಿ ಸಲಹೆನೆ |
ಸರಸಿಜಾಸನ ತನ್ನ ಕೈಯಲಿ |
ಹರಿಯದೆನಲಲ್ಲಿಂದ ಕಂಡೆನು ಹರನ ಪದಯುಗವ || ೫೩

ಬೞಿ ಕಲಾಪರಮೇಶಗೀಸ್ಥಿತಿ |
ಗಳನು ಬಿನ್ನೈಸಲ್ಕೆ ಕೇಳುತ |
ಜಲರುಹಾಕ್ಷನೊಳೆನ್ನೊಳೆರವುಂಟೆಂದು ಭೇದವನು ||
ಬಳಸದಿರು ಹೋಗೆಂದು ಪರಿಪರ |
ಗಳಲಿ ಮತ್ತೀಮಾತನಾಡಲು |
ಕಳವಳಿಸುತ್ತೈತರುತ ಕಂಡೆನು ಕಮಲಜಾತ್ಮಜನ || ೫೪

ಕಂಡು ನಾರದಗೆಱಗಿ ತಿಳುಹಿದೆ |
ಪುಂಡರೀಕಾಕ್ಷನ ಪ್ರತಿಜ್ಞೆಯು |
ಲಂಡಲೆಯು ಧಿರದಾಸುದರ್ಶನ ಕಾವರಾರೆನಲು ||
ಚಂಡವಿಕ್ರಮ ಸುರಪಸುತನನು |
ಕಂಡು ನಂಬುಗೆಗೊಂಡು ಬಱಿಕಿ |
ದ್ದಂಡದೇವರ ದೇವನಾಡಿದ ಪರಿಯ ಹೇೞಿಕೆಂದ || ೩೯೫

ಎನಲು ನಗುತಾನೆಂದೆ ನಾರದ |
ಮುನಿಯು ಕೂಡಾಕಮಲಭವಭವ |
ರನುವ ಕಾಣದೆ 'ಸಲಹಿ ತೀರದೆ ಗಯನೆ ಕೇ'ಳೆಂದು ||
ವಿನಯವಿಲ್ಲದೆ ಕಳುಹಿದರು ನರ |
ಮನುಜಮಾತ್ರನು ತನ್ನ ಸಲಹುವ |
ಮನವ ಹಿಡಿವನೆ ಧೈರ್ಯದಿಂದೆನಲೆಂದನಾಮುನಿಪ || ೩೯೬

ಎಲೆ ಮರುಳೆ ಗಂಧರ್ವ, ಮುರಹರ |
ಜಲಜಭವರಂತಲ್ಲ ಪಾರ್ಥನ |
ಬಳಕೆ ತಾನದು ಬೇಱಿ ನಿನಗೇಕವರ ಸಂಕಲ್ಪ ||
ಕೆಳಗುಮೇಲೆಂದೆನುತ ನೋಡದೆ |
ಫಲುಗುಣನ ಮಱೆವೊಕ್ಕು ಬದುಕೆಂ |
ದೊಳಗನೆಲ್ಲವ ಪೇೞಿ ನಾರದನಡರಿದನು ನಭವ || ೩೯೭

ಅಮರಮುನಿಮತದಿಂದ ಕಂಡೆನು |
ಕಮಲನಾಭಸಮಾನಪುರುಷನ |
ವಿಮಲಮತಿಯುನನೇಕಗುಣಗಣಸಿಧಿಯು ಪರಶುಚಿಯು ||
ಸುಮನಸಾಧಿಪನಂದನನ ಮಿಗೆ |
ಯುಮತನುಜನನುಜನನು ಘನವಿ |
ಭ್ರಮವಿಚಕ್ಷಣಮೂರ್ತಿಯನು ತಾನೆಂದನಾಖಚರ || ೩೯೮

ಕೇಳಿದಕೆ ಕಂಡುದಕೆ ತಾರ್ಕಣೆ |
ಯಾಳಿಯಾದುದು ಬದುಕಿದೆನು ದಶ |
ಮೌಳಿಯನುಜನನಂದು ರಾಘವ ಪತಿಕರಿಸಿದಂತೆ ||
ಪಾಲಿಸಿದೆ ನಿನಗಾರು ಸರಿ ಜನ |
ಜಾಲದೊಳ್ ಸತ್ಕೀರ್ತಿವಡೆದೆ ಕೃ |
ಪಾಳುವಹುದಹುದೆಂದು ಮಿಗೆ ಪೊಗೞಿದನು ಗಂಧರ್ವ || ೩೯೯

ತೆಱನನೆಲ್ಲವ ಕೇಳಿ ಬೞಿಕತಿ |
ಹರುಷಮಾನಸನಾಗಿ ಗಯನನು |
ಕರೆದುಕೊಂಡೆಮಸುತಗೆಱಗಿ ಕೈಮುಗಿದು ನಿಂದಿರಲು ||
ತ್ವರಿತದಲಿ ಬಿಗಿಯಪ್ಪಿ ತಮ್ಮನ |
ಕರೆದು ಕೆಲದಲಿ ಕುಳ್ಳಿರಿಸಿ ತನ |
ಗೆಱಗಿ ನಿಂದಿಹ ಗಯನ ನೋಡುತಲೀತನಾರೆಂದ || ೬೦

ಈತ ಗಂಧರ್ವೇಂ ಸಾಹಸ |
ನೀತ ಮಣಿಮಂತನ ತನುಜ ಗಯ |
ನೀತ ಕೃಷ್ಣನ ವೈರದಲಿ ಭಯಗೊಂಡು ತನ್ನುವನು ||
ಪ್ರೀತಿಯಲಿ ಮಱೆವೊಗಲು ಕೈವಿಡಿ |
ದೀತನನು ನಿಲಿಸಿದೆನು ಕಾರ್ಯದ |
ರೀತಿಯಿಾಪರಿಯಾಯಿತೆಂದನು ಪಾರ್ಥ ಕೈಮುಗಿದು || ೬೧

ಮೂಗಿನಲಿ ಬೆರಳಿಟ್ಟು ಶಿರವನು |
ತೂಗಿದನು ಧರ್ಮಜನು ಶಿವಶಿವ ! |
ಭೋಗಿಶಯನನ ವಮಾಯಿಸನು ಮಿಾಱಲ್ಕದಾರ ವಶ ||
ಆಗಲಾಗದೆಯಿರಲಿ ಒಂದುದ |
ಭೋಗಿಸುವುದೇ ಕಾರ್ಯ ಸೋಬಣ |
ತಾಗುಬಾಗಂತಿರಲಿ ಸಲಹುವುದುಚಿತ ತಮಗೆಂದ || ೬೨

ಆಹುದು ಪಾರ್ಥನ ಮಾತು ಸಲಹುವು |
ದಹಿತರಿಂ ಭಯಗೊಂಡು ಬಂದನ |
ವಿಹಿತ ಪರಿಕಿಸೆ ರಾಜಪದ್ಧತಿ ಮೂಱು ಲೋಕದಲಿ ||
ಮಹಿ ತರಣಿ ಕುಮುದಾಪ್ತರುಳ್ಳನ |
ಕಹುದು ನರಸತ್ಕೀರ್ತಿ ಹರಿಯಾ |
ಗ್ರಹಿಸಿದರೆ ಬೞಿಕಾದುದಾಗಲಿಯೆಂದನಾಭೀಮ || ೬೩

ಅವಧರಿಸು ರಾಜೇಂದ್ರ ತವಪದ |
ಭುವನಜಂಗಳ ಕೃಪೆಯುಲಾವುದು |
ನಮಗೆ ಘನವಿದಕೆಣಿಕೆ ನಿಮಗೆಳ್ಳನಿತು ಕೊಳಸಲ್ಲ ||
ಭುವನಸಖಕಾರುಣ್ಯದಿಂ ಬಂ |
ದವನ ಪ್ರಾಣವ ಕಾವುದಲ್ಲದೆ |
ನವಡಿನುಡಿಗವಕಾಶವೆಲ್ಲಿಯದೆಂದನಾಪಾರ್ಥ || ೬೪

ಮತವಿದೊಳ್ಳಿತು ಕೃಷ್ಣರಾಯನು |
ಹಿತವನಾಚರಿಸಿದಡೆ ತಮ್ಮಭಿ |
ಮತವ ಹಸನನುಮಾಡಿ ಕೊಂಬಡೆ ಗಯನ ಸಲಹುವುದು ||
ಕ್ಷಿತಿಯೊಳಗೆ ಸತ್ಕೀರ್ತಿ ಮುಂದಣ |
ಕಥನಕಾರಣವೆಲ್ಲ ವಿಧಿನಿ |
ರ್ಮಿತವದೈಸೆಯೆನುತ್ತ ಮಾದ್ರೀತನುಜರಾಡಿದರು || ೭೫

ಎನಗೆ ನಾಲುವರನುಜರಾಗಿಹ |
ರಿನಿತು ದಿನವಿಲ್ಲಿಂದಲೈವರು |
ವಿನುತಸಹಭವರಾನು ಮೊದಲಾಗಾರ್ವರಾಗಿಹೆವು ||
ನಿನಗಿರಲು ತಿರುವೇಂಕಟೇಶನ |
ನೆನಹು ಶಾಶ್ವತವಾಗಿ ಸಲಹುವ |
ಘನಕೃಪಾದೃಷ್ಟಿಯಲಿ ಭಯ ಬೇಡೆಂದನಾಭೂಪ || ೭೭

ಅಂತು ಸಂಧಿ ೧೧ ಕ್ಕಂ ಪದ ೫೯೫ ಕ್ಕಂ ಮಂಗಳಂ.

## ಹನ್ನೆರಡನೆಯ ಸಂಧಿ

ಸೂಚನೆ|| ಮುರಹರನ ಮತವಿಡಿದು ಪಾರ್ಥನ |
ಹೊರೆಗೆ ಬಂದಾಗಯನ ಕೇಳಲು |
ಮರಳಿ ಕೊಡೆನೆನೆ ವೇಗವಂತಾಕ್ರೂರರೈದಿದರು ||

ಭರತವಂಶಲಲಾಮ ಕೇಳೀ |
ಸುರಪಸುತ ಕೈವಿಡಿಯಲಾಗಯ |
ಹರಿಯ ಭಯವನು ಮಱೆದು ಸುಖದಿಂ ದ್ವೈತವನದೊಳಗೆ ||
ಇರುತಿರಲು ಬಳಿಕಿತ್ತಲಾಮುರ |
ಹರನು ಸರಸಿಯ ವಾರಿಯೊಳ್ಕರ |
ಚರಣಮಂ ತೊಳೆತೊಳೆದು ಮಜ್ಜನಗೈದನೋಲವಿನಲಿ || ೧

ವರದುಕೂಲವನುಟ್ಟು ಪೀತಾಂ |
ಬರವ ತಾನಳವಡಿಸಿ ರತ್ನಾ |
ಭರಣಗಳ ಮಿಗೆ ಧರಿಸಿ ಸಂಧ್ಯಾವಂದನಂಗೈದು ||
ತ್ವರಿತದಿಂದಾಗಯನು ಸೇರಿದ |
ಪರಿಯನೆಲ್ಲವ ತಿಳಿದು ಲಕ್ಷ್ಮೀ |
ವರನು ಪಗೆ ಕೃಪಾರತೆಂದನು ತನ್ನ ಮನದೊಳಗೆ ||

ಎನುತ ಯದುಬಲದೊಡನೆ ತೆರಳಿದ |
ವನಜಲೋಚನ ದೊರಕಿಗೆ ಬಂ |
ದನುನಯದಲಲ್ಲಿಂದ ಪಾರ್ಥನ ಸರಿಸಕಟ್ಟಲ್ಕೆ ||
ಘನಸುಬುದ್ಧಿಯನುಳ್ಳ ಖಚರನ |
ನನುನಯದೆ ವೇಗದಲಿ ತರಲಾ |
ಪನ ಮಹಾಬಲ ವೇಗವಂತನ ಕರೆದನೊಲವಿನಲಿ || ೩

ವೇಗಕರ್ಕನ ಗತಿಯ ಪೋಲುವ |
ವೇಗವಂತನ ಬಾಯೆನುತ ವರ |
ಭೋಗಿಶಯನನು ಕರೆದು ಕಾರಿಯದನುವನೆಚ್ಚರಿಸಿ ||
ಹೋಗಿ ದ್ವೈತವನಾಂತರಕೆ ಶತ |
ಯಾಗಸುತಗೀಸ್ಥಿತಿಯ ಪೇಳಿದು |
ಬೇಗ ಖಚರನ ಕರೆದು ತಾ ನೀನೆಂದು ನೇಮಿಸಿದ || ೪

ಎನೆ ಪಸಾದವೆನುತ್ತ ಲಕ್ಷ್ಮೀ |
ವನಿತೆಯುರಸಂಗೆರಗಿ ಪರುಷದಿ |
ಮನಕೆ ಮುಂಚುವ ವೇಗವಂ ಕೈಕೊಂಡು ಚಿತ್ತದಲಿ ||
ಇನತನೂಜನ ತನಯನಿಹ ಕಾ |
ನನಕೆ ಬಂದನು ವೇಗವಂತನು |
ವಿನಯದಿಂ ಕೇಳಿದನು ಯೋಗಕ್ಷೇಮದನುವುಗಳ || ೫

ಕುಶಲವೆಮಗೆಲೆ ವೇಗವಂತನೆ |
ಬಿಸರುಹಾಕ್ಷನ ಕರುಣದಿಂದಲಿ |
ಪಸನು ತಮಗಿನ್ನುತ್ತರೋತ್ತರವಪುದು ಸಿದ್ಧ ಕಣಾ! ||
ಮುಸಲಪಾಣಿ ಮುಕುಂದ ಮನ್ಮಥ |
ವಸುಮತೀಪತಿ ದೇವಕಿಯು ಹರ |
ಗೆಸೆವ ಶಶಿವದನೆಯರು ಸುಕ್ಷೇಮಿಗಳೆ ಹೇಳೆಂದ || ೬

ಽದುಳರಿಂದಿಗೆ ಧರ್ಮತನಯನೆ; |
ಸದಮಲತ್ವವ ಧರಿಸಿ ಸೋದರ |
ಸುದತಿ ಸಹವಾಗೇಕಮತವಿಡಿದಖಿಳಸುಕೃತಿಗಳ ||
ಮುದದಲಾಗರಿಸುತ್ತಲನುದಿನ |
ಮದನಜನಕನ ಶಿವನ ಮೃದುತರ |
ಪದಪಯೋಜವ ನಂಬಿಹಿರಿ ನಿಮಗಾರು ಸರಿಯೆಂದ || ೮

ಎಂದು ಬಱಿಕಲ್ಲಿಂದ ನರನಿಹ |
ಚೆಂದದೆಲೆವನೆಯೆಡೆಗೆ ತಾರ್ಸೈ |
ತಂದು ಮುರಹರ ಪೇೞಿನಾಗಮವೆಲ್ಲವನು ಪೇೞ್ದು ||
ಇಂದು ಗಯನನು ಕರೆದು ತಾ ಹೋ |
ಗೆಂದು ಕಳುಹಲು ಬಂದೆ ತಾ ಗೋ |
ವಿಂದಗತಿಪ್ರಿಯವಪ್ಪ ತೆಱದಲಿ ಮಾಡು ನೀನೆಂದ || ೯

ಎನಲು ನಕ್ಕನು ಪಾರ್ಥ ಶಿವಶಿವ! |
ಕನಸಿನೊಳಗಾದಡೆಯು, ಬಂದೀ |
ತನುವ ಸಲಹೆನಲವನ ಕೈವಿಡಿದೊಪ್ಪಿಸಿದ ನರನು ||
ಮನುಜದನುಜಸುರಾಳಿಯಲಿ ಸಂ |
ಜನಿಸಿದ್ದವ ತಾನಹನೆ ಹೇೞ್ಕೈ |
ದನುಜವೈರಿಯ ಮಾತದಂತಿರಲೆಂದನಸನೊಡನೆ ||

ಪಲವು ಧರ್ಮರಹಸ್ಯನೀತಿಯ |
ನೆಲೆಗೊಳಿಸಿ ಪಲಬರಿಗೆ ಹೇೞುತ |
ಪಲವು ನಿಗಮಪುರಾಣಸಿದ್ಧವಿದೆಂದು ಲೋಕಕ್ಕೆ ||
ಪಲವು ಬಗೆಯಲಿ ಪೇೞಿ ನಿರ್ಮಿಪ |
ಬಲಿಮಥನನೇನಱಿಯನೇ ನೀ |
ತಿಳಿಯದಜ್ಞನೆ ಎಂತು ಗಯನನು ಕೊಡುವೆ ತಾನೆಂದ || ೧೦

ಕೊಟ್ಟರೊಳ್ಳಿತು ಪಾರ್ಥ ಕೊಡದಿರೆ |
ನೆಟ್ಟನೇ ತಾ ಹೋಹೆ ಮುನ್ನಿನ |
ಬಟ್ಟೆಯುಲಿಯೆನುತೆದ್ದು ಮರಳಿದು ಬಂದು ಹರಿಯಡಿಗೆ ||
ದಿಟ್ಟತನದಲಿ ಪಾರ್ಥನಾಡಿದ |
ಕಟ್ಟಳೆಯ ಮಾತುಗಳನಸುರಘ |
ರಟ್ಟ ಚಿತ್ತೈಸೆಂದು ಬಿನ್ನವಿಸಿದನು ಕೈಮುಗಿದು || ೧೧

ನಗಧರನೆ ಚಿತ್ತವಿಸು ತನ್ನೊಳು |
ನಗರಿಪುವಿನಾತ್ಮಜನುಸಿರ್ದನು |
ಜಗದೊಳಗೆ ನೊಱೆವೊಕ್ಕವರ ವೈರಿಗಳ ಕೈಗಳಿಗೆ ||
ನಗುತ ಮುಗುಳೊಪ್ಪಿಸಿದರುಂಟೇ |
ಹಗರಣವಿದೇನೆಂದು ತನ್ನನು |
ವಿಗಡ ಕಳುಹಿದನಿದಕೊ ಮಹದಾಗಮವ ನೀಗೆಂದ || ೧೨

ಮೂಗಿನಲಿ ಬೆರಳಿಟ್ಟು ಮಕುಟವ |
ತೂಗಿದನು ಮುರವೈರಿ ಶಿವಶಿವ! |
ಭೋಗಿಭೂಷಣ ಕೃತ್ತಿವಾಸ ನಮಶ್ಶಿವಾ ಎನುತ ||
ಜಾಗು ಥಣು ಥಣು ಪೂತು ಮಝು ಶತ |
ಯಾಗಜನು ಗಂಧರ್ವಕನ ಕೊಡೆ |
ಹೋಗು ಹೋಗೆಂದೆಂಬ ಕಾರಿಯುವಾಯ್ತುಲಾ! ಎಂದ || ೧೩

ಅಱಿಯಬೇಕಿನ್ನವನ ದುರ್ಗುಣ |
ವರಗುಣಾವಳಿಗಳನು ಸಾಮದ |
ಲಱಿದು ತುದಿಯಲಿ ಭೇದನೋಪಾಯವನು ನೆಱೆ ಕಂಡು ||
ಮರಳಿ ತತ್ಪ್ರತಿಕಾರ್ಯ ದಾನದ |
ಲಱಿದುಕೊಂಡಾಜೆಯಲಿ ಸರಿಸಕೆ |
ಬರದಿರಲು ನೆರೆ ದಂಡಸಾಧ್ಯದಿ ಸಾಧಿಸುವೆನೆಂದ || ೧೪

ಇದು ನಿದಾನವೆನುತ್ತ ಮನದೊಳು |
ಮದನನೈಯನು ತಿಳಿದು ಬಾರ್ಥೈ |
ಸಧಮಲಾತ್ಮಕಕ್ರೂರರಹಿತನಕ್ರೂರನಾಮದಲಿ ||
ಉದಿಸಿ ತೋಱುವೆ ನೀನು ನಿಪುಣ |
ತ್ವದಲಿ ಫಲುಗುಣನೊಡನೆ ನಾನಾ |
ವಿಧದಿ ನೀತಿರಹಸ್ಯವನು ನೆಲೆಗೊಳಿಸಿ ಬಾಯೆಂದ || ೧೫

ಅಱುಹುವುದು ನಯಭಯದಿ ನೀನಾ |
ಸುರಪಸುತನೊಡನುಚಿತವಲ್ಲೀ |
ಪರಿಗು ಮೂರ್ಖತೆ ಕೃಷ್ಣನೊಳು ಮುನ್ನಿರ್ದ ನಡೆವಱಿಯ ||
ಪರಿಯನೆಲ್ಲವ ನೀಗಿ ಹುಲುನರ |
ಗುಱಿಯ ತೆಱದಲಿ ಮುಂದುಗಾಣದೆ |
ಮಱೆವುದನುಚಿತವೆಂಬುದವನೊಡನೆಂದನಸುರಾರಿ || ೧೬

ಬೞಿಕ ಸರ್ವೋಪಾಯದಿಂದಲಿ |
ತಿಳಿದು ಬೇಗದಿ ಗಯನನೊಪ್ಪಿಸಿ |
ಕಳೆದು ಕಲ್ಮಷರಹಿತನಾಗೆನ್ನೊಡನೆ ಮೊದಲಿರ್ದ ||
ಬಳಕೆಯಿಂದಾಮುಱಿಕಿಯನೆಣಿಸದೆ |
ಇಳೆಯೊಳುತ್ತಮನೆನಿಸಿ ಮುನ್ನಿನ |
ಗೆಳೆತನದೊಳಿಹುದೆಂದು ನರನೊಡನುಸಿರು ಹೋಗೆಂದ || ೧೭

ಎನೆ ಹಸಾದವೆನುತ್ತ ಮಧುಸೂ |
ದನಗೆಱಗಿಯಕ್ರೂರ ನರನಿಹ |
ವನಕೆ ಬಂದನು ಕಂಡನಾಕ್ಷಣ ಧರ್ಮನಂದನನ ||
ವಿನಯಮಂ ಕೈಕೊಂಡು ಮನದೊಳು |
ಘನಹರುಷಮಂ ತಾಳಿ ಬೞಿಕವೆ |
ಜನಪತಿಯು ನುಡಿಸಿದನು ಕುಶಲವ ಕೇಳ್ದ ವಿನಯದಲಿ || ೧೮

ಕುಶಲವೆಮಗಕ್ರೂರ ಕೇಳೈ |
ಬಿಸಜನಾಭ ಮನೋಜ ಹಲಧರ |
ವಸುಮತೀ ಪತಿ ದೇವಕೀದೇವಿಯರು ಮೊದಲಾದ ||
ಶಶಿವದನೆಯರು ಬಂಧುವರ್ಗವು |
ಹಸನೆ ತೆಮ್ಮನು ಮತ್ತೆ ನೆನೆವನೆ |
ಅಸುರಮರ್ದನನೆಂದು ಕೇಳಿದನರಸ ವಿನಯದಲಿ || ೧೯

ಇಂದಿಗೆಲ್ಲರು ಕುಶಲ ಶ್ರೀಗೋ |
ವಿಂದನನುದಿನ ನಿಮ್ಮ ಕಥನವ |
ನಂದು ಮಿಗಿಲೆಣಿಸುತ್ತ ಕೊಂಡಾಡುವನು ಮುದದಿಂದ ||
ಇಂದುಕುಲದಗ್ಗಳರು ಬಾಂಧವ |
ವೃಂದದೊಳಗುತ್ತಮರು ಪಾಂಡವ |
ರೆಂದು ಬೞಿಕೀತೆಱದಲಿರುತಿಹರೆಂದನಕ್ರೂರ || ೨೦

ತಂದೆಯಾತನು ನಮಗೆ ಸಲಹುವ |
ಬಂಧುವಾತನು ಬಳಗವಾಗೋ |
ವಿಂದನಲ್ಲದೆ ಬೇಱೆ ತಮಗನ್ಯತ್ರ ಗತಿಯುಂಟೆ ||
ಕಂದುಕಸರಿಕೆಯಿಲ್ಲವೆನ್ನೊಳ |
ಗಿಂದು ಪರಿಯಂತರವು ನೀ ಕೇ|
ಳೆಂದು ಹರಿಯ ಗುಣಾವಳಿಯ ಕೊಂಡಾಡಿದನು ಭೂಪ || ೨೧

ಆವ ವೇಳೆಯೊಳಾವ ಕಾರಿಯ |
ವಾವರಿಸಿ ತಮಗೊದಗಲಾರಾ |
ಜೀವನಾಭನು ಸಕಲಲೋಕಾಸಕ್ತಿಯನು ಬಿಟ್ಟು ||
ಬಾವಮೈದುನತನದ ಮೋಹದ |
ಭಾವವನು ಕೈಕೊಂಡು ಸಿಮುಗಿ |
ನ್ನಾವ ಭಯ ಬೇಡೆಂದು ಪರಿಹರಿಸುತ್ತಲಿಹನೆಂದ || ೨೨

ಹಿಂದೆ ಕುರುಪತಿ ಬಹಳ ಕಪಟಗ |
ಳಿಂದ ಕಳೆವೆನು ಶತ್ರುಶೇಷವ |
ನೆಂದು ಮನದೊಳಗಿರಿಸಿ ಹಾಲಾಹಲದ ಭಕ್ಷ್ಯಗಳ ||
ತಂದು ಭೀಮಗೆ ಕೊಟ್ಟು ಸರ್ಪಗ |
ಳಿಂದ ಕಚ್ಚಿಸಿ ನಿದ್ರೆಗೈವನ |
ನೆಂದು ತಾ ಪರಿಹರಿಸಿ ಸಲಹಿದನೆಂದನಾಭೂಪ || ೨

ಕೇಳು ನೀನಕ್ರೂರ ಕುರುಪತಿ |
ಖೂಳಬುದ್ಧಿಯ ನೆನೆವನರಗಿನ |
ಮಾಳಿಗೆಯ ಪ್ರಾಧಗಳೋಲಗಸಾಲೆಮುಗಿಲುಗಳ ||
ಬಾಳ ಚಿತ್ರದಿ ರಚಿಸಿ ಬಚೀಕ ನೃ |
ಪಾಳನೆಮಗೆಂದಿತ್ತು ಪಾವಕ |
ನಾಳಿಗೊಳಿಸಲಿಕಂದು ಕಾದನು ಕೃಷ್ಣ ದಯದಿಂದ || ೨೪

ದ್ರುಪದಜಾತೆಯ ಮದುವೆಯೆಂದಾ |
ನೃಪಕುಲವ ನೆರಹಲ್ಕೆ ತೀರದ |
ವಿಪುಳಧನುವನು ನರಗೆ ಕೈವಶ ಮಾಡಿ ಕುರುಪತಿಯ ||
ಅಪರಿಮಿತವೀರರನು ಕೆಡಹಿದ |
ನಪಸರದ ಖಾಂಡವವನಗ್ನಿಗೆ |
ಚಪಳತೆಯೊಳಾಹಾರವಿಡಿಸಿದ ಕೃಷ್ಣನೊಲವಿನಲಿ || ೨೫

ದ್ಯೂತದಲಿ ಕುರುಪತಿಯ ರಾಜ್ಯವ |
ಸೋತ ಸಮಯದಿ ದ್ರೌಪದಿಯನಾ |
ಪಾತಕನು ದುಶ್ಶಾಸನೆಳೆತಿದೈತಂದು ಸಭೆಯೊಳಗೆ ||
ಭೀತಿಯಿಲ್ಲದೆ ಸೆಳೆತಿಯೆ ಸೀರೆಯ |
ನಾತರಳೆ ಮೊರೆಯಿಡುತ ನುಡಿಸಲು |
ಪ್ರೀತಿಯಿಂದಕ್ಷಯದ ವಾಕ್ಯದಿ ಕಾದನಸುರಾರಿ || ೨೬

ಮತ್ತೆ ವನವಾಸದಲಿ ಬಹಳಾ |
ಪತ್ತುಗಳ ಪರಿಹರಿಸಿ ಶಿವನಿಂ |
ದತ್ಯಧಿಕ ಬಾಣವನು ಕೊಡಿಸಿ ನಿವಾತಕವಚರನು ||
ತುತ್ತುಮುರುಮಾಡಿಸಿದ ರಣದಲಿ |
ನಿತ್ಯವಹ ಕೀರ್ತಿಯನು ಘಟಿಸಿದ |
ಮತ್ತಗಜರಿಪುಸಿಂಹ ಕೃಷ್ಣನು ಎಂದ ಯಮಸೂನು || ೨೭

ಅಹುದಹುದು ತಪ್ಪಲ್ಲ ಧರ್ಮಜ |
ಸಹಜವನುದಿನ ಚಿಂತಿಸುತ್ತಿಹ |
ನಹದಲಿ ರಾತ್ರಿಯಲ್ಲಿ ಸ್ವಪ್ನಸುಷುಪ್ತಿಗಳಲೊಲಿದು ||
ಅತಿಶಯನನಿದು ಸಿದ್ಧವದರಿಂ |
ದಹಿತ ಗಯನನು ಹರಿಗೆ ಯೊಪ್ಪಿಸಿ |
ಮಹಿತಸಾಮ್ರಾಜ್ಯವನು ಪಡೆವುದು ಎಂದನಕ್ರೂರ || ೨೮

ಎನಲು ಧರ್ಮಜನೆಂದ ಕೇಳೈ |
ವನಜನಾಭನ ಚರಣಕಮಲದ |
ಘನಪರಾಗಭ್ರಮರ ವೈಷ್ಣವಕುಲತಿಲಕ, ನೀನು ||
ವಿನಯದಿಂದರ್ಜುನನ ಕೇಳಿದ |
ರನುವನೇನನು ಪೇಳ್ವನದನಾ |
ದನುಜಹರಗೆಚ್ಚರಿಪುದೆಂದನು ಮಧುರವಚನದಲಿ || ೨೯

ಎನಲು ಬಳಿಕಲ್ಲಿಂದ ಪಾರ್ಥನ |
ಮನವ ತಿಳಿಯಲು ಬೇಕೆನುತಲಾ |
ವನಜನೇತ್ರನ ಪರಮಭಕುತನು ಬರಲು ಬಳಿಕೆದ್ದ ||
ಘನಹರುಷದಿಂದಿದಿರುವಂದಾ |
ತನನು ಮಧುರವಚೋವಿಲಾಸದೆ |
ವಿನಯದಲಿ ಕುಳ್ಳಿರಿಸಿ ಕೊಂಡನು ನಗುತ ಕಲಿಪಾರ್ಥ || ೩೦

ಏನು ಬಂದಿರಪೂರ್ವದರ್ಶನ |
ಮಾನನಿಧಿಗಳು ಮತ್ತೆ ನಾವಿಹ |
ಕಾನನಕೆ ಬರಲೆಮಗೆ ಸುಖವಿಂದಾಯ್ತು ಲೇಸೆನುತ ||
ಸಾನುರಾಗದಿ ಬಂದ ಕಾರ್ಯವ |
ನೀನು ಹೇಳೆಂದರ್ಜುನನನು ವಿನ |
ಯಾನುರಾಗದಿ ಕೇಳಲುಸುರಿದ ನಗುತಲಕ್ರೂರ || ೩೧

ಕಳುಹಿದನು ನಿನ್ನೆಡೆಗೆ ಗಯನೆಳ |
ವಳವ ಹೇಳಿಯೆ ಮತ್ತೆ ತನ್ನಯ |
ಬಳಿಗೆ ಖಚರನ ಕರೆದುಕೊಂಡೀಕ್ಷಣವೆ ಬಹುದೆಂದು ||
ತಳುವ ಮಾಡಲು ಸಲ್ಲದೀತನ |
ಕಳುಹಿದರೆ ಹರಿ ಪರಿಣಮಿಸುವನು |
ತಿಳಿದು ಕೋ ನೀನಱಿಯದಿಹ ಕಾರಿಯವದೇನೆಂದ || ೩೨

ಎಂದು ಹರಿ ನಿನ್ನೆಡೆಗೆ ಹೋಗೆಂ |
ತೆಂದು ನುಡಿದಾಗಯನನೀಕ್ಷಣ |
ತಂದಡಲ್ಲದೆ ತೀರದೆಂದೇ ಬುದ್ಧಿಗಲಿಸಿದನು ||
ಕಂದುಕಸರಿಕೆಯನು ವಿಚಾರಿಸ |
ದಿಂದು ನೀನೊಪ್ಪಿಸಲು ಹಸನಹು |
ದೆಂದು ಬಳಿಕಕ್ರೂರ ಪೇಳಲು ಪಾರ್ಥನಿಂತೆಂದ || ೩೩

ಅಕಟ! ಕಳುಹುವುದೆಂತೊ! ಗಯನನು|
ವಿಕಳನಾಗಿಯೆ ಬಂದು ಪ್ರಾಣವ |
ಸುಕರಮಪ್ಪೊಲು ಸಲಹಬೇಕೆಂದೆನುತ ದೈನ್ಯವನು ||
ಪ್ರಕಟಿಸುತ ಬಂದೆಱಗಿದನು ಬಾ |
ಧಕವ ಪೊತ್ತೊಪ್ಪಿಸುವೆನೆಂತೈ |
ರುಕುಮಿಣೀಧವನೆಡೆಗೆ ನೀ ಹೇಳೆಂದನಾಪಾರ್ಥ || ೩೪

ಎಲೆ ಮರುಳೆ, ಕಲಿ ಪಾರ್ಥ ಕೇಳಾ |
ಜಲರುಹಾಕ್ಷನು ಗಯನನೊಪ್ಪಿಸಿ |
ಕಳುಹಿದರೆ ಪರಿಣಮಿಪನಲ್ಲದಡೀಗ ಕೊಡೆನೆಂದು ||
ಕಳುಹಿದರೆ ಮಧುಬಂದ ಕಲಹವು |
ಸುಳಿದು ನಿಮ್ಮೊಳು ನಿಮಗೆ ಕಾರ್ಯವು |
ಬಳೆವುದಲ್ಲದೆ ಮಾಡದೆಮ್ಮಯ ಮಾತ ಕೇಳೆಂದ || ೩೫

ಬರಲು ಬಹುದೆ ವಿರೋಧವಿದನಾ |
ದರಿಸದೇ ಮುರವೈರಿ ಬಳಿಕೀ |
ಪರಿಯಲುಱಿಕೆ ತೃಣವನದೆ ಪರ್ವತವೆನಿಸಿ ಮನದೊಳಗೆ ||
ಪಿರಿದು ಕೋಪವ ಧರಿಸಿ ಮತ್ತಾ |
ನಱಿತ ತೆಱದಲಿ ಬಿನ್ನವಿಸಿ ಕೊಂ |
ಡರೆ ಕೃಪಾಳುವಿನಮಲಚಿತ್ತಕೆ ಬಹುದೆ ತಾನೆಂದ || ೩೬

ಇನ್ನೆಗಂ ಮನದೊಳಗೆ ಮುದದಿ ಜ |
ಗನ್ನಿವಾಸನು ನರನೊಳಿರೆ ಗಯ |
ನಿನ್ನೆನಗೆ ಕೈಸಾರ್ದನೆಂದೇ ತಿಳಿದುಕೊಂಡಿಹನು ||
ಅನ್ನೆಗಂ ತಾಂ ಪೋಗಿ ನಿನ್ನಯ |
ನಿರ್ಣಯವ ಪೇೞಲ್ಕೆ ಪೋಗಿಹು |
ದಿನ್ನು ನೀ ಲೇಸಾಗಿ ಮನದಲಿ ತಿಳಿದು ಕೋ ಎಂದ || ೩೭

ತವಕದಿಂದಾವಮಾಡಿಕೊಂಡಿಹ |
ನವಕಠೋರದ ಭಾಷೆಯನು ಸಲಿ |
ಸುವರೆ ಹರಿ ತಾನಲ್ಲದಿಳೆಯೊಳಗನ್ಯರಿನ್ನುಂಟೆ ||
ಶಿವಕಮಲಜಾಮರರು ಸಾಕ್ಷಿಯ |
ಲಿವನ ಸಲಹುವೆನೆಂಬ ಸಂಕ |
ಲ್ಪವನು ನಾ ಬಿಡೆನಿನ್ನು ಕೇಳಕ್ರೂರ ನೀನೆಂದ || ೩೮

ಕೇಳು ಫಲುಗುಣ ಕೃಷ್ಣರಾಯನು |
ಬಾಲತನದಿಂ ನಿನ್ನ ಕೂಡಣ |
ಕೇಳಮೇಳದಿ ಬಾವಮೈದುನತನದ ಮಮತೆಯಲಿ ||
ಪಾಲಿಸುವನದನಱಿತು ನೀನು ಗು |
ಣಾಳಿಗಳ ಬಲ್ಲಹನು ಮಿಗೆ ಲೋ |
ಕಾಳಿ ಮೆಚ್ಚಲು ಗಯನ ಕೊಡುವುದು ಲೇಸು ನಿನಗೆಂದ || ೩೯

ಈಗ ಗಯನನು ಕೊಡದೆ ಮೇಲಣ |
ತಾಗುಬಾಗನು ನೋಡದಿರೆ ಲೇ |
ಸಾಗ ಬಲ್ಲುದೆ ಪಾರ್ಥ ಪರಿಕಿಸೆ ನೀನು ಪ್ರೌಢನಲ ||
ಭೋಗಿಶಯನನು ನಿಮ್ಮ ರಕ್ಷಿಸು |
ತಾಗುಹೋಗುಗಳೆಲ್ಲ ಮುಂದಿವೆ |
ಬೇಗ ಖಚರನ ಕೊಟ್ಟು ಕಳುಹುವುದುಚಿತ ನಿನಗೆಂದ || ೪೦

ಶರಣುಹೊಕ್ಕನ ಪಿರಿದು ಮನ್ನಿಸಿ |
ಮರಳಿಯೊಪ್ಪಿಸಬಾರದೆಂಬುದ |
ನಱುಹುವೆನು ಕಲಿ ಪಾರ್ಥ ಕೇಳು ಸಮಾನಬಲಯುತಗೆ ||
ಧರಣಿಪಗೆ ಮೇಣ್ಪಗೆಗೆ ಬೞಿಕವೆ |
ಪರಿಕಿಸಲು ಕೊಡಲಾಗದಾಳ್ದಗೆ |
ಗುರುಗಳಿಗೆ ಪಿತೃದೈವವರ್ಗಕೆ ಕೊಡಲು ಬಹುದೆಂದ || ೪೧

ಇವನ ಹವಣಱಿತಲ್ಲವೀಯಾ |
ದವಕುಲಾಂಬುಧಿಸೋಮ ಪದ್ಮೋ |
ದ್ಭವಸುರೇಂದ್ರಮುನೀಂದ್ರರಕ್ಷಕ ವರಚತುರ್ದಶದ ||
ಭುವನದೊಡೆಯನು ಕೃಷ್ಣರಾಯನೊ |
ಳವಗಡವ ನೀನೆಣಿಸದೀಕ್ಷಣ |
ಕಿವನನೊಪ್ಪಿಸೆ ಲೇಸು ಘಟಿಸುವುದೆಂದನಕ್ರೂರ|| ೪೨

ವೇದವೇದಾಂತದಲಿ ಒಱಿಕವೆ |
ವಾದ ಹೊದ್ದದ ಮಹಿಮನೊಳಗಮ |
ರಾದಿ ಮನುಮುನಿಬ್ರಹ್ಮಪೂಜಿತಪಾದಪದ್ಮನಲಿ ||
ಆದಿಪುರುಷನೊಳಪ್ರಮೇಯನೊ |
ಳಾದಿದೇವೋತ್ತಮನೊಳಿಹ ಪರ |
ಕಾದಿಯಾದಚ್ಯುತನೊಳುಂಟೆ ಪ್ರತಿಜ್ಞೆ ನಿನಗೆಂದ || ೪೩

ಜಲಜಸಖಶತಕೋಟಿತೇಜನು |
ಜಲಜಶರಶತಕೋಟಿರೂಪನು |
ಜಲಜಭವಶತಕೋಟಿರಾಜಸಗುಣಗಳುಳ್ಳವನು ||
ಜಲಧಿಶತಕೋಟಿಯ ಗಭೀರನು|
ಜಲಜರಿಪುಶತಕೋಟಿಶಾಂತನೊ |
ಳೆಲ ಮರುಳೆ ಛಲವೇಕೆ ಕೊಡು ಗಂಧರ್ವಕನನೆಂದ || ೪೪

ಮುಳಿದೊಡಬುಜಭವಾಂಡಕೋಟಿಗ |
ಳೞಿವುವೀತನು ಪರಿಣಮಿಸೆ ಬೞಿ |
ಕುೞಿವುವಗಣಿತಮಹಿಮನಿಚ್ಛೆಯೊಳೊಂದು ನಿಮಿಷದಲಿ ||
ಹುಲುದನುಜಮನುಜಾಮರೋರಗ |
ಹುೞುಗಳನು ಹೇೞದಿರು ಮನದಲಿ |
ತಿಳಿದು ಕೋ ತಾನೆಂದ ಮಾತನು ಪಾರ್ಥ ನೀನೆಂದ || ೪೫

ಬಲ್ಲೆ ಜಗದಾಧಾರನೆಂಬುದ |
ಬಲ್ಲೆ ಬ್ರಹ್ಮೇಂದ್ರೇಶನೆಂಬುದ |
ಬಲ್ಲೆನಖಿಳಧಿದೈವನೆಂಬುದ ವಿವಿಧ ಬಗೆಗಳಲಿ ||
ಬಲ್ಲೆ ಹರಿವೈರದಲಿ ಕೆಟ್ಟಿಹ |
ಖುಲ್ಲದಾನವರೆಲ್ಲರನು ತಾ |
ಬಲ್ಲೆನಾದರೆ ಶರಣುಹೊಕ್ಕನ ಕೊಡುವುದಿಲ್ಲೆಂದ || ೪೬

ಪುಱಿಯಮಾತೇನಿನ್ನು ಲಕ್ಷ್ಮೀ |
ವರನು ಮನಬಂದಂತೆ ಮಾಡಲಿ |
ಹರಿಯ ಚಕ್ರಕೆ ತನ್ನ ಶಿರ ಮಿಗೆ ಮೀಸಲಾಗಿಹುದು ||
ಶರಣುಹೊಕ್ಕನ ಕೊಡೆನು ಕೊಡುವೆನು |
ಹರಿಗೆ ನಿಜತನುವಿದನು ಪೇೞೀ |
ತ್ಯೇನ ನಿಶ್ಚಯವಾಗಿಯೆಂದನು ನಗುತ ಕಲಿ ಪಾರ್ಥ || ೪೭

ಹಲವು ಬಗೆಯಲಿ ಪೇೞಿ ಬುದ್ಧಿಯ |
ಚಲಿತನಿವನೀಧರೆಯ ಮೂರ್ಖರ |
ತಿಲಕನಾಗಿಹನೆಂದು ತಲೆಯನು ತೂಗಿ ಬೆಱಗಾಗಿ ||
ಎಲೆ ಮರುಳೆ ಕೇಳಸುರವೈರಿಯ |
ಬಲುವಗೆಯ ಕೈವಿಡಿದು ಇಹಪರ |
ಗಳನು ನೋಡದೆ ಕೆಡುವೆಯೆನುತ್ತೈದಿದನು ಪಥವಿಡಿದು || ೪೮

ಮುರಳಿದನು ದ್ವಾರಕಿಗೆ ಬರುತವೆ |
ಸುರನರೋರಗವಂದ್ಯಗುರುರಿದ |
ನರಗೆ ತಾ ಹೇೞಿದುದನಾತನು ತನಗೆ ವಿವರಿಸಿದ ||
ಪರಿವಿಡಿಯ ಮಾತುಗಳನೆಲ್ಲವ |
ಹರಿಯೆ ಚಿತ್ತೈಸೆಂದು ತನ್ನಯ |
ಕರವ ನೊಸಲಿಗೆ ಚಾಚಿಯಕ್ರೂರಾಂಕನಾಕ್ಷಣದಿ || ೪೯

ಕಡೆಯ ಮಾತೇಕಿನ್ನು ಗಯಗಾ |
ನೊಡಲ ಹರಿಗೆ ಸಮರ್ಪಿಸುವೆ ತ |
ನ್ನೊಡೆಯನಾಗಿಹ ಕೃಷ್ಣಗಿಂತೆಂದುಸಿರು ನೀನೆಂದು ||
ಕಡುವಿರೋಧದ ಮಾತನಾಡಿಯ |
ಪೊಡವಿಪತಿ ಪಾಂಡುವಿನಣುಗ ಕೈ |
ವಿಡಿದಿಹನು ಗಂಧರ್ವಕನನಸುರಾರಿ ಕೇಳೆಂದ || ೫೦

ಲೇಸು ಲೇಸಕ್ರೂರ ಕೇಳಿದೆ |
ವೀಸುಸೂತನವಾಕ್ಯವನು ಮಿಗೆ |
ವಾಸವಾತ್ಮಜನಿನ್ನೆಗಂ ಪರಮಾಪ್ತನೆಮಗೆಂದು ||
ಮೀಸಲೞಿಯದ ಪ್ರೇಮದಿಂದಿಹೆ |
ವಾಸುರದ ಗಯನನು ಪಿಡಿದು ಸ |
ನ್ತೋಸಮಸ್ತವ ಮುಱಿದು ಕಳೆದನು ಹೇೞಲೇನೆಂದ || ೫೧

ಪೂರಿತದ ಕುಂಭೋದಕವು ಹೆಱೆ |
ಸಾರಿ ತುಳುಕಲು ಬಲ್ಲುದೇ ಮಿಗೆ |
ಮೀರೆದಪ್ಪುವುದರ್ಧಕುಂಭೋದಕವು ಪರಿಕಿಸಲು ||
ಗೌರಿಯುರಸನು ಕಮಲಜನು ಹರಿ |
ವೈರವನುಚಿತವೆಂದರೀಜಂ |
ಭಾರಿಪುತ್ರನು ಕೊಂಡನೆಮ್ಮಲಿ ಕಲುಷವನು ಕ್ರಯಕೆ || ೫೨

ಇನ್ನಿಗಂ ಗಂಧರ್ವನೇ ಪಗೆ |
ತನ್ನೊಡನೆಯೆನುತಿರ್ದೆ ಪರಿಕಿಸೆ |
ನಿನ್ನ ಬರವಿಂದರ್ಜುನನ ಪಗೆತನವು ಕಾಣಿಸಿತು ||
ಗನ್ನಗತಕದ ಮಾತಿನಿಂದವೆ |
ತನ್ನ ದೇಹವನಱಿಯದೀಗಲಿ |
ಮನ್ನಣೆಯ ಸಖತನವ ಮಱೆದನೆ ಲೇಸು ಲೇಸೆಂದ || ೫೩

ಸುರನಗದೊಳಾಮೊರಡಿಗಲ್ಗಳು |
ತರಣಿಯೊಡನೆ ತಮಿಸ್ರ ಪರಿಕಿಸೆ |
ಗರುಡನೊಳ್ ಭುಜಗಾಳಿ ಪಂಚಾಸ್ಯನೊಳು ಕರಿಕಲಭ ||
ಉರಗನೊಳ್ ಸೀರೊಳ್ಳೆ ವಿರಚಿಸೆ |
ಶರಭನೊಳ್ ಜಂಬುಕನು ಸೆಣಸಿದ |
ಪರಿಯದಾಯ್ತೆಂದಿನಲಿ ನರನೆನ್ನೊಡನೆ ಸೆಣಸಿದುದು || ೫೪

ಅಡವಿಯೊಳು ಹಣ್ಣುಹಂಪಲಿಗೆ ಮಿಗೆ |
ಗಿಡಗಿಡಂಗಳ ಬಿಡದೆ ತಿರುಗುವ |
ಸಡಗರವೊ ತಿಳಿಯಲ್ಕೆ ಪರ್ಣನಿವಾಸದುಮ್ಮಹವೊ ||
ಪೊಡವಿಪತಿ ಕೌರವಗೆ ತಮ್ಮಯ |
ಪೊಡವಿಯೆಲ್ಲವನೀಗಿ ತಾವ್ ನಿಜ |
ಮಡದಿಸಹಿತವೆ ಕಾನನದೊಳಿಹ ಮುದವೊ ಪೇೞೆಂದ || ೫೫

ಈಸರಿಯೊಳೇಕಾಕಿಯಾಗಿ ಪು |
ರೋಪಕಂಠವನುೞಿದು ಬಹಳಿತ |
ಭೂಪತೀತ್ವವನೀಗಿ ವನಚರತನವ ಕೈಕೊಂಡು ||
ರೂಪುರೇಖೆಯನಱಿಯನಿವಗಹು |
ದಾಪದಾರ್ಥಗಳೊಱಗಿ ರಾಜ್ಯವ |
ನಾಪನಿತು ಗಳಿಸಿದರೆ ಕಂಡವರಿಲ್ಲ ಕೇಳೆಂದ || ೫೬

ಈಱಭ್ಯಂತರವು ಮಿಗೆ ನ |
ಮ್ಮ ಸುಭದ್ರೆಯ ಕೊಟ್ಟು ಕಡೆಯಲಿ |
ಲೇಸು ಹೊಲ್ಲೆಹಗಳನು ನೋಡಲಿಕಾಯ್ತುಲಱತಮಗೆ ||
ಏಸಱವನೀಪಾರ್ಥ ನಮ್ಮೊಳು |
ವಾಸಿಪಂತವಮಾಡಲಿಂದಿಗೆ |
ಭಾಸುರದ ಚಕ್ರದೊಳು ಇನ್ನೆಗೆ ಸವಱೆನೇ ಎಂದ || ೫೭

ಒಂದೆರಡು ಬಗೆಯಲ್ಲಿ ಪೇಱಿಸಿ |
ನಿಂದಿರುವುದನುಚಿತವು ಮೂಱನೆ |
ಯಂದಮಂ ನೆಱೆ ತಿಳಿದ ಬಱಿಕವೆ ಕಾಂಬೆನೊಂದನುವ ||
ಎಂದೆಣಿಸಿ ತಿರುವೆಂಕಟೇಶನು |
ಮಂದಯಾನೆ ಸುಭದ್ರೆಯನು ಕರೆ |
ದಿಂದುವಂಶಜನೆಡೆಗೆ ಕಳುಹುವ ಭರದಿ ನಿಂದಿರ್ದ || ೫೮

ಅಂತು ಸಂಧಿ ೧೨ ಕ್ಕಂ ಪದ್ಯ ೭೫೩ ಕ್ಕಂ ಮಂಗಳಂ

## ಹದಿಮೂಱನೆಯ ಸಂಧಿ

ಸೂಚನೆ || ಹರಿಯ ನೇಮದಿ ರಮಣನೆಡೆಗತಿ |
ಹರುಷರಸದಲಿ ರಾಯಭಾರವ |
ಧರಿಸಿ ಭಾಮೆ ಸುಭದ್ರೆ ಬಂದಳು ದ್ವೈತಕಾನನಕೆ ||

ಕಲಿತರಿಪುಭೂಧರನಿವಾರಣ |
ಕುಲಿಶಜನಮೇಜಯನೆ ಲಾಲಿಸು |
ಚಲಪದದ ಕಾರಿಯುವನೆಲ್ಲವ ವಿಸ್ತರಿಪೆ ಮುದದಿ ||
ಬಲುಕಠೋರದ ಮಾತನಾಡುತ |
ಬಲರಿಪುವಿನಣುಗನ ಸಮೀಪಕೆ |
ನಳಿನವದನೆ ಸುಭದ್ರೆಯನು ಕಳುಹಲ್ಕೆ ಮನದಂದ || ೧

ಒಱೆ ಕಲೀಕೆಯೊಳಾಗದಿರ್ದಡೆ |
ತಿಳಿವೆ ಮೇಲಣ ಹದನನೆಂದಾ |
ಬಲಿಮಥನ ನಿಶ್ಚಯಿಸಿ ತನ್ನಯ ನಿಜಸಹೋದರಿಯು ||
ವಿಲಸಿತಾಮಲಭದ್ರೆಯನು ಸತಿ |
ಕುಲವಿಲಸಿತಸಮುದ್ರೆಯನು ಯದು |
ಕುಲದ ಜಾತೆ ಸುಭದ್ರೆಯನು ಕರೆಯೆಂದು ನೇಮಿಸಿದ || ೨

ಬಂದು ಚರರರಮನೆಯ ಬಾಗಿಲ |
ಮುಂದೆ ನಿಂದಬಲೆಯರಿಗಱಿಪುವು |
ದೆಂದುಸಿರಲವರೈದಿ ಪೇೞಲು ಕರೆಸಿ ದೇವಿಯರು ||
ಬಂದ ಕಾರ್ಯವ ಪೇೞಿಯೆನಲರ |
ವಿಂದನಾಭನು ನಿಮ್ಮ ಕರತರ |
ಲೆಂದು ಕಳುಹಿದನಿದುವೆ ಬಿನ್ನಹವೆಂದರಾಚರರು ||

ಎನಲು ಹರುಷಿತೆಯಾಗಿ ಬಂದಳು |
ವನಧಿಜಾತೆ ಸಹೋದರನ ಮುಖ |
ವನು ಮುದದಿ ನೋಡಲ್ಕೆ ಬಂದೊಲು ಯದುಕುಲಾಬ್ಧಿಯೊಳು ||
ಜನಿಸಿದ ಶ್ರೀಕೃಷ್ಣಚಂದ್ರಮ |
ಗನುವಿನಿಂದೆರಡೆಱಗಿ ಬೆಸನೇ |
ನೆನಗೆ ಪೇೞೆಂದಗ್ರಜನ ಕೇಳಿದಳು ನಸುನಗುತ || ೪

ಕೇಳು ತಂಗೆ ಸುಭದ್ರೆ ನಿನ್ನನು |
ಪಾಲಿಪರಸನ ಪರಿಯನೆಮ್ಮೊಳು |
ಖೂಳತನವನು ಮಾಡುತಿಹನಾಗಯನ ಕೈವಿಡಿದು ||
ಆಳವಾಡುವ ನುಡಿಗಳಲ್ಲಱಿ |
ಹೇೞು ನಾನಾ ತೆಱದೊಳವನನು |
ಬೀೞುಗೊಡದಿರೆ ಕಾರ್ಯ ಪೈಸರವೆಂದು ನೀನೆಂದ || ೫

ಮಱೆಯುಮಾತೇನಿನ್ನು ಮೈದುನ |
ಪರಮಸಖನೆಂದೆಂಬ ಹದನನು |
ಮಱೆದು ಕಳೆವೆನು ಬೞಿಕ ಗಯನನು ಕೊಡದೆ ಪರಿಹರಿಸೆ ||
ಅಱಿತು ನಡಕೊಳ್ಳೆಂದು ಕಡ್ಡಿಯ |
ಮುಱಿದು ಕೈಯಲಿ ಕೊಟ್ಟು ಬಾ ಹೋ |
ಗರವರಿಸದೀಕ್ಷಣದೊಳೆಂದಸುರಾರಿ ನೇಮಿಸಿದ || ೬

ನಗುತಲಣ್ಣನ ಮಾತಿಗೊಪ್ಪಿದ |
ಬಗೆಯನಂಗೀಕರಿಸಿ ಮರಳಿದ |
ಖಗಧರನು ಪತಿಯೆಡೆಗೆ ಹೋಗೆಂದೆಂಬ ಪರಿಪಿಡಿಯ ||
ಹಗರಣವನೇನೆಂಬೆ ಸನ್ನಲಿ |
ಮುಗಿದು ಸಂಧಿಯ ಪಾರ್ಥ ತನ್ನಯ |
ಬಗೆಗೆ ಒಪ್ಪನೆ ಎಂದು ಮನದೊಳಗೆಣಿಸಿದಳು ಕಾಂತೆ || ೭

ಮನೆಗೆ ಬಂದಳು ಮಾಡಿದಳು ಮ |
ಜ್ಜನವನಮಲಾಂಬರವನುಟ್ಟಳು |
ಘನಹರುಷದೊಳು ತೆಗೆಸಿದಳು ನವಭೂಷಣಾದಿಗಳ ||
ಮನಕೆ ಬಂದುದನಿಟ್ಟು ತನ್ನಯ |
ವನಿತೆವರ್ಗಕೆ ಕೊಟ್ಟು ದ್ರುಪದನ |
ತನುಜೆಗಖಿಳಾಭರಣವಸನಾದಿಗಳ ತರಿಸಿದಳು || ೮

ವಿವಿಧರತ್ನಾಭರಣಕಾಂಚನ |
ನವದುಕೂಲಂಗಳನು ಯಮಜಗೆ |
ಪವನಜಗೆ ಪಾರ್ಥಂಗೆ ಮಾದ್ರೀತನುಜರಿಗೆ ಬೇರೆ ಕ ||
ಯುವತಿ ದ್ರೌಪದಿಗಖಿಳಮುನಿಸತಿ |
ನಿವಹಕೀಯಲು ಬೇಕೆನುತಲಾ |
ಗವರವರ ತೆರನರಿತು ಹೇರಿಸಿದಳು ವಿಚಿತ್ರದಲಿ || ೯

ಮುಡಿಸಿದರು ಬಾಲಕಿಯರಾಕೆಯ |
ಮುಡಿಗೆ ನವಪರಿಮಳದ ಕುಸುಮವ |
ತೊಡಿಸಿದರು ಕುಂಕುಮದೊಳೊಪ್ಪುವ ನವ್ಯಕಂಚುಕವ ||
ಮಡದಿಯರು ಕತ್ತುರಿಯ ತಿಲಕವ |
ನಡುನೊಸಲಿಗಳವಡಿಸೆ ಹೊಗರಿನ |
ಸಡಗರದ ಹೊಸಜವ್ವನದಲಿ ಸುಭದ್ರೆಯೊಪ್ಪಿದಳು || ೧೦

ವರವಿರಾಜಿತಕಮಲಮಧ್ಯದೊ |
ಳೆರಕೆಗಳ ಪಸರಿಸುತಲಾಡಿ |
ದೆರದಿ ನೆಲಸಿರ್ಪಂತೆ ಮುಖಪಂಕೇಜಮಧ್ಯದೊಳು ||
ಸ್ಮರನ ಕಾರ್ಮುಕಕೆಣೆಯೆನಿಪ ಪು |
ರ್ಬೆರಡ ನಡುವಿನೊಳೆಸೆವ ನವಕ |
ಸ್ತೂರಿಯ ಬೊಟ್ಟಮರಿತು ಸುಭದ್ರಾದೇವಿಯಂಗದಲಿ || ೧೧

ಬೞಿಕಲೀತೆಱನೆಲ್ಲವನು ತಾ |
ಯ್ಗಳಿಗೆ ತಂದೆಗೆ ಬಲಗೆ ಸಾತ್ಯಕಿ |
ಜಲಜಮುಖಿರುಕ್ಮಿಣಿಯಶೋದಾದ್ಯಖಿಳಸತಿಯರಿಗೆ ||
ನೆಲೆಗೊಳಿಸಿ ಪಾಂಡವರಿಗಗ್ಗದ |
ಲಲನೆ ದ್ರೌಪದಿಗೀವುದೆಂದರೆ |
ವಿಲಸದಾಭರಣಾದಿವಸನವನೀಯಲಡುಕಿದಳು || ೧೨
ಪಿಂದು ಮಾತುಗಳೆಲ್ಲವನು ವಿ |
ಸ್ತರಿಸಿ ನಯಭಯನೀತಿಮಾರ್ಗದಿ |
ತರಣಿಜಾನಿಲಸುರಪಮಾದ್ರೀಜಾತರೆಂಬರಿಗೆ ||
ಅರಸಿ ದ್ರೌಪದಿವೆರಸಿ ನಾನಾ |
ಪರಿಯಲೆಲ್ಲರು ಮೆಚ್ಚೆ ನೀ ಪೇ |
ೞ್ದರವೆ ಗಯನನು ತಹುದೆನುತ ವಸುದೇವನಪ್ಪಿದನು || ೧೩
ಮಗಳೆ ಬಾ ನೀ ಪೋಗಿ ದೃಪದನ |
ಮಗಳಿಗಾನತೆಯಾಗಿಯವಳಿಂ |
ದಗವಿರೋಧಿಯ ತನುಜಗತಿನಯನೀತಿಮಾರ್ಗದಲಿ ||
ವಿಗಡತನ ಪುಟ್ಟದೊಲು ಪತಿಯುಹ |
ಬಗೆಯಱಿತು ಬಹುದೆಂದು ದೇವಕಿ |
ದೃಗುಯುಗದ ಜಲವೊಸಱೆ ಕಳುಹಿದಳಣುಗಿಯನು ಒೞಿಕ || ೧೪
ಒೞಿಕಲೆಲ್ಲರಿಗೆಱಗಿಯವರ್ಗಳ |
ಹರಕೆಗಳ ಕೈಕೊಂಡು ತನ್ನಯ |
ಬೞಿವಿಡಿಯಲ್ಕೈತಪ್ಪ ಸುಜನವ ಪುರಕೆ ಕಳುಹಿಸುತ ||
ಲಲನೆಯರ ಒಡನೈದಲೊಲ್ಲದೆ |
ಬೞಿ ಸರಿಸುತಭಿಮನ್ಯು ಬರುತಿರೆ |
ಪುಳಕಹರುಷದೊಳಪ್ಪಿ ಮಗುಳಿಂತೆಂದಳಾತ್ಮಜಗೆ || ೧೫
ತನುಜ ಬಾಯೆನ್ನಾನೆ ಬಾಯೆ |
ನ್ನನುಜ ಬಾಯೆಲೆ ಕಂದ ನಿನ್ನಯ |
ಜನಕನಲ್ಲಿಗೆ ಮಾವ ಕಳುಹಲು ಪೋಪೆ ಬೇಗಸಲಿ ||
ಘನದಿವಸವಿಹುದಿಲ್ಲ ನಾಲ್ಕನೆ |
ದಿನಕೆ ತಂ ಬಹೆನಂದು ಪರಿಯಂ |
ತೆನುತ ಚಿಂತಿಸಬೇಡ ನೀ ಮರಳೆಂದು ಕಳುಹಿದಳು || ೧೬

ಎಲೆ ಮುನೀಶ್ವರ ಕೇಳ್ವಿಚಾರಿಸ |
ಇಳೆಯೊಳಗೆ ದ್ರೌಪದಿಯು ವಿಭ್ರಮ |
ಕುಲಶಿರೋಮಾಣಿಕ್ಯವೆಂಬರು ಸಕಲಸತಿಯರೊಳು ||
ತಿಳಿಯಲೀಗ ಸುಭದ್ರೆಯುಂದವ |
ಬಳಕೆಯನು ಬಗೆಯುತ್ತಿಯೆ ವಿವರಿಸಿ |
ನಲವಿನಿಂದವೆ ಪೇಳಬೇಕೆಂದನು ಮಹೀಪಾಲ || ೧೭

ಜಗದೊಳಗೆ ಚೆಲುವಿಕೆಗೆ ದ್ರುಪದನ |
ಮಗಳು ತದನಂತರದೊಳೆಣಿಸಲು |
ನಗಧರನ ಸಹಜಾತೆಯಲ್ಲದೆ ಕಾಣೆನನ್ಯರನು ||
ಹಗರಣದ ಮಾತಲ್ಲವಳ ಪೊಸ |
ಬಗೆಯ ಲಾವಣ್ಯದ ಸುಲಕ್ಷಣ |
ದಗಣಿತದ ಮಹಿಮೆಯನು ವರ್ಣಿಪೆನರಸ ಕೇಳೆಂದ || ೧೮

ವಿಲಸಿತದ ರಕ್ತಾಬ್ಜಕಾಂತಿಯ |
ಚೆಲುವ ತಳೆದು ವಸಂತಕಾಲದಿ |
ತಳಿತ ನವಪಲ್ಲವರುಚಿಯನನುಕರಿಸಿ ಬಾಲಕಿಯ ||
ಲಲಿತಪಾದಾಂಗುಲಿಗಳೊಪ್ಪಿದು |
ವಲತಿಗೆಯ ಹಂಗೇಕೆನುತ ನಿ |
ರ್ಮಲತೆಯನು ಕೈಕೊಂಡು ರಂಜಿಪುವರಸ ಕೇಳೆಂದ || ೧೯

ಶರಧಿತಟದೆ ಲತಾಖ್ಯಮಾಗವ |
ತರಿಸಿ ಫಲವೇನೀಸುಭದ್ರೆಯು |
ಸುರುಚಿರತ್ನವ ಪೊಂದಲೊಡನೆ ಸಮಸ್ತವೈಭವವು ||
ದೊರಕುವುದು ತಮಗೆನುತ ವಿದ್ರುಮ |
ವುರುತರಾಂಗವ ತಾಳಿ ಕೋಮಲ |
ತರವೆನಿಸಿ ರಂಜಿಸಿತು ತನುವೇನೆಂಬೆನಚ್ಚರಿಯ || ೨೦

ಪತಿಯ ದೇಹದ ನೀಲಲೇ ನಿಜ |
ಸತಿಯರಿಗಬೇಕೆಂದು ಚಂದ್ರನ |
ಗತಿಯಲ್ಲೈದುವ ತಾರಕಾಗಣದಂತೆ ಶೋಭಿಸುವ ||
ವಿತತಚಂದ್ರನಿಭಾಸ್ಯೆಯಂಘ್ರಿಯ |
ಲತಿಮನೋಹರದಿಂದೆಸೆವ ನಖ |
ತತಿ ವಿರಾಜಿಸಿ ಬೆಳಗುತಿಹುವೇನೆಂಬೆ ಕೇಳೆಂದ || ೨೧

ಉಸಿರಿ ತೋಱಲು ಬಾರದಾರಿಗೆ |
ವಸುಧೆಯೊಳು ತನ್ನಾಯುಮುರ್ವ |
ನುಸಿರೆ ಮುನ್ನ ಜಟಾಯು ರಾವಣಗುಸಿರಿದಂತಹುದು ||
ಹಸನಿದಲ್ಲೆಂದಾನೆಯೆರಡಿ |
ರ್ದೆಸಕದಲಿ ಚೆಲ್ವಾಂತು ನೋಱಿಟಿಹು |
ವಸಿಯುಳಾಮೋಗಾಲ್ಗಳೇನೆಂಬೆನು ವಿಚಿತ್ರವನು || ೨೨

ಸ್ಮರನೃಪಾಲನು ಕಂದಿ ಪಿಡಿರಿಸ |
ಸುರುಚಿರದ ವಲ್ಲಕಿಗೆ ಕುಱುಪು |
ವಿರಚಿಸಿದ ಚೆಲ್ವಾದ ಬರಡೆಗಳೆಂಬೊಲಾಸತಿಯು ||
ಸರಸಿಜಾಂಘ್ರಿದ್ವಯದೊಳೊಪ್ಪುವ |
ಸರಡೆಗಳು ಚೆಲ್ವಾಂತು ರಾಜಿಸ |
ಪರಿಯನಾನೇನೆಂಬೆನೆಲೆ ಭೂಪಾಲ ಕೇಳೆಂದ || ೨೩

ಇಳೆಯ ಜನರನು ಮಗನವಿರಹಾ |
ನಲನ ಮುಖದೊಳಗಾನಿಸಲು ಕೂ |
ರಲಗ ಸಾಣೆಯ ಪಿಡಿಸಿ ಬಱಿಕವನೆಲ್ಲವಿಂಬಿಡುವ ||
ವಿಲಸಿತದ ಹೊಡೆಯಂತೆ ಜಂಘೆಗ |
ಳಳಿಕುಲಾಳಕಿಗೆಸೆದುವಷ್ಟರಿ |
ದಳಿದು ಕಾಲೊಪ್ಪಿದುವು ಜನಮೇಜಯನೆ ಕೇಳೆಂದ || ೨೪

ಅಡವಿಯೊಳಗಾತಪದ ಹೊಯ್ಲಲಿ |
ಬಿಡದೆಯನುದಿನ ಸುಖವ ಕಾಣದೆ |
ಕೆಡಲು ಕಾರಣವೇನೆನುತಲಱಿಸಿದುವು ಸುಸ್ಥಳವ ||
ಉಡಲು ತೊಡಲುಂಟೆಂದು ಪರಿಕಿಸಿ |
ಪಡಗರದಿ ಪೊಂಬಾಱಿಗಳು ಬಂ |
ದೊಡನೆ ಸತಿಯನು ಸಾರಿ ಮಿಗೆ ಪೆರ್ದೊಡೆಗಳಾಗಿಹುವು || ೨೫

ಇಳೆಯೊಳುಳ್ಳ ಸಮಸ್ತ ಸೌಂದರ |
ಗಳನು ತೆಗೆದಜನೀಸುಭದ್ರಾ |
ಲಲನೆಯನು ನಿರ್ಮಿಸಲು ತದ್ರೂಪ ಮೇರೆವರಿದುಕ್ಕಿ ||
ಬಲುಪ್ರವಾಹವದಾಗಲಿತ್ತಡಿ |
ಬಳೆದ ಸೈಕತವೆನಲು ಸತಿಯಳ |
ಬಲುನಿತಂಬಗಳೆಸೆದುವತಿ ಗುರುತರ ವಿರಾಜಿಸಲು || ೨೬

ಊರಳ ಬಲುಹೞಿಯದೆ ಮಹೀಧ್ರವ |
ಹೊಱುವೆನೆಂದಂಗೈಸಿದರೆ ಮಿಗೆ |
ಮೆಱೆಸಿಯ ಬಲ್ಲದೆಯೆಂಬ ಗಾಡೆಯ ತಿಳಿದು ತಿಳಿಯದೊಲು ||
ತರುಣಿಯಸಿನಡು ಕುಚಗಿರಿಗಳನು |
ಧರಿಸಲಾಱದೆ ಸಡಸಡುಗಿ ತ |
ನ್ನಿರವಿದುಂಟಿಲ್ಲೆಂಬ ತೆಱದಲಿ ಕಣ್ಗೆ ರಾಜಿಸಿತು || ೨೭
ಎಸೆವ ಮಧುಮಾಸದೊಳಗಂಗಜ |
ಶಶಿಮುಖಿಯರೊಡಗೂಡಿ ಕ್ರೀಡಿಸ |
ಲೊಸೆದು ಕಟ್ಟಿಸಿದಮಲಪದ್ಮಾಕರದೊಳಗೆ ಮೆಱೆವ ||
ಹಸನೆನಿಪ ಸುೞಿಯಂತೆ ಸೌಂದರ |
ರಸವಿರುವ ತನುಸರಸಿಯೊಳು ರಂ |
ಜಿಸುವ ನಾಭಿಯು ಕಣ್ಗೆ ಚೆಲ್ವಾಗೊಪ್ಪುತಿಹುದೆಂದ || ೨೮
ಲೋಕದೊಳಗತಿರೂಪವತಿ ಜಗ |
ದೇಕನಾರೀರತ್ನವಿವಳಿಗೆ |
ಸೋಕುವುದು ಜನದೃಷ್ಟಿ ಪರಿಹರವಿದಕಿದೀಗೆನುತ ||
ಆಕಮಲಸಂಭವನು ಬರೆದನೊ |
ಜೋಕೆಯಲಿ ಮೂರೇಖೆಗಳನೆನ |
ಲಾಕುಮಾರಿಗೆ ವರವಳಿತ್ರಯವೆಸೆದುವೈಯೆಂದ || ೨೯
ಲಲನೆಯುಳ ಶೃಂಗಾರಪೂರಿತ |
ವಿಲಸಿತದ ಘನನಿಮ್ನನಾಭಿಯ |
ಕೊಳಕೆ ಮನಸಿಜನಿೞಿವುದಕೆ ಹರಿನೀಲಮಣಿಗಳಲಿ ||
ನೆಲೆಗೊಳಿಸಿ ಸೋಪಾನಮಾರ್ಗವ |
ನಳವಳಿಸಿದವೊಲೊಪ್ಪುತಿರ್ದುವು |
ಚಲುವಿಕೆಯ ಬಡಬಾಸೆಯೊಂದವ ಹೇೞಲೇನೆಂದ || ೦
ಕಮಲಭವ ಬರೆದನಿತು ದಿನದೊಳ |
ಗಮರಿಕೆಯ ಸೌಖ್ಯವನು ಪಡೆವುದು |
ಸುಮುಖತನವಲ್ಲದೊಡೆ ಬೞಿಕಾಗಿರ್ದ ದಿವಸಗಳ ||
ಕ್ರಮದಿ ಲೆಕ್ಕವ ಮಾಡಿ ಕೊಡುವನೆ |
ತಮಗೆನುತ ಚಕ್ರಾಹ್ವವಿಹಗ |
ಮನದಂತೆಡೆವಿಡದೆ ಕುಚಯುಗವೆಸೆದುದಾಸತಿಗೆ ?|| ೩೧

ಸರಸಿಯೊಳಗುದ್ಭವಿಸಿ ಬೆಳೆದಿಹ |
ಸರಸಿಜದ ನಾಳಂಗಳೊಲು ತನು |
ಸರಸಿಯುಲಿವುದಿಸಿರ್ಪವೀಕೆಯ ಬಾಹುಯುಗ್ಮಗಳು ||
ಪರಿಕಿಸಿದಡೇನೆಂಬೆ ಮನ್ಮಥ |
ವಿರಹಿಗಳ ಬಂಧಿಸಲು ರಚಿಸಿದ |
ವರಸುಪಾಶದ್ವಯುಗಳೆನೆ ನಿಜಕರಗಳೊಪ್ಪಿದುವು || ೩೨
ಹರಿಕರದೊಳಿಹ ಪಾಂಚಜನ್ಯದ |
ಸಿರಿಯ ಸಡಗರದಂತೆ ಲೋಕದ |
ತರುಣಿಯರ ಕಂಠಗಳನೇಱಿಪ ಸೌಂದರವನಾಂತು ||
ಉರುತರದ ವೈಖರಿಯೊಳದು ನೋ |
ಟ್ಪಿರಿಗೆ ಬೆಱಗನು ತೋಱಿಬಱಿಕಾ |
ನರನ ತರುಣಿಯ ಶುಭ್ರಗಳವೆಸೆದಿಹುದು ಕೇಳೆಂದ || ೩೩
ಪರಿಕಿಸಲು ತೆತ್ತೀಸರಹ ನಿ |
ರ್ಜರರನುಱೆ ಪಾವನವ ಮಾಡುವ |
ಭರವ ಮಿಗೆ ಕೈಕೊಂಡು ನಭದೊಳು ಮುದದಿ ನೆಲಸಿರ್ಪ ||
ಸುರತರಂಗಿಣಿಯಲ್ಲಿ ಜನಿಸಿದ |
ವರಹಿರಣ್ಮಯ ಕಮಲದಂದದ |
ಲಿರುತಿಹುದು ಜಸವಾಂತುಸತಿಯುಳ ಮೊಗ ವಿರಾಜಿಸುತ || ೩೪
ಅತಿಶಯದೊಳರ್ಜುನನ ಕಂಗಳಿ |
ಗತಿಮನೋಹರಮಾಗಿ ತೋಱುವ |
ಗತಿಗೆ ಸರಿಯೆಂದಬುಜಜನು ಮುಕುರಂಗಳೆರಡುವನು ||
ಸತಿಯ ಮುಖದಲಿ ಸೃಜಿಯಿಸಿದನೋ |
ಸತತ ನೋಡುವ ತೆಱದೊಳೆನಲು |
ನ್ನತಕಪೋಲದ್ವಯುಗಳೆಸೆದುವನೇಕಶೋಭೆಯಲಿ || ೩೫
ಮೂಜಗದ ವರ್ಣಂಗಳೊಳಗೆ ವಿ |
ರಾಜಿಸುತ ಶುಭಕರವನೀಯುತ |
ಮೂಜಗದಲಷ್ಟೈಶ್ವರ್ಯಗಳ ಬರೆದನಿತು ಮಾತ್ರದಲಿ ||
ಭೂಜನರಿಗೊದವಿಸುತ ಮೆಱೆದಿಹ |
ಸೋಜೆಗದ ಶ್ರೀಕಾರಯುಗದಂ |
ತಾಜಲಜಲೋಚನೆಯ ಕರ್ಣದ್ವಯುಗಳೊಪ್ಪಿದುವು || ೩೬

ವರಫಲವನರೆಗಳೆದು ಬಿಂಬವ |
ಲಟಕಟಿಸಿ ಚಾರುಪ್ರವಾಳಕೆ ಕಠಿನತೆಯ |
ಮಿಗೆ ರಚಿಸಿ ಬಹಳರುಣತೆಯ ಕೈಕೊಂಡು ||
ಪಟುತನವನಳವಡಿಸಿ ಮಧುರೋ |
ತ್ಕಟದಲುಱೆ ರಾಜಿಸುತಲಿರ್ದುದು |
ಕುಟಿಲಕುಂತಳೆಯಧರವತಿಶಯದಿಂದಲೊಪ್ಪಿದುದು || ೩೭
ಸುರುಚಿರದ ಕಪ್ಪುರದ ಭರಣಿಯೊ |
ಳುರುವ ಮೌಕ್ತಿಕಮಾಣಿಕಂಗಳ |
ಸರಸಿಜವ ಬೈತವೊಲು ನಾರಿಯ ವದನದೊಳಗಿರ್ದ ||
ಉರುರುಚಿಯ ವರದಂತಪಙ್ತಿಯ |
ಪರಿಯನೇನೆಂದೆಂಬೆ ನೋಡಲು |
ಸುರನರೋರಗರೊಳಗೆ ಪಾಸಟಿಯಿಲ್ಲ ಕೇಳೆಂದ || ೩೮
ಕುಸುಮದೊಳಗಚ್ಚರಿಯ ಸೂನವು |
ಪಸರುವಡೆದುದಿಸಿರ್ಪುದದು ತಾ |
ವಸುಧೆಯೊಳು ಪೊಸತೆನುತಖಿಳಜನವೆಲ್ಲ ಪೊಗಱಲ್ಕೆ ||
ಹಸನೆನೆ ವಿಚಿತ್ರದೊಳು ರಾಜಿಪ |
ಶಶಿಮುಖಿಯ ವದನಾಬ್ಜಮಧ್ಯದೊ |
ಳೆಸೆವ ಚಂಪಕಕುಸುಮದೊಲು ನಾಸಿಕವು ಮೆಱೆದಿಹುದು || ೩೯
ಜನರನರೆನಿಮಿಷದಲಿ ಸರಳಿನ |
ಮೊನೆಗಳಿಂಗಿಸಿ ವಿರಹದತಿವೇ |
ದನೆಯೊಳಾೞಿಪೆನೆಂದು ತನ್ನೈದಂಬಿನೊಳಗೆರಡ ||
ಮನಸಿಜನು ಬೞಿಕೈದಿ ತಂದಾ |
ನನದೊಳಗೆ ಬೈಚಿಟ್ಟ ತೆಱದಲಿ |
ವನಿತೆರನ್ನಳ ನೇತ್ರಯುಗಮೆಸೆದಿಹುದು ಕೇಳೆಂದ || ೪೦
ಅಗಡು ಮನುಮಥನಿರದೆ ಕೋಪದಿ |
ಜಗದೊಳುದಿಸಿಹ ಸ್ತ್ರೀಪುರುಷರಿಗೆ |
ವಿಗಡವನು ಪುಟ್ಟಿಸುವೆನೆನುತವೆ ಬಿಲ್ಲುಗಳನೆರಡ ||
ತೆಗೆದು ಹೆದೆಗೇಱಿಸಲು ಬಾಗಿದ |
ಬಗೆಯೊಳಸಿಯಳ ಪುರ್ಬುಗಳು ಪೊಗ |
ರೊಗುವ ಚಿತ್ತದೊಳೆಸೆದಿಹುವು ಕೇಳೆಂದನಾಮುನಿಪ || ೪೧

ಲೋಕದೊಳಗತಿರೂಪವತಿ ಜಗ |
ದೇಕನಾಥನ ಪ್ರಿಯಸಹೋದರಿ |
ನಾಕದರಸನ ತನಯನಂಗನೆಯಾಗಿ ಬಾಳ್ಗೆಂದು ||
ಆಕಮಲಸಂಭವನು ಕನಕದ |
ಲೇಖನದ ಪಟ್ಟಿಯನು ಬರೆದದ |
ಜೋಕೆಯಿಂ ಕಟ್ಟಿದವೊಲಿರ್ದುದು ಹಣೆ ವಿರಾಜಿಸುತ || ೪೨

ಸುಧೆಯ ಸೇವಿಸುತಿರೆ ಶಶಾಂಕನು |
ಮಧುರಿಪುವಿಗೆಮ್ಮಳವ ಸೂಚಿಸಿ |
ಸುದತಿಯಾನನವಾಗಿ ಸೇರಲು ಬಿಡುವೆವೇ ತನ್ನ ||
ಕದುಬಿ ನುಂಗುವೆವೆನುತಲಪರಾಂ |
ಗದಲಿ ನಿಂದಿಹ ಕಾಳಸರ್ಪನ |
ವಿಧದಿ ವೇಣೀಭಾರವೊಪ್ಪಿತು ಹೇಳಲೇನೆಂದ || ೪೩

ವರಸುವರ್ಣಕೆ ನವ್ಯ ಪರಿಮಳ |
ದೊರಕಿದಂದದಲೀಸುಭದ್ರೆಯ |
ಸುರುಚಿರಾಂಗದ ಪದ್ಮಗಂಧವು ರಾಜಿಸುತ್ತಿರಲು ||
ನಿರುತಸುಖವನು ದೊರಕೊಳಲು ಕಾ |
ದಿರುವ ತುಂಬಿಗಳಂತೆ ಪೊಪ್ಪಿಹ |
ಉರುಶಿರೋಜಗಳೆಸೆದುವಾವಾಮಾಸಿನಿಗೆ ಚೆಲ್ವೆಸಲಿ || ೪೪

ಬಂದಳರಮನೆಯಿಂದ ಮುದದಲಿ |
ನಿಂದು ಕರೆಸಿದಳಾಗ ನಾರೀ |
ವೃಂದವನು ಸೀಗುರಿಯ ಕಾಳಂಜಿಗಳ ಗಿಂಡಿಗಳ ||
ಬಂಧುರದ ಹಡಪಿಗರು ನವರೈ |
ತಂದು ತಂತಮ್ಮನುವುಗಳಲೇ |
ನಿಂದರಾಕ್ಷಣ ಮನಸಿಜನ ಮದದಂತಿಗಳ ತೆರದಿ || ೪೫

ಕನಕದಾಂದೋಳವನು ಬೆಸನವ |
ರನುಗೊಳಿಸಲೇರಿದಳು ನಾರೀ |
ಜನರುಭಯಪಾರ್ಶ್ವದಲಿ ತಾಯೆ ಹಸಾದವೆನುತಿರಲು ||
ಮನದೊಳಗೆ ಶಶಿವಂಶತಿಲಕನ |
ನೆನಹಿನಲಿ ನಸುನಗುತ ಬಂದಳು |
ಮನುಮಥನ ಮಸೆದಲಗಿನಂತೆ ಸುಭದ್ರೆ ವೇಗದಲಿ || ೪೬

ಸುರಪುರದ ನಾರಿಯರ ಸೊಬಗನು |
ಪರಕುಮಾಡದ ಭೋಗಿಗಳ ಕಿನ್ನ |
ರರ ಬಾಲಕಿಯರಂದವ ನೇಳಿಸುತಲಿರ್ಪ ||
ಮಿರುಪ ಕಬರಿಯ ಪದ್ಮಗಂಧದ |
ತರಳನಯನದ ಸಿಂಹಮಧ್ಯದ |
ನೆರೆವಿಡಾಯದ ಮಾನಿನಿಯರೈದಿದರು ಕಾಮಿನಿಯ || ೪೭
ತಿಳಿಯೆ ಸುಗ್ರೀವಾಖ್ಯದಂಗದ |
ನಳನಳಿಪ ಕುಮುದಾಯತಾಕ್ಷದ |
ಸುಳಲಿತದ ನೀಲಾಳಕೌಘದ ತಾರಹಾರಗಳ ||
ವಳಯದಿಂದವೆ ರಾಮಸೇನೆಯು |
ಬಳಕೆಯೊಳು ಪೆಸರಾಯ್ತು ಪಾರ್ಥನ |
ಲಳನೆಯೆಡಬಲದಲಿ ವಧೂಜನ ಸಂದಣಿಸಿತೆಂದ || ೪೮
ಅರಳ್ದಮಲ್ಲಿಗೆ ಜಾಜಿ ಸಂಪಗೆ |
ದುಱುಬುಗಳ ಕಪ್ಪುರದ ಮಲಯಜ |
ಪರಿಮಳದ ನವಲೇಪನಾಂಗದ ಕುಂಕುಮಾಂಕಿತದ ||
ವರದುಕೂಲದ ಕಂಚುಕಗಳಲಿ |
ಸಿಱಿಗಳೊಯ್ಯಾರದಲಿ ನಡೆದುದ |
ವಿರಚಿಸುವೆನೆಂತವರಲಂಕಾರಗಳ ತಾನೆಂದ || ೪೯
ಜಾಣಿಮೆಯ ಬಗೆಗಳಲಿ ಜಗ್ಗಿನ |
ಕೇಣದೊಯ್ಯಾರದಲಿ ಚಂಚಲ |
ದೇಣದಾಯತದೃಷ್ಟಿಯಲಿ ಕುಚದುನ್ನತತ್ವದಲಿ ||
ವೇಣಿಗಳ ಸಿಡಿಮಿನಲಿ ಬೆಡಗಿನ |
ವಾಣಿಗಳ ಚದುರಿನಲಿ ಚಂದದ |
ವೀಣೆಗಳ ನುಡಿಸುತಲಿ ಬಂದರು ಸತಿಯರೊಗ್ಗಿನಲಿ || ೫೦
ಮದಗಜದ ಯಾನದಲಿ ಮನದೊಳು |
ಮುದದ ಮುರುಕದ ಬಿಂಕದಲಿ ವರ |
ತ್ರಿದಶಸತಿಯರ ಸೌಂದರದಸಂಪದದ ಸೌಖ್ಯದಲಿ ||
ಪದುಮದಾಯತವದನದಲಿ ನವ |
ಪದುಮಗಂಧದ ದೇಹದಲಿ ಕರ |
ಪದುಮಪಲ್ಲವಭಾರದಲಿ ನಡೆತಂದರಬಲೆಯರು || ೫೧

ತಾರೆಗಳ ಮಧ್ಯದಲಿ ರಾಜಿಪ |
ಚಾರುರೋಹಿಣಿಯಂತೆ ವರವೃಂ |
ದಾರಕೀ ಮಧ್ಯದಲಿ ಮೆಱೆವಿಂದ್ರಾಣಿಯೆಂಬಂತೆ ||
ಕ್ಷೀರಸಾಗರಮಧ್ಯದಲ್ಲಿಹ |
ಶ್ರೀರಮಣಿಯೆಂಬಂತೆ ಸತಿಯರ|
ವಾರಮಧ್ಯದೊಳೆಸೆದಳಂದು ಸುಭದ್ರೆಯೊಲವಿನಲಿ || ೫೨

ಶಿರದ ಮಣಿಕಾಂತಿಯಲಿ ಫಣೆಯಲಿ |
ಮೆಱೆವ ಮುತ್ತಿನ ಬೊಟ್ಟಿನಲಿ ಪರಿ |
ಪರಿಯ ಕರ್ಣಾಭರಣ ಕಂಠವಿಭೂಷಣಂಗಳಲಿ ||
ಮೆಱೆವ ತೋಳಿನ ಒಳೆಯ ಮುಂಗೈ |
ಲಿರುವ ಕಂಕಣ ಹಸ್ತಕಡಗದ |
ಬೆರಳ ಮುದ್ರಿಕೆ ನಡುವಿನೊಡ್ಯಾಣಗಳಲೆಯ್ದಿದರು || ೫೩

ಮೇರುವೆಯ ಕಡಗಗಳ ಸರಪಣಿ |
ವೀರಮುದ್ರಿಕೆ ಬೆರಳಲುಂಗುರ |
ದೋರಣದ ಬಹುಭೂಷಣಂಗಳ ದಿವ್ಯವಸನಗಳ ||
ಭೂರಿಪರಿಮಳ ವೆರೆದ ಗಂಧದ |
ಸಾರತರನವಕುಸುಮಗಳ ಮಿಗೆ |
ನಾರಿಯರು ತಾವ್ ಧರಿಸಿ ಬಂದರು ಬಹಳಚಿತ್ರದಲಿ || ೫೪

ಕಕ್ಕಸದ ಕುಚಗಳಲಿ ಕಬರಿಯ |
ಸಿಕ್ಕಿನಲಿಬಡನಡುವಿನಂದದ |
ಲಕ್ಕಜದ ತನುರುಚಿಯ ಲಾವಣ್ಯಾಂಬುಪೂರದಲಿ ||
ಚೊಕ್ಕಬಿಂಬದ ಫಲವನೇಱಿಪ |
ವುಕ್ಕುವಮೃತಾಧರದ ಚಲುವಿನ |
ಸೊಕ್ಕುಜವ್ವನದಬಲೆಯರು ಸಂಭ್ರಮಿಸುತೆಯ್ದಿದರು || ೫೫

ಮಣಿಖಚಿತಕುಂದಣದ ಪಲ್ಲಕಿ |
ಮಣಿಖಚಿತ ರಥರಾಜಿ ವಾಜಿಯ |
ಮಣಿಖಚಿತಭೂಷಣದಲಂಕೃತದಾನೆಗಳನೇಱಿ ||
ಮಣಿಖಚಿತಮಯಮಾಗಿ ಮುದದಲಿ |
ಗಣನೆಯಿಲ್ಲದೆ ಸತಿಯರೆಯ್ದಿದಿತು |
ಝಣಝಣಧ್ವನಿ ಮೊಱೆಗಲಾಕ್ಷಣ ಸತಿಯ ಬಳಸಿನಲಿ || ೫೬

ಏರೆ ಗಳಿಗೆದೆಯುಲಗುಯೋಗೀ |
ಶ್ವರರ ಕಂಗಳಗಾಳ ಪುರುಷಾ |
ಕರುಷಣದ ಘನಜಾಲ ಪಥಿಕರ ನೆನಹಿಗತಿಶೂಲ ||
ಸುರವನಿತೆಯರಿಗೆಲ್ಲಿನಿತು ಭಾ |
ಸುರವಚನ ನೋಟಗಳು ವರಸೌಂ |
ದರವೆನಲು ತರುಣಿಯರ ಚೆಲ್ವಿಕೆ ಭ್ರಮೆಯ ಮಾಡಿದುದು || ೫೭
ತರುಣಿಯರ ತನುಪರಿಮಳಕೆ ಷ |
ಟ್ಚರಣಗಳು ಕವಿಗೆಯ್ಯುತ್ತರುತ ಸು |
ಸ್ವರಗಳಲಿ ಝೇಂಕರಿಸಲಾದುದು ಕಾಮುಗಾನಗಳು ||
ಪರಿವಿಡಿಯುಲೊಪ್ಪಿರಲು ನಡೆದರು |
ಸ್ಮರನ ಮದಗಜಘಟೆಗಳಂದದಿ |
ನರನ ವನದೆಡೆಗಖಿಳ ಪಯಣಗಳಲ್ಲಿ ವಧುನಿಕರ || ೫೮
ಈಪರಿಯ ಸೌಭಾಗ್ಯದಿಂದಲಿ |
ರೂಪಗುಣಸಂಪನ್ನವತಿ ತ |
ನ್ನೋಪನಿಹ ವನದೆಡೆಗೆ ಬಂದನುಚರರನಾಕ್ಷಣದಿ ||
ಆಪುರಂದರತನಯನೆಲ್ಲಿಹ |
ನೋ ಪರಾಂಬರಿಸೆಂದು ಕಳುಹಿಸಿ |
ಶ್ರೀಪ ತಿರುವೇಂಕಟನನುಜೆ ನಿಂದಿರ್ದಳೊಲವಿನಲಿ || ೫೯

ಅಂತು ಸಂಧಿ ೧೩ ಕ್ಕಂ ಪದ್ಯ ೭೧೨ ಕ್ಕಂ ಮಂಗಳಂ.

## ಹದಿನಾಲ್ಕನೆಯ ಸಂಧಿ.

ಸೂಚನೆ|| ಯಮ ಪವನ ಮಾದ್ರೀತನಯರಿಗೆ |
ರಮಣಿ ದ್ರೌಪದಿಗಾಸುಭದ್ರೆಯು
ಕ್ರಮದಿ ಪೇಳಲು ಕೇಳಿ ನರನೆಡೆಗಟ್ಟಿದರು ಸತಿಯ ||

ಅರಿನೃಪಾಲತಮೋಸಿವಾರಣ |
ತರಣಿ ಶಾತ್ರವನಿಚಯವಿಕ್ರಮ |
ಶರಧಿಬಾಡಬ ವೈರಿಧರಣೀಪಾಲಗಜಸಿಂಹ ||
ಸುರಪತಿಯ ಸಮಭೋಗ ಭಾಸುರ |
ತರವೆನಿಪ ಸತ್ಕೀರ್ತಿಯುತ, ಬಿ |
ತ್ತರಪೆನಿಸುವೀಕಥೆಯ ಜನಮೇಜಯನೆ ಕೇಳೆಂದ || ೧

ಪತಿಯು ಸಮಯುವನಱಿದು ಬಹುದೆಂ |
ದತಿಚದುರೆಯರನಾಗ ನಿಯಮಿಸಿ |
ಸತಿಕುಲೋತ್ತಮೆ ಕಳುಹಿ ನಿಂದಿರೆತಾ ವಿನೋದದಲಿ ||
ವಿತತಬ್ರಹ್ಮೇಂದ್ರಾದಿಪದವಿಯು |
ಸತತ ಕೊಡುತಿಹ ಕೃಷ್ಣರಾಯನ |
ಹಿತಸಹೋದರಿ ಮುದದಿ ವನರಾಜಿಗಳ ನೋಡಿದಳು || ೨

ಏನನುಸಿರುವೆನರನ ವನದ ನ |
ವೀನತರುಲತೆಗಳ ಸಮಗ್ರವ |
ದಾನವಾಮರಮುಖ್ಯ ವಾಸುಕಿ ಗರುಡ ಗಂಧರ್ವ ||
ಮಾನವಾದಿಗಳೆಲ್ಲ ವಿಹರಿಪ |
ಕಾನನಾದಿಗಳೊಳಗಿದಕ್ಕೆ ಸ |
ಮಾನವನು ತಾ ಕಾಣೆನೀವೊಗುಮಿಗೆಯ ಸಂಭ್ರಮವ || ೩

ಭವದ ಕಠಿನೋಪದ್ರವವ ತಾ |
ಳ್ದವಿರಳದಲಿಷ್ಟವ್ಮಖಿಳ ಭಾ |
ರವನು ವಹಿಸಿಹ ಭೂವನಿತೆಗುಪಚರಿಸಬೇಕೆಂದು ||
ವಿವಿಧಕುಲತರುನಿಕರ ಪರಿಕಿಸೆ |
ನವಫಲಾಘಸುಮಂಗಳನು ತಂ |
ದವನಿಗರ್ಪಿಸುವಂತೆ ನೆಲಕೊಲೆದಿಹುವು ಫಲನಿಚಯ || ೪

ಪೂತೆಸೆವ ಮಲ್ಲಿಗೆಯು ಮೊಲ್ಲೆಯು |
ಕೇತಕಿಯು ಸುರಹೊನ್ನೆಜಾಜಿಯು |
ಮಾತುಲುಂಗ ಲವಂಗ ಚಂಪಕ ಮಾಧವೀಲತೆಯು ||
ಕಾತಿರುವ ಹಲಸುಗಳ ಕ್ರಮುಕ ಘ |
ನಾತಿಶಯು ನಾರಂಗ ಚೂತ |
ವ್ರಾತಮುಖ್ಯದ ತರುಲತೆಯುಲೊಪ್ಪಿದುದು ವನನಿಕರ || ೫

ಹರಿಕರಿಗಳೊಂದಾಗಿ ವಿಹರಿಪ್ಪ |
ವಿರದೆ ಹುಲಿಹುಲ್ಲೆಗಳು ಬೆರೆವುವು |
ಗಿರಿಕಮಾರ್ಜಾಲಂಗಳೊಡೆವೆರೆದಿಹುವು ಮುಂಗುಲಿಯು ||
ಉರಗಗಳುವೊಂದಿಕ್ಕೆಯುಲಿ ಸಂ |
ಚರಿಪುವಾವನದೇವಿಮಹಿಮೆಯು |
ನರರೆ! ಬಣ್ಣಿಸಲಳವೆ ಚಿತ್ತೈಸೆಂದನಾಮುನಿಪ || ೬

ಮುನಿವರರ ಸಂದಣಿಯು ತತ್ಪರಿ |
ಜನದ ಸೌರಂಭಗಳ ಮಿಗೆ ಬನ |
ಬನದಲೆಸೆದಿರ್ಪಖಿಳ ತರುಲತೆ ಕೊಳಗಳೊಗುಮಿಗೆಯು ||
ಮನಕೆ ನಲವನು ಪುಟ್ಟಿಸುವ ಪವ |
ನನ ಮಹಾವೈಭವವ ವರಕಾ |
ನನವೆಸೆದುದರ್ಜುನನ ರಾಣಿಯು ಕಣ್ಗೆ ಚೆಲ್ವಾಗಿ || ೭
ಮುನಿವಟುಗಳಗಣಿತರು ಪಠಿಸುವ |
ಘನನಿಗಮಶಾಸ್ತ್ರಾಧ್ಯಯನಗಳ |
ಮುನಿಗಳುಱಿ ನೆಗಱಿಸುವನೇಕ ಮಹಾಗ್ನಿಹೋತ್ರಗಳ ||
ಜನಪರೆಡೆಗೆಯ್ತಂದು ಮರಳುವ |
ವಿನುತಕೋವಿದಸಜ್ಜನರನಾ |
ವನರುಹಾನನೆ ನೋಡುತಿರ್ದಳು ವನದ ಮಧ್ಯದಲಿ || ೮
ಬೇಡ ಕೃಷ್ಣನ ವೈರ ಗಯನನು |
ಬೇಡ ಬಂದಳು ನಿನ್ನ ವಧು ನೀ |
ಖೇಡತನವನು ಮಾಡದೀಕ್ಷಣ ಕೊಟ್ಟು ಕಳುಹಲ್ಕೆ ||
ನಾಡು ಮೆಚ್ಚುವುದಲ್ಲದಡೆ ಪಗೆ |
ಪಾಡುಬೀಱುವುದೆಂದುಸಿರ್ವೊಲು |
ಕೂಡೆ ಕೋಗಿಲೆವಿಂಡು ದನಿಮಾಡಿದುವು ವನದೊಳಗೆ || ೯
ಹಸನುದೋಱಿದು ಪತಿಯೊಳುಸಿರುವ |
ಬೆಸನು ಚಂದ್ರಾನನೆಗಿದುವೆ ಕಾ |
ಣೆಸದು ಒಱಿಕೆನೊಳೆನುತ ತಮ್ಮೊಳು ತಾವು ಮಥಿಸುವೊಲು ||
ಮಿಸುಪ ದುಸ್ವರಗೆಯ್ವ ಶುಕವಾ |
ಯಸ ಗರುಡ ಮೊದಲಾದ ಪಕ್ಕಿಗ |
ಳೆಸೆದಿಹುವು ಬನಬನದ ತಾಣದಲತಿ ಸರಾಗದಲಿ || ೧೦
ಮತ್ತೆ ನಡೆತರಲಮಲತರಮೆನಿ |
ಪುತ್ತಮದ ಶೈತ್ಯೋದಕಂಗಳ |
ಬಿತ್ತರದೆ ಚಕ್ರಾಂಕವಾಱಡಿ ರಾಜಹಂಸೆಗಳು ||
ಮುತ್ತಿಕೊಂಡಿರಲಲ್ಲಿ ಪರಿಕಿಸೆ |
ಸುತ್ತ ನವವಿಧಚಿತ್ರದಲಿ ಮಿಗೆ |
ತೆತ್ತಿಸಿಹ ಸೋಪಾನಪಙ್ಕ್ತಿಯ ಕಂಡಳಿಂದುಮುಖಿ || ೧೧

ಶರ ಕಣಾವಳಿ ಭರಿತವಾಗಿಹ |
ಸರಸಿಜವೆ ಮುಕ್ತಾತಪತ್ರವು |
ನಿರುತವಲ್ಲಿಹ ಚಕ್ರಬಕಹಂಸೌಘಸೇವಕರು ||
ಸುರುಚಿರದ ಫೇನಾಳಿ ಚಾಮರ |
ದಿರವೆಸೆಯೆ ಸೌಂದರಸರಶ್ರೀ |
ತರುಣಿಯೋಲಗಗೊಟ್ಟಳೆನೆ ಕಾಣಿಸುವುದಂದದಲಿ || ೧೨

ಆಸರಸಿಯಲ್ಲಿೞಿದಳಾಕ್ಷಣ |
ವಾಸವಾತ್ಮಜನರಸಿ ಶೈತ್ಯದ |
ಭಾಸುರೋದಕವನು ಮೊಗೆದು ಕರಚರಣಗಳ ತೊಳೆದು ||
ಸೂಸುವಧ್ವಶ್ರಮವಡಗೆ ಪರಿ |
ತೋಷದಿಂದೀಂಟಿದಳು ಬೞಿಕಿನೊ |
ಳಾಸುದತಿಯೊಲವಿಂದ ನಿಂದಳು ಕೊಳನ ತೀರದಲಿ || ೧೩

ಅನಿತಱೊಳ್ ಕಲಿ ಪಾರ್ಥನಿರವನು |
ವನಜಮುಖಿಯರು ಬೇಗದಲಿ ಬಂ |
ದನುವಱಿತು ಬಿನ್ನಹವ ಮಾಡಲು ಕಾಲುನಡೆಯಿಂದ ||
ವನಿತೆಯೆಯ್ದಿದಳಾಗ ಲಲನಾ |
ಜನಸಹಿತ ಮುದದಿಂದ ಚಂಪಕ |
ವನಜ ಮಲ್ಲಿಗೆ ಜಾಜಿಗಳ ಚೆಲುವುಗಳನೀಕ್ಷಿಸುತ || ೧೪

ಬೞಿವಿಡಿದು ಬರುತಿರ್ಪ ಸತಿಯರ |
ನೆಲೆನೆಲೆಗಳಲ್ಲಿರಿಸಿ ಹಡಪದ |
ಲಲನೆಸೀಗುರಿ ಗಿಂಡಿಯುವರೊಡನೆಯ್ದೆ ಭಾವದಿರ ||
ಬೞಿಗೆ ಬಂದಳು ಕಚಕುಚದ್ವಭರ |
ಕಳುಕಿ ಕೃಶವಹ ನಡುವನೀಕ್ಷಿಸು |
ವೊಲು ಸುಲಜ್ಜಾಭರದಿ ತಲೆವಾಗುತ್ತ ಸರಿಸದಲಿ || ೧೫

ಬರುತ ಧರ್ಮಜ ಭೀಮಸೇನರ |
ಚರಣಕಾನತೆಯಾಗೆ ಬಾಗಿದ |
ಸಿರದಲುಱೆ ಯಮಸೂನು ಹರಸಿದನೈದೆಯಾಗೆನುತ ||
ಹರುಷದಲಿ ಕೇಳಿದು ಸುಭದ್ರೆಯು |
ಸಿರವಿದಚ್ಚರಿಯಾಗಿ ತೋಱಿದೆ |
ಬಱುತವನು ನಿರ್ಧರಿಸಿ ಹೇೞೆಂದರಸ ಬೆಸಗೊಂಡ || ೧೬

ಸಖಿಯು ಸಂಗಡ ಬಂದವರಾತ್ಮರ |
ನತಿಹರುಷದಿಂದರಸ ನೋಡಿಯೆ |
ಹಿತದೊಳವರನು ಕುಳ್ಳಿರೆನೆನಲಲ್ಲಿಂದ ಕಳುಹಿಸಿದ ||
ವಿತತವಸ್ತ್ರಾಭರಣರತ್ನ |
ಪ್ರತತಿಗಳನೊಪ್ಪಿಸಲಿಕದ ಭೂ |
ಪತಿ ತೆಗೆಸಿ ಕೇಳಿದನು ಕುಶಲಕ್ಷೇಮಗಳನೊಲಿದು || ೧೭
ತಂಗಿ ಬಂದಾ ತಾಯೆ ಲೇಸಾ |
ಯ್ತಂಗಜನ ಪಿತ ಹದುಳಿಗನೆ ರಾ |
ಮಂಗೆ ಸುಖವೇ ಸಾಂಬ ಸಾತ್ಯಕಿ ಕಾಮಮುಖ್ಯರ್ಗೆ ||
ಮಂಗಳವೆ ವಸುದೇವ ದೇವಕಿ |
ತುಂಗವಿಕ್ರಮ ಕೃಷ್ಣಸುತರಿಗೆ |
ಯುಂಗನಾದಿ ಸಮಸ್ತ ಯಾದವರೆಲ್ಲ ಕ್ಷೇಮಿಗಳೆ || ೧೮
ಬಾಲನಭಿಮನ್ಯುವು ಸುಖಿಯೆ ಸುವೆ |
ಶಾಲಮತಿಯುತನೇ ಕುಮಾರರ |
ಮೇಳದೊಳಗನುಕೂಲನಾಗಿಹನೇ ರಮಾಪತಿಯು ||
ಲೋಲನಯನೆಯುರೆಲ್ಲರಿಗೆ ಜನ |
ಜಾಲಕತಿಹಿತನೆನಿಸಿ ತಂದೆಯು |
ಮೇಲಣಕ್ಕರದಿಹನೆ ನೀ ಹೇಳೆಂದನಾಭೂಪ || ೧೯
ಒದವಿದಧಿಕಾಯಾಸವೇಸಿದ |
ನಿದನು ವಿವರಿಸಲುಂಟೆ ಫಣಿಯಲಿ |
ವಿಧಿ ಬರೆದನಾಪರಿಯಲಾವೊಂದೆಸೆ ಕುಮಾರಕರು ||
ಸುದತಿಯೊಂದೆಸೆ ತಾಯಿಯೊಂದೆಸೆ |
ಸದನವೊಂದೆಸೆ ಚರಿವುದೊಂದೆಸೆ |
ಮದನನೈಯನು ಬಲ್ಲನೆಂದನು ತುಂಬಿ ಕಂಬನಿಯ || ೨೦
ಏನನೆಂಬರು ಮಾವನವರೀ |
ಕಾನನದಲಾಗಿಹ ಪ್ರವಾಸ |
ಕ್ಕೇನು ಬುದ್ಧಿಯ ಹೇಳಿ ಕಳುಹಿದನಸುರರಿಪು ನಿನ್ನ ||
ಏನು ಪದ ನೀ ಬಂದ ಕೆಲಸವಿ |
ದೇನು ಪೇಳೆಂದೆನಲು ತಾ ಬೇ |
ಱೇನು ಬರವಿರ್ದುದು ವನಾಂತರಕೆಂದಳಿಂದುಮುಖಿ || ೨೧

ಪದುಳರೈ ವಸುದೇವದೇವಕಿ |
ಮದನಪಿತ ಗದಸಾಂಬಸಾತ್ಯಕಿ |
ಯಧಿಕಬಲನನಿರುದ್ಧ ಕೃತವರ್ಮಾಂಗಜಾದಿಗಳು ||
ಸುದತಿಯರು ಸುತ ಪೌತ್ರಬಾಂಧವ |
ವಿದಿತ ಪರಿಜನಪುರಜನಂಗಳು |
ಸದುಹೃದಯರೆನಿಸುವರು ಚಿತ್ತೈಸೆಂದಳಿಂದುಮುಖಿ || ೨೨

ಹರಿಗೆ ತಪ್ಪನು ಮಾಡಿ ಖಚರನು |
ಹರುಷದಲಿ ನಿಮ್ಮಡಿಯ ಸನಿಯದೊ |
ಳಿರಲು ತಿಳುಹಿದ ಪಗೆಯ ನಗ್ರಜ ಮರಳಿ ತನ್ನೆಡೆಗೆ ||
ತ್ವರಿತದಿಂ ಕಳುಹೆಂದು ವರಶಿ |
ಷ್ಯರನು ಕಳುಹಲು ಕಳುಹದಾದರು |
ಪರಿಯದೇನೆಂದಱಿಯೆವೆಂದಱುಹಿದರು ಮುರಹರಗೆ ೨೩

ಬಂದಮಾತ್ಯರ ಮಾತ ಕೇಳ್ದರ |
ವಿಂದನಾಭನು ಕರಿಸಿ ತನ್ನನು |
ಚಂದವಾಯಿತು ತಂಗಿ ನಿನ್ನಯ ರಮಣನಾಟವಿಕೆ ||
ಎಂದಿನಂತಿರಲೀಗ ತಮ್ಮೆಡೆ |
ಗಿಂದು ನೂತನ ತೋಱುತಿದೆ ಶರ |
ಣೆಂದವನ ಕೊಡೆನೆಂದು ಕಳುಹಿದ ಕೇಳು ನೀನೆಂದ|| ೨೪

ಅರಿಯುಹನ ಕಳುಹಿಸುವುದೆಂದಾ |
ಪರಿಣತರ ಕಳುಹಿಸಿದಡೊಪ್ಪಿಸ |
ದುರುಕಠಿನವಾಕ್ಯಗಳನಾಡುತ ಧರ್ಮನಿರ್ಣಯವ ||
ಪರಿಪರಿಯ ತೋಱಾಡಿ ಮಿಗೆ ಪರಿ |
ಹರಿಸಿ ಕಳುಹಿದನೆನ್ನವರನಿದು |
ತರಳತನವೋ ತಿಳಿದು ಮಾಡುವ ಬಗೆಯೊ ಪೇೞೆಂದ || ೨೫

ಏಕಿನಿಪಗಿಸಿತೆಮ್ಮೊಡನೆ ದು |
ರ್ವ್ಯಾಕುಲನ ತಂದೊಪ್ಪಿಸಿಯೆ ಸ |
ರ್ವೈಕರಾಜ್ಯದ ಸಿರಿಗೊಡೆಯನಾಗೆಂಬುದಲ್ಲದಡೆ ||
ಕಾಕಹನು ತಾನೆಂದು ಹೇೞುವು |
ದಾಕಿರೀಟಿಯೊಳೆಸುತ ತನ್ನನ|
ನೇಕ ವಿಧದಿಂ ಪೇೞಿ ಕಳುಹಲು ಬಂದೆ ನಿಮ್ಮೆಡೆಗೆ || ೨೬

ಇದರಿ ಪವಣೆಂತೆನಗೆ ಬುದ್ಧಿಯು |
ವಿದಿತಮಪ್ಪಂತುಸಿರೆನಲು ಸದು |
ಹೃದಯನರನರೆಗಳಿಗೆ ಪರಿಯಂತಿರ್ದುದ ತಲೆಯೊಲೆದು ||
ಹದನೆನಗೆ ಕಾಣಿಸದು ಗಯ ನೋ |
ಸದಲಿ ಪರಣವನುಳುಹ ಬೇಕೆಂ |
ದೊದರಲರ್ಜುನನವನ ಕೆಯ್ವಿಡಿದಿಪಸು ಕೇಳೆಂದ || ೨೭

ಮುಂದೆ ನೋಡಲು ಕೂಪವಿದೆ ಮಿಗೆ |
ಹಿಂದೆ ನೋಡಲು ತಗುಳಿಹುದು ತಾ |
ನಿಂದು ಗಾದೆಯನುಸಿರ್ವ ಪರಿ ತಮಗಾಯಿತಿಂದಿನಲಿ ||
ತಂಗೆ ಮುರಹರ ಬಲ್ಲನಿದನೇ |
ನೆಂದು ವಕ್ಕಣಿಸುವೆನು ಕೇಳರ |
ವಿಂದಮುಖಿ ನುಡಿದೋಱದಿದೆ ನೀನೆಂದ ಮಾತಿನಲಿ || ೨೮

ಶರಣನನು ಹರಿಗೀಯೆ ನರಕವು |
ಸರಸಿಜೋದ್ಭವನಾಯುವುಳ್ಳಂ !
ಬರಮಿಹುದು ಮುರಹರನನುಲ್ಲಂಘಿಸಲು ಸೂರ್ಮಡಿಯು ||
ನರಕ ತಪ್ಪದು ಕಾಬೆನೆರಡಱ |
ಗುರುಲಘುತ್ವವನೆನುತ ನೆರೆ ನಿ |
ರ್ಧರಿಸಿದನು ಮನದೊಳಗೆ ಧರ್ಮಜನರಸ ಕೇಳೆಂದ || ೨೯

ಮುರಳಿ ಖಚರನ ಕೊಟ್ಟು ನರಕದೆ |
ನರಗೆ ಕಾರಣವೇನು ಕೊಡದಿರೆ |
ಹರಿಯ ಚಕ್ರದ ಧಾರೆಗರ್ಜುನ ಶಿರವು ಗುಱಿಯಹುದು ||
ನರನ ಕೊಡೆಮೃತ್ಯುವರನು ನಿ |
ರ್ಧರಿಸಿಹುದು ದಿಟವದಱಿನಿಂದವೆ |
ಹರಿಪದದ ಸಾಯುಜ್ಯಮಪ್ಪುದು ಸಿದ್ಧವೆಮಗೆಂದ || ೩೦

ದೊರಕದಜಮುಖ್ಯಾಮರೇಂದ್ರರಿ |
ಗುಱಿ ಹರಿಯ ಸಾನ್ನಿಧ್ಯವಿಹಪರ |
ವೆರಡಱಲಿ ಪರಿಪೂರ್ಣವಾಗಿಯೆ ಪಡೆವೆವಿದಱಿಂದ ||
ಸಿರಿಧರನ ಕರದಿಂದವೆಮಗೆಯೆ |
ಪರಿವು ಸಂಘಟಿಸಿದರೆ ರುಕ್ಮಿಣಿ |
ಯರಸನಂಘ್ರಿಯ ಬೆಲೆವೆವಾವಿದಕಂಜಲೇಕೆಂದ || ೩೧

ಎನುತ ನೆರೆ ನಿರ್ಧರಿಸಿ ಧರ್ಮಜ |
ವನರುಹಾಂಬಕನನುಜೆಗೆಂದನು |
ತನುಜೆ ಒಳಿಕೆಲ್ಲವನು ಪೇಳ್ಳೀ ನರನ ಒಳಿಗೆಯ್ದಿ ||
ವಿನಯದಲಿ ತಿಳಿದಾತನೆಂದುದ |
ನೆನಗೆ ಮಾರುತ್ತರವ ಕೊಡು ನೀ |
ಮನದಿ ಚಿಂತೆಯ ಮಾಡಬೇಡೆನುತಾಗ ಬೀಳ್ಕೊಟ್ಟ || ೩೨
ಮಱೆಯ ಮಾತೇನಿದಕೆ ಧರೆಯಲಿ |
ತುಱುವ ಕಾವನ ಶರಣೆನಲ್ಕವ |
ಮರಳಿ ಪರಗೊಪ್ಪಿಸುವನೇ ಕೆಯ್ಪಿಡಿದ ಮಾನಿಸನ ||
ಅರಸಿನಂತಿರಲೆನ್ನ ನುಡಿಯಿದು |
ಪರಮ ಸಿದ್ಧರಹಸ್ಯವಿದ ಮುರ |
ಹರಗೆ ನೀ ಪೇಳೆಂದು ನುಡಿದನು ಭೀಮ ಗರ್ಜಿಸುತ || ೩೩
ನರನ ಕೇಳಿದರೇನು ಭಾವನ |
ಪರನು ಕೇಳಿದರೇನು ಗಮನನು |
ಮರಳಿ ಕೊಡುವುದು ಪುಸಿ ಜನಾರ್ದನಗಱುಹು ಮತವಿದನು ||
ತೆರಳಿ ಹೋಗು ಸುಭದ್ರೆ ಪಾರ್ಥನ |
ತೆಱನದೀಗೆನೆ ತಮ್ಮನನು ಸೈ |
ವರಿಸಿ ನರನೆಡೆಗೆಯ್ದಿಸಿದನಾಭೂಪ ವಿನಯದಲಿ || ೩೪
ನಡೆದಳಲ್ಲಿಂದಖಿಳಚಿಂತೆಯ |
ಲಡಿಗಡಿಗೆ ಬಿಸುಸುಯ್ದು ದ್ರೌಪದಿ |
ಯೆಡೆಗೆ ಬಂದಳು ಕಾಣುತಾಪಾಂಚಾಲೆಯಡಿಗಳಿಗೆ ||
ಎಡೆವಿಡದ ಕಂಬನಿಗಳೊಸರುತ |
ಪೊಡೆಮಡುತ ನಿಂದಿರಲು ತಂಗಿಯ |
ಜಡಿವ ನಯನಾಶ್ರುಗಳಲಪ್ಪಿದಳೈದೆಯಾಗೆನುತ || ೩೫
ಬಿಕ್ಕಿಬಿರಿಬಿರಿದಳುತ ಸುಯಿಲುಗ |
ಳಿಕ್ಕಜದಿ ಹೋಸೂಸಲೂರಲಿದ |
ಳಿಕ್ಕತುಳದಲಿಯೊದವಿತೇಯಾಯಾಸ ನಿಮ್ಮೆಡೆಗ ||
ಹೆಕ್ಕಳದ ಸಾಮ್ರಾಜ್ಯಪದವಿಯ |
ನೊಕ್ಕಲಿಕ್ಕಿಯೆ ಕಾನನದಲಿರ |
ಲಕ್ಕುಮೆಂದಜ ಬರೆದನೇ ಬಳಿಕೆಂದಳಾಕಾಂತೆ || ೩೬

ತಂಗಿ ಸೈರಿಸು ಪಡೆದಸಿತನಾ |
ವಂಗದಿಂದನುಭವಿಸ ಬೇಕೈ |
ಯಂಗಜನ ಪಿತನಾಜ್ಞೆಯಿದು ಹೋಗದುಱಿ ಸಿದ್ಧಾಂತ ||
ಹಿಂಗದಾವೈದೆಯರ ಸಿರಿಗತಿ |
ಭಂಗವನು ತಾ ನೆನೆದೆನೇತಕೆ |
ಹೆಂಗಸುಗಳೊಳು ಪಾಪಿಯಹೆನೆಂದಳು ಸರೋಜಾಕ್ಷಿ || ೩೭

ಹೋಗಲದು ತಾನೆಣಿಸಲೇತಕೆ |
ಭೋಗಿಶಯನನು ಪದುಳಿಗನೆ ತ |
ನ್ನಾಗುಹೋಗಿನ ಕಾರ್ಯಕೇನೆಂಬನು ಮನಸ್ಸಿನಲಿ ||
ಈಗ ನೀ ಬಂದನುವದೇನಿದ |
ರಾಗಮುವ ವಿಸ್ತರಿಸು ತನಗೆಂ |
ದಾಗರುವೆ ಪಾಂಚಾಲಿ ನುಡಿಯೆ ಸುಭದ್ರೆ ಪೇಳಿದಳು || ೩೮

ಅಕ್ಕ ಕೇಳೇನೆಂಬೆ ರಮಣನ |
ಮಕ್ಕಳಾಟಿಕೆತನವ ಗಯ ಮಱಿ |
ಹೊಕ್ಕನೆಂದೇ ಕೈವಿಡಿದು ಹರಿ ಕೇಳ ಕಳುಹಿದರೆ ||
ಚಿಕ್ಕಮಾತುಗಳಾಡೆ ಚಕ್ರಕೆ |
ಚೆಕ್ಕ ಸಂಬೆಱಗಾಗಿಯಗ್ರಜ |
ನೆಕ್ಕತುಳದಲಿ ತಿಳಿದು ಬಾಯೆನೆ ಬಂದೆ ನಿಮ್ಮೆಡೆಗೆ || ೩೯

ಕೊಡುವುದುಂಟೇ ಕೊಂಡು ಬಾ ಕೊಡ |
ದಡೆ ಗಯಾಖ್ಯನ ಕೂಡೆ ಚಕ್ರದ |
ಕಿಡಿಗೆ ಗುಱಿಯಾಗಿಪ್ಪುದೆನುತದೆ ಕೃಷ್ಣ ಕಡ್ಡಿಯನು ||
ತಡೆಯದಿಂದವೆ ಕೊಟ್ಟು ಶೀಘ್ರದಿ |
ನಡೆತಹುದು ಹೋಗೆಂದು ಕಳುಹಿದ |
ನುಡಿವೆನೆಂತಿದ ರಮಣನೊಡನೆಂದಳು ಸರೋಜಮುಖೀ || ೪೦

ಹೋಗೆನೆಂಬೆನೆ ಕೋಪಿಸುವನಿದ |
ರಾಗಮುವನಱುಹಿದರೆ ರಮಣನು |
ಮೇಗೆ ತನ್ನನು ಬಱಿಕಲೇನೆಂಬನೊ ಮನಸ್ಸಿನಲಿ ||
ತಾಗುಬಾಗಱಿಯೇನೆನುತ ಬರ |
ಲೀಗವನಮಧ್ಯದಲಿ ಕಂಡೆನು |
ಭೋಗಿಶಯನನ ಮೈದುನರ ನಾಲ್ವರು ಮಹಾತ್ಮರನು || ೪೧

ಕಂಡು ಬಾವಂದಿರಿಗೆ ತಾ ಮುಂ |
ಕೊಂಡು ವಂದಿಸಿಯಣ್ಣದೇವನ |
ಖಂಡಿತೋಗ್ರದ ಭಾಷೆಯನು ವಿರಚಿಸಲು ಕೇಳಿದೆನು ||
ಖಂಡಿಸದೆ ತಮ್ಮನುಜನನು ನೀ |
ಕಂಡು ಬಾಯೆಂದೆನ್ನ ಕಳುಹಲು |
ಕಂಡೆ ನಿಮ್ಮಯ ಪದಸರೋಜವನೆಂದಳಾಕಾಂತೆ || ೪೨

ಏನು ತನಗಿದು ಬುದ್ಧಿಯೆಂದು ನಿ |
ಧಾನದಲಿ ನೀ ಬೆಸಸ ಬೇಹುದು |
ಸಾನುರಾಗದಲೆನಲು ದ್ರೌಪದಿ ನುಡಿದಳವಳೊಡನೆ ||
ಏನನೆಂಬೆನು ತಂಗಿ ಇದಱ ನಿ |
ಧಾನ ತನಗೇನೆಂದು ತೋಱದು |
ಭಾನುಜಾತ್ಮಜ ನುಡಿದ ತೆಱದಲಿ ಮಾಡು ನೀನೆಂದು || ೪೩

ಬಿಡು ಗಯನನೆಂದೆಂಬೆನೇ ಕೆಡೆ |
ನುಡಿವನರ್ಜುನನೆನ್ನ ಬಱಿಕಿದ |
ಕೊಡಬಹುವೆನೇ ಕೋಟಿಜನ್ಮವು ಹರಿಯ ವೈರದಲಿ ||
ಎಡೆಬಿಡದೆ ಬಹುನರಕವಪ್ಪುದು |
ನುಡಿ ಹಲವದೇಕಿನ್ನು ಧರ್ಮಜ |
ನುಡಿದ ನುಡಿಯಂತೊಮ್ಮೆ ತಿಳಿ ಹೋಗೆಂದಳಬುಜಾಕ್ಷೀ || ೪೪

ಕೇಳಿ ಖಿನ್ನೆಯುಳಾಗಿ ಲಕ್ಷ್ಮೀ |
ಲೋಲನನುಜೆ ಸುಭದ್ರೆ ಮನದೊಳು |
ಶ್ರೀಲತಾಂಗಿಯ ರಮಣ ವೇಂಕಟನಾಥ ಗತಿಯೆನುತ ||
ಬೀಳುಕೊಂಡಳುಬ್ಬುತ್ತೆ ದ್ರೌಪದಿ |
ಬಾಳ ಚಿಂತಿಸಬೇಡವನುದಿನ |
ಪಾಲಿಸನು ಶ್ರೀಕೃಷ್ಣ ತನ್ನನು ಎಂದು ಕಳುಹಿದಳು || ೪೫

ಅಂತು ಸಂಧಿ ೧೪ ಕ್ಕಂ ಪದ ೭೫೭ ಕ್ಕಂ ಮಂಗಳಂ

|| [illegible]

# ಹದಿನೈದನೆಯ ಸಂಧಿ.

ಸೂಚನೆ॥ ಹಲವು ನಯಭಯನೀತಿಮಾರ್ಗದಿ |
ತಿಳುಹಿ ಪಾರ್ಥನ ಗಯನ ಕಳುಹೆನೆ |
ಚಲಪದದಿ ಕೊಡನೆನಲು ಮರಳಿ ಸುಭದ್ರೆ ಗಮಿಸಿದಳು ||

---

ಕೇಳು ಜನಮೇಜಯಧರಿತ್ರೀ |
ಪಾಲ ಸತಿಕುಲಮೌಳಿಮಾಣಿಕ |
ತಾಳುತತಿಚಿಂತೆಯಲಿ ಬರುತಿರಲದಕೆ ಕಡುನೊಂದು ||
ಲೋಲಲೋಚನೆ ದ್ರುಪದಸುತೆ ಸಿರಿ |
ಲೋಲನನುಜೆಯ ಕರೆದು ಕಂಗಳ |
ಬಾಳ ಜಲವನು ತೊಡೆದು ಕಳುಹಿದಳಾತ್ಮವರನೆಡೆಗೆ || ೧
ವನಿತೆ ಬಂದಳು ಕಚಕುಚಂಗಳ |
ಘನಭರಕೆ ಕೃಶವಾದ ನಡುವಿನ |
ಲನುವನಱಿದಜ ಕಟ್ಟಿ ಬಿಟ್ಟನೊ ಹೇಮನಿರ್ಮಿತದಿ ||
ಎಸೆ ಮೆಱೆಕಿಯಲೊಡ್ಯಾಣನೂಪುರ |
ಎನರುಚಿಯ ಮಣಿಖಚಿತ ಕಂಕಣ |
ದನಿ ಮೆಱೆಕೆಯೆ ಜನನಾಥನೆಡೆಗೆಯ್ತಂದಳಾ ಕಾಂತೆ || ೨
ಅಡಿಗಡಿಗೆ ನಿಂದಿರುತ ಸೋಲುತ |
ಜಡುಮುಡಿಯನೊಂದಿಸುತ ಕರದಲಿ |
ಕಡಗಗಳ ಸೈತಿಡುತ ಸಖಿಯರ ನುಡಿಯ ಲಾಲಿಸುತ ||
ತಡೆವ ಲತೆಗಳನತ್ತ ನೂಕುತ |
ಬಡನಡುವಸಲುಗಿಸುತ ಬೆಡಗಿನ |
ಸಡಗರದಲೀಕ್ಷಿಸುತ ಬಂದಳು ಭಾಮೆ ಪತಿಯೆಡೆಗೆ || ೩
ನಿಱಿಯನೊಯ್ಯಾರಿಸುತ ಕೊರಳಲಿ |
ಮೆಱೆವ ಹಾರವ ತಿರಿವಿ ಹಾಯ್ಕುತ |
ಭರದ ಗಮನಕೆ ಜಾಱುತಿಹ ಮೇಲುದನು ಸೈತಿಡುತ ||
ಕುರುಳ ತಿದ್ದುತ ಮನಸಿಜನ ಮದ |
ಕರಿವೊಲಾಪರಿಪರಿಯ ಕುಸುಮವ |
ಸಱಿಸಿ ಕೊಯ್ಯುತ ಬಂದಳಂಗನೆ ಮಂದಗಮನದಲಿ || ೪

ತಳಿರುಡೆಯ ಪೊಂಬಾಳೆದೊಡೆಗಳ |
ನೆಳಲತೆಯ ವಿಗ್ರಹದ ಕಡುಕೋ |
ಮಳಶಿರೀಷದ ಕರಯುಗದ ಸರಸೀರುಹಾನನದ ||
ಲಲಿತ ಚಂಪಕನಾಸಿಕದ ನೆ |
ಯ್ದಿಲ ಸುನಯನದ್ವಯದಲಾಪಂ |
ಗಳ ಶಿರೋಮಣಿ ವನವಧುವಿನಾಕೃತಿಯುಲೆಯ್ದಿದಳು ||
ಭರಿತಕೋಕದ್ವಯವ ಕುಚಯುಗ |
ಬಿರದ ಹಂಸೆಯ ನಡೆಗಳಲಿ ಸಿಡು |
ಸರದ ಕೋಗಿಲೆಗಳ ನಿನದದಿಂದಳಿಯ ಕುಂತಳದಿ ||
ಅರಗಿಳಿಯ ಮಾತಿನಲಿ ಪಱಿಯುತ |
ಸ್ಮರನಲಗಿನಂದದಲಿ ಲಕ್ಷ್ಮೀ |
ವರನನುಜೆ ಬರುತಿರ್ದಳಾತ್ಮಪ್ರಿಯನ ಸನ್ನಿಧಿಗೆ ||
ಹರಿಗೆ ಮಧ್ಯದೆ, ಗಜಕೆ ಗಮನದ |
ಶರಲೆಗಳ ಚಂಚಲದ ನೋಟದೆ, |
ಭರಿತಕತ್ತುರಿಮಿಗಕೆ ನೆಯ್ಸುರಿಮಳದ ಪೂರದಲಿ ||
ಮೆಱೆವ ಕಾಂಚನಮೃಗಕೆ ಕಾಂಚನ |
ವರಲತಾಂಗದೆ ವರಲತೆಗೆ ಕಿಂ |
ಕರತೆಯನು ಪುಟ್ಟಿಸುತ ಬಂದಳು ಕಾಂತನಿದ್ದೆಡೆಗೆ ||
ನಾಚಿದುವು ನಡೆಗಂಜೆ ಗಮನಕೆ |
ಯೋಚನೆಯ ಮಾಡಿದುವು ಮದಗಜ |
ವಾಚಕಕೆ ಸಂಕೋಚಿಸಿದುವೇನೆಂಬೆ ಶುಕಸಿಕರ ||
ಅಚಕೋರಾಕ್ಷಿಯ ಸರಕೆ ಪಡಿ |
ಯೀಚರಾಚರದುಂಟೆ ಗಡ ಪರ |
ಭಾಸಕದ ಮಾತಲ್ಲವೆಂದುವು ಕೋಗಿಲೆಗಳುಲಿದು ||
ಈಸು ದಿನ ರಾಜ್ಯವನು ನೀಗಿ ನಿ |
ವಾಸವನು ಕಾನನದಿ ಮಾಡಿ ಮ |
ಹಾಸುಖಂಗಳ ತೊಱೆದು ಬಱಿಕಿನ್ನೇಸು ದಿನವಿಹಿರಿ ||
ಲೇಸ ಕೊಡುವೆನು ನಿಮಗೆ ನಿಮ್ಮಾ |
ಯಾಸಪರಿಹರವೆಂದು ಕರೆಯು |
ಲ್ಲೋಸಗವೆ ಬರುತಿರ್ಪ ವರಲಕ್ಷ್ಮಿಯವೊಲೆಯ್ದಿದಳು ||

ನೋಡಿದನು ಕಲಿಪಾರ್ಥ ಮಡದಿಯು |
ಗಾಢಗಮನಸ್ಥಿತಿಯ ಮನದೊಳು |
ಮಾಡಿದನು ಯೋಚನೆಯ ನೀ ಹೋಗೊಮ್ಮೆ ನರನೆಡೆಗೆ ||
ಬೇಡಿ ಬಾ ಗಂಧರ್ವನನುಂಯೆಂ |
ಪಾಡಿ ಕಳುಹಲ್ಕನ್ನಾನನುಮತಿ |
ಗೂಡಿ ಬಂದವಳಾಗಬೇಕೆಂಸತಿಯು ತಾನೆಂದ || ೧೦

ಅನಿತಱೊಳಗೆ ಸುಭದ್ರೆ ತನ್ನಯ |
ಇನಿಯನೆಡೆಗೆಯ್ತರುತ ನಾಚುತ |
ಏನುತಮದಗಜಗಮನದಿಂದೆಯ್ತಂದು ಪದಯುಗಕೆ ||
ಮನದ ಹರುಷದಲೆಱಗಿ ನಿಂದಳು |
ಮನುಮಥನ ಮಸೆದಲಗಿನಂದದಿ|
ವನಿತೆ ತಲೆಯನು ಬಾಗಿ ಕಿಱಿದೆಡೆಯಲ್ಲಿ ಭಯದಿಂದ || ೧೧

ಬೆಮರಿಡುತ ಜೆಂಗೊಂಡು ರಮಣನ |
ಕ್ರಮವನಱಿಯದೆ ನುಡಿಯಲಂಜುತ |
ಸಮತೆಯಲಿ ತಲೆವಾಗಿ ಸಖಿಯರ ಸಂಜ್ಞೆಯಿಂದಿರಿಸಿ ||
ಕಮಲಗಂಗಳ ಕೊನೆಯಲರ್ಜುನ |
ನಮಲಮೂರ್ತಿಯ ನೋಡುತಿರ್ದಳು|
ವಿಮಲಮತಿಯು ಸುಭದ್ರೆ ನುಡಿಸಲು ನುಡಿವೆನೆಂದೆನುತ|| ೧೨

ನಿಂದಿರುವ ಸತಿಯಿರವ ನೋಡುತ |
ಲಿಂದುವಂಶಾಗ್ರಣಿಯು ಪಾರ್ಥನು|
ಮಂದಗಮನೆಯ ಮನದ ಬಗೆಯನು ತಿಳಿದು ವಿನಯದಲಿ||
ಎಂದನತಿಗಂಭೀರವಾಕ್ಯದ ।
ಲಿಂದಿದೇನಾಶ್ಚರ್ಯ ಬಹುದೀ |
ಸಂದನಕೆ ನೀನೆಂದು ಕೇಳಿದು ಬಳಿಕಲಿಂತೆಂದ || ೧

ಬರವಿದೇನೀನಿಂದು ನಿನಗೀ |
ಗಿರಿತರುವ್ರಜಕಾನನದಿ ಸಂ |
ಚರಿಸುವರ ನೋಡೊಮ್ಮೆ ಹೋಹೆನೆನುತ್ತ ನಡೆತಂದ ||
ಪರಿವಿಡಿಯೊ ಮುರಹರನನುಜ್ಞೆಯ |
ಧರಿಸಿ ಕಾರ್ಯಕೆ ಬಂದ ಬಗೆಯೋ |
ಎರಡಱೊಳಗೇನೆಂದು ಬೆಸಗೊಂಡನು ಮನೋಹರೆಯ || ೧೪

ಎನಲು ಸತಿ ಕಾಲುಂಗುಟದಲಿಳೆ |
ಯನು ಬರೆಯುತಿಂತೆಂದು ನುಡಿದಳು |
ವನಜಲೋಚನೆ ಪತಿಯ ಕಡೆಗಣ್ಣಿಂದಲೀಕ್ಷಿಸುತ ||
ಎನಗೆ ಬೇಱಿಕೆನಿನ್ನು ಬರಲೀ |
ನನಕೆ ನಿಮ್ಮಯ ಚಿತ್ತವಱಿಯದೆ |
ಮನಕೆ ಮನ ತಾರ್ಕಣೆಗಡೇಸೇಸುಂಟು ಹೇಳುವುದು || ೧೫

ಅವಧರಿಸು ರಾಜೇಂದ್ರ ಮತ್ಸಹ |
ಭವ ನಿರೂಪಿಸಿ ಕಳುಹಿದನಿತುವ |
ನಿವಗೆ ಬಿನ್ನಹಮಾಡುವೆನು ಗಯನೆಂಬ ಗಂಧರ್ವ ||
ಭುವನವಱಿಯಲು ತಮಗೆ ಘನದ್ರೋ |
ಹವನೆಸಗಿ ನಿಮ್ಮಲ್ಲಿಗೆಯ್ದಿಹ |
ನವನನೊಪ್ಪಿಸ ಹೇಳಿ ಕಳುಹಿದನೆಂದಳಿಂದುಮುಖಿ || ೧೬

ಇದು ನಿಮಿತ್ತ ಸರೋಜನಾಭನು |
ಮೊದಲು ನಿಮ್ಮೊಡೆಗತಿವಿವೇಕದ |
ಸದಮಲಾತ್ಮಕ ವೇಗವಂತಾಕ್ರೂರರೆಂಬವರ ||
ಮುದದಿ ಕಳುಹಿದಡವನನೊಪ್ಪಿಸ |
ದದಕೆ ಪರಿಹಾಸಮಾಡಿ ಕಳುಹಿದ |
ರಿದಕೆ ಮನದಲಿ ಖತಿಯ ತಾಳಿಹನೆಂದಳಬುಜಾಕ್ಷಿ || ೧೭

ಕೊಡುವುದೊಳ್ಳಿತು ಖಚರನನು ಹರಿ |
ಯೆಡೆಗೆ ಮಿಗೆ ಖಯಖೋಡಿಯೆಂಬುದ |
ಹಿಡಿಯಲಾಗದು ಭೂಪ ನಿಮಗಿಂದುಂಟೆ ಕೋಪಿದರು ||
ಎಡೆವಿಡದ ಸಖಿತನವು ಕೆಡದೊಲು |
ಕಡೆಮೊದಲು ಪರಿಯಂತರಿಳೆಯೊಳು |
ನಡೆಯಬಲ್ಲರಿಗುಂಟೆ ದುರ್ಯಶವೆಂದಳಾರಾಣಿ || ೧೮

ಅರಸುತನದಧಿರಾಜಪದವಿಸು |
ಕುರುಪತಿಗೆ ಸೆರೆ ನೀಗಿ ನೆತ್ತಿಗೆ |
ಸೆಱಗ ಬಡಿಯಲ್ಕಿಲ್ಲದಂತಾನಾರ ಸೀರೆಗಳ ||
ಧರಿಸಿ ದೇಸಿಗರಂತೆ ಗಿರಿವನ |
ತರುಗಳನು ಮುಱಿಮಾಡಿಕೊಂಡಿಹ |
ಸಿರಿಗೆ ಹರಿಯೊಳು ವೈರವುಚಿತವೆಯೆಂದಳಿಂದುಮುಖಿ || ೧೯

ಕುಡಿಕೆನೀರನು ನಂಬಿ ತುಂಬಿದ |
ಕೊಡನನೊಡೆಕೊಯ್ವಂತೆ ಖಚರನ |
ಪಿಡಿದು ಇಹಪರಸಾಧನಕ್ಕುಪಯೋಗ್ಯಕರವಾದ ||
ಜಡಧಿಶಯನನ ಕೂಡೆ ವೈರವ |
ಪಡೆದು ಮುಂದನುಭವಿಪ ಭಾಗ್ಯವ |
ಕೆಡಿಸಿ ಕೊಂಬುದನಾರು ಕಲಿಸಿದರೆಂದಳಾರಾಣಿ || ೨೦

ಅರಿಯದವರಾದಡೆಯು ಕೃಷ್ಣನ |
ವರಪ್ರತಿಜ್ಞೆಯ ಕೇಳಿ ತಾಪಿದ |
ಪರಿಹರಿಪೆವೆಂದೆಂಬರೇ ಭೂಪಾಲ ಚಿತ್ತೈಸು ||
ಅರಿಯರೆಂಬೆನೆ ಸಕಲವಿದ್ಯಾ |
ಪರಿಣತಪ್ರೌಢರು ವಿಚಾರಿಸಿ |
ಹರಿಗೆ ಗಯನನು ಕೊಡಲು ಲೇಸಹುದೆಂದಳಾರಾಣಿ || ೨೧

ಈಗ ಗಯನನು ಕೊಡದೆ ಮುಂದಣ |
ತಾಗುಬಾಗನು ನೋಡದೀಪರಿ |
ಮೂಗರಾಗಿರೆ ತೃಣವು ಮೇರುವ ಬಾಗದೇ ಬಳಿಕ ||
ಕೂಗಿ ಮಾರಿಯ ಕರೆದು ತಂದರ |
ತಾಗುವುದು ಶಶಿವಂಶಚಂದ್ರನೆ |
ನೀಗಬೇಡನ್ನಯದೆ ಬಾಟಿಕ್ಕೆಯನೆಂದಳಾತರುಣಿ || ೨೨

ಅರಿಗಳಹ ಧೃತರಾಷ್ಟ್ರತನಯರ |
ಪರಿಯ ಬಲುಮೆಯ ಕೂಡಿ ಜಯಿಸುವ |
ಪರಿಯನೆಲ್ಲವ ಬಿಸುಟು ಮುರುಳರ ತೆರದಿ ಖಚರನನು ||
ಕರವಿಡಿದು ರಾಜ್ಯವನು ಪ್ರಾಣವ |
ಕುರುಪತಿಗೆ ಮುರಹರಗೆ ತೆರುವೀ |
ಪರಿಯನಾರರುಹಿದರು ನಿಮಗೆಂದೆಂದಳಬುಜಾಕ್ಷಿ || ೨೩

ಎನಲು ನಗುತರ್ಜುನನು ತನ್ನಯ |
ವನಿತೆಯಾದ ಸುಭದ್ರೆಗೆಂದನು |
ಮನದೊಳುಕ್ತಿಯೊಳಂಗದಲಿ ಹರಿದೈವಗುರುವೆಂದು ||
ಘನವಿವೇಕದಿ ಬಲ್ಲೆನಾದಡೆ |
ಜನಪ ಸಲಹೀತನುವನೆಂದೆ |
ನ್ನನು ಶರಣ್ಹೊಗಲೆಂತು ಗಯನನು ಕೊಡುವೆ ತಾನೆಂದ || ೨೪

ಪರಪುರಾತನ ಚಕ್ರವರ್ತಿಗ |
ಳಿರುವರಾಷೋಡಶದ ರಾಯರು |
ತರಣಿಚಂದ್ರಮರಿರ್ಪನಿತು ದಿನ ಬಾಳ್ದರೇಯವರ ||
ಸುರುಚಿರದ ಸತ್ಕೀರ್ತಿಯೊಂದೇ |
ಧರೆಯೊಳಗೆ ಸಲೆ ನಿಂತುದಲ್ಲದೆ |
ತರುಣಿ ಬೇಳ್ಕೇನುಂಟು ಕೇಳೆನ್ನೆಂದನಾಪಾರ್ಥ || ೨೫

ಸರತನುವನಿದ ನಂಬಿ ತನ್ನಸು |
ಶರಣುಹೊಕ್ಕಿಹ ಗಯನ ಮಾರಿಯು |
ಕರಕೆ ತುತಾತ್ತಿಗಿತ್ತು ಪುಣ್ಯದ-ತೆಱನನೆಳ್ಳನಿತ ||
ಅಱಿಯದವನನು ನಿಮಿಷ ಭೂವಧು |
ಹೊಱುವಳೇ ಶುಕವಾಣಿ ಹೇೞ್ |
ನ್ನರವರಿಸದೆನಗೆಂದು ನುಡಿದನು ಪಾರ್ಥ ನಸುನಗುತ || ೨೬

ಅರಸ ಚಿತ್ತೈಸಿದಕೆ ನಿನಗೀ |
ಬಿರಿಸಿನಗ್ಗದ ಭಾಷೆ ಕೊಂಬುದೆ |
ಸುರನರೋರಗವಂದ್ಯನಲ್ಲಾ ಕೃಷ್ಣ ಜಗವಱಿಯೆ ||
ಶಿರದ ಕಂಡಣಿತಿಯುನು ಕಳೆಯು |
ಲ್ಕುರಿವ ಕೊಳ್ಳಿಯು ಕೊಂಡು ತುರಿಸುವ |
ಪರಿಯು ಮಾಡಿದೆ ಲೇಸು ಲೇಸೆಂದಳು ಸರೋಜಾಕ್ಷಿ || ೨೭

ಹಿಂದಣಾಯಾಸವನು ನೋಡದೆ |
ಮುಂದೆ ಬಹ ಕಾರ್ಯವನು ಗಣಿಸದೆ |
ಇಂದು ನೀವೀಬಗೆಯಲಡವಿಯುಲಿಹುದನೀಕ್ಷಿಸದೆ ||
ಮಂದಮತಿಗಳ ತೆಱದಲಾಗೋ |
ಎಂದನಡಿಗಪರಾಧಿಗಳು ನೀ |
ವೆಂದೆನಿಸಿದರೆ ಲೇಸಹುದೆ ನಿಮಗೆಂದಳಾತರುಣಿ || ೨೮

ಲಲನೆ ಪಾಂಚಾಲಿಯು ಸೊಯುಂಬರ |
ದಲಿ ನೃಪಾಲಸಮೂಹ ಚಾಪವ |
ಸೆಳೆಯದಂತವರಿಂಗಶಕ್ಯವದೆನಿಸಿ ನಿಮುಗೆಂದು ||
ಇಳೆಯೊಳಗೆ ಸತ್ಕೀರ್ತಿ ದೊರಕುವ |
ಬಳಕೆಯುನು ನಿರ್ಣಯಿಸೆ ಸತಿಯುರ |
ತಲೆವಣಿಯು ಸೇರಿಸಿದ ಹರಿಯೊಡನುಚಿತವೇ ವೈರ || ೨೯

ಮುದದೊಳೆನ್ನನು ರಾಮನಂಧನ |
ಮೊದಲ ತನಯಂಗೀವೆನೆಂದೇ |
ಹೃದಯದೊಳಗೂಹಿಸಲು ನಿಮ್ಮನು ಸಲಹಬೇಕೆಂದು ||
ಮದನನೈಯನು ತಿಳಿದು ಸಲೆ ಕಪ |
ಟದಲಿ ಮದುವೆಯ ನಿಮಗೆ ಮಾಡಿದ |
ವಿಧವ ಮಱೆಯಲು ಬಹುದೆ ಹೇಳೆಂದಳು ಸರೋಜಾಕ್ಷಿ || ೩೦
ಅರಸ ಚಿತ್ತೈಸುವುದು ಹಿಂದಕೆ |
ಕುರುಪತಿಯ ಸಭೆಯೊಳಗೆ ದ್ರುಪದನ |
ವರತನುಜೆ ಲಜ್ಜಾಭಿಮಾನವ ಕಾವುದೈ ಹರಿಯೇ ||
ಪುರುಷರಲಿ ಹುರುಳಿಲ್ಲ ಸಲಹೆಂ |
ದೊರಲಲಕ್ಷಯವೆಂದು ವಸ್ತ್ರವ |
ಕರುಣಿಸಿದ ಕೃಷ್ಣನೊಳು ವೈರವೆ ಎಂದಳಾಕಾಂತೆ || ೩೧
ನಿನ್ನೆ ವನಮಧ್ಯದಲಿ ಸೀವಿರೆ |
ಗನ್ನಗತಕವ ಮಾಡಿ ಮುನಿವರ |
ತನ್ನ ಕೋಪಾಗ್ನಿಯಲಿ ನಿಮ್ಮನು ಕೊಲಲೆಣಿಸಲಂದು ||
ಅನ್ನೆಗಂ ವನದೆಡೆಗೆ ಬಂದು ಮ |
ಹೋನ್ನತೋಪದ್ರವವ ತವಿಸಿದ |
ಪನ್ನಗಾರಿಧ್ವಜನ ಮಱೆವರೆ ಎಂದಳಾರಾಣಿ || ೩೨
ಗುರುವರುಱೆ ದೈವವನು ವಿದ್ಯಾ |
ಪರಿಣತರ ಹಿರಿಯರನು ಮಾಡಿದ |
ಪರಮಪುರುಷಾರ್ಥಕರ ಮಿಗೆ ಸಂವತ್ಸರಾಶನವ ||
ಕರುಣಿಸಿದ ದಾತಾರನನು ಮಱೆ |
ವರೆ ನರಕದೊಳಗಾಳ್ವರೆಂಬೀ |
ಹರಿಯ ಶ್ರುತಿವಾಕ್ಯವನು ಮಱೆವರೆ ಎಂದಳಾತರುಣಿ || ೩೩
ತರುಣಿಯಾಡಿದ ನುಡಿಗೆ ಮನದಲಿ |
ಹರುಷಮುಖನಾಗುತ್ತ ಕೇಳಿತಿ |
ಸರಸಿಜಾನನೆ ನಿನ್ನ ನುಡಿ ನಿಶ್ಚಯವು ಪರಿಕಿಸಲು ||
ಅಱಿತಿಹೆನೆ ತಾನಜ್ಞನಲ್ಲಾ |
ವರಿಸನೆನಗೊಂದುತ್ತರವ ಕೊಡ |
ಲಱುಹುವೆನು ಮಾಱುತ್ತರವ ಕೇಳೆಂದನಾಪಾರ್ಥ || ೪

ಶರಣುಹೊಕ್ಕನ ಜಲದೊಳಾಳ್ದನ |
ತರುವಡರಿದನ ಓಡಿಹೋದನ |
ಕರವ ನೆತ್ತಿಯಲಿಟ್ಟವನ ನಡನಡುಗುತಿರ್ಪವನ ||
ಶರವ ಬಿಸುಟನ ಬಾಯೊಳಾಕ್ಷಣ |
ಬೆರಲನಿಟ್ಟನ ಕೊಂದಡೆಯು ಮಿಗೆ |
ಪರರಿಗೊಪ್ಪಿಸಿದಡೆಯು ಸದ್ಗತಿಯುಂಟೆ ಹೇಳೆಂದ || ೩೫

ನಂಬಿದವಗೆರಡೆಣಿಸಿ ಮಾಂಸಕ |
ದಂಬಪೂರಿತತನುವ ನಂಬಿ ತ್ರಿ |
ಯಂಬಕನ ಹರಿಯಜರ ತಾವಿಲ್ಲೆಂಬ ದುರ್ಯಶವ ||
ಡೊಂಬಿನಾಡಂಬರದವನ ಪರಿ |
ಯೆಂಬ ನುಡಿಗೊಳಗಾಗಿ ಬಾಳುವ |
ಹುಬಲಿಲ್ಲೆನಗರಸಿ ಮಾಧವನಾಣೆ ಕೇಳೆಂದ || ೩೬

ಆಗಬಲ್ಲುದೆ ಧರಣಿ ನಮಗೊಡ |
ನಾಗಬಲ್ಲುದೆ ಕೀರ್ತಿ ಮಿಗೆ ಲೇ |
ಸಾಗ ಬಲ್ಲುದೆಯಘವ ಪಿಡಿದೀಸುಕೃತವಮಂ ಬಿಡಲು ||
ಭೋಗಿಶಯನನ ಮತವು ತಾ ಜ |
ನ್ನಾಗಲರಿವುದೆ ಪಿಡಿದವನ ಜಡ |
ಲೀಗ ಸಿನಗಿದು ಹಸನೆ ಹೇಳೆನ್ನಾಣೆ ತನಗೆಂದ || ೩೭

ಧರಣಿ ತಲೆಕೆಳಗಾಗಲಾಸುರ |
ಗಿರಿಗ ಕೈಕಾಲ್ ಬರಲಿ ಮೇರು ದಿನ |
ಕರನ ಕಿರಣಕೆ ಶೈತ್ಯದೋರಲು ಚಂದ್ರಗಾತಪದ ||
ಕರಗಳುರಿ ಸಂಜನಿಸೆ ಕೊಡುವೆನೆ |
ಮುರಿಯ ಹೊಕ್ಕಿಹ ಗಯನ ಕೇಳೆಲೆ |
ತರುಣಿ ಹೇಳಾಹರಿಗೆ ನೀ ಹೋಗೆಂದನಾಪಾರ್ಥ || ೩೮

ಆಡಿದುದು ತಾನೊಂದು ಮನಗೊಳು |
ಮಾಡಿದುದು ಬೇರೊಂದು ಸರಿಯಿದ |
ನೋಡನೇ······ಗಳೆತನದಂದಲೊಡವೆರೆದು ||
ಆಡಿದವರಿಗಿದುವೆ ನಿಧಾನವು |
ಖೋಡಿಯಿಲ್ಲಲೆ ರಮಣಿ ನಾಪದ |
ನಾಡಿ ಕೆಡಿಸಲದೇಕೆ ನೀ ಪೋಗೆಂದನಾಪಾರ್ಥ || ೩೯

ಇವನ ಕೊಡೆನೆಂಬಾಗ್ರಹದಿ ಮಾ |
ಧವನು ಯಾದವಸೇನೆಸಹಿತವೆ |
ಜವದೊಳೆಯ್ತಂದಾಜಿರಂಗಕೆ ನಿಲಲು ಸೇನೆಯನು ||
ಅವನಿಗೊಱಗಿಸಿ ಕೃಷ್ಣರಾಯನ |
ವಿವಿಧಚತುರೋಪಾಯದಿಂದಲಿ |
ಭವವಿರಿಂಚಿಗಳಳಹುದೆನಲು ಮೆಚ್ಚಿಸುವೆ ತಾನೆಂದ || ೪೦
ಧುರದೊಳೆಲ್ಲರ ಕೆಡಹದಾಸಂ |
ಕರುಷಣನ ಮೆಚ್ಚಿಸದೆ ಕಮಲಜ |
ಹರರನಚ್ಚರಿವಡಿಸದಾಜಿಯೊಳಂಜಿ ಖಚರನನು ||
ಮರಳಿ ಹರಿಗೊಪ್ಪಿಸಿದೆನಾದಡೆ |
ಮುರಹರನ ಮೈದುನನು ತಾನ |
ಲ್ಲರಸಿ ಪಾಂಡುವಿನಣುಗನಲ್ಲೆಂದನು ಧನಂಜಯನು || ೪೧
ತಳುವ ಮಾಡಲದೇಕೆ ಕೇಳೆಲೆ |
ಜಳರುಹಾನನೆ ಹೋಗಿ ನೀನೆ |
ಮ್ಮಳವನೆಲ್ಲವ ಹೇಳುಹೇಳೆಂದೆದ್ದು ಹೊದಱುಗಳ ||
ತಳಿರ ಸೆಜ್ಜೆಲನು ಸೇರಲರಸನ |
ಒಳಸಿ ನಾಚುತ ಮಂದಗತಿಯಲಿ |
ನಳಿನಮುಖಿ ನಸುನಗುತ ಪಾರ್ದಳು ಹೇಳಲೇನೆಂದ || ೪೨
ಬಾಹಿರಂಗದ ರಾಯಭಾರವ |
ನೂಹಿಸಿದ ಮಾತುಗಳನೆಲ್ಲವ |
ಸಾಹಸದಿ ನಯಭಯದಿ ಪೇಳಿದ ಬಳಿಕ ಗುಪ್ತದಲಿ ||
ಬೇಹ ಮಾತೊಂದೆರಡ ಸೂಚಿಸಿ |
ಹೋಹವಳ ತೆಱದಿಂದ ಪುರುಷನ |
ಬಾಹುಯುಗದಾಲಿಂಗನವ ನೆರೆ ಬಯಸಿ ಗಮಿಸಿದಳು || ೪೩
ಒಳಿಕಲರ್ಜುನ ತನ್ನ ಪರ್ಣದ |
ನಿಳಯುವನು ಹೊಕ್ಕಲ್ಲಿ ವಿಶ್ರಮ |
ದಳೆದು ಪವಡಿಸಲೊಡನೆ ಬೆಂಬಳಿಯಿಂದ ನಡೆತಂದು ||
ಒಳಹೊಗದೆ ಬಾಗಿಲಲಿ ನಿಂದಳು |
ಜಲಜನಾಭನ ಕಡೆಹ ಹೇಳುವ |
ನಿಲುಕಡೆಯ ಬುದ್ಧಿಯ ನಿರೂಪಿಸಿಯೆನುತ ನಳಿನಮುಖಿ || ೪೪

ಬೇಱಿಕಿ ಹೇಳುವುದೇನು ನಿನಗೆಲೆ |
ವಾರಿಜಾನನೆ ಗಯನನೊಪ್ಪಿಸೆ |
ನಾರಮಾಧವಗಿದನು ನೀ ಹೇಳ್ನಿಲ್ಲಬೇಡೆನುತ ||
ಮೋರೆಯಲಿ ಮುಸುಕಿಟ್ಟನಾಜಂ |
ಭಾರಿಪುತ್ರನ ಹದನ ಕಾಣುತ |
ನಾರಿಯಾಗಲೆ ಸುಯ್ದು ಸುಯ್ಲಲಿ ಸಿಂದಳಿದಿರಿನಲಿ || ೪೫

ಮಂದಗಮನೆಯ ವಿಲಸಿತಾಮಲ |
ಕುಂದರದನೆಯ ವಕ್ರಕುಂತಳ |
ದಿಂದ ಮೆಱೆವ ವಿಲಾಸವಿಭ್ರಮವೆಸೆವ ಬಾಲಕಿಯ ||
ಚಂದನಸುಗಂಧಸಿಯ ವರವೂ |
ರ್ಣೇಂದುವದನೆಯ ಕಂಬುಕಂಠಿಯ |
ಬಂದುಗೆಯ ಚೆಂದುಟಿಯ ಕಾಂತೆಯ ಕಂಡನಾಪಾರ್ಥ || ೪೬

ನೊಸಲ ತಿಲಕದ ಕುರುಳ ಪಙ್ಕ್ತಿಯ |
ಮಿಸುಪ ಗಾತ್ರದ ತೊಳಪ ನಯನದ |
ಪಸರಿಪೆಳನಗೆ ತೆಳುಗದಪಿನಿಂದಮರ್ದ ಭೂಷಣವ ||
ಅಸಿಯ ಬೆರಳ್ಗಳೊಳೆಸೆವುಗುರ್ಗಳ |
ಪೊಸತೆನಿಪ ಕುಂಕುಮದ ಲೇಪದೊ |
ಳಸಿಯಳೊಪ್ಪಿದಳಿಂದ್ರಸುತನಂಬಕಕೆ ಮುಸುಕಿನೊಳು || ೪೭

ಮಿಱುಗುವೊಳ್ದೊಡೆಯಿಂದ ಬೆಡಗಿನ |
ನೀಱೆಯ ಸಿಂಗರದಿಂದಲೆಡೆವಿಡ |
ದುರುನಿತಂಬಗಳಿಂದ ಭುಜವಲ್ಲರಿಯ ತೊಡವುಗಳ ||
ಬಿರಿಮುಗುಳ ಮಲ್ಲಿಗೆಯ ಕಬರಿಯ |
ಮೆಱೆವ ಸವಿನುಡಿ ಬಾಯ್ದೆಱೆಯುಲಿಯೊ |
ಪ್ಪಿರುವ ಮಧುರದ ಕಾಂತೆಯಂಗವ ಕಂಡನಾಪಾರ್ಥ || ೪೮

ವರಕಟಾಕ್ಷದ ಮಿಂಚು, ಘನ ಪೀ |
ವರಪಯೋಧರ, ಸತಿಯ ಮಧ್ಯದಿ |
ಮೆಱೆವ ಮೇಖಲೆಯೊಳಿಹ ಘಂಟಾನಿನದಗಳ ಮೊಳಗು ||
ಸರಸಲಾವಣ್ಯಾಂಬುತಟಿನಿಯ |
ಮಿಱುಪ ಕಬರಿಯ ಬರ್ಹಿನೃತ್ಯದಿ |
ವರುಷಋತು ಚೆಲ್ವಾಗೆ ನರಚಾತಕವು ನಲಿದಾಡೆ || ೪೯

ಇನಿತನೆಲ್ಲವ ನರನು ಮುಸುಕಿನೊ |
ಳನುನಯದಿ ನೋಡುತ್ತಲಿರಲಾ |
ವನರುಹಾನನೆ ಮದನವಿರಹಾನಲನೊಳಗೆ ಹುದುಗಿ ||
ವನರುಹಾಕ್ಷನ ಕಾರ್ಯವನು ತಾ |
ನನುಸರಿಸಿಯಳಲಿಂದ ನುಡಿದಳು |
ಜನಪ ಚಿತ್ರಸೇನನಃಶಿರುವೆನವಳ ಪರಿವಿಡಿಯ || ೫೦
ಕಟಕಟಾ! ವಿಧಿ ನಿನ್ನ ಮಾಯೆಯ |
ನಟಮಟಿಸಲಾರಳವು ಘನದು |
ರ್ಘಟದೆಡರು ಬಂದೊದಗಿತೇ ಎಂದೆನುತಲಾತರುಣಿ ||
ದಿಟಕೆ ಬದುಕುವೆ ನಿನ್ನ ಮನದು |
ತ್ಕಟವ ಕಳೆದಚ್ಯುತನ ಕರುಣದಿ |
ಘಟಿಸುವುದು ಸಾಮ್ರಾಜ್ಯವೆಂದಿರ್ದೆನು ಮನಸ್ಸಿನಲಿ || ೫೧
ನೆನೆದೆನೊಂದನು ವಿಧಿಯು ಮಾಡಿದ |
ಘನಯುಕುತಿ ಬೇರಾಯ್ತು ಕೃಷ್ಣನ |
ಸನಿಯಕೆಯ್ದುವೆನೆಂತು ಪಾರ್ಥನ ಕರ್ಕಶೋಕ್ತಿಗಳ ||
ಎನಲು ಕೋಪವ ತಾಳಿ ಮನದೊಳು |
ಕನಲಿಯೇನೆಂದೆಂಬನೋ ಕಾ |
ಣೆನು ವಿಧಾತ್ರ ವಿಧಾತ್ರ ಎಂದಳಳಲಿದಳು ತನ್ನೊಳಗೆ || ೫೨
ಕರವಿಡಿದ ದಿನದಂದಿನಿಂದೀ |
ಪರಿಯ ಬಹುಳಾಪದಗಳಲ್ಲದೆ |
ಪುರುಷನೆಡೆಯಲ್ಲಿರ್ದು ಘನವೈಭವವ ನೆರೆ ತಾಳ್ದು ||
ನೆರೆಹೊರೆಯ ನಾರಿಯರ ತೆಱದಲಿ |
ಭರಿತಸುಖಸಂಪದದಿ ಭೋಗಿಪ |
ಪರಿಯ ಮಾಡಿದುದಿಲ್ಲ ವಿಧಿಯೆಂದಳಳಲಿದಳು ತರಳೆ || ೫೩
ಯದುಕುಲದೊಳುದಭವಿಸಿಯಗ್ಗದ |
ಪದುಮನಾಭನ ತಂಗಿಯೆನಿಸಿಯೆ |
ಕದನದಲಿ ನರ ಮೂಱುಲೋಕದ ಗಂಡನೆನಿಸುವನ ||
ಸುದತಿಯೆಂದೆಲ್ಲರು ಹೊಗಳೆ ಹಿ |
ಗ್ಗಿದುವೆ ಬದುಕಿದೆನೆಂದಿರಲ್ಕೆನ |
ಗೊದವಿತಧಿಕಾಯಾಸವೆಂದಳಳಲಿದಳು ನಳಿನಾಕ್ಷಿ || ೫೪

ಏನ ಕಾಬೆನೊ ಕಂಗಳಿಂದೀ |
ಮಾನನಿಧಿ ನರ ಗಯನ ಕೊಡನೆಂ |
ಬೀಸಿರೋಧದೊಳೇನ ಮಾಳ್ಪನೊ ದಾನವಾಂತಕನು ||
ಸೂನುವಿಗೆ ಗತಿಯಾರು ತನಗಿ |
ನ್ನೇನು ತೆಱನಾಗೋರವೆನ್ನೆಯ |
ಹಾಸಿಯನು ಹಾ! ದೈವವೇ ಎಂದಳಲ್ದಳಿಂದುಮುಖಿ || ೫೫

ಅರಸ ಕೇಳ್ ಹದಿಮೂಱು ವರುಷವು |
ಸರಿದ ತುದಿಯಲಿ ತನಗೆ ಸುಖವೈ |
ಶ್ವರಿಯ ಪತಿಸಾನ್ನಿಧ್ಯ ಸುತಲಾಭಾಭಿವೃದ್ಧಿಗಳು ||
ದೊರಕುವುದು ಎಂದಿರ್ದೆನುಳಿದಿಹ |
ಸಿರಿಯು ಬಯಸಲದೇಳೆ ಕರ್ಣಾ |
ಭರಣವುಳಿವುದೆ ಸಂಶಯುವದಾಯ್ತೆಂದಳಿಂದುಮುಖಿ || ೫೬

ಎಂದು ಸತಿ ಘನಗದ್ಗದಸ್ವರ |
ದಿಂದಲಾಮೂಗಕ್ಕೆಯಲಿ ಕಡು |
ನೊಂದಳರ್ಜುನನರಸಿಯನು ಸಂತೈಸಬೇಕೆನುತ ||
ನಿಂದು ಕರವನು ಪಿಡಿದು ತಕ್ಕೈಯೊ |
ಳೊಂದಿ ತನುವನು ತಡವರಿಸುತೆಲೆ |
ಇಂದುಮುಖಿ ನೀನಳಲಲೇತಕೆ ಹೇಳು ತನಗೆಂದ || ೫೭

ಸೆಳೆದು ತೊಡೆಯಲಿ ಕುಳ್ಳಿರಿಸಿ ಸತಿ |
ಯಳಕಪಙ್ಕ್ತಿಯ ತಿದ್ದಿಯುಗುರ್ಗಳ |
ಲಿಳಿನ ಜಲಬಿಂದುಗಳ ತನ್ನಯ ಸೆಱಗಿನಿಂದೊರಸಿ ||
ಜಲಜಮುಖಿ ಶೋಕಿಸುವರೇ ವರ |
ಜಲಜನಾಭನ ಕರುಣವೆಮ್ಮೊಳ |
ಗೆಲವಹುದೆ ತಾನೇನಱಿಯನೆ ಸುಮ್ಮನಿಹುದೆಂದ || ೫೮

ಎನಲು ಮುಗುಳಿಮ್ಮಡಿಸಿಯುತ್ತಳು |
ವನಜನೇತ್ರಿಯ ನೋಡಿ ಫಲುಗುಣ |
ಮನಸಿಜಾಗಮದಿಂದ ಸೈತಿಟ್ಟಿಲ್ಲದುಱಿದಿರ್ದ ||
ಅನುವಿನಲಿ ತವಿಸಲ್ಕೆ ತೀರದು |
ಎನುತ ಮೃದು ಮಧುರೋಪಲಾಲಿತ |
ಘನತರದ ವಚನದಲಿ ಮಾತಾಡಿಸಿದನಂಗನೆಯ || ೫೯

ಎಸೆವ ಮದನಾಗಮದಲರಸಗೆ |
ಹಸನೆನಿಸಿ ಸುಖವಡೆದು ಮರಳಿದ |
ಳಸುರಮರ್ದನನನುಜೆ ಪೊಗಸನ್ನೆಯಲಿ ಬೀಳ್ಕೊಳುತ ||
ಶಶಿಕುಲಾನ್ವಯ ನಿಮ್ಮೊಳೇನಂ |
ದುಸಿರುವೆನು ಸರ್ವಜ್ಞರಲ್ಲವೆ |
ಹಸಗೆಡದೆ ಕಾರ್ಯವನು ಘಟಿಸುವುದೆನುತ ಮರಳಿದಳು || ೮೫
ತೊಳೆದ ಮುತ್ತಿನ ತೆರದಿ ಫುಟದಿಂ |
ದಿಳಿದ ಪುತ್ತಳಿಪ್ರತಿಮೆಯಂದದಿ |
ನಳಿನಭವಪಿತನಳಿವ ಕಂಡಿಹ ಕಾಂತೆಯಂದದಲಿ ||
ತಳತಳಿಸಿ ಮುಖಕಾಂತಿ ದೇಹದ |
ಹೊಲುಪ ದೀಧಿತಿ ಮಿಂಚೆ ಕಾಂತನ |
ಕಳೆವರದ ಸೋಂಕಿನಲಿ ಕಳೆಯೇರಿದಳು ಕಮಳಾಕ್ಷಿ || ೮೬
ಅಂತರಂಗದ ಹರುಷದಲಿ ಬಹಿ |
ರಂತರದ ಚಿಂತಾತಿಭಾರದ |
ಸಂತಸದೊಳಾವಸಿಕೆ ಬಂದಳು ಸತಿಯರೊಡಗೂಡಿ ||
ಪಿಂತಿರುಗಿ ನೋಡುತ್ತ ಮನದಲಿ |
ಕಂತುಪಿತನನು ನೆನೆಯುತಲಿಯು |
ತ್ಯಂತತ್ವರಿತದಿ ಬಂದಳಾಗ ಸುಭದ್ರೆಯೊಲವಿನಲಿ || ೮೭
ಒರುತ ಮಗುಳೆಮನಂದನಾದಿಗ |
ಳಿರುವ ಸದನಕೆ ಬಂದು ನಾನಾ |
ಪರಿಯಲುಪಚರಿಸಿದ ನಿಮ್ಮನುಜನದ ಕೇಳದೆಮ್ಮೊಡನೆ ||
ಪರಿಪರದ ಕಾರ್ಯಗಳನಾಡಿಯೆ |
ಮರಳಿ ಖಚರನನೀಯೆನಿಸಿದ ನರ |
ಹರಿಗೆ ಪೇಳೆಂದೆನ್ನ ಕಳುಹಿದನೆಂದಳಿಂದುಮುಖಿ || ೮೮
ಇನ್ನು ಮೇಲಿಣ ಹದನದೇನಿದ |
ಕಿನ್ನು ಬುದ್ಧಿಯದೆನಲು ನುಡಿದನು |
ಪನ್ನಗಾರಿಧ್ವಜನು ಕೇಳಲೆಳಸಿಹನು ಸಲಹೆಂದು ||

ತನ್ನ ಮಱೆಗೊಳೆ ಕರವಿಡಿದು ಪಿಂಗೆ |
ಮನ್ನಿಸಿಹೆ ನರನೊಡನೆ ತಾ ಬೇ |
ಱಿನ್ನು ಮಱುಮಾತಾಡಲಸದಳವೆಂದನಾಭೂಪ || ೮೯

ಮೋಸದಿಂದಲ ಬಂದುದಾಸ |
ವೇಶನೆಂಬುದ ತಿಳಿಯದೀಪರಿ |
ವಾಸವಾತ್ಮಜನಿಹನಿದಕೆ ಘರಭಾರ ದೇವರದು ||
ವಸು ಬಗೆಯುಲಿ ನರನ ಭಾಷೆಯು |
ತಾ ಸಲಿಸಿ ಮಹರಸನು ಸಲಹೆಂ |
ದಾಸರೋಜಾಂಬಕಗೆ ಪೇಳೆಂದರಸ ಬೀಳ್ಕೊಟ್ಟ || ೯೦

ಎನಲು ಧರ್ಮಜ ಭೀಮಮುಖ್ಯ |
ರರ್ಜುನಯುತ ತಲೆವಾಗಿ ದ್ರುಪದನ |
ತನುಜೆಯಂಘ್ರಿಗೆ ನಮಿಸಿ ಸಾಧಕೆಯ ಕೊಂಡು ಬೀಳ್ಕೊಟ್ಟ ||
ವನಿತೆ ಶ್ರೀವೇಂಕಟನ ಪದಯುಗ |
ಘನಸರೋಜಂಗಳ ಸಮೀಪಕೆ |
ವನಜನಯನೆಯರೊಡನೆ ಗಮಿಸಿದಳರಸ ಕೇಳೆಂದ || ೯೧

ಅಂತು ಸಂಧಿ ೧೫ ಕ್ಕಂ ಪದ ೮೪೮ ಕ್ಕಂ ಮಂಗಳಂ.

## ಹದಿನಾರನೆಯ ಸಂಧಿ

ಸೂಚನೆ|| ಶೌರಿಕುಲವಸುದೇವತನಯನು |
ವಾರಣಾಹಸಿ ಕೃಷ್ಣರಾಯನು |
ಧೀರಕಲಿಪಾರ್ಥನೊಳು ಕದನಕೆ ತೆರಳಿದನು ಪುರವ ||

ಜಲರುಹಪ್ರಮದೆ ಸೋಜಿಗಲಿಲ್ಲಾಗ |
ವರೌಳಿಮನೆ ಜನಸೋಬಿಯನೆ ಶ್ರೀ |
ಲೋಲನಸ್ನುಷೆ ಬರವ ನೋಡುತಲಿರುವ ಸಮಯದಲಿ ||
ಬಾಲೆಯರ ಗಡಣದಲಿ ಬಂದಳು |
ಕಾಲಿಗೆಱಗಿದಳಣ್ಣದೇವಗೆ |
ಪೇಳಿದಳು ನಿಜರಮಣನೊಱಿದ ವಿಚಿತ್ರವಾಕ್ಯಗಳ || ೧

ಹಲವುಪಗೆಯಲಿ ನೀತಿಸಾರದ |
ಬಳಕೆಯನು ನಯಭಯದ ಧರ್ಮವ |
ನೆಲೆಗೊಳಿಸಿ ಪೇಳಿದೆನು ಕೇಳಿಲಿಯಣ್ಣ ನ್ಯುದುನನ ||
ತಿಳುಹಲೆನ್ನಳವಲ್ಲ ಬೋಧದ |
ಬಳಕೆಯುಂಟನರಲ್ಲ ಮೂರ್ಖರ |
ತಿಳಿಹರಿಂಗಧಿನಾಥನೆನಿಸಿದನೆಂದಳಿಂದುಮುಖಿ || ೨
ಎನಿತನಾಡಲದೇನು ಕಲಿ ಪಾ |
ರ್ಥನು ನುಡಿದ ಮಾತುಗಳ ತನ್ನೀ |
ತನು ವಿದುಳ್ಳನ್ನಲಗ ಖಚರನ ಕೊಡೆನು ತಾನೆಂದು ||
ಘನಪ್ರತಿಜ್ಞೆಯಲಿಹನು ಕವೆ ವೈ |
ದುನನ ಸಲಹುವ ಭಾರ ನಿನ್ನದು |
ವಿನುತಿಸಲು ತಾನೇನಹವಳೆಂದೂರೆದಳಿಂದುಮುಖಿ || ೩
ಆಗಲದಕೇನವನ ಹೊಗರಿನ |
ಕಾಗುಬಾಗನು ನೋಳ್ಪೆ ನಿಳಯಕೆ |
ಪೋಗೆನುತ ತಂಗಿಗೆ ನಿರೂಪಿಸಿ ಸಕಲಪಟುಭಟರ ||
ನಾಗರಥಹಯಪಾಯದಳವನು |
ಪಾಗಿ ಬರಹೇಳೆಂದು ಚಾರರ |
ವೇಗದಿಂದಲಿ ಕಳುಹಿ ಹೊಱವಂಟನು ಮುರಧ್ವಂಸಿ|| ೪
ಆಸಮಯದಲಿ ಒಂದು ಸಾತ್ಯಕಿ |
ವಾಸುದೇವಗೆ ಕೆಯ್ಮುಗಿದು ಬಹ |
ಳಾಸುರವಿದೇಕೆನ್ನ ಬಿನ್ನಪವಿದನು ಲಾಲಿಪುದು ||
ವಾಸವಾತ್ಮಜನಱಿಯದಿಹ ನೀ |
ವೀಸು ಕಠಿನದ ಭಾಷೆಯನು ನಿ |
ರ್ಣೈಸಿ ಛಲವನು ಮಾಡಿದುದ ಮುರವೈರಿ ಕೇಳೆಂದ || ೫
ಹರಣವನು ಸಲಹೆಂದು ಖಚರನು |
ಭರದಿ ಭೀತಿಯಲೋಡಿ ನಿನ್ನುಱು |
ಪರಿಯನುಸಿರದೆ ನರಗೆ ಜೋಡಿಕೊಂದಾಗಿ ಮುಱಿಮ್ಮಾತಿ ||
ಕರುಣಿಸೆನಲರ್ಜುನನು ನೋಸದೊ |
ಆರಿಯ ತಲೆಗಾದಿಹನು ದೇವರು |
ನೆರೆ ತಿಳಿದು ಒಳಿಕಾಪ್ರತಿಜ್ಞೆಯ ಸಲಿಸಬೇಕೆಂದ|| ೬

ಕೇಳೆಮಗೆ ಪರನಲ್ಲ ಬಾಂಧವ ।
ಜಾಲದೊಳಗತ್ಯಧಿಕ ವೈದನು ।
ಬಾಲಕಿ ಸುಭದ್ರೆಯು ರಮಣಾಸತ್ಯೆಯು ತನೂಭವನು ॥
ವೇಳೆತಪ್ಪಿಯು ಬಂದು ಕಾನನ ।
ಮೂಲದಲಿ ಮುನಿವೃತ್ತಿಯುಸು ನೆರೆ ।
ತಾಳಿಕೊಂಡಿಹನೊಡನೆ ಕೋಪಿಸಲಾಗದೆಮಗೆಂದ ॥ ೭

ಏನು ಧರ್ಮಶ್ರವಣ ಪರಿಕಿಸ ।
ಲೇನು ತಪಪಾಂಡಿತ್ಯ ಸಾತ್ಯಕಿ ।
ಕಾನನದಿ ಮುನಿಮಾರ್ಗಮಂ ಕೈಕೊಂಡು ತಿರುಗುತಿಹ ॥
ಮಾನವಾಧಮ ಜಲವ ಮುಳುಗುತ ।
ಸಾನುರಾಗದಿ ತಪವ ಮಾಡ ।
ದಿದೇನು ಭೂಪರ ಬಗೆಯ ನಡತೆಯದೇಕೆ ತನಗೆಂದ॥ ೮

ಈಗಲೆಮ್ಮೊಡನಾಜಿಮುಖಕನು ।
ವಾಗಿ ಖಚರನ ಕೈಪಿಡಿದು ಕೊಡ ।
ಲಾಗದೆಂಬಭಿಧಾನ ದುಶ್ಶಾಸನನು ಸಭೆಯೊಳಗೆ ॥
ಆಗರುವೆ ದ್ರೌಪದಿಯ ವಸ್ತ್ರ ।
ತ್ಯಾಗವನು ಮಾಳ್ಪಾಗಲಿಲ್ಲವೆ ।
ಕೂಗದಿರು ತಮ್ಮೊಡನೆ ಭ್ರಷ್ಟನ ಮಾತದೇಕೆಂದ ॥ ೯

ಕಾಲದೇಶವನರಿತಿದರಿ ತ ।
ನ್ನೇಳಿಗೆಯ ಸತ್ವವನು ಪರಿಕಿಸು ।
ತಾಳವಾಡುವ ಜನಕೆ ತಾ ಗುರಿಯಾಗದಿಹ ನರನು ॥
ಬಾಳಬಲ್ಲವನಿವನು ಮೂರ್ಖರ ।
ಮೇಳಿಯುವಗಾಗವಗೆ ನೀ ಕಡು ।
ಪೇಳದಿರು ಹೋಗೆಂದು ಹೊರವಂಟನು ಪುರಾಂತರವ ॥ ೧೦

ಪುರದೊಳಗೆ ವಸುದೇವ ಹಲಧರ ।
ಸರಸಿಜಾನನೆ ದೇವಕಿಗೆ ಪುರ ।
ಹರನ ಶತ್ರುಗೆ ಸಾಂಬ ಮುಖ್ಯರ್ಗಖಿಳ ಹಿರಿಯರಿಗೆ ॥
ನೆರಗೆ ಮುರಹರಗಧಿಕವೈರವು ।
ಬೆರಸಿದಾಗಮದನುವ ಸಾತ್ಯಕಿ ।
ಘುಳುಹಿದನು ಹರಿ ಹೊರಟು ಕದನಕೆ ತೆರಳಿದಂದದವನು ॥ ೧೧

ಅಕಟ! ಕೃಷ್ಣಂಗೇನು ಮರುಳಾ |
ಟಿಕೆ ಧನಂಜಯನೊಡನೆ ಗಂಧ |
ರ್ವಕನ ಕೊಡೆನೆಂಬಾಗ್ರಹದಿ ಸಂಗ್ರಾಮಕೆಬ್ಬುವುದು ||
ಯುಕುತಿ ಮಿಗೆ ಲೇಸಹುದು ದಾಯ್ಗರ |
ವಿಕಳತೆಗೆಯೊಳಗಾಗಿ ತರಹರು |
ಸಕಲಧಾತ್ರಿಯ ಜನಪಟವಧಿಗೊಳಗಾದರವರೆಂದ || ೧೨
ಬೀದಿಗಲಹವನಕಟ! ಹರಿ ಸಂ |
ಪಾದಿಸಿದನೆಮ್ಮೊಡನೆಯುಸಿರದೆ |
ಕಾದುವರೆ ನಂನೆಡೆಗೆ ತೆರಳುವ ಹದನು ಲೇಸಲ್ಲ ||
ಸೋದರಂಗಿದು ಬುದ್ಧಿಯಲ್ಲೆಂ |
ದಾದುರಾಗ್ರಹವನು ಬಿಡಿಸಿಯು |
ತ್ಯಾದರದಿ ಮರಳಿಸುವುದೆಂದನು ಬಲಗೆ ವಸುದೇವ || ೧೩
ಮಾತ ಕೇಳುವನಲ್ಲ ಹರಿ ನೀ |
ವಾತನಂತರವರಿಯಿರೇ ಬಹು |
ಕೈತವದಿ ಮುನ್ನೆನ್ನ ವಂಚಿಸಿ ತಂಗಿಯನು ನರಗೆ ||
ಪ್ರೀತಿಯಲಿ ಕೈಗೂಡಿಸಿದ ರಾ |
ಗಾತಿಶಯದಿಂದದು ಮೊದಲು ತಾ |
ವಾತಗೇನನು ಪೇಳಲಂಜುವೆನೆಂದನಾರಾಮ || ೧೪
ಕಾಬೆನನುತಲ್ಲಿಂದ ಬೀಳ್ಕೊಂ |
ಡಾಬಲಾರಿಯ ಬಳಿವಿಡಿದು ಬಳಿ |
ಕಾಬಿಡೌಜನ ತನಯ ನೆಲಸಿಹ ದ್ವೈತಕಾನನಕೆ ||
ತಾ ಬಹೆನು ತೆರಳುವುದು ನೀವೆಂ |
ದಾಬಲನು ಕೃತವರ್ಮಸಾತ್ಯಕಿ |
ಗಾಬಲಕೆ ಪೇಳುತ್ತಲಾಕ್ಷಣ ಮುದದಲನುವಾದ || ೧೫
ಸಾರಿದರು ಭರದಿಂದ ನಗರದ |
ಕೇರಿಕೇರಿಯ ಪಾಳೆಯಂಗಳೊ |
ಳಾರ್ಜಿ ಬೊಬ್ಬಿರಿಯುತ್ತಲಿರ್ದರು ದೂತರಬ್ಬರಿಸಿ ||
ವಾರಿಜಾಕ್ಷನು ಸುರಪಸುತನೊಳು |
ಭಾರಿಯಾಹವವೆಂದು ಗಮಿಸಿದ |
ಘೋರರನೆಲ್ಲರು ಬಹುದೆನುತ ನುಡಿಸಿದರು ಡಂಗುರವ || ೧೬

ಹರಿ ಪುರವ ಹೊಕ್ಕವಂಟನೆಂದೀ |
ಪರಿಯು ಸಾರುವ ದನಿಯು ಕೇಳುತ |
ವರಮುರಾಂತಕನಗ್ರಜಾತಾಕ್ರೂರಬಾಂಧವರು ||
ಧುರವಿಜಯುಸನಿರುದ್ಧ ಸಾತ್ಯಕಿ |
ಸ್ಮರಸು ಕೃತವರ್ಮಾದಿ ಕಲಿಗಳು |
ತೆರಳಿದರು ತಂತಮ್ಮ ಸನ್ನಾಹದಲಿ ಸಂಗರಕೆ || ೧೭

ತುರಗಗಳ ಪಲ್ಲಣಿಸಿ ಘನಬಂ |
ಧುರದ ಸಿಂಗಾಡಿಗಳ ವೇಗದಿ |
ಪರುತವಿಸಿಯಂಬುಗಳ ಹೊದೆಗಳನೆರಡು ಮಗ್ಗುಲಲಿ ||
ತ್ವರಿತದಿಂದಲಿ ಕಟ್ಟಿ ತೇಜಿಯ |
ಕರದಿ ಪಿಡಿದೇಱುತ್ತ ರಾವ್ತರು |
ಧುರಕೆ ಹರಿಯೊಡನೆಯ್ದಿದರು ಶತಕೋಟಿಸಂಖ್ಯೆಯಲಿ || ೧೮

ಗುಳವನಾನೆಗೆ ರಚಿಸಿ ಬಲುಹೊ |
ಮ್ಮಾಳಿಗಳನು ಸರೆ ಬಿಗಿದು ಘಂಟಾ |
ವಳಿಯ ತರತರವಿಡಿದು ಸೇರಿಸಿ ರತುನಮಯುದಿಂದ ||
ತೊಳಗುತಿಹ ಮೊಗರಂಬವನು ಮಿಗೆ |
ಯುಳವಡಿಸಿಯಂಕುಶವಹಿಡಿದತಿ |
ಚಳಕದಿಂದೇಱುತ್ತ ನಡೆದರು ಜೋದರೊಗ್ಗಿನಲಿ || ೧೯

ಬಳಿವೊಳೆಯುನಾರಯ್ದು ತುರಗಂ |
ಗಳನು ಬಂಧಿಸಿ ಶಿರಶರಾಸನ |
ಬಲವನೊಳಗಿಂಬಿಟ್ಟು ರಣಸಾಮಗ್ರಿಯುನಿರಿಸಿತ ||
ಅಳವಡಿಸಿ ನವರತ್ನಮಯುಕಂ |
ಬಳಿಯ ಮೆಲ್ಹಾಸಿನಲಿ ರಥಿಕಾ |
ವಳಿ ಸಮರಕನುವಾಗುತ್ತ ಬೇಳುವೆಸೇನನದುಬುತವ || ೨೦

ಪರಿಗೆ ಕತ್ತಿ ಕಠಾರಿ ತೋಮರ |
ಪರಶು ಕಕ್ಕಡೆ ಕುಂತ ವರಿಮು |
ದ್ಗರ ವಿಚಿತ್ರದ ಭಿಂಡಿವಾಲವು ಚಕ್ರ ಮೊದಲಾದ ||
ಪರಿಘ ಬತ್ತೀಸಾಯುಧಂಗಳ |
ನೊರೆಗೊಳಿಸಿ ಕಾಲಾಳು ನೆರೆದದು |
ಸುರಪಸುತನಾಹವಕೆ ಹರಿಯೊಡನತುಳವೇಗದಲಿ || ೨೧

ಎಣಿಕೆಗೆಯ್ದಿತು ಎಂಟಱಕ್ಷೋ |
ಹಿಣಿಯ ಲೆಕ್ಕದ ಮೂಲಬಲ ಸಂ |
ದಣಿಯ ಕೂಟದ ಬಲವನಿನಿತೆನಲೆಸಗದಳವಲ್ಲ ||
ರಣವಿಜಯಭೇರಿಗಳ ಹೊಯ್ಲಲಿ |
ಕುಣಿದುವಮರರ ಗರ್ಭ ರಿಪು ಪ |
ಟ್ಟಣದಲಂದೊಲಸೆಗಳ ಕೆಗೆದುವು ಗಿರಿಗುಹಾಂತರಕೆ || ೨೨

ಹೆದಱಿದನು ಪರಮೇಷ್ಠಿ ಸುರಪತಿ |
ಯೊದೆದುಕೊಂಡನು ಮೇರುಪರ್ವತ |
ವದುರಿದುದು ನಭ ನಡುಗಿತಾರಣವಾದ್ಯರಭಸದಲಿ ||
ಕದಡಿದುವು ಸಪ್ತಾಂಬುನಿಧಿಗಳು |
ಮದವುಡುಗಿ ಮುರನರಕಸಾಲ್ವರ |
ಸುದತಿಯರ ಸುತ್ತೆರೆಸುತಿರ್ದರು ಸ[illegible]ಮುಳಿವುಗಳ || ೨೩

ಬಿರಿದುವೆಣ್ದಿಕ್ಕುಗಳು ತಿಮಿರನು |
ಜರಿದನಸುರಾಂತಕನ ಗಮನಕೆ |
ಸರಿದು ದಿಗ್ದಂತಿಗಳು ಭಯದಲಿ ಬಾಗಿದುವು ಶಿರವ ||
ಉರಗರಾಜನ ಕೊರಳು ಕುಗ್ಗಿತು |
ಸರಸ ಹವಣೇನಹುದೊ ಕಾಣೆನು |
ಪರಶಿವಾ! ಎಂದಿಂದ್ರ ಚಿಂತಿಸುತಿರ್ದನಪ್ರದಲಿ || ೨೪

ಹೇಳಲೆನ್ನಳವಲ್ಲ ಮುನ್ನವೆ |
ಕೇಳಿದುದು ತಾಸಿಲ್ಲಿ ಕರಿರಥ |
ಪಾಳು ಕುದುರೆಯ ಪದಹತದ ಬಿಡವೇಱ್ವ ಕೆಂದೂಳು ||
ಮೇಲೆ ನಭದೊಳಗಡರಿ ಬರ ಮುಂ |
ಬೂಳಿಯಲಿ ದಿಕ್ಪಾಲಕರಿಗೀ |
ಕಾಳಿಗವನಾಹುತ್ತ ಪೋದೊಬು ತುಂಬಿತೆಣ್ದೆಸೆಯ || ೨೫

ಎನಲು ಸಂಶಯದಿಂದ ಜನಪನು |
ಮುನಿಪತಿಯ ಬೆಸಗೊಂಡನೆಲೆ ಮುನಿ |
ಪನೆ ರಮಾಧವಗೇನು ವರಸೊಳ್ ಕೃತಕವೋ ದಿಟವೋ ||
ಕನಲಿ ಖಚರಂಗಾಗಿ ಪರಮೇ |
ಶನ ಹಣೆಯ ಕಣ್ಗಿಚ್ಚಿನುಗ್ರದ |
ಮುನಿಸಿನಲಿ ಸಂಗರವ ನಡೆದುದ ವಿಸ್ತರಿಪುದೆಂದ || ೨೬

ತೆಱನನಱುಹುವೆನವನಿಪತಿ ಕೇಳ್ |
ಮುರಹರಗೆ ನರನೊಡನೆ ವೈರ |
ಸ್ಮರಣೆಯೆಳ್ಳನಿತಿಲ್ಲವೀಭೂಭಾರವೆಲ್ಲವನು ||
ನರನ ಕೆಯ್ಯಿಂದಿಳುಹಿಸಲ್ಕಾ |
ನರನ ದೋರ್ಬಲನಿಶಿತಶರಚಾ |
ತುರಿಯಶೇಷವ ನೋಡಲೋಸುಗ ಬಂದನೈಸೆಂದ || ೨೭

ಉಚಿತ ಖಚರನ ನೆವದಿ ಯಾದವ |
ನಿಚಯದೊಡನೆಯ್ತಂದು ನರನೇ |
ನಚಲನೋ ಚಲನೋ ನಿದಾನಿಸಿಯಾತನಳವಳವ ||
ಪ್ರಚುರತನವನು ನೋಳ್ಪೆನೆಂಬುದ |
ವಚಿಸದಾರಿಗೆ ಬಳಿಕ ಹರ ತಾ |
ನುಚಿತದಿಂ ಸಂಗರಕೆ ಹೊಱಟನು ರಾಯ ಕೇಳೆಂದ || ೨೮

ಅಗಣಿತದ ಸೇನೆಯಲಿ ನಡೆತಂ |
ದಗಧರನು ಬಹುಪಯಣಗತಿಗಳ |
ಲೊಗೆವ ರಣವಾದ್ಯದ ಗಡಾವಣೆ ಮೊಱೆಯೆ ವೇಗದಲಿ ||
ಬಗೆಬಗೆಯ ಮುನಿಪಕ್ಷಿಮೃಗಗಣ |
ಕೊಗುಮಿಗೆಯಶ್ರಯವದಾಗಿಹ |
ಸುಗುಣದ್ವೈತವನಾಂತರಕೆ ನಡೆತಂದನಸುರಾರಿ || ೨೯

ಬಿಡಿಸಿದನು ಪಾಳೆಯವ ಸುತ್ತಲು |
ಬಡಧಿಶಯನನು ರಾಮಸಾತ್ಯಕಿ |
ಕಡುಗಲಿಗಳನಿರುದ್ಧಸಾಂಬರು ಮುಖ್ಯನಾಯಕರು ||
ಗಡಣಗಳನಾಮಧ್ಯದೇಶದ |
ಪಡೆಗಳದಿ ಗೂಡಾರವಿಕ್ಕಿತು |
ಒಡೆಯ ಶ್ರೀತಿರುವೆಂಕಟೇಶಗೆ ಸಕಲಸಂಭ್ರಮದಿ || ೩೦

ಅಂತು ಸಂಧಿ ೧೭ಕ್ಕಂ ಪದ ೨೭೭ಲಕ್ಕಂ ಮಂಗಳಂ.

*

# ಹದಿನಾರನೆಯ ಸಂಧಿ.

---

ಸೂಚನೆ || ಬೆರಸಿದರು ಕೌರವರು ಪಾಂಡವ |
ಧರಣಿಪತಿಗಳ ಮೈತ್ರತೆಯನನು |
ಕರಿಸಿ ನಡೆದನು ಸೇನೆಸಹಿತಾ ದ್ವೈತಕಾನನಕೆ ||

ಅವಧರಿಸು ರಾಜೇಂದ್ರಚಂದ್ರಮ |
ಭುವನಪತಿಕುಲಕಮಲಭಾಸ್ಕರ |
ಭವವಿದೂರನೆ ಬಂಧುಪೋಷಕ ಭಾಗ್ಯಸಂಪನ್ನ ||
ಭುವನನಿಧಿಗಾಂಭೀರ್ಯಭೂಸುರ |
ನಿವಹದಾಶೀರ್ವಾದಯುತ ಮಾ |
ಧವಕಥಾಮೃತಪಾನಷಟ್ಪದ ಎಂದನಾಮುನಿಪ || ೧

ಇತ್ತಲಿಂತಿರುತಿರಲು ಬಳಿಕ ನೃ |
ಪೋತ್ತಮನೆ ಕೇಳೊಂದು ವಿಸ್ಮಯ |
ವತ್ತ ಸರಸಿಜಸಂಭವಾತ್ಮಜ ನಮಿಸಿದನು ಬಳಿಕ ||
ಉತ್ತಮೋತ್ತಮ ವಿಷ್ಣುಮೂರ್ತಿಯ |
ಬಿತ್ತರದ ಸುಗುಣಾಳಿಗಳ ನೆನೆ |
ಯುತ್ತ ಲಿಭಪುರಿಗಾಗಿ ಬಂದನು ಗಗನಮಾರ್ಗದಲಿ || ೩

ಅರಸ ಕೇಳೈ ನಿನ್ನ ಭಾಗ್ಯೋ |
ತ್ಕರವ ನೋಡಲು ಬಂದೆವಿಳೆಗಾ |
ತರಣಿ ಶಶಿವಂಶದೊಳು ಜನಿಸಿದ ಭೂಮಿಪಾಲರೊಳು ||
ಉರುತರದ ಸುಕ್ಷೇಮಸಾಹಸ |
ಪರಮಸಂತಾನಂಗಳಲಿ ನಿ |
ನ್ನಿರವಿನೊಳಗೆಳ್ಳೆನಿತು ಸೌಖ್ಯಗಳುಂಟೆಯುವರ್ಗೆಂದ || ೩

ಈಪರಿಯ ಸಾಮ್ರಾಜ್ಯಸಂಪದ |
ಕಾಪೃಥೆಯುಮಕ್ಕಳುಗಳಿಂದವೆ |
ವೈಪರೀತ್ಯವು ಪುಟ್ಟದಂತದ ಪರಿಹರಿಸಿಕೊಂಡು
ಆಪನಿತು ರಾಜ್ಯವನು ಪಾಲಿಪೆ |
ಭಾಪು ನಿನಗೆಣೆಯಿಡಲು ಪೂರ್ವದ |
ಭೂಪರೊರ್ವರೊಳಿಲ್ಲವೆಲೆ ಧರಣೀಶಕೇಳೆಂದ || ೪

ಬೆಂಬಿಡದೆ ಬಹ ಗ್ರಹದ ಬಾಧೆಗೆ |
ಪಂಬಲಿಸುತೋಡುತ್ತ ಬರೆ ಪುಲಿ |
ತಿಂಬೆನೆನುತಿದಿರಾಗಿ ಬಪ್ಪೊಲು ಪಾಂಡವರಿಗೀಗ ||
ಉಂಬರುಡುವರೆ ಕಾಣದಡವಿಯು |
ನಿಂಬುಗೊಂಡಚ್ಯುತನವರ ನೆರೆ |
ನಂಬಿರಲ್ಕಾಹರಿಯೆ ಹಗೆ ತಾನಾದನವರ್ಗೆಂದ || ೫

ಎನಲು ಕೌರವರಾಯನಾಮುನಿ |
ಪನನು ಬೆಸಗೊಂಡೇಕೆ ಕುಂತೀ |
ತನಯರೊಳ್ ವಸುದೇವಪುತ್ರಗೆ ಮನವು ಕದಡಲ್ಕೆ ||
ಅನುವದೇನು ನಿಮಿತ್ತ ಹೇಳೆಂ |
ದೆನಲು ನಾರದನೊರೆದ ಗಂಧ |
ರ್ವನ ಕಥಾವೃತ್ತಾಂತವೆಲ್ಲವ ನವನಿಪಾಲಂಗೆ || ೬

ಏನ ಹೇಳುವೆನರಸ ಗಯ ಭವ |
ದಾನವಾರಿವಿರಂಚಿಗಳನಭಿ |
ಮಾನಿಸೆನಲವರಾಗದೆನೆ ನಡೆತಂದು ಫಲುಗುಣನ ||
ಸಾನುರಾಗದಿ ಮಱೆವುಗಲು ಸ |
ನ್ಮಾನದಲಿ ನೆರೆ ಕಾದನದಱಿಂ |
ದೇನಹರೊ ಪಾಂಡವರು ತಿಳಿದಿರದೆಂದನಾ ಮುನಿಪ || ೭

ಅವನನೊಡಗೊಂಡಿರದೆ ನೀವ್ಕೈ |
ದುವುದೆನುತ ವಸುದೇವಸುತನು |
ತ್ಸವದೊಳನುಜೆಯು ವೇಗವಂತಾಕ್ರೂರಮುಖ್ಯರನು ||
ಜವದಿ ಕಳುಹಿಸೆ ಪೋಗಿ ಕೇಳಲು |
ಖವಖವಿಸಿ ನಗುತರ್ಜುನನು ಬಂ |
ದವನನೊಪ್ಪಿಸಿ ಕೊಡೆನು ಹೋಗೆನುತವರ ನಟ್ಟಿದನು || ೮

ಬಳಿಕಲಾ ಮುರವೈರಿ ಕೋಪಿಸಿ |
ಪ್ರಳಯಭೈರವನಂತೆ ಸೇನಾ |
ಜಲಧಿಸಹಿತವೆ ಬಂದು ದ್ವೈತವನೋಪಕಂಠದಲಿ ||
ಇಳಿದು ಧುರಕನುವಾಗುತಿರುತಿಹ |
ತಿಳಿಯಲಿದು ನಿಜವಾರ್ತೆ ದಾಯಿಗ |
ರಳಿವ ನೋಡಲ್ಕುಚಿತವೇ ನಿಮಗೆಂದನಾಮುನಿಪ || ೯

ಪರರ ದೆಸೆಯಿಂದೆಡರು ತನ್ನವ |
ಗುರಿಸಲದ ಪರಿಹರಿಸಿ ಪೊರೆವುದು
ಗುರುವರಂಗವಿದೀಗ ಕೇಳೆಲೆ ಮಗನೆ ದಾಯಿಗರ ||
ಉರುತರದವೊಳಕಾರ್ಯವೇನಿರೆ |
ನೆರೆದು ನಿಮ್ಮೊಳು ನೀವು ಸೆಣಸುತ |
ಪರಿಪರಿಗೆ ಹೊಯ್ದಾಡುವುದು ನೃಪನೀತಿ ಕೇಳೆಂದ || ೧೦
ಕಂಡ ವಾರ್ತೆಯ ನಱುಹಿದೆವು ಕೈ |
ಕೊಂಡು ಮನಬಂದಂತೆ ಮಾಡೆಲೆ |
ಮಂಡಲೇಶ್ವರ ಹೋಗಿ ಬಪ್ಪೆವು ಸುಖದೊಳಿರಿಯೆನುತ ||
ಪುಂಡರೀಕಾಕ್ಷನ ಮುರಾಸುರ |
ಖಂಡನಶ್ರೀಪತಿಯ ಜಗದು |
ದ್ದಂಡದೇವನ ಧ್ಯಾನಿಸುತ ನಭಕಡರಿದನು ಮುನಿಪ || ೧೧
ಎಂದು ನಾರದನೊರೆದು ಗಮಿಸಿದ |
ನಂದು ಬೆಱಗಾಗುತ್ತ ಮನದೊಳ |
ಗೊಂದು ಪರಿಯನು ನೆನೆದು ಬಹಿರಂಗದಲಿ ಗುರುಭೀಷ್ಮ ||
ಸಿಂಧುದೇಶಾಧಿಪನು ಗುರುಸುತ |
ನಂಧನೃಪ ಕೃಪ ಕರ್ಣರನು ಕರೆ |
ಯೆಂದು ಕುರುಪತಿ ನುಡಿಯೆ ಬಂದರು ಶಕುನಿಸಹಿತಾಗ || ೧೨
ಕೇಳಿರೈ ಭೀಷ್ಮಾದಿಗುರುಕೃಪ |
ಜಾಲ ಗುರುಸುತ ವಿದುರ ಮುಖ್ಯರು |
ಕೇಳಿರೈ ವಾರ್ತೆಯನು ನೂತನ ವಿಸ್ಮಯಾಂಚಿತವ ||
ಕೇಳಿರೈ ಕಲಿಕರ್ಣ ಶಕುನಿ ವಿ |
ಶಾಲಮತಿ ಸೈಂಧವ ನಿಜಾನುಜ |
ರಾಲಿಪುದು ಶ್ರೀಕೃಷ್ಣ ಪಾರ್ಥರ ವೈರದಾಗಮವ || ೧೩
ಏನು ಹದ ಪಾಂಡವರಿಗೊದವಿದ |
ಮಾನಭಂಗಸ್ಥಿತಿಗೆ ನಿಮಗಿಂ |
ದೇನು ತೋಱಿತು ಹೇಳಿ ನಿಜಕಾರ್ಯಾರ್ಥಸಂಗತಿಯ ||
ಕಾನನಾಂತರ ಭೂಮಿಯಲಿ ಮುರ |
ದಾನವಾಂತಕನಿಳಿದ ಗಡ ಯದು |
ಸೇನೆಸಹಿತದಕೇನುಪಾಯವ ಕಂಡಿರೈ ಎಂದ || ೧೪

ಬರಲು ಮುರಹರ ಸೇನೆಸಹಿತವೆ |
ಧುರಮುಖಕೆ ಬಳಿಕದನು ಕೇಳುತ |
ತರಣಿಪೌತ್ರನದೇನನೆಂಬನೊ ಭೀಮನನುವೇನು ||
ನರನ ದೃಢಮತಿಯೆಂತು ಮಾದ್ರೀ |
ತರುಣಿ ದ್ರೌಪದಿಮುಖ್ಯರೇನನು |
ಕರಿಸುವರು ಧೌಮ್ಯಾದಿಗಳ ನೆನಹೇನು ಹೇಳೆಂದ || ೧೫

ಬಿಡುವರೋ ಮುಳಿಹೊಕ್ಕವನ ಕೆ |
ಯ್ಬಿಡುವರೋ ಪಾಂಡವರು ಮಿಗೆ ಯು |
ಗ್ಗಡದ ಕಾರ್ಯವು ಸಂಘಟನವಾದುದು ನಿಧಾನಮತ ||
ಒಡಬಡಿಕೆಯೇನಿದಕೆ ಕೇಳ್ |
ನ್ನೊಡನೆ ಬಹುಮತಿವಂತರೆಲ್ಲರು |
ಕೊಡುವುದಿದಕುತ್ತರವ ತೋಱಿದ ಪರಿಯ ನೀವೆಂದ || ೧೬

ಆವ ತೆಱನಹುದಿವರಿಗಿದನಾ |
ವಾವ ಪರಿಹರಿಸುವನು ಜಲ ವಸು |
ದೇವ ಸಾತ್ಯಕಿ ಕಾಮನನಿರುದ್ಧಾಂಕರಿಹರಲ್ಲಿ ||
ದೇವಕಿ ಯಶೋಧೆಯರು ಮನದೊಳ |
ಗೀ ವಿಘಾತಿಗೆ ಸಮ್ಮತಿಪರೇ |
ಭಾವವೇಂ ತನಗೊರೆವುದೆಂದನು ಕೌರವರ ರಾಯ || ೧೭

ಶಿವವಿರಂಚಿಗಳೊಡಬಡದ ಕೇ |
ಶವನ ಪಗೆಯಂದಟ್ಟಲಾವಾ |
ಸವನ ತನಯನು ಗಯನ ಕೈಯ್ಬಿಡಿದಿರುವ ಸಂಗತಿಯ ||
ದಿವಿಜಮುನಿಯಾಡಿದನು ಮಾತೀ |
ಭುವನಕಚ್ಚರಿಯೆನಿಸಿ ತೋಱಿದೆ |
ಯುವಗೆ ಕಾರಿಯದನುವ ವಿವರಿಪುದೆಂದನಾಭೂಪ || ೧೮

ಮಗನೆ ಕೇಳಱುಹುವೆನು ಪಾರ್ಥನ |
ಬಗೆಯನೆಲ್ಲವ ಧರೆಯ ನಾಡಾ |
ಡಿಗರ ಪರಿಯಲ್ಲಾತ ವಿಷ್ಣುವಿನಂಶಸಂಭವನು ||
ವಿಗಡ ದಾನವಮರ್ತ್ಯರನು ಸಂ |
ಘುಗಮುಖದಿ ಸಂಹರಿಸಿ ಭೂಮಿಯ |
ಶಗಹ ತಗ್ಗಿಸಲುದಿಸಿಹನು ಕೇಳೆಂದನಾಭೀಷ್ಮ || ೧೯

ಬಳಿಕ ನಾರಾಯಣಕಿರೀಟಿಗ |
ಳಿಗಧಿಕರೆನಿಸುವ ಮಹಾತ್ಮರು |
ತಿಳಿದಿಹುದು ಜಗಮಪ್ರಸಿದ್ಧವಿದೆಂದು ಮನದೊಳಗೆ ||
ಎಣಿಕೆಗೊಳಲದರೊಳಗೆ ಪಾರ್ಥನು |
ಕೊಳುಗುಳಕೆ ಹರಿಹರ ವಿರಂಚಿಗ |
ಳೊಳು ನಿಲುವ ಸಾಮರ್ಥ್ಯನಹನೆಲೆ ಕಂದ ಕೇಳೆಂದ || ೨೦

ಮಿಕ್ಕ ಸುರಖೇಚರಯಕ್ಷುರುರಗರು |
ಲೆಕ್ಕವೇನರ್ಜುನಗೆ ಸಂದೇ |
ಹಕ್ಕೆ ತಾವಿನಿತಿಲ್ಲವಲ್ಲಿಯಾ ಖಾಂಡವದಿ ಸುರರ ||
ಅಕ್ಕಜದ ಘನಮುಖದಲುತ್ತರ |
ದಿಕ್ಕಿನಲ್ಲಿಹ ನೃಪರ ದನುಜರ |
ನೊಕ್ಕಲಿಕ್ಕಿದ ಕಾಳಕೇಯುವಾತರನು ತರಿದ || ೨೧

ಬೇರೆ ಹೇಳುವುದೇನು ವರಜಂ |
ಭಾರಿತನಯನು ತಪದಿ ಕುಳಿತಿರೆ |
ಗಾರಿಯುರಸನು ರಣಕೆ ನಿಲೆ ಬ್ರಹ್ಮೇಂದ್ರರೀಕ್ಷಿಸಲು ||
ಓರೆಪೋರೆಗಳಿಲ್ಲದೋಲ್ ಸರಿ |
ಹೋರಿ ಮೆಚ್ಚಿಸಿ ಶಿವನ ಕೈಲಿಹ |
ಭಾರಿಯಂಬನು ತಂದಿಹನು ನರನೆಂದನಾಭೀಷ್ಮ || ೨೨

ಅದರಿನಿಂದಚ್ಯುತನ ಧುರದಲಿ |
ಹೆದರದರ್ಜುನ ನಿಲುವ ದೇಹದ |
ತುದಿತನಕಲಾಜೆಯನು ಮಾಡಿದ ಶರಣಾಗತಿತನುವ ||
ಬದುಕಿಸುವ ದೃಢವುಳ್ಳ ಮಹಿಮನು |
ಸದರನೆಂದಿರಗೇಡ ತಾವರು |
ಹಿದ ವಚೋವಿನ್ಯಾಸಕೂಸೆಯವಿಲ್ಲ ಕೇಳೆಂದ || ೨೩

ನರನ ಕೂಡಣ ಹಾದಿ ಹರಿಯದ |
ಹೊರಿಗೆವಾಳರು ಧರ್ಮನಂದನ |
...ತಸುತ ಮಾದ್ರೀಕುಮಾರರು ಬಗೆಯನರಿತವನ ||
...ಿ ಕೇಳೈ ವರಮನಂಗಳೊ |
...ದೋರವು ಹಲವು ಬಗೆಯಲಿ |
...ರು ಮೆಚ್ಚಿಸಿ ಶರಣಾಗತಿಕನ ಮೆಚ್ಚಿಸುವರೆಂದ || ೨೪

ತಪ್ಪದೀ ಗಂಗಾತನೂಜನ |
ಸುಪ್ರಸಿದ್ಧದ ಮಾತು ಬಳಿಕವ |
ರೊಪ್ಪುವುದು ಸಾಹಸಿಕರೆಂದುದು ದ್ರೋಣಗೌತಮರ ||
ತಪ್ಪುಹೊದ್ದದಕೆಂದು ಕೌರವ |
ನಪ್ಪ ಗುರುಸುತ ವಿದುರರೆನಲದ |
ಕೊಪ್ಪಿ ದೃಢಮುಖದಿಂದಲಿರ್ದರು ಕರ್ಣಶಕುನಿಗಳು || ೨೫
ಜೇಯು ಬಿನ್ನಹವೆಮಗೆ ತೋಱಿದ |
ದಾಯಮಂ ಬಿನ್ನೈಪೆವಾಕೌಂ |
ತೇಯರಿಂಗೊದವಿದ ಮಹೋಪದ್ರವಕೆ ನೀವ್ ಬೆಸಸಿ ||
ದಾಯಿಗರ ಸಲಹಿದರೆ ಲೋಕದ |
ರಾಯರಾಯರೊಳೆಲ್ಲ ನಿಮಗತಿ |
ಶ್ರೇಯಸವು ಘಟಿಸುವುದು ಎಂದುದಮಾತ್ಯಸಂದೋಹ || ೨೬
ಅಹುದು ಮಂತ್ರಿಸಮೂಹವಾಡಿದ |
ಸಹಸವಾಕ್ಯಪ್ರೌಢಿ ಹರಿಯಾ |
ಗ್ರಹಸಿ ಪಾಂಡವರೊಡನೆ ವೈರವನೆಣಿಸಿ ಕೊಲಲೆಂದು ||
ಬಹುದಳದಲೆಯ್ತಂದು ರಣಮುಖ |
ಕಿಹುದು ಕೇಳುತ ಸುಮ್ಮನಿರ್ದಡೆ |
ಮಹಿಯೊಳೆಮ್ಮನು ಮೆಚ್ಚರೆಂದರು ಭೀಷ್ಮಗುರುಕೃಪರು || ೨೭
ಮತವಿದೊಳ್ಳಿತು ರಾಜಪದ್ಧತಿ |
ಹಿತವನಾಚರಿಸುವದೆ ಸಮಯವು |
ವಿತತದಳವನು ಕೂಡಿಕೊಂಡಾ ಪಾಂಡವರ ಬಳಿಗೆ ||
ಅತಿ ತ್ವರಿತದಿಂದೈದೆ ಹಿಂದಣ |
ಕಥನದಾಯಸಗಳನು ಕುಂತೀ |
ಸುತರು ಮಱೆವರು ಕೇಳು ಕೌರವ ಎಂದನಾವಿದುರ || ೨೮
ಎನಿತು ಖತಿಯಿರಲರಿಗಳಾಪ |
ತ್ತಿನ ಸಮಯಕೊದಗಿದರೆ ರಿಪುಗಳ |
ಮನಕೆ ಸಂತಸವಹುದು ಭುವನದಿ ಕೀರ್ತಿ ಘಟಿಸುವುದು ||
ಜನವಿದಕ್ಕೊಡಬಡುವುದವನೀ|
ವನಿತೆ ನಲಿದಳು ನಾಕದರಸನ |
ಘನಪುರದ್ವಾರದ ಕವಾಟವ ತೆಱೆವರೈ ಎಂದ || ೨೯

ಕಂದ ಹಿರಿಯರ ಮಾತ ಕೇಳ್ ನಿ |
ರ್ಬಂಧ [illegible]ಮದು ಮಕ್ಕಳಿಗೆ ತ |
ವ್ಮಿಂದ ಮೊದಲೈಶ್ವರ್ಯ ರಾಜ್ಯಭ್ರಷ್ಟರಾಗಿಹುದು ||
ಎಂದು ಬಳಿಕೀಪರಿಯಲಾ ಗೋ |
ವಿಂದನಿಂದಪಘಾತ ಪ್ರಾಣಕೆ |
ಬಂದಿಹುದ ನಾವ್ ಕೇಳಿ ಸಂತಸಬಡುವುದಲ್ಲೆಂದ || ೩೦
ಕೇಳಿದಾಕ್ಷಣ ಬಂದನೀಕುರು |
ಜಾಲಸಹಿತ ಸಹಾಯಕವನೀ |
ಪಾಲ ಕೌರವನೆಂದು ಸುಮ್ಮಾನಿಪರು ಪಾಂಡವರು ||
ಹೂಳುವುದು ಮುನ್ನಾತಣಿಪ ವಿ |
ಶಾಲಕಪಟದ್ಯೂತಕರ್ಮದ |
ಚಾಳಿಯಲ್ಲವು ಬಳಿಕಿದಱೆೊಳೆಂದಂಧನೃಪ ನುಡಿದ || ೩೧
ಓಕುಳಿಯ ನೆವದಿಂದಲೊಪ್ಪುವ |
ವ್ಯಾಕುಲತೆ ಬಡುವಂತೆ ಸಮರ |
ವ್ಯಾಕುಲದ ಸಮಯದೊಳಗೊದಗಿದರೆ ಘಟಿಸಿದಾಯುಸವ ||
ನೂಕಿ ನಮ್ಮೊಳು ಘನಯುತವನವ |
ರೇಕಚಿತ್ತದಿ ಬೆರಸಿದರೆ ಮಿಗೆ |
ನಾಕಪತಿಯಿದಿರಿಲ್ಲ ನಿನಗೆಲೆ ಕಂದ ಕೇಳೆಂದ || ೩೨
ನೆರೆದು ನೀವಿವರೆಡೆಗೆ ಬೇಗವಿ |
ಬೆರಸಿ ಧರ್ಮಜಮತದಿ ಧುರದೊಳು |
ತರಹರಿಸಿ ಮೈಗೊಟ್ಟು ನಿಲುವುದು ರಾಜಪದ್ಧತಿಯ ||
ಗರುವತನವಿದು ಪಾಂಡವರಿಗಾ |
ಹರಿಯೊಳೆರವಿನಿತಿಲ್ಲ ತುದಿಯಲಿ |
ಸರಸವಹುದು ಸುಕೀರ್ತಿ ನಿಮಗದಱಿಂದ ಕೇಳೆಂದ || ೩೩
ಕೇಳು ಕುರುಪತಿ ಬಳಿಕ ನಿಜಸ |
ಮ್ಮೇಳದಾಪ್ತಗನಾದ ಕರ್ಣನ |
ಖೂಳಸೈಂಧವ ಶಕುನಿ ದುಶ್ಶಾಸನನಪರಿಮಿತದ ||
ಆಲಯಕೆ ಕರೆದೊಯ್ದು ಶತ್ರುಗ |
ಳೇಳಿಗೆಯ ನೆನಹಿಂಗೆ ಮನದಲಿ |
ತಾಳಿತೆಂತೈ ನಿಮಗೆ ಹೇಳೆಂದನು ಸರಾಗದಲಿ || ೩೪

ಹಸನು ಭೀಷ್ಮದ್ರೋಣಮಂತ್ರಿ |
ಪ್ರಸರಭೂಪತಿ ವಿದುರ ಮೊದಲಾ |
ಗೆಸೆವ ಹಿರಿಯರ್ಮ ಮತವನಾಚರಿಸುವುದು ನಿಮಗೆಸಲು ||
ನಸುನಗುತಲದಕೇನು ಹೇಳಿನೆ |
ವಸುಮತೀಪತಿ ಕೇಳಿ ತಮತಮ |
ಗುಸಿರಿದರು ದುಶ್ಶೀಲದುರ್ಜನಮತವನರಸಂಗೆ || ೩೫

ಅರಸ ಚಿತ್ತೈಸೀಗ ಯಾದವ |
ರರಸ ಪಾಂಡವರೊಡನೆ ವೈರವ |
ಬೆರಸಿದುದು ಕೃತಪುಣ್ಯ ತಮ್ಮಯ ನೆನಹು ಫಲಿಸುವುದು ||
ಅರಿಗಳಿಗೆ ಶ್ರೀ ಕೃಷ್ಣ ಹಿತವಾ |
ಗಿರಲು ಗೆಲುವಡಲಸಾಧ್ಯವೈ ಸಲೆ |
ಪರಿಕಿಸಲ್ಕದು ಸಮಯವೆಮಗಾಯ್ತೆಂದನಾಶಕುನಿ || ೪೬

ಹಿತವರೆಂದೇ ಹೋಗಿ ಕುಂತೀ |
ಸುತರಿಗಾವು ಸಹಾಯವಾಗಿಯೆ |
ವಿತತಯದುಸೇನೆಯನು ತಱೆದಾಕೃಷ್ಣನೆಂಬುವನ ||
ಕ್ಷಿತಿಯೊಳೊರಗಿಸಿದರೆಯು ಬಳಿಕಾ |
ಪೃಥೆಯ ಮಕ್ಕಳ ಕೊಂದೆವೆಂಬೀ |
ಮತವು ನಿಶ್ಚಯವೆಂದು ತಿಳಿದಿಹುದೆಂದನಾಕರ್ಣ || ೩೭

ಅರಸ ಕೇಳ್ ವೈಪಕ್ಷಕುಲವನು |
ತಱೆಯಲಸದಳವಾದಡೆಯು ನಿ |
ರ್ಧರಿಪಿ ಬಳಿಕೊಂದನುವ ರಿಪುಗಳಿಗೊದವಿದೆಡರನೊಳು ||
ಬೆರಸಿ ಹಿತಶತ್ರುತ್ವಗಳನಾ |
ಚರಿಸಿ ಶಾತ್ರವರುಗಳ ಗೆಲುವೀ |
ಪರಿಯ ಕಾರ್ಯವದಲ್ಲದಿನ್ನಿಲ್ಲೆಂದನಾಕರ್ಣ || ೩೮

ಈಸಮಯ ತಪ್ಪಿದರೆ ವಿಗೆ ಲ |
ಕ್ಷ್ಮೀಶನಗಜಾರಮಣವರಪ |
ದ್ಮಾಸನಾದಿಗಳೊಗ್ಗಿನಲಿ ಸಂಗರಕೆ ನಡೆತರಲು ||
ವಾಸವಾತ್ಮಜವಾಯುತನಯರ |
ಸಾಸಿರಾಬ್ದಂಗಳಿಗೆ ಗೆಲಲಾ |
ಯಾಸ ಚಿತ್ತೈಸೆಂದು ಸೈಂಧವ ನುಡಿದನಾನೃಪಗೆ || ೩೯

ಅಹಹ ಶಕುನಿಯ ಮಾತು ಸಹಜವ |
ದಹುದು ಕರ್ಣನು ನುಡಿದ ತೆಱ ಮಿಗೆ |
ಬಹಳಕಪಟೋಪಾಯ ಕಿದು ಸಾಯಕವಲೇ ತಿಳಿಯೆ ||
ವಹಿಸಿ ಸಮರಕೆ ತೆರಳುವದೆ ಸಲೆ |
ವಿಹಿತವೀಕ್ಷಣನೆಂದು ಭೂಪನ |
ಸಹಭವನು ಬಿನ್ನೈಸಿದನು ಭೂಪಾಲ ಕೇಳೆಂದ || ೪೦
ಎನಲು ಹೊಱವಂಟವಿಳಮಂತ್ರೀ |
ಜನಪನಾಪ್ತರ ಮೊರೆಗಳೆಲ್ಲರ |
ಮನೆಗಳಿಗೆ ಬೀಳ್ಕೊಟ್ಟು ಗುರು ಗಾಂಗೇಯ ಕೃಪ ವಿದುರ ||
ಜನಕರಾಪಾಂಡವಸಹಾಯಕೆ |
ಅನುನಯದೆ ಗಮಿಸುವೆನೆನುತ ನೈ |
ಮನದ ಹರುಷದಲಡರಿದನು ನವರತುನಮಯರಥನ || ೪೧
ಒಡನೆ ತೆರಳಿತು ಭೀಷ್ಮ ಗುರು ಕೃಪ |
ಮೃಡನಿಭಾಶ್ವತ್ಥಾಮ ಸೈಂಧವ |
ಕಡುಹಿನಗ್ಗದ ಕರ್ಣ ದುಶ್ಶಾಸನರು ಮೊದಲಾದ ||
ಪಡೆಸಹಿತ ಕರಿರಥತುರಂಗದ |
ಪಡಪಿನತಿಸನ್ನಾಹದಲಿ ಮಿಗೆ |
ಪೊಡವಿ ಕಂಪಿಸಲೈದಿದರು ಪಾಂಡವರ ವನದೆಡೆಗೆ || ೪೨
ಗಣನೆಗಿದು ಹನ್ನೊಂದಱಕ್ಷೋ |
ಹಿಣಿಯ ಕೌರವರಾಯಬಲ ಸಂ |
ದಣಿಸಿತೊಂದೇ ಬಾಱಿ ಕುರುರಾಜೋತ್ತಮನ ಹಿಂದೆ ||
ಅಣೆವ ಭೇರಿಯ ರವಕೆ ಜಗ ತ |
ಲ್ಲಣಿಸಿ ದಿಕ್ತಟ ಬಿರಿಯೆ ದಿಕ್ಕರಿ |
ಗಣಕೆ ತಲ್ಲಣವಾಗೆ ನಡೆದರು ಬಹಳವೇಗದಲಿ || ೪೩
ಪವನಗತಿಯೊಳ್ ಒಂದನಾಹರಿ |
ಹಯನ ಸುತಸಿಹ ಕಾನನಾಗ್ರಕೆ |
ನಿಯಮಿಸಿದರೀದೆಸೆಯಲಿಳಿಯೆಂದರಸನಾಜ್ಞೆಯಲಿ ||
ಪೊಯಿಸಿ ಗುಡಿಗೂಡಾರಗಳ ಕರಿ |
ಹಯರಥಾನೀಕಗಳನಗಣಿತ |
ಪಯದಳವ ಬಿಡಿಸಿದರು ಒಳಿಕವರವರ ತೆಱನಱಿತು || ೪೪

ಧರಣಿಪತಿ ಧರ್ಮಜನ ಸನಿಯಕೆ |
ತ್ವರಿತದಿಂದವೆ ಪೋ ಸಹಾಯಕೆ |
ಕುರುಕುಲಾಗ್ರಣಿ ಬಹಳಬಲದಲಿ ತೆರಳಿ ಬಂದಿಹನು ||
ತೆಱನಿದೀಗೆಂದೊರೆದು ಬಹುದೆಂ |
ದರಸ ನಿಜಮಂತ್ರಿಗಳ ಕಳುಹಲು |
ಹರುಷದಿಂ ನಡೆತಂದು ಕಂಡರು ಕರಗಳನು ಮುಗಿದು || ೪೫
ಜೀಯ ಬಿನ್ನಹ ನಿಮ್ಮೊಡನೆ ಯುದು |
ರಾಯ ನೆಣಸಿದ ಸಮನಿಸಿದ ನಿ |
ರ್ದಾಯದಿಂದಲಿ ಸಮರವೆಂದೇ ಕೇಳುತಾಕ್ಷಣದಿ ||
ದಾಯಿಗರಿಗೊದಗಿದ ವಿಶೇಷ ಮ |
ಹಾಯುಸವು ಮಿಗೆ ತಮ್ಮದೆಂದೇ |
ರಾಯ ಕುರುಪತಿ ಬಂದನಿದೆಯೆಂದರು ಸುಮಂತ್ರಿಗಳು || ೪೬
ಬಂದನೇ ಕುರುರಾಯ ಬಾಂಧವ |
ವೃಂದದೊಡನೆಮ್ಮಯ ಸಹಾಯಕೆ |
ಬಂಧುದರ್ಶನವಿದು ನಿಮಿತ್ತವು ಸಫಲವಾಯ್ತೆಮಗೆ ||
ಇಂದು ಸುಖವೆಂದೆನುತಲಿದಿರ್ವೈ |
ತಂದವನು ಜಮುನೀಂದ್ರರೊಡನರ |
ವಿಂದಸಖನಾತ್ಮಜತನೂಭವನಧಿಕಹರುಷದಲಿ || ೪೭
ಯಮತನುಜ ಬರಲೆದ್ದು ಕುರುಭೂ |
ರಮಣ ಮಣಿದಡಿಗೆಱಗಿ ಭೀಮನ |
ವಿಮಲ ವಿನಯದಿ ತೆಗೆದು ತಕ್ಕೈಸುತ್ತ ಹರುಷದಲಿ ||
ಸುಮನಸಾಧಿಪತನುಜಯಮಳರ |
ಸಮನಿಸಿದ ವಂದನೆಯ ಕೈಕೊಂ |
ಡಮಿತಕರುಣದಿ ನಯನ ಮಿಗೆ ಮನ್ನಿಸಿದನಾಭೂಪ || ೪೮
ಬಳಿಕ ಗಂಗಾಸೂನು ಗುರು ಕೃಪ |
ರಲಘುಬಲ ಗುರುತನಯ ವಿದುರರ |
ಸುಲಲಿತೋಜ್ವಲ ಪದಕಮಲಗಳಿಗೆಱಗಿಯುಳಿದವರ ||
ಒಳುನುಡಿಗಳಿಂದುಪಚರಿಸಿ ಸ |
ಮ್ಮಿಳಿತಮಧುರವಚೋವಿಲಾಸದ |
ಬಳಕೆಯಲಿ ಕೈವಿಡಿದು ಧರ್ಮಜ ತಂದನಾಶ್ರಮಕೆ || ೪೯

ಹರೆದ ವಾರ್ತೆಯ ಕೇಳುತಾಕ್ಷಣ |
ವರವಿರಾಟದ್ರುಪದ ಕೇಕಯ |
ರರಸ ಕುಂತೀಭೋಜ ಸೃಂಜಯ ಸೋಮಕಾದಿಗಳು ||
ಪರಿವಿಡಿಯುಲೆಯ್ತಂದು ಬೆರಸಿತು |
ಧರಣಿಪತಿ ಧರ್ಮಜನ ಕೇಳ್ಳೆ |
ನರಪತಿಯೆ ಬಳಿಕಿವರಲೇಳಕ್ಷೋಹಿಣೀಸೇನೆ || ೫೦

ಬಳಿಕ ಕೌರವಪಾಂಡುಸುತರಿಗೆ |
ನಲವಿನಿಂದವೆ ಮತ್ಸ್ಯಕೇಕಯ |
ರಲಘುಬಲ ಪಾಂಚಾಲ ಕುಂತೀಭೋಜಸೃಂಜಯರು ||
ತಿಳಿದು ವಂದನೆ ಪ್ರಿಯತರೋಕ್ತಿಯ |
ಒಳನುಡಿಗಳಿಂದೊರ್ವರೊರ್ವರು |
ಲಲಿತಹರುಷದೊಳುಪಚರಿಸೆ ಕುಳ್ಳಿರ್ದರೊಲವಿನಲಿ || ೫೧

ಎಲೆವನೆಗಳೊಳ್ ಕುಳಿತು ಲಕ್ಷ್ಮೀ |
ಲಲನೆಯರಸನ ಹದನನೆಲ್ಲವ |
ನೆಲೆಗೊಳಿಸಿ ಗಯನಾಗಮದ ತುದಿವೊದಲ ವಿಸ್ತರಿಸಿ ||
ಫಲಗಳನು ತಂದಿತ್ತು ನಿರ್ಮಳ |
ಜಲವನೀಂಟಲು ಕೊಟ್ಟು ಕುರುಪತಿ |
ಯೊಳಲ್ವಿದುರಗಾಂಗೇಯದ್ರುಪದರಿಗೆಂದನಾಭೂಪ || ೫೨

ಬಂದ ಕಾರ್ಯದ ತೆಱನ ಕೇಳ್ದರ |
ವಿಂದನಾಭನು ಗಯನನೊಪ್ಪಿಸ |
ನೆಂದು ನರನೊಳು ಬಹಳ ಕೋಪಾಟೋಪಯುತನಾಗಿ ||
ನಿಂದಿಹನು ಬಲವೆರಸಿ ಧುರಕೇ |
ನೆಂದು ತೋಱಿತು ಬುದ್ಧಿಗಲಿಸುವು |
ದಿಂದು ನೀವೆನಗೆನುತ ನುಡಿದನು ಧರ್ಮನಂದನನು || ೫೩

ಇದಕೆ ಚಿಂತಿಸಲೇಕೆ ಧರ್ಮಜ |
ಮದನನೈಯನು ಗಯನ ಕೊಡನೆಂ |
ಬುದಕೆ ರಣಕೆಯ್ತಂದನೆಂದೇನುಡಿದೆಲಾತನಗೆ ||
ಕದನದಲಿ ಕುರುಸೇನೆ ಪಾಂಡವ |
ರದುಭುತೋಪನು ಮತ್ಸ್ಯದ್ರುಪದರ |
ಸದೆಬಡಿದ ಬಳಿಕೈಸೆ ಖಚರನ ಕೊಡುವುದವಗೆಂದ || ೫೪

ನಾವಱಿಯದವರಲ್ಲವೀತುಱು |
ಗಾವ ಮಾಧವನದಱಿಕೊಳಗ್ಗದ |
ಕಾವ ಹಲಧರ ಸಾಂಬ ಸಾತ್ಯಕಿ ಮುಖ್ಯರೆನಿಸುವರು ||
ಈವಿಗಡ ಸಂಗರಕೆ ನಿಂದು ಮ |
ಹಾವನೀಶ್ವರರೊಡನೆ ಕಾದುವ |
ನಾವನೆಂದನು ಕೌರವೇಶ್ವರ ನಗುತ ಧರ್ಮಜಗೆ || ೩೫

ಪಲವನಾಡಲದೇಕೆ ಸಮರಕೆ |
ಬಲಯುತನು ದೈತ್ಯಾರಿ ಗೆಲಲಸ |
ದಳವೆ ಹರಬ್ರಹ್ಮಾಮರೇಂದ್ರರಿಗಾಹರಿಯ ಕೂಡೆ ||
ಗೆಲುವೆನೆನ್ನಲು ಬಹುದೆ ಪರಿಕಿಸೆ |
ಛಲಪದದ ಕಾರಿಯಕೆ ಭಟರಸು |
ಗಳಿಗೆಯಾಸೆಯ ಮಾಡದೊದಗುವುದೆಂದನಾ ಭೀಷ್ಮ || ೩೬

ಅರಸ ಚಿತ್ತೈಸಿನಿತು ಮಾತ್ರಕೆ |
ತರಚಿನಾಳೋಚನೆಗಳೇತಕೆ |
ಸ್ಮರಪಿತನ ಮಾತೇಸು ಹರಕಮಲಜಸುರಾದಿಗಳು ||
ಧರಣಿಯೊಳಗುಳ್ಳಖಿಳದೈತ್ಯರ |
ನೆರವಿ ಸಹಿತೊಂದಾಗಿ ಬಂದುರೆ |
ತರಿದುಬಿಸುಡವೆ ಕ್ಷಣದೊಳೆಂದನು ಖಾತಿಯಲಿ ಕರ್ಣ || ೩೭

ಕದಡಿತತಿರಥ ವರಮಹಾರಥ |
ವುದಧಿಯೋಳಜ ಘೋಷದಂದವೆ |
ಮದವದರಿಭೈರವರು ಕುರುಕಾಶ್ಮೀರ ಮಲಯಾಳ ||
ವಿದಿತಕೇರಳ ಪಾಂಡ್ಯಮರು ಮಾ |
ಗಧ ದ್ರವಿಡದೇಶಾಧಿನಾಥರು |
ಕದನವಿದು ತಮತಮಗೆನುತ ಗರ್ಜಿಸಿತು ಕೇಳೆಂದ || ೩೮

ನಗುತ ಧರ್ಮಜನುಚಿತವಚನದ |
ಲಗಣಿತರ ಮೊಗನೋಡಿ ಪರಿಕಿಸೆ |
ನಗಬಲರು ನೀವಿಬ್ಬರಿರೆ ಮೋಹಾವಘನವಿದನು ||
ಬಗೆವಿರೇ ಸುರದಾನವಾಳಿಯ |
ವಿಗಡರೆಲ್ಲರು ನಿಮಗೆ ಸರಿಯೇ |
ಹಗರಣದ ಮಾತಲ್ಲ ತಥ್ಯವಿದೆಂದನಾಭೂಪ || ೩೯

ಕರೆದು ದ್ರುಪದಾತ್ಮಜೆಯನರಸನು |
ಪರಿಯನೆಲ್ಲವ ಹೇಳಿ ನೀ ದಿನ |
ಕರನ ಪ್ರಾರ್ಥಿಸು ಬಂಧುಗಳಿಗುಣಲಿಡಲು ಬೇಕೆನಲು ||
ಸ್ಫುರಿತಶುಭ್ರದುಕೂಲವಸನವ |
ಧರಿಸಿ ಭಯಭಕ್ತಿಯಲಿ ಕರಗಳ |
ನೆರಡ ಮುಗಿಯುತ ಭಜಿಸಿದಳು ವಿಮಲಾಬ್ಜಬಾಂಧವನ || ೬೦

ಸರಸಿಜಾಪ್ತ ದಿವಾಕರಾರ್ಯಮ |
ವರತ್ರಿಭುವನತಮೋನಿವಾರಣ |
ಕರಸಹಸ್ರ ದಿನೇಶ ನುತಕಾಶ್ಯಪ ಕುವಲಯಾರಿ ||
ಶರಧಿತೋಷಸುತೇಜಭಂಜನ |
ವಿರಚಿಸಲು ತಾನೇಸಜೀವಳೆಲೆ |
ತರಣಿಯಶನವನಿತ್ತು ರಕ್ಷಿಪುದೆಂದಳಿಂದುಮುಖಿ || ೬೧

ಎನುತ ಭಯಭಕ್ತಿಯಲಿ ಪಾಂಡವ |
ವನಿತೆ ಬಲುಬಗೆಯಲ್ಲಿ ನುತಿಸಲು |
ವನಜಸಖ ನಗುತಾಪತಿವ್ರತೆಯರ ಶಿರೋಮಣಿಯ ||
ಘನವಿವೇಕಸ್ತುತಿಗೆ ಮೆಚ್ಚುತ |
ಮನದೊಳಗೆ ಪರಿಣಮಿಸಿ ನೋಡಲು |
ಕನಕಪಾತ್ರೆಯೊಳುದ್ಭವಿಸಿದುದು ಹೇಳಲೇನೆಂದ || ೬೨

ಉದಿಸಿದುದು ರಾಜಾನ್ನಸೂಪವು |
ಮಧುಘೃತವು ಬಹುಶಾಖ ಭಕ್ಷ್ಯವು |
ಘದ ಮಹಾರಾಶಿಗಳು ದಧಿದುಗ್ಧಂಗಳೊಲವಿನಲಿ ||
ಸದರಳೇ ದ್ರುಪದನ ತನೂಭವೆ |
ಸದಮಲಾತ್ಮಕ ಕಮಲಸಖನನು |
ಮುದದಿ ನವಭಕ್ತಿಯಲಿ ಮೆಚ್ಚಿಸಿ ಪಡೆದಳಕ್ಷಣದಿ || ೬೩

ರಮಣರಲ್ಲಿಗೆ ಬಂದು ನಿಂದಾ |
ರಮಣಿ ಬಿನ್ನೈಸಿದಳು ಕೇಳಿರೆ |
ಕಮಲಮಿತ್ರನ ವರಕರುಣವಾಯ್ತೇಳಿ ನೀವೆನಲು ||
ಹಿಮಕರಾನ್ವಯ ರಾಜಶೇಖರ |
ಸುಮುಖನಾಗೆಬ್ಬಿಸಿದ ಕುರುಭೂ |
ರಮಣಮುಖ್ಯಸಮಸ್ತಬಾಂಧವ ಪರಿಜನವ್ರಜವ || ೬೪

ಬಳಿಕಲೆಲ್ಲರ ಪಙ್ಕ್ತಿಯನು ನೆಲೆ |
ಗೊಳಿಸಲವರವರುಚಿತವೃತ್ತಿಯ |
ಬಳಕೆಯನು ನಿರ್ಮ್ಮಿಸಿ ದಿವ್ಯಾಸನಗಳನು ರಚಿಸಿ ||
ಇಳೆಯಮರರೀರಾಱುಸಾವಿರ |
ಗಳು ಕುಟುಂಬಸಮೇತ ಕುಳ್ಳಿ |
ರ್ದಳವಡಿಸಿದವರವರ ಭಾಗ್ಯೋದಯವ ಕೇಳೆಂದ || ೬೫

ಎಣಿಸಲಷ್ಟಾದಶ ಮಹಾಕ್ಷೋ |
ಹಿಣಿಯ ಬಲ ದೊರೆದೊರೆಗಳೆಲ್ಲರು |
ಗಣನೆಗದೆ ಯುಪರಿಮಿತಬಲ ಭೂಸುರಮಹಾವಾರ್ಧಿ ||
ಭಣಿತೆಯಲಿ ಕುಣಿಕುಣಿವ ಬಗೆಗಾ |
ಕ್ಷಣದೊಳಚ್ಚರಿವಟ್ಟುದೈಯುಜ |
ತ್ರಿಣಯಸುರಪಾಲರುಗಳಭ್ರದೊಳರಸ ಕೇಳೆಂದ || ೬೬

ದೈವಕೃಪೆಯುಳ್ಳರಿಗಿದೆಲ್ಲವು |
ಮೈವಳಿಯಲೇ ಫಲಿಸಿಬಹುದದು |
ದೈವಬಲವಿರ್ದಲ್ಲಿ ಬೆಂಬಿಡದೆಯ್ದಿ ರಕ್ಷಿಪುದು ||
ಕೈವಿಡಿದು ಬಹುಳಾಪದಂಗಳ |
ದೈವ ತಾ ಪರಿಹರಿಸುತಿರ್ಪುದು |
ದೈವಹೀನರ ಕಾರ್ಯ ನಿಷ್ಫಲವೆಂದನಾಭೂಪ || ೬೭

ಶರಧಿ ನಾಲ್ಕಱ ವಳಯಪರಿಯಂ |
ತರದ ಸಕಲೈಶ್ವರಿಯವೆಲ್ಲವು |
ತರಣಿಪೌತ್ರಗೆ ದೊರಕಿದಕ್ಷಯ ಪಾತ್ರೆಗೀಡುಂಟೆ ||
ಪರಮಸುಪ್ರತರಹರು ಪಾಂಡವ |
ರುರುವ ಬಹಳಾಪತ್ತನಿವರು |
ತ್ತರಿಸುವರು ಸಂದೇಹವಿಲ್ಲೆಂದನು ಕುರುಕ್ಷಿತಿಪ || ೬೮

ಎಸೆವ ಹರುಷದೊಳಿನಿಬರಾರೋ |
ಗಿಸಿದ ತದನಂತರದೊಳಾಗಲೆ |
ಬಿಸರುಹಾಕ್ಷನ ಸಂಗರಕ್ಕುದ್ಯುಕ್ತರಾಗಲ್ಕೆ ||
ಅಸುರಸಂಹರ ಕೇಳಿದನು ಕುರು |
ವಸುಮತೀಶನು ಪಾಂಡುತನಯರಿ |
ಗೆಸೆವ ಸಹಯಿಗನಾಗಿ ಬಂದೊಡಸ್ಸೈದಿದಾಗಮವ || ೬೯

ಕೇಳಿರೈ ಬಲರಾಮಸಾತ್ಯಕಿ |
ಕೇಳಿ ಕೃತವರ್ಮಾದಿಕಲಿಗಳು |
ಕೇಳಿರೈ ಪ್ರದ್ಯುಮ್ನಮುಖ್ಯಪ್ರಮುಖ ಯಾದವರು ||
ಖಳಪಾಂಡವರಾಡಿದಾಟವ |
ಕೇಳಿ ನೀವ್ ಲೇಸಾಗಿ ವಿರಚಿಸಿ |
ಪೇಳುವೆನು ಖಳರೆಣಿಸಿದೆಣಿಕೆಯನೆಂದನಸುರಾರಿ || ೨೦

ಪಗೆಯ ಕೈವಿಡಿದೆಮ್ಮ ಶಿಷ್ಯರ |
ನಗಡುವಾಕ್ಯದಿ ಪರಿಹರಿಸಿ ಪರ |
ಮಿಗಿಲ ಮಾನಸನೆಂದಹಂಕಾರದಲಿ ಶಾತ್ರವರ ||
ಬಗೆಯನಂಗೀಕರಿಸಿ ಮುಂದಕೆ |
ವಿಗಡಿಸುವ ದಾಯವನು ತಿಳಿಯದೆ |
ಪೊಗರಿನಿಂ ದುರ್ನೀತಿಗೆಳಸಿದ ಪಾರ್ಥನಕಟೆಂದ || ೨೧

ಒಳಗೆ ಕುಹಕದಿ ಕೌರವೇಂದ್ರನ |
ಬಳಿಗೆ ಶಿಷ್ಯರ ಕಳುಹಿ ಮತ್ಸರ |
ಗಳನು ಗಣಿಸದೆ ಕರೆಸಿ ಮೈತ್ರತೆಯಿಂದಲೊಡವೆರೆದು ||
ಸಲಲಿತದಲುಂಡುಟ್ಟು ಫಲದಲಿ |
ಕೊಳುಗುಳವ ಬಯಿಸಕ್ಕೆ ಬಂದಿಹ |
ರಿಳೆಗಿದಚ್ಚರಿಯಲ್ಲವೇ ಕೇಳೆಂದನಸುರಾರಿ || ೨೨

ಬಲದೊಡನೆ ನಾವ್ ತೆರಳೆ ಯಮಸುತ |
ನಳುಕಿ ಭಯಭಕ್ತಿಯಲಿ ನರ ತಜ್ಜು |
ವಲಿತನವ ಕೈವಿಡಿದನೀಯಪರಾಧಮಂ ಕ್ಷಮಿಸು ||
ಖಳನ ಮನ್ನಿಪುದೆಂದು ಖಚರನ |
ನಲವಿನಿಂದೊಪ್ಪಿಸುವ ನಮ್ಮೊಳು |
ಛಲವ ಮಾಡನದೆಂದು ತೋಜಿದುವೆಂದನಸುರಾರಿ || ೨೩

ಖಳರು ಭೀಮಾರ್ಜುನರು ಮೋಹ್ ನಿ |
ರ್ಮಳನು ಯಮಸುತನೆಂದು ತಿಳಿದಿಹೆ |
ವಲೆ ಹಲಾಯುಧ ನಿಮ್ಮ ಪದದಾಣೆಂದುಪರಿಯಂತ ||
ಖಳತಿಲಕನೆಂದೆನ್ನ ಬಹುದಿ |
ನ್ನಿಳೆಯೊಳಗೆ ಧರ್ಮಜನ ದುರ್ಜನ |
ರೊಳಗನಱೆವೊಡಸಾಧ್ಯವಹುದಿಳೆಗೆಂದನಸುರಾರಿ || ೨೪

ಹೇಳಟರು ಮುರಮಥನ ನೀ ಮಿಗೆ |
ಕಾಳುಮಾಡಿದೆ ಕದನವನು ತಾ |
ಹೇಳಲೇನುಂಟಿನ್ನು ಕೃತಕವ ಮಾಡಿ ನಮ್ಮೊಳಗೆ ||
ಬಾಳುವವನರ್ಜುನನದೆಂದೀ |
ಖೂಳಗನುಜೆಯ ಕೊಟ್ಟು ಕೆಡಿಸಿದೆ |
ಸೋಲೆ ನೆಗಳುವ ಕಾರ್ಯವಾವುದು ತಮಗೆ ಹೇಳೆಂದ || ೨೫

ಕುರುಪತಿಗೆ ತಾ ಕೊಡುವೆನೆಂದೇ |
ಭರವಸವ ಮಾಡಿರ್ದೆ ನಿನಗದ |
ಪರಮಮೈತ್ರನದೆಂದು ತಂಗಿಯ ಕೊಟ್ಟು ಬಳಿಕೀಗ ||
ಕರುಬರಂದದಿ ಹಲವನೆಣಿಸದ |
ಡಂಭವನೇ ದುರ್ಜನನು ಸಾಕೀ |
ಸರನನೀಕ್ಷಣ ಹಿಡಿದು ತಹೆ ಗಯಸಹಿತ ಬೇಗೆಂದ || ೨೬

ಕೊಲಲು ಸಲ್ಲದು ತಂಗಿಯರಸನ |
ನಿಳೆಗೆ ದುರ್ಯಶನೆನಿಪುದದಲ್ಲೀ |
ಘಳಿಗೆಯರ್ಧಕೆ ವರಹಲಾಗ್ರದಿ ಸೆಳೆದು ಹೆಡಗೈಯ ||
ಬಲುಮಿಳಿಗಳಲಿ ಬಿಗಿದು ಖಚರನ |
ತಲೆಯ ಚಕ್ರಕೆ ಕೊಡುವೆನೀಕ್ಷಣ |
ತಳುವದೇತಕೆ ನೊರಜುಮನುಜನ ಮಾಡದೇನೆಂದ || ೨೭

ಸೆಳೆಯಲೇತಕೆ ಹಲದಿ ಕೈಗಳ |
ಮಿಳಿಗಳಿಂದಲಿ ಬಿಗಿಯಲೇತಕೆ |
ಜಲರುಹಾಕ್ಷ ಪರಾಕು ಚಿತ್ರೈಸೆನ್ನ ಬಿನ್ನಪವ ||
ತುಳುಕಿ ಸನ್ಮೋಹನದ ಬಾಣವ |
ಒಳಸಹಿತ ಫಲುಗುಣನ ನಿದ್ರೆಯ |
ಬಲೆಯೊಳಾಳಿಸಿ ಗಯನ ತಹೆ ನೋಡೆಂದನಾಮದನ || ೨೮

ಶಿವಶಿವಾ ! ಫಲುಗುಣನ ಮಾತ್ರಕೆ |
ಜವದಿ ಸನ್ಮೋಹನವ ಬೀಸಿದು |
ಭುವನ ಕೊರಗಿಸಬೇಕೆ ಚಿತ್ರೈಸೆನ್ನ ವಿಕ್ರಮವ ||
ಭುವನಕಚ್ಚರಿಯೆನಿಪವೋಘದ |
ಕವಲುಬಾಣವ ತೊಡಲು ಖಚರನ |
ಪವನವೇಗದಿ ತಾರದೇ ಬಳಿಕೆಂದನಾಸಾಂಬ || ೨೯

ನರಕಮರ್ದನ ಕೇಳು ಬಳಿಕಾ |
ನರಕಭಂಜನನಾದ ನರನನು |
ನರಕದಂಬವನೊಂದು ನಿಮಿಷಕೆ ಪ್ರಳಯ ಮಾರುತರ ||
ಪರಿವಿಡಿಯ ಶರದಿಂದ ದೆಸೆಗಳಿ |
ಗಿರದೆ ಹೋಹವೊಲೆಚ್ಚು ತದನಂ |
ತರದಿ ಖಚರನನೊಪ್ಪಿಸುವೆ ನಿಮಗೆಂದನನಿರುದ್ಧ || ೮೦

ನಗುತಲೆಲ್ಲರ ಮಾತ ಕೇಳುತ |
ನಗಧರನು ವೀರಪ್ರತಿಜ್ಞೆಯ |
ಹಗರಣಗಳಂತಿರಲಿ ಕೇಳುವುದೆಲ್ಲ ಯಾದವರು ||
ವಿಗಡನಪನರ್ಜುನನು ನಾಡಾ |
ಡಿಗರ ಬಗೆಯನು ಸಾಕು ನಗಿಸದಿ |
ರೊಗುಮಿಗೆಯ ಶಪಥಗಳು ಕೊಳ್ಳವು ನರನ ಮೇಲೆಂದ || ೮೧

ಗುಣಕೆ ಮತ್ಸರವುಂಟೆ ಫಲುಗುಣ |
ತ್ರಿಣಯನಾಜಮುಖರ್ಗೆ ಸಮನೆಂ |
ದೆಣಿಸಬಹುದಾಬಲ್ಲೆನುಳಿದರ ಗಣಿಸನಿದು ಸಿದ್ಧ ||
ರಣಮುಖದೊಳಿನಿತೆಲ್ಲ ತಥ್ಯವೊ |
ಅಣಕವೋ ಲೇಸಾಗಿ ನೋಡೆಂ |
ದೆಣಿಸಿ ಮಿಗೆ ನಗುತಿದ್ದನಸುರಾರಾತಿ ಸಂಗರಕೆ || ೮೨

ಬರಲಿ ಸೇನಾನಾಯಕರು ಕರಿ |
ತುರಗರಥಕಾಲಾಳು ಮಿಗೆ ಸಂ |
ವರಣೆಯಲಿ ನಡೆಯೆಂದು ನೇಮಿಸಲಖಿಳಪಾಯದಳ ||
ಭರದಿ ದ್ವೈತವನಾಂತರದವೊಳ |
ಹೊಱಗೆ ಮುತ್ತಿತು ಶರಧಿಘೋಷದೊ |
ಳೊರಲೆ ಹರಿ ತಿರುವೆಂಕಟೇಶನ ಬೆರಳ ಸನ್ನೆಯಲಿ || ೮೩

ಅಂತು ಸಂಧಿ ೧೭ ಕ್ಕಂ ಪದಂ ೯೭೪ ಕ್ಕಂ ಮಂಗಳಂ

# ಹದಿನೆಂಟನೆಯ ಸಂಧಿ.

---

ಸೂಚನೆ॥ ವೀರ ವಿಕ್ರಮಶಾಲಿ ಯಮಿತಕ ।
ಠೋರಸಮರಕಪಾಲಿ ಯದುಕುಲ ।
ಧೀರಕೃಷ್ಣನೊಳಾಹವಕೆ ಹೊಱವಂಟನಾಪಾರ್ಥ ॥

ಭರತವಂಶನೃಪಾಲಮುಕುಟ ।
ಸ್ಫುರಿತರತ್ನವೆ ಕೇಳು ಮೇಲಣ ।
ಭರದ ಧುರಕೇಳೀಕಥಾಗಮದಾಯತವನೊಲಿದು ॥
ಹರಿಯ ಕೈಸನ್ನೆಯಲಿ ಬೆರಸಿತು ।
ಬೆರಳ ಬೊಬ್ಬೆಯ ಕಿಲಕಿಲಾರವ ।
ದುರುತರದ ರೋಷಾತಿಶಯದಲಿ ಸಕಲ ಪಾಯದಳ ॥ ೧

ವೀರಧನುಟಂಕಾರ ಬಲುಮದ ।
ವಾರಣಂಗಳ ಬೃಂಹಿತಧ್ವನಿ ।
ಚಾರುತುರಗವ್ರಜದ ಹೇಷಿತ ರಥದ ಚೀತ್ಕಾರ ॥
ಭೂರಿಭಟರಬ್ಬರಣೆಯೆಂಬಿವು ।
ವಾರಿಧಿಗಳಾರ್ಭಟೆಯ ಮಿಗಿಸಲು ।
ವಾರಿಜಾಸನ ಕೇಳಿ ನಗುತೆಯ್ತಂದನಂಚೆಯಲಿ ॥ ೨

ವೃಷಭವಾಹನವೇಱ' ಹರುಷದಿ ।
ಶಶಿಧರನು ನಡೆತರಲು ಬೆರೆದುದು ।
ವಿಷಮವಿಕ್ರಮವೀರಭದ್ರಕುಮಾರಗಜಮುಖರು ॥
ಪಶುಪತಿಯ ಬಳಿವಿಡಿದುದಭ್ರಂ ।
ಕಷದೊಳಿರದೆಯ್ತಂದುದ್ಯೈ ರಣ ।
ವಿಷಯವೇನುತ್ಸಹವೊ ನೋಳ್ಪರಿಗೆಂದನಾಮುನಿಪ ॥

ಹರಿಧನಂಜಯ ಕಾಲ ನಿರುತರು ।
ವರುಣ ಮಾರುತ ಖಡ್ಗಧರ ಮು ।
ಖ್ಯರು ರಣಾಡಂಬರದ ರಭಸವ ಕೇಳುತಾಕ್ಷಣದಿ ॥
ಕರಿ ತುರಗ ಸೈರಿಭಗಿ ಮಾನಸ ।
ವರಮಕರ ಹರಿಣಾಶ್ವವಾಹನ ।
ವೆರಸಿ ರಣವನು ನೋಡಲೆಯ್ತಂದಡರಿದರು ನಭವ ॥ ೩

ಗರುಡ ಕಿನ್ನರ ಯಕ್ಷ ರಾಕ್ಷಸ |
ರುರಗ ವಸು ಗಂಧರ್ವ ಗುಹ್ಯಕ |
ವರಮರುದ್ಗಣ ಸಿದ್ಧ ಸಾಧ್ಯ ಪ್ರಮುಖದೇವತತಿ ||
ತರಣಿಚಂದ್ರಮಕುಲದೊಳೊಪ್ಪುವ |
ನರಪತಿಗಳಪರಿಮಿತ ನೆರೆದುದು |
ಹರಿಧನಂಜಯರದ್ಭುತಾಜಿಯ ನೋಡಲಭ್ರದಲಿ || ೫

ಹರಿ ಬಳಿಕ ವರಪಾಂಚಜನ್ಯವ |
ತ್ವರಿತದಿಂ ದನಿಗೊಳಿಸೆ ಸಚರಾ |
ಚರವದೆಲ್ಲವು ತಲ್ಲಣಿಸಿತಾಕ್ಷಣಕೆ ಪಾಂಡವರು ||
ಇರವು ತಾನೆಂತೆನುತಲಿರ್ದುದು |
ನೆರೆದ ಗಗನೇಚರರು ಕೇಳೈ |
ಭರತವಂಶಲಲಾಮ ಜನಮೇಜಯಮಹೀಪಾಲ || ೬

ಕೇಳಿದನು ಯಮಸೂನು ಸಮರಾ |
ಭೀಳಪಟುತರಪಾಂಚಜನ್ಯದ |
ಮೇಲುರವವನು ಭೀಮದುರ್ಯೋಧನರು ಮೊದಲಾದ ||
ಕಾಳೆಗದ ಕಡುಗಲಿಗಳಿಗೆ ತಾ |
ಹೇಳಿದನು ಹರಿ ಸಕಲಸೇನಾ |
ಜಾಳಸಹಿತಾಹವಕೆ ನಿಂದಿಹನಱಿದು ನಡೆತಂದ || ೭

ಕದನಸವರಣೆಗಳಲಿ ನಡೆವುದು |
ಮದಮುಖರು ಮುಂಗೊಳದೆ ಸುವಿಚಾ |
ರದಲಿ ಮೇಲಣ ತಾಗುಬಾಗಿನ ಸ್ಥೂಲಸೂಕ್ಷ್ಮಗಳ ||
ಹದನಱಿತು ಕೈಮಾಳ್ಪುದೆಂದಾ |
ವಿಧವನೆಲ್ಲವ ತಿಳುಹಿ ಕರುಣಾ |
ಸ್ಪದನು ಕಳುಹಿದನಖಿಳಪರಿವಾರವನು ಸಂಗರಕೆ || ೮

ಬಂದು ಕುರುಪತಿ ನೃಪನ ಚರಣ |
ದ್ವಂದ್ವದಲಿ ತಲೆವಾಗಿ ಕೇಳೆ |
ನ್ನೊಂದು ಭಾಷೆಯನಿದಕೆಣಿಕೆಗೊಳಲೇಕೆ ಸಹಭವನ ||
ಬಂಧುರದ ರಣಕೌಶಲವ ನೀ |
ನಿಂದು ನೋಡಲು ಕಣ್ಗೆ ಹಬ್ಬವ |
ತಂದಡಲ್ಲದೆ ಮಾಣೆ ತವಪದದಾಣೆ ತಾನೆಂದ ||

ನಂದಗೋಪನ ಮಗನ ಘನರಣ |
ದಂದವನು ನೆರೆ ಗೆಲಿದು ವಿಕ್ರಮ |
ದಿಂದ ಶತ್ರುಪಲಾಯನವ ಮಿಗೆ ಮಾಡಿ ಫಲುಗುಣನ ||
ಸಂದ ವೀರಭಟಪ್ರತಿಜ್ಞೆಯು |
ನಂದಗೊಳಿಸಿ ಜಗತ್ರಿನೊಳು ಲೇ |
ಸೆಂದು ಪೊಗಳುವ ತೆಱನ ಮಾಡುವೆ ನೋಡಿ ನೀವೆಂದ || ೧೦

ಎನಲು ಧರ್ಮಜನಖಿಲಸಂಭ್ರಮ |
ವನಧಿಯೊಳ್ಮುಳುಕಾಡಿ ಕುರುರಾ |
ಯನನು ಘನತರಹರುಷದಿಂ ತೆಗೆದಪ್ಪಿ ಮುಂಡಾಡಿ ||
ಅನುಜ ನೀನಲ್ಲದೆ ವಿಚಾರಿಸೆ |
ತನಗೆ ಸತ್ಕೀರ್ತಿಯನು ಸೇರಿಪ |
ಜನಪರಾರೀಲೋಕದೊಳಗುಪಚಾರವೇಕೆಂದ || ೧೧

ಎಮ್ಮ ಹೊಲ್ಲೆಹಲೇಸುಗಳು ಸಲೆ |
ನಿಮ್ಮದಲ್ಲವೆ ನಿಮ್ಮ ಶ್ರೀಯುಗ |
ಳಿಮ್ಮದಿದಕೆರಡುಂಟೆ ಪರಿಕಿಸೆ ಭಿನ್ನಭೇದಗಳು ||
ಸುಮ್ಮನಱಿಯದ ಮೂಢಜನರತಿ |
ಹೆಮ್ಮೆಗಳಲೇ ಕೆಡುತಲಿಹರೆಲೆ |
ತಮ್ಮ ಹೋಗೆನ್ನಾಣೆ ಹೋಗೆಂದನು ಮಹೀಪಾಲ || ೧೨

ಎನೆ ಹಸಾದವ ಹಾಯ್ಕಿ ಕೌರವ |
ಜನಪ ಕಳುಹಿಸಿಕೊಂಡು ನಡೆಯ |
ಲ್ಕಿನತನುಜ ಗುರು ಭೀಷ್ಮ ಗುರುಸುತ ಕೃಪರು ಮೊದಲಾದ ||
ಘನರಥಿಕರಧಿಕಪ್ರತಾಪರು |
ಹೊನರಿನಲಿ ರಣರಂಗಕೈದಿದ |
ರನುಗೊಳಿಸಿ ಸಕಲಾಯುಧದ ಸಂವರಣೆಯಲಿ ನಡೆದು || ೧೩

ಮೇರೆದಪ್ಪಿದ ಶರಧಿಯಂತೆ ಬ |
ಲಾರಿಯುಪ್ಪಣೆಕೊಂಡು ನಡೆವಾ |
ವಾರಿಧರಗಳ ತೆಱದಿ ಪಟುಭಟರೊತ್ತಿ ನಡೆಯಲ್ಕೆ ||
ವೀರಕೌರವರಾಯನಾಗಂ |
ಭೀರಭೇರೀರವದೊಡನೆ ಕೈ |
ವಾರಿಸುವ ಬಿರುದುಗಳುಲಿಯೆ ಸಂಗ್ರಾಮಕೈದಿದನು || ೧೪

ಬಳಿಕ ನಡೆದರು ಮತ್ಸ್ಯಕೇಕಯ |
ರಲಘುಬಲ ಸೃಂಜಯರು ದೃಪದರು |
ಬಲದೊಡನೆ ಹೊಱವಂಟು ಕುಂತೀಭೋಜ ಮೊದಲಾದ ||
ಇಳೆ ನಡುಗೆ ಪೆಡೆ ಕುಸಿಯೆ ಫಣಿಪಗೆ |
ತಳಮಳಂಗೊಳೆ ಕೂರ್ಮ ದಿಕ್ಕರಿ |
ಗಳು ಭಯಂಗೊಳೆ ಶರಧಿಗಳ್ತಲ್ಲಣಿಸಲಾಕ್ಷಣಕೆ || ೧೫

ಘನರವವನಾಲಿಸುತ ಗರ್ಜಿಪ |
ವನಹರಿಯ ತೆಱನಂತೆ ಶಂಖ |
ಧ್ವನಿಯ ಕೇಳುತಲೆದ್ದು ಗದೆಯನು ಕೊಂಡು ಬಿಲ್ವಿಡಿದು ||
ಸುನಿಶಿತಾಸ್ತ್ರಂಗಳನು ಧರಿಸಿಯೆ |
ಜನಪನೆಡೆಗೆಯ್ತಂದು ಪದಯುಗ |
ವನಜಕಾನತನಾಗಿ ನೇಮವೆ ಎಂದನಾ ಭೀಮ || ೧೬

ನೇಮ ಬೇಱಿನ್ನೇನು ಪವನಜ |
ರಾಮಕೃಷ್ಣರು ಬಲ್ಲಿದರು ಬಳಿ |
ಕೀ ಮಹಿಯಭಾರವನು ಪರಿಹರಿಸಲ್ಕೆ ನರನೆನಿಸಿ ||
ಶ್ರೀಮನೋಹರ ಕೃಷ್ಣರೂಪದಿ |
ಭೂಮಿಯೊಳಗುದಿಸಿರ್ಪ ಗರ್ವಿಸಿ |
ದಾಮದಾಂಧರ ಹಲರ ತಱಿದಿಹ ನಾವು ಸೋಡಲಕೆ || ೧೭

ಫಣಿಪನೇ ಬಲರಾಮನಂಶವು |
ತ್ರಿಣಯಮುಖ್ಯರ ಧುರದೊಳೀತನು |
ಗಣಿಸ, ನೆಗಳುವ ಕಾರ್ಯವಿನ್ನೇನುಂಟು ವಿಸ್ತರವು ||
ರಣವ ಜಯಿಸಿಯೆ ಗಯನ ಸಲಹುವ |
ಭಣಿತೆಯೆಂಬುದಿದೇ ಭಗೀರಥ |
ನೆಣಿಕೆಯಹುದಿಳೆಗೆನ್ನ ಮಾತನು ಕೇಳು ನೀನೆಂದ || ೧೮

ಹಲವು ಬಗೆಯಲಿ ಶರಣುಹೊಕ್ಕನ |
ಸಲಹುವುದೆ ನೃಪನೀತಿಯಿಹದಲಿ |
ಸುಲಲಿತೋಜ್ವಲಕೀರ್ತಿ ಮಾದೊರ್ಡೆ ಹರಿಯ ಸಾನ್ನಿಧ್ಯ ||
ಸುಲಭವಹುದದಱಿಂದಲಾ ಕೊಳು |
ಗುಳಮುಖದಿ ಹೆಱಿಸಾರದೊದಗಿಯೆ |
ತಿಳಿದ ಸತ್ಕೀರ್ತಿಯನು ತಹುದೆಮಗೆಂದನಾಭೂಪ || ೧೯

ಜೀಯ ಚಿಂತೆಯಿದೇಕೆ ಹರನಾ |
ರಾಯಣರು ಕಮಲಜ ಸುರಾದಿಗ |
ಳಾಯತದಿ ರಣಕೈದಿ ನಿಂದರೆ ಗೆಲುವೆನವರುಗಳ ||
ಬಾಯಬಡುಕನದೆಂದಿರದೆ ಸಮ |
ರಾಯತದಿ ನೋಡೆನ್ನ ಭುಜಬಲ |
ದಾಯತದ ರಣಕೌಶಲವ ನೀನೆಂದನಾಭೀಮ || ೨೦
ತನು ಸುಕೀರ್ತಿಗಳೊಳು ನಿಧಾನಿಸೆ |
ತನುವಿದಧ್ರುವಮೈಸೆ ಕೀರ್ತಿಯು |
ನೆನಹನಾಚಂದ್ರಾರ್ಕವೆಂಬುದು ಶ್ರುತಿವಚನವೆಂದು ||
ಮನದಿ ತಿಳಿದಿಹೆನರಸ ತಮ್ಮನ |
ಘನಪ್ರತಿಜ್ಞೆಯ ಸಲಿಸಿ ಕೀರ್ತ್ಯಂ |
ಗನೆಗೆ ಬಣ್ಣವ ತಹೆನೆನುತ ಬಿನ್ನೈಸಿದನು ಭೀಮ || ೨೧
ಶರಧಿಯೊಳಗೆ ತಿಮಿಂಗಿಲನು ಜಲ |
ಚರವನೆಲ್ಲವ ನುಂಗುವೊಲ್ ಬಲ |
ಶರನಿಧಿಯ ತಾನೀಂಟಿಯುದಕೊಳು ವೀರಭಟರೆನಿಪ ||
ಸ್ಮರಸುಭಟನನಿರುದ್ಧ ಸಾಂಬನು |
ಧುರವಿಜಯ ಕೃತವರ್ಮ ಸಾತ್ಯಕಿ |
ವರರನರೆವೆನು ಮುಸಲಚಕ್ರಾಯುಧರ ತೊಲಗಿಪೆನು || ೨೨
ಕೊಳುಗುಳದಿ ಹಿಂದಖಿಳವೀರರು |
ಜಳರುಹಾಕ್ಷನ ಕೂಡೆ ವೈರವ |
ಬೆಳಸಿ ಕಾದಿಹರವರಿಗಿಂದತಿಶಯದ ಭಟನೆನಿಸಿ ||
ಗೆಲವ ತಹೆ ನೋಡೆನ್ನ ಧಟನಿದ |
ಕಳುಕಿದರೆ ನಿಮ್ಮನುಜನಲ್ಲೆಂ |
ದುಳಿದು ಕರಗಳ ಮುಗಿದು ಕಳುಹಿಸಿಕೊಂಡನಾಭೀಮ || ೨೩
ಪರಶು ತೋಮರ ಖಡ್ಗವಸಿ ಮು |
ದ್ಗರ ಮುಸಲ ಪಟ್ಟಸವು ಕಕ್ಕಡೆ |
ಸುರಗಿ ಹದವಿಲ್ಲುಗಳ ಜೋಡಿಸಿ ವೀಳೆಯಂಗೊಂಡು ||
ತ್ವರಿತದಿಂದಲಿ ಒಂದು ನೇಮದಿ |
ಧರಣಿಪನ ಪದಕೆರಗಿ ನಿಂದರು |
ವರನಕುಲಸಹದೇವರಿರ್ವರು ಕರಗಳನು ಮುಗಿದು || ೨೪

ಹಸುಳೆಗಳು ನೀವ್ ಘನರಣಾಗಮ |
ಕುಶಲರತಿಬಲರಲ್ಲ ಭೀಮನು |
ವಿಷಮಬಲನರ್ಜುನನು ಹೇಳಿದ ತೆಱದಿ ಮುಂದಱಿತು ||
ಅಸಮರಣಕೆಯ್ದುವುದು ಮಿಗೆ ಸೈ |
ರಿಸುವುದವಧಿಗೆ ತೆಱನಱಿತು ದು |
ರ್ಯಶಕೆ ವೈಗೊಡದೆಮಗೆ ಕೀರ್ತಿಯು ತಹುದು ಹೋಗೆಂದ || ೨೫

ನಿಮ್ಮ ಕರುಣಕಟಾಕ್ಷಪಂಜರ |
ವೆಮ್ಮ ದೇಹಕೆ ತೊಡಿಗೆಯಾಗಿರ |
ಲೆಮ್ಮ ಮಹಿಯೊಳಗುಂಟೆ ದುರ್ಯಶ ವಿಗ್ರಹಾಯಸವು ||
ಕಮ್ಮಗೋಲನ ಜನಕನುಪಟಳ |
ವಮ್ಮುವುದೆ ಕೇಳರಸ ನೀವಿದೆ |
ಕುಮ್ಮಳಿಸಲೇಕೆಂದು ಬೀಳ್ಕೊಂಡೆಯ್ದಿದರು ರಣಕೆ || ೨೬

ಬಳಿಕ ಫಲುಗುಣ ಕಾಲಕೇಯರ |
ಕೊಲಲು ಇಂದ್ರನು ತನಗೆ ಕೊಟ್ಟಿಹ |
ಸುಲಲಿತೋಜ್ವಲರತ್ನನಿರ್ಮಿತ ದಿವ್ಯಮಕುಟವನು ||
ನೆಲೆಗೊಳಿಸಿ ತನ್ನುತ್ತಮಾಂಗಕೆ |
ವಿಲಸದಾಭರಣಗಳನೆಲ್ಲವ |
ನಳವಡಿಸಿ ಕಟಿತಟಕೆ ಸುನಿಶಿತ ಸುರಗಿಯನು ಬಿಗಿದ || ೨೭

ಸುರಪ ಕೊಟ್ಟಿಹ ದಿವ್ಯಕವಚವ |
ಸರಸದಿಂದಲಿ ತೊಟ್ಟು ಇಂದ್ರನ |
ಕೊರಲೊಳೊಪ್ಪುವ ರತ್ನಮಾಲೆಯನಳವಡಿಸಿ ಗಳಕೆ ||
ಪರಿಪರಿಯ ಮಣಿಭೂಷಣಂಗಳ |
ಸುರಪುರದ ದೇವಾಂಗವಸನವ |
ಧರಿಸಿ ಮನದೊಲವಿಂದ ನಿಂದನು ಪಾರ್ಥನನುವಾಗಿ || ೨೮

ನೆನೆದನಾ ಖಾಂಡವದಹನದಂ |
ದನಲ ಕೊಟ್ಟ ಮಹಾಸುರಥವನು |
ವಿನುತಿಸಿದನಂಗಾರವರ್ಮನು ತನಗೆ ಕರುಣಿಸಿದ ||
ಘನತರಾಸ್ತ್ರತುರಂಗಗಳನಿಂ |
ದ್ರನಬಳಿಯೊಳಿಹ ದೇವದತ್ತವ |
ನನಿಲಜವದಿಂ ಬಂದವೇನೆಂಬೆನು ವಿಚಿತ್ರವನು || ೨೯

ಹಿಂದೆ ಸೌಗಂಧಿಕಕುಸುಮಕ್ಕೆ |
ತಂದು ಸಂಧಿಸೆ ಪವನನಂದನ |
ಗಂದು ನಂಬಿಕೆ ಕೊಟ್ಟ ಹನುಮನ ನೆನೆವೆನೊಮ್ಮೆನುತ ||
ಚಂದದಿಂದಮುಲಸ್ತುತಿಗಳಲಿ |
ನಿಂದು ಕೈಗಳ ಮುಗಿದು ಪ್ರಾರ್ಥಿಸೆ |
ಬಂದನಾನರನೆಡೆಗೆ ಭಕ್ತಾಧೀನ ಹನುಮಂತ || ೩೦

ನಿಲಲು ಕಾಣುತಲರ್ಜುನನು ಭೂ |
ತಳದಿ ಸಾಷ್ಟಾಂಗದಲೆರಗಿ ವರ |
ಜಲಧಿಲಂಘನರಾಘವಾಂಘ್ರಿಸರೋಜಷಟ್ಚರಣ ||
ಖಳದಶಾನನ ತಿಮಿರಭಾಸ್ಕರ |
ವಿಲಯಶಂಕರರೂಪರಾಕ್ಷಸ |
ಕುಲಮಹೀಧರಕುಲಿಶ ಚಿತ್ತೈಸೆಂದನಾಪಾರ್ಥ || ೩೧

ಜನಕಜಾಸಂತಾಪಹರ ವರ |
ದನುಜಸುತಸಂಹಾರಪಟುತರ |
ದಿನಪಬಿಂಬಭಯಂಕರಾರ್ಣವಸಪ್ತಪರಿಮಿತದ ||
ವಿನುತಸಪ್ತದ್ವೀಪಲಂಘನ |
ವರಸುಮಿತ್ರಾತನಯರಕ್ಷಕ |
ನಿನಗೆ ಶರಣವಧರಿಸು ಭೃತ್ಯನ ಬಿನ್ನಪವನೆಂದ || ೩೨

ಸಲಿಗೆಯೊಂದನು ಸಲಿಸಬೇಕೆಂ |
ದಲಘುಭುಜಬಲಭೀಮಸೇನಂ |
ಗೊಲಿದು ವರವನು ಕೊಟ್ಟಿರದರಿಂದೆನ್ನನಾದರಿಸಿ ||
ವಿಲಸದಮಲಕೃಪಾಕಟಾಕ್ಷದಿ |
ನಿಲಲು ಬೇಹುದು ಧ್ವಜದ ತುದಿಯಲಿ |
ಜಲರುಹಾಕ್ಷನ ಕೂಡಣಾಜಿಯ ನೋಡಬೇಕೆಂದ || ೩೩

ಎನಲು ಮಾರುತತನಯನೆಂದನು |
ನೆನೆಹಿದೇನೈ ಪಾರ್ಥ ಸರ್ವೇ |
ಶನಸಮಾನದಲನುವರಕೆ ನೀ ನಿಲುವೆನೆಂದೆಂಬ ||
ಘನವಿರೋಧವಿದೇನು ಸಾಮಾ |
ನ್ಯನೆ ರಮಾಧವನಿಳೆಯೊಳತಿದು |
ರ್ಮನುಜರೆಣಿಕೆಯ ನೆನೆವರೇ ತಾಮುಸವಿದೇನೆಂದ || ೩೪

ವಿಶ್ವತೋಮುಖನೆನಿಪನಾತನು |
ವಿಶ್ವತೋಭುಜನೆನಿಪ ಪರಿಕಿಸೆ |
ವಿಶ್ವಚರಣನು ವಿಶ್ವತೋನಯನಂಗಳುಳ್ಳವನು ||
ವಿಶ್ವಚೇತನನಾಗಿ ಜಗದಲಿ |
ವಿಶ್ವಮೂರ್ತಿಯದೆನಿಸಿ ತೊಳಗುವ |
ವಿಶ್ವರೂಪನ ಕೂಡೆ ಸಮರವೆ ಪಾರ್ಥ ಹೇಳೆಂದ || ೩೫

ಆದಿಪುರುಷನನಂತಮಹಿಮನು |
ವೇದವೇದ್ಯನು ವಿಶ್ವವಂದ್ಯನು |
ಭೂದಿವಾನಲಸಲಿಲಸೂರ್ಯಾತ್ಮಕನೊಳನುವರದಿ ||
ಕಾದಿ ಜಯಿಸಿಯೆ ಬದುಕಿದನ ತೋ |
ರಾದಿಯುಗಸಾಹಸ್ರಪರಿಯಂ |
ತೀದುರಾಗ್ರಹವೇನು ಹೇಳೈ ಪಾರ್ಥ ನಿನಗೆಂದ || ೩೬

ಕೋಟಿರವಿನಿಭತೇಜನಲಿ ದಶ |
ಕೋಟಿ ಬ್ರಹ್ಮರ ಪೆತ್ತನಲಿ ಶತ |
ಕೋಟಿಧರಸಾಹಸ್ರಕಲ್ಪಸಮಗ್ರಭೋಗನಲಿ ||
ಕೋಟಿಶಂಕರಶೌರ್ಯನಲಿ ಮಿಗೆ |
ಕೋಟಿ ಕಾಲರ ತಂಪಿವ ಮಹಿಮನೊ |
ಳಾಟವಿಕತನ ಕೊಂಬುದೇ ನಿನಗೆಂದನಾಹನುಮ || ೩೭

ರಣದೊಳೇನಾದರು ಮಹಾಸ್ತ್ರೈ |
ಪುಣ ಸುರೇಂದ್ರಜಿತು ಪ್ರಮುಖ ರಾ-|
ವಣ ಖರಾಸುರ ಕುಂಭಕರ್ಣ ನರಾಂತಕಾದಿಗಳು ||
ತೃಣವು ಬ್ರಹ್ಮಸುರೇಂದ್ರ ಕೋಟಿಯು
ತೃಣಕೆ ಬಗೆಯದ ಸಾಹಸಾನ್ವಿತ |
ರೆಣಿಸಲಚ್ಯುತನೊಳ್ ಸೆಣಸಿ ತ್ರೇತಾಯುಗದೊಳೆಂದ || ೩೮

ಅವರ ಸಾಹಸವವರ ವಿಕ್ರಮ |
ವವರ ಚತುರತೆ ಬಾಹುಬಲಕಂ |
ತವರ ಶೌರ್ಯಕೆ ಕೋಟಿಮಡಿ ಸಾಹಸಿಕನಾವಾಲಿ ||
ಶಿವವಿರಂಚಿನುತ ಪ್ರತಾಪನು |
ಭುವನಕತಿಬಲ ಕಾರ್ತಿವೀರ್ಯನು |
ಭವಸಖನೊಳಾಹವಕೆ ಪಂಟಿಸಿಯುಳಿದರೇ ಎಂದ || ೩೯

ಮುನ್ನ ಕೃತಯುಗಕಾಲದಲಿ ಖಳ |
ನುನ್ನತಿಕೆಯನು ಮುರಿದು ಶ್ರುತಿಭೂ |
ಕನ್ಯೆಯರ ಕದ್ದೊಯ್ದಿದರವರನು ಕೊಂದ ಹರಿ ಬಳಿಕ ||
ತನ್ನ ದೇಹವನಱಿಯದಾಡಿದ |
ಸ್ವರ್ಣಕಶಿಪುವ ಸೀಳಿದನು ಮದ |
ಸನ್ನಿಹಿತ ಬಲಿಯೆಂಬವನ ಪಾತಾಳಕಿಳುಹಿದನು || ೪೦

ಹೋಗಲಾಹಿಂದಣಾಯುಗದ ಮಾ |
ತೇಗ ದ್ವಾಪರಯುಗದಲೀಹರಿ |
ಭೋಗಿಪನು ಸಹಿತುದಿಸಿದನು ಬಲಕೃಷ್ಣರೆಂದೆನಿಸಿ ||
ಸ [illegible]ಲೋಕಾಂತದಲಿ ಸುಜನರ |
ರಾಗ ಮಿಗೆ ರಕ್ಷಿಸುತ ಕುಜನರ |
ತಾಗಿ ಸವರಿದ ಪರಿಯನರುಹುವೆ ಪಾರ್ಥ ಕೇಳೆಂದ || ೪೧

ಮುರನ ನರಕನ ಪೌಂಡ್ರಕನ ಸಂ |
ಗರಭಯಂಕರ ಕಂಸಮಾಗಧ |
ದುರುಳ ಶಿಶುಪಾಲಕರ ಸಾಲ್ವನ ಡಿಬಕರೆಂಬರನು ||
ತರಿದ ಬಳಿಕವೆ ನಿಮ್ಮ ಕೈವಿಡಿ |
ದುರುವ ಕುರುವಂಶಾಂಬುನಿಧಿಯನು |
ಶರಮುಖಾಗ್ನಿ ಕಣಾಳಿಗಾಹುತಿಮಾಳ್ಪನೈ ಎಂದ || ೪೨

ಮುರಿಸಿ ಮುತ್ತರಿಸುವ ಮಹೀಶರ |
ಸದೆದು ಭೂಭಾರವನು ತಗ್ಗಿಸಿ |
ವಿದಿತಬಲರಾಗಿರ್ಪ ನಿಮ್ಮಯ್ವರಿಗೆ ಮೇದಿನಿಯ ||
ಕುದುರುಗೊಳಿಸಿ ಜಗತ್ತಿನೊಳು ಮಿಗೆ |
ಸದಮಲರು ಪಾಂಡವರೆನಿಸಿ ಹರಿ |
ಮುದದಿ ಮುನ್ನಿನ ನಿಜವ ಧರಿಸುವ ಪಾರ್ಥ ಕೇಳೆಂದ || ೪೩

ಅದರಿಯೊಳವಗಡಿಸಿ ಬಳಿಕೀ |
ಹೂಹೆಯನು ಕೈವಿಡಿದು ಮುಂದಣ |
ದೇಹಸುಖಸಾಮ್ರಾಜ್ಯವೆಲ್ಲವ ಕೆಡೆಯೊದೆದು ಮತ್ತೆ ||
ಐಹಿಕಾಮುಷ್ಮಿಕದ ಪದವಿಗೆ |
ಬಾಹಿರನು ನೀನೆನಿಸುವುದು ಮಿಗೆ |
ಸಾಹಸವೆ ಹೇಳೆಂದು ನುಡಿದನು ಹನುಮನರ್ಜುನಗೆ || ೪೪

ಅವಧರಿಸು ಕಪಿರಾಯನಿದನಾ |
ವಿವರಿಸಲದೇನಱಿಯರೇ ನ |
ಮ್ಮುಮವನು ರಕ್ಷಿಸಿ ಮೆಱೆವ ಪರಮಾತ್ಮನ ಮಹಾತ್ಮ್ಯೆಯನು ||
ಭುವನದಂತರ್ಯಾಮಿಗಳು ನೀ |
ವಿನರ ವೃತ್ತಾಂತದ ರಹಸ್ಯದ |
ಪ್ರವಿಮಲಜ್ಞಾನದಲಿ ನೆರೆ ನಿರ್ಧರಿಸಿ ನೋಡೆಂದ || ೪೫
ಖಚರನುಗುಳಲದೇಕೆ ಕರದಲಿ |
ವಚಿಸಲೇತಕೆ ಹರಿ ಪ್ರತಿಜ್ಞೆಯು |
ನುಚಿತವಲ್ಲೆಂಗಜಹರರು ಪರಿಹರಿಸಿ ಬಿಡಲೇಕೆ ||
ಸುಚರಿತಾನ್ವಯನಮರಮುನಿ ನರ |
ನುಚಿತವನು ಹೋಗು ಕಾವನು |
ಪ್ರಚುರದಿಂದೆನಲೇಕೆ ಚಿತ್ತೈಸೆಂದನಾಪಾರ್ಥ || ೪೬
ಕಾವಡೆಯು ಕೊಲ್ವಡೆಯು ದೇವರ |
ದೇವನಲ್ಲದೆ ಬೇಱೆ ಮಾನಸ |
ನಾವನೀಲೋಕದಲಿ ತಿಳಿಯಲು ವೇದಮತ ಸಿದ್ಧ ||
ಕಾವನೆಂದಾಡಿಸುವ ಕಾವವ |
ಭಾವಿಸಲು ಸಂಹರಿಪೆನೆಂಬವ |
ದೇವಕೀಸುತನೀಪ್ರಪಂಚವ ನಡೆಸುತಿಪನೆಂದ || ೪೭
ನರರೊಡನೆ ರಣಮುಖದಿ ಮಡಿದವ |
ತರಣಿಮಂಡಲವನು ವಿಭೇದಿಸಿ |
ಹರಿಯ ಸನಿಹದಲಿರ್ಪ ಗಡ ಈ ಹರಿಯ ಹಸ್ತದೊಳು ||
ಮೆಱೆವ ಚಕ್ರಾಹುತಿಗೆ ತನ್ನಯ |
ಶಿರವ ಕೊಟ್ಟವನೈದದಿಹನೇ |
ಹರಿಯ ಸಾಯುಜ್ಯವನು ಚಿಂತಿಸಲೇತಕಿದಕೆಂದ || ೪೮
ಮಿತ್ರನಾಗಿಯೆ ನಡೆದವಂಗೆ ಯ |
ಮಿತ್ರನಾಗಿಳೆಗೊಱಗಿದಗೆ ಸ |
ರ್ವತ್ರ ಸಹ ಹರಿಪದದ ಸಾನ್ನಿಧ್ಯವು ಸಿಧಾಸಿಸಲು ||
ಚಿತ್ರಗತಿಯಿಂ ಒಂದು ಖಚರನು |
ಶತ್ರುವಿನ ಭಯದಿಂದ ಮಱೆಗೊಳೆ |
ಕ್ಷಾತ್ರಧರ್ಮದಿ ಕೈವಿಡಿದೆನಪರಾಧವೇನೆಂದ || ೪೯

ಹರಿ ಹರ ಬ್ರಹ್ಮಾಮರಾವಳಿ |
ಧರಣಿ ಜಲ ವಾಕಾಶ ರವಿ ಚಂ |
ದ್ರರುಗಳಿನಿಬರ ಸಾಕ್ಷಿಯಲಿ ನಂಬಿಸಿದೆ ಖಚರನನು ||
ಪರಮಪುರುಷನೆ ಕೇಳು ಎನ್ನಯ |
ಹರಣಪರಿಯಂತೀತನನು ಮುರ |
ಹರಗೆ ಕೊಡೆ ನೀ ನೋಡುತಿರು ಧ್ವಜದಂಡದಗ್ರದಲಿ || ೫೦

ನಗುತಲಂಗೀಕರಿಸಿ ಪಾರ್ಥನ |
ಹೊಗರ ಗಂಭೀರದ ಸುವಾಕ್ಯವ |
ವಿಗಡವಿಗ್ರಹದಾಯತವ ನಿಶ್ಚಲಿತಮಾನಸವ ||
ನಗಧರನ ಸರಿಸದಲಿ ಸಮರದ |
ಸುಗತಿಯಲಿ ನಿರ್ಣೈಪ ಚತುರತೆ |
ಗೊಗುಮಿಗೆಯ ಹರುಷದಲಿ ಪೊಗಳಿದನಂಜನಾಸೂನು || ೫೧

ಲೇಸು ಲೇಸಲೆ ಪಾರ್ಥ ಧಣುರೆ ಸೆ |
ಬಾಸು ಕಾಣೆವು ತಾವು ಬದುಕಿ |
ದ್ದೀಸು ಕಾಲ ಮಹಾಸುಭಟರಪರಿಮಿತವುಂಟವರ್ಗೆ ||
ಈಸು ಧೃಢಮನವಿಲ್ಲ ಹರಿ ಸಂ |
ತೋಷಿಸುವ ನೀನುತ್ತರಿಪೆ ತವ |
ಭಾಷೆಯನು ಗಿರಿಜೇಶ ಬ್ರಹ್ಮರು ಮೆಚ್ಚುವರು ಎಂದ || ೫೨

ನಿಂದನೈ ಹನುಮಂತ ಸುರಪನ |
ನಂದನನ ವರಕೇತನದಲೆಲೆ |
ಕಂದ ಜನಮೇಜಯನೆ ಕೇಳ್ ಹರಿಶರಣರಾದರಿಗೆ|
ಚೆಂದವಾಗದ ಕಾರ್ಯವಾವುದು |
ನಿಂದಿರಿಸಿದನು ರಥವ ಸೂತನು |
ಕುಂದಪುಷ್ಪದ್ಯುತಿನಿಭಾಯುತ ಚತುರಹಯದೊಡನೆ || ೫೩

ಜಲ್ಲಿ ಬತ್ತೀಸಾಯುಧಂಗಳ |
ನೆಲ್ಲವನು ವರರಥದೊಳೆಯ್ದಿಸಿ |
ಫುಲ್ಲನಾಭನ ಪದಸರೋಜವ ನೆನೆದು ಪಾರ್ವತಿಯ ||
ವಲ್ಲಭನ ರಂಜಿಸುವ ಪದಯುಗ |
ಪಲ್ಲವವ ಹೃತ್ಕಮಲಮಧ್ಯದಿ |
ನಿಲ್ಲವಂತಾರಾಧಿಸುತ ಹೊಱವಂಟನೆಲೆವನೆಯ || ೫೪

ಬರುತಲಗ್ರಜನಂಘ್ರಿಯುಗ್ಮಕೆ |
ಪರಮಭಯಭಕ್ತಿಯಲಿ ಕೈಮುಗಿ |
ದರವರಿಸದಾಗರ್ಜುನನು ಸಾಷ್ಟಾಂಗಯುತನಾಗಿ ||
ಚರಣತಲಧೂಳಿಯನು ತನ್ನಯ |
ಶಿರಸಿನೊಳ್ ನೆಱೆಗೊಳಿಸಿ ವರಕ |
ಪ್ಪುರದ ವೀಳೆಯವಾಂತು ನೇಮವೆ ಧುರಕೆ ತನಗೆಂದ || ೫೫

ಅನುಜ ಬೇಱಿಕೇನುಂಟು ಹೇಳುವ |
ನೆನಹು ನಾನಾವಿಧದಿ ಹರಿಯನು |
ಮನಬರಿಸಿ ಕೈವಿಡಿದ ಖಚರನ ಸಲಹು ನೀನೆನಲು ||
ಘನವೆ ನಿಮ್ಮ ಪದಾಬ್ಜಯುಗಳದ |
ನೆನಹಿರಲು ತನಗೆನುತ ಕೈಮುಗಿ |
ದನುವರಕೆ ನಲವಿಂದ ಮಿಗೆ ಹೊಱವಂಟನಾಪಾರ್ಥ || ೫೬

ಶರಧಿಘೋಷದಿ ನೆರೆದ ಭೂಸುರ |
ವರರು ಹರಕೆಯನೀಯೆ ಫಲುಗುಣ |
ಹರುಷದೊಳ್ಕೈಮುಗಿದು ನೇಮವ ಕೊಂಡು ನಸುನಗುತ ||
ಬರುತಿರಲು ಪಾಂಚಾಲೆ ನಡೆತಂ |
ದರಿವಿದಾರನ ಸನಿಯದಲಿ ನಿಂ |
ದರಸ ಚಿತ್ತೈಸೆನ್ನ ಬಿನ್ನಪವನು ಸರಾಗದಲಿ || ೫೭

ಹಲವು ಜನ್ಮಗಲಮಿತಸುಕೃತವ |
ನಿಲುಕಡೆಯ ಭಕ್ತಿಯಲಿ ಮಾಡಿ |
ರ್ದಿಳೆಯ ಜನರಿಗೆ ಹರಿಯ ಪದದರುಶನವು ದೊರಕುವುದೆ ||
ನಳಿನನಾಭನ ಧ್ಯಾನ ದೊರಕಿದ |
ಗಳಿಗೆಯರ್ಧಕೆ ಕೋಟಿಜನ್ಮಂ |
ಗಳಲಿ ಮಾಡಿದ ಪಾಪ ಕೆಡುತಿಹುದೆಂದಳೆಂದುಮುಖಿ || ೫೮

ಆ ಸರೋಜಾಂಬಕನು ಮಾನುಷ |
ವೇಷದಲಿ ಕೃಷ್ಣಾಭಿಧಾನದಿ |
ಮೀಸಲಳಿಯದ ಮಹಿಮೆಯನು ತೋಱುತ್ತ ದುರ್ಜನರ ||
ರೋಷದಲಿ ತಱಿದುತ್ತಮರ ಸಂ |
ತೋಷದಲಿ ಸಲಹುತ್ತ ನಮ್ಮವ |
ನೀಸು ಬಗೆಯಲಿ ರಕ್ಷಿಸುತಲಿರುತಿಹನು ತಾನೆಂದ || ೫೯

ಅಂಬುಜೋದರ ಕೃಪೆಯೊಳಿಮ್ಮನು |
ಬೆಂಬಿಡದೆ ನೆರೆ ಸಲಹಿ ದುರ್ದಶೆ |
ಯೆಂಬವೆಲ್ಲವ ಪರಿಹರಿಸಿ ಕಾರುಣ್ಯಪಂಜರದಿ ||
ತುಂಬಿಕೊಂಡಿರುತಿರ್ಪ ಸ್ವಾಮಿಯು |
ನಂಬಿ ನಿಖಿಳಾಶಯಾಸ ತವಿಸದೆ |
ಇಂಬುಗೊಂಡಪಯಶವ ಹೊಱುವರೆ ಎಲೆ ಳಾರಾಣಿ || ೬೦

ಖಚರನೊರ್ವಂಗಾಗಿ ಬಾಂಧವ |
ನಿಚಯಮುಮಂ ರಣಕಿಕ್ಕಿ ರಾಜಿಪ |
ಸುಚರಿತಾನ್ವಯವಿದನು ನೀರಲಿ ನೆರಹಿಯಿಹಪರಕೆ ||
ಉಚಿತಬಾಹಿರನೆಂದು ಲೋಕವು |
ಪ್ರಚುರದಿಂ ಪೋಗಾಡಲದು ತಾ |
ನುಚಿತವೇ ಸರ್ವಜ್ಞರಲ್ಲವೆ ಎಂದಳಬ್ಜಾಕ್ಷಿ || ೬೧

ತಂದೆಯಾತನು ನಮಗೆ ಸಲಹುವ |
ಬಂಧುವಾತನು ಸ್ವಾಮಿಯಾಗೋ |
ವಿಂದನಲ್ಲದೆ ಬೇಱತೆ ತಮಗನ್ಯತ್ರ ಗತಿಯುಂಟೆ ||
ಇಂದು ನಿನ್ನಿನ ಸಖಿತನವೆ ಸೂ |
ರ್ಯೇಂದುತಾರೆಗಳೇಸು ಟನವಿಹ |
ರಂಗುಪರಿಯಂತರವು ಬಿಡದಿಹ ಬಂಧುಕೃತ್ಯವಿದು || ೬೨

ವೇಗವಂತಾಕ್ರೂರಮತವನು |
ಭೋಗಿಶಯನನ ಸಹಭವೆಯ ವಚ |
ನಾಗಮವನುಲ್ಲಂಘಿಸಿದೆ ನೀನೇಸಱವಳೆಂಮು ||
ಹೋಗಲಾಡಲುಬೇಡವಿದು ಚೆ |
ನ್ನಾಗಲಱವುದೆ ರಮಣ ಕೇಳೆಂ |
ದಾಗಳುವೆ ಪಾಂಚಾಲೆ ನುಡಿಯಲು ಪಾರ್ಥನಿಂತೆಂದ || ೬೩

ತರುಣಿ ಕೇಳಾಹರಿಯೊಡನೆ ಸಂ |
ಗರವ ಮಾಡದೆ ನೀನು ಹೇಳಿದ |
ತೆಱದಿ ಮುಱಿವೊಕ್ಕವನ ಮುಗುಳೊಪ್ಪಿಸಲು ದೇಹವಿದು ||
ತರಣಿಚಂದ್ರಮರುಳ್ಳನಿತು ದಿನ |
ವಿರಲು ಬಲ್ಲದೆ ಲೋಕವಱಯಲು |
ಸುರುಚಿರದ ಸತ್ಕೀರ್ತಿಯೊಂದೇ ನಿಲುವುದೈಸೆಂದ || ೬೪

ರಣದೊಳಸುರಾರಿಯನು ಮೆಚ್ಚಿಸಿ |
ತೃಣಯನಜಸುರಪಾಲ ದಿಕ್ಪತಿ |
ಗಣವನಹುದೆನ್ನಿಸುವೆ ಧರ್ಮಜ ವಾಯುನಂದನರ ||
ಭಣಿತಿಯಹುದೆಂಬಂತೆ ಕಾದುವೆ |
ಸೆಣಸಿನರಿಗಳ ತಱಿವೆ ಭಳಿರೆಂ |
ದೆಣಿಸೆ ರವಿಶಶಿವಂಶಜರು ಖೇಚರನ ರಕ್ಷಿಸುವೆ || ೬೫

ಎಂದು ಪಾಂಚಾಲೆಯನು ಕಳುಹಿಸಿ |
ಬಂಧುರಸ್ಯಂದನದ ಬಳಿಗೆ |
ಯ್ತಂದು ಗಯನನು ಕರೆದು ಸುರಪಾಲಕನು ತನಗಿತ್ತ ||
ಚಂದಚಂದದ ದಿವ್ಯಶರಶರ |
ವೃಂದಗಳನಿಂಬಿಡುವ ಹೊದೆಯೊಳ |
ಗಂಧವಸ ನೆಲಗೊಳಿಸಿ ಬಳಿಕಿಂತೆಂದನಾಪಾರ್ಥ || ೬೬

ಇಹುದು ನೀ ಮೂಡಿಗೆಯೊಳಸ್ತ್ರಯು |
ವಿಹಿತ ರಣ ಸುಂಗಿವನ್ನ ಬರ ಬಹು |
ಸಹಸಿಗರ ಶರಲಾಘವದೊಳಿರಿದಂಬದೊಡ್ಡಿನಲಿ ||
ಅಹುದೆನಿಸುವೆನು ನಿನ್ನ ಚಿತ್ತದಿ |
ವಹಿಸಿ ಜೊಂಜನು ನರಸಿದ್ಧನು ನಿಗೆ |
ಸಹಿಸಲಾಸನೆ ಎಂಬ ಶಂಕೆಯ ಬಿಟ್ಟು ಕಳೆಯೆಂದ || ೬೭

ಸುರಹರನ ಗೆಲುವೆನು ಪುರಾಂತಕ|
ನುರುಬಿದರೆ ಕೈಕೊಳ್ವೆನಜ ಸಂ |
ಗರವ ಬೇಡಲು ಕೊಡುವೆ ಸುರಪತಿ ಮುಖ್ಯದಿಗಧಿಪರ ||
ತರುಬುವೆನು ಪಾತಾಳದೊಳಗಿ |
ದುರ್ರಗಸಂಕುಲಗರುಡಸಿದಾ |
ದ್ಯರು ಸೆಣಸೆ ತಱಿದೊಟ್ಟುವೆನು ನೀ ನೋಡುತಿಹುದೆಂದ || ೬೮

ತರಣಿ ಶಶಿ ತಾರಾಳಿ ವಾಯುವು |
ಶರಧಿ ಗಿರಿ ದಿಗ್ದಂತಿ ಮೊದಲಾ |
ಗಿರೆ ಸಮಸ್ತ ಚರಾಚರಂಗಳಲಿರ್ಪ ಜನಜಾಲ ||
ಹರಿಗೆ ಸಹಾಯಿಗರಾಗಿ ಬರಲನಿ |
ಬರನು ನಿಮಿಷಕೆ ಗೆಲಿದು ನಿನ್ನಯ |
ಶಿರವನುಳುಹುವೆ ಚಿಂತೆ ಬೇಡಿವಕೆಂದನಾಪಾರ್ಥ || ೬೯

ಹರಿಸು ಚಕ್ರವ ಹಿಡಿಸುವೆನು ಹಲ |
ಧರನ ಹಲಮುಸಲವನು ಶಸ್ತ್ರದೊ |
ಳಿರದೆ ತಿವಲುವೆ ಹಾಲಿಸುವೆನನಿರುದ್ಧಸಂಗಜರ ||
ಧುರನಿಪುಣ ಕೃತವರ್ಮ ಸಾತ್ಯಕಿ |
ಪರಬಲಾಂತಕ ಸಾಂಬಮುಖ್ಯರ |
ನರಗುಲಿಗಳೆನಿಸುವೆನು ರಣದೊಳಗೆಂದನಾ ಪಾರ್ಥ || ೭೦
ಕಡೆಯು ಮಾತೇನಿನ್ನು ಯಾದವ |
ಪಡೆಯುನೆಲ್ಲವ ನಿಮಿಷಮಾತ್ರಕೆ |
ತೊಡೆಯು ಕಟ್ಟಲು ಸುಖಿಸಿ ನಿದ್ರಿಸುವಂತೆ ಕ್ಷಣದೊಳಗೆ ||
ಪೊಡವಿಗೊರಗಿಸಿ ಕೃಷ್ಣನೊಳು ನಿಲು |
ಕಡೆಯು ಕಾಳಿಗವಿತ್ತು ಬ್ರಹ್ಮನು |
ಮೃಡ ಸುರಾವಳಿ ಮೆಚ್ಚುವೊಲು ನಿನ್ನಸುವ ಸಲಹುವೆನು || ೭೧
ಏತಕವನೀ ನರನಪೆಂದೇ |
ಕಾತರಿಸಿ ಕಂಗೆಡದೆ ಬಾಳು ವಿ |
ಖ್ಯಾತದಾಹವವೈರಿಯು ನೀ ನೋಡುತಿಹುದೆಂದ ||
ಪ್ರೀತಿಯಿಂದವಗಳುಹಿ ಬೆನ್ನಿನೊ |
ಳಾತತೂಕ್ಷ್ಣ ಹೊಡೆಯು ಬಿಗಿದು ನಿ |
ಶಾತಶರ ಬಾಣಾಸನವ ಕೊಂಡೆಯ್ದಿದನು ರಥನ || ೭೨
ತುರಗಗಳಿಗಭಿನಮಿಸಿ ರಥವನು |
ತಿರುಗಿ ಬಲವಂದೆರಗಿ ಹನುಮನ |
ಚರಣಕಾನತನಾಗಿ ಹರಿಹರಬ್ರಹ್ಮಸುರರಿಂಗೆ ||
ಕರವ ಮುಗಿದಾಚಾರ್ಯರಗ್ರಜ |
ತರಣಿನಭಭೂಮ್ಯಾದಿಮುಖ್ಯರ |
ಪರಮಹರುಷದಿ ನೆನೆದು ನಸುನಗುತೇರಿದನು ರಥವ || ೭೩
ಜಗಜಗಿಪ ನವರತುನಕೀಲಿತ |
ದೊಗುಮಿಗೆಯು ಹರಿಸುಯುದ ಕಂಭದ |
ಲುಗಿವ ಕಾಂತಿಯು ಚಕ್ರದಚ್ಚುಗಳಿಂದ ಗೋಪುರದಿ ||
ನಿಗನಿಗನೆ ಹೊಳೆಹೊಳೆವ ಕಲಶದೊ |
ಳಗಿವ ಪಳಹದ ಘಂಟೆ ಮೊಳಗಲು |
ಸೊಗಯಿಸುವ ರಥವೇರಿದನು ಕಲಿ ಪಾರ್ಥ ಹರುಷದಲಿ || ೭೪

ರಥವನೇಱಲು ಭಟ್ಟರುಲಿಯುತ |
ಲತಿಭರದಿ ಕರವೆತ್ತಿ ಪೊಗಳ್ದತಿ |
ರಥಮಹಾರಥರರ್ಧರಥಸಮರಥರದೆಂದೆನಿಪ ||
ಚತುರರಥಿಕರ ಗಂಡ ಶಂಕರ |
ನತಿಶಯದ ಕೋದಂಡವೆತ್ತಿದ |
ವಿತತಬಲದೋರ್ದಂಡ ಬಾಳೆಂದೆನುತ ಹೊಗಳಿದರು || ೭೫

ಮೂಱುಲೋಕದ ಗಂಡ ಬಂದನು |
ಮಾರಹರಗತಿಪ್ರಿಯನು ಬಂದನು |
ವಾರಿಜಾಕ್ಷನ ಚರಣಸರಸಿಜಭೃಂಗ ತಾ ಬಂದ ||
ಧೀರರರಸನು ಬಂದ ತನ್ನನು |
ಸಾರೆ ನಂಬಿದ ಜನರ ಕಾವವು |
ದಾರಿ ಬಂದನದೆಂದು ಭಟ್ಟರು ಪೊಗಳ್ದರರ್ಜುನನ || ೭೬

ಗಂಡಗಂಡರ ಗಂಡ ಬಂದನು |
ಚಂಡರಿಪುಗಳ ಚಂಡಶಿರವನು |
ಸೆಂಡನಾಡುವಖಂಡವಿಕ್ರಮ ನರನು ಬಂದನು ಸಾರಿ ಶಾತ್ರವರ ||
ಮಂಡಲಾಧಿಪರೊಡೆಯ ಬಂದನು |
ಕಂಡು ಕಾಣೆವದೆನ್ನಲಾಗದು |
ಹಿಂಡು ವೈರಿಗಳೋಡಿ ನಿಲ್ಲದೆ ಎಂದು ಹೊಗಳಿದರು || ೭೭

ಮೊಳಗಿದುವು ಬಹುವಾದ್ಯತತಿ ಹೆ |
ಕ್ಕಳಿಸಿ ರಿಪುಬಲ ತಳಮಳಂಗೊಳ |
ಲಿಳೆ ಬಿರಿಯೆ ದಿಕ್ಕುಗಳುಲಿ ಪ್ರತಿಭಟಿಸೆ ಗಿರಿಗಳಲಿ ||
ಘುಳುಘುಳುಧ್ವನಿ ಮಿನುಗೆ ರಥವನು |
ಚಳಕದಿಂ ನಡೆಸಿದನು ಸಾರಥಿ |
ನಳಿನನಾಭನ ರಥದ ಮುಂಬಿಗೆ ಖಚರನಿಂತೆಂದ || ೭೮

ಅವಧರಿಸು ರಾಜೇಂದ್ರ ಕಮಲಜ |
ಭವರಿಗಸದಳವಾದ ಕಾರ್ಯವ |
ಭುವನಕಚ್ಚರಿಯೆಂಬೊಲೆನ್ನನು ಕರವಿಡಿದೆ ಬಳಿಕ ||
ವಿವಿಧಗತಿಯಲಿ ಬದುಕಿಸುವೆ ಇದ |
ಕವಧಿಯಿಲ್ಲೆಂಬುದನು ಬಲ್ಲೆನು |
ಸುವಿಮಲಾಸ್ಯಸರೋಜದರುಶನದಂದುಮೊದಲಾಗಿ || ೭೯

ಆದಡೆನ್ನಯ ಬಿನ್ನಪವ ಸಲಿ |
ಸೂದು ಕೇಳೈ ನೃಪವರೋತ್ತಮ |
ಮಾಧವನ ಬಲವಿಹುದು ವಿಲಯದೊಳಿದ್ದ ಶರಧಿವೊಲು ||
ಕಾದುವಡೆ ಪರಮೇಶ ಬ್ರಹ್ಮೇಂ |
ದ್ರಾದಿಗಳಿಗಸದಳವಿದಾಗಿದೆ |
ಯಾದವರೊಳಿವರಾರು ವಿವರಿಸ ಬೇಹುದೆನಗೆಂದ || ೮೦

ಈಪರಿಯಲಾಗಯನು ಪಾರ್ಥನ |
ಸೈಪಿನಿಂದಲಿ ಕೇಳಲಾತಗೆ |
ತಾಪಸಾಂತರ್ಯಾಮಿಯಹ ತಿರುವೇಂಕಟೇಶ್ವರನ ||
ಆಪನಿತು ಸೈನಿಕವನಾತನ |
ಚಾಪಳತೆಯನು ಸಾಂಬಸಾತ್ಯಕಿ |
ಗೋಪಪಡೆ ಮೊದಲಾದುವೆಲ್ಲರ ತೋಱಿದನು ಪಾರ್ಥ || ೮೧

ಅಂತು ಸಂಧಿ ೧೮ ಕ್ಕಂ ಪದ ೧೦೪೫ ಕ್ಕಂ ಮಂಗಳಂ.

## ಹತ್ತೊಂಬತ್ತನೆಯ ಸಂಧಿ

ಸೂಚನೆ|| ವಾರಿಜಾಕ್ಷನ ಬಲವ ಖಚರಗೆ |
ತೋಱಿದನು ಕಲಿಪಾರ್ಥನಾತ್ರಿಪು |
ರಾರಿ ಬ್ರಹ್ಮೇಂದ್ರಾದಿ ದಿವಿಜರು ನಲಿಯಲಭ್ರದಲಿ ||

ಎನಲು ಜನಮೇಜಯನು ಕೇಳಿದ |
ಮುನಿವರೋತ್ತಮ ಯತಿಶಿರೋಮಣಿ |
ಘನತಪಸಿಯಧಿನಾಥ ಸಿತಹಯ ಖಚರಗುಸಿರಿದುದ ||
ಎನಗೆ ವಿಸ್ತರದಿಂದ ಪೇಳೆನೆ |
ಲಸುನಯದಿ ವಿವರಿಸುವೆ ಕೇಳೈ |
ಜನಪತಿಗಳಗ್ರಣಿಯೆ ಮುಂದಣ ಕದನದಾಗಮವ || ೧

ನರನ ಬತ್ತಳಿಕೆಯಲಿ ನೆಲಸಿಹ |
ಹರಿಯು ಹಗೆ ಗಂಧರ್ವ ನೋಡೀ |
ಧರೆಯನಾಕ್ರಮಿಸಿರ್ಪ ಯಾದವಬಲಮಹಾಂಬುಧಿಯ ||
ಶಿರವ ತೂಗುತ ತನ್ನ ಮನದೊಳ |
ಗುರುವ ಭಯದಲಿ ನರನ ಕೇಳಿದ |
ಧುರಕೆ ನಿಂದಿಹ ವೀರಭಟರನು ತೋಱಬೇಕೆಂದ || ೨

ನಸು ನಗುತ ಕಲಿ ಪಾರ್ಥನಾತನ |
ಮುಸುಡನೀಕ್ಷಿಸಿ ನೋಡು ನೀನೆಲೆ |
ಯ ಸಮಬಲ ಖಚರೇಂದ್ರ ವಿವರಿಸುವೆ ಪ್ರಮೋದದೊಳು ||
ಬಿಸಜಸಂಭವ ಸುರಪ ಮನುಮುನಿ |
ವಸುಮತೀಸುರರಂತರಂಗದೊ |
ಳೆಸೆವ ಪರಮಾನಂದಮೂರ್ತಿಯು ಬಲದ ವಿಸ್ತರವ || ೩

ಗಿರಿಕುಲದ ಮಧ್ಯದಲಿ ವರ್ಧಿಪ |
ವರರಜತಗಿರಿಯಂತೆ ನಿರುಪಮ |
ಕರಿವಿಸರಮಧ್ಯದಲಿ ರಾಜಿಪ ದೇವಗಜದಂತೆ ||
ಉರುತರದ ಗಜಘಟೆಯ ಮಧ್ಯದಿ |
ಭರಿತವನು ಕಾಂತಿಯಲಿ ಬೆಳಗುತ |
ಹರನಸಮಬಲನೆನಿಸುವವ ಬಲರಾಮ ನೋಡೆಂದ || ೪

ಹಲಮುಸಲಗಳ ಧರಿಸಿಯಸಿತೋ |
ಜ್ವಲವಸನಶುಭ್ರಾಂಗದಿಂದಲಿ |
ಕೆಲಬಲದ ಸೇನೆಯನು ನೋಡುತ ರತ್ನಮಯರಥದಿ ||
ನೆಲಸಿ ಕಲ್ಪದ ಶಿವನೊಲತಿಬಲ |
ಜಲಧಿಯನು ಮುಕ್ಕುಳಿಪ ಕೋಪದಿ |
ಬಲನಿಹನು ಖಚರೇಂದ್ರ ನೋಡಗ್ರಜನು ಹರಿಗೆಂದ || ೫

ಈತನೊಡ್ಡಿನಲಿಹುದು ಘನವಿ |
ಖ್ಯಾತ ಸಮರಧುರೀಣರೆನಿಪರ |
ರಾತಿಸೇನಾರ್ಣವಬಡಬಸನ್ನಿಭಮಹಾರಥರು ||
ನೂತನಾಸ್ತ್ರಶರಾಸನಂಗಳ |
ಕೌತುಕದಿ ಕಡುಪಾಂತ ಸಮರ ಮ |
ಹೀತಳದೊಳಂಘೈಸುತಿಹುದಕ್ಷೋಣಿಬಲವೆಂದ || ೬

ಬಳಿಕಲಾತನ ಬಲಗಡೆಯಲು |
ಜ್ವಲಿತಮಣಿಮಯಮಕುಟರಶ್ಮಿಯ |
ಹೊಳಹಿನಲಿ ತುದಿವೆರಳನೇಱಿಸಿದಂಬಿನಾಯತದ ||
ಬಲುಗಣೆಯ ಬತ್ತಳಿಕೆಯಲಿ ರಣ |
ಕುಲಿವ ರಥದಶ್ವಗಳಲೊಪ್ಪುವ |
ಸುಲಲಿತಾಂಗನು ವೀರಕೃತವರ್ಮಕನು ನೋಡೆಂದ || ೭

ಅನುಜನಹ ಬಲರಾಮುಕೃಷ್ಣರಿ |
ಗಿನನಿಭದ್ಯುತಿಯಿಂದ ರಾಜಿಪ |
ಘನಗಭೀರಾಯತದ ರಣಸಾಮಗ್ರಿಯತಿಶಯವ ||
ತನಗೆ ವರ್ಣಿಸಲರಿದು ರಿಪುಕಾ |
ನನಹುತಾಶನನಿವನ ಬಳಿಯಲಿ |
ನೆನೆಯಲದೆಯಕ್ಷೋಹಿಣೀಬಲ ಖಚರ ನೋಡೆಂದ || ೮

ಅವನ ದಳದೆಡವಂಕದಲಿ ರಥ |
ನಿವಹಮಧ್ಯದಿ ಹೊಗರೊಗುವ ಮಕು |
ಟವನು ಧರಿಸಿಯೆ ವರಶರಾಸನಕಂಬ ಸಂಧಿಸುತ ||
ಶಿವಕಮಲಜಾದಿಗಳನಲ್ಲದೆ |
ಬವರದೊಳಗಿತರರನು ಗಣಿಸದ |
ಹವಣೆನಲ್ಲಿಹ ಸಾತ್ಯಕಿಯು ಖಚರೇಶ ನೋಡೆಂದ || ೯

ಹರಿಗೆ ಮೋಹದ ಮೊಮ್ಮನೀತನು |
ಸ್ಮರನ ಸುತನನಿರುದ್ಧ ವರಸೌಂ |
ದರಿಯ ಶೌರ್ಯಧುರೀಣ ಪರಬಲಕಾಲಭೈರವನು ||
ಸುರರಿಪುದ್ವಿಷನಿವನ ಬಳಿಯಲಿ |
ಧುರಧುರಂಧರರಿರ್ಪರೈ ಖಚ |
ರರ ಶಿರೋಮಣಿ ಬಳಿಕಲೊಂದಕ್ಷೋಹಿಣೀಸೇನೆ || ೧೦

ಬಾಣಜಾತಾರಮಣ ಕರ್ಕಶ |
ಬಾಣಕಾರ್ಮುಕನಿಪುಣ ಶಾತ್ರವ |
ಬಾಣಧೂಳೀಪಟಳ ಬಾಣಬಲಾದ್ರಿಕುಲಕುಲಿಶ ||
ಜಾಣನನಿಬರೊಳಿವನು ವರಗೀ |
ರ್ವಾಣರೀಡಿಲ್ಲಿವಗೆ ಮನ್ಮಥ |
ಬಾಣ ತಪ್ಪಿದಡಿವನ ಶರ ಮಿಗೆ ತಪ್ಪದಾಜಿಯಲಿ || ೧೧

ಅವನ ಬಲವಂಕದಲಿ ಶೌರ್ಯದಿ |
ಭವಸಖಂಗೆಣೆಯೆನಿಸಿ ಶಾತ್ರವ |
ನಿವಹದಬ್ಧಿಗಳೇಳನಾಪೋಶನಕೆ ಸರಿಯೆಂಬ ||
ಕವಲುಗೋಲನು ತಿರುಹುತಾಜಿಗೆ |
ಭುವನದೊಡೆಯನ ನೇಮವನು ಬೇ |
ಡುವನು ಸಾಂಬನು ಜಾಂಬವತಿಯಾತ್ಮಜನು ನೋಡೆಂದ || ೧೨

ಇವನ ಬಳಿಯಲ್ಲಿರ್ಪವರು ತ್ರೈ |
ಭುವನಕಚ್ಚರಿಯೆನಿಪ ಸುಭಟರು |
ಭವವಿರಂಚಿಸುರೇಂದ್ರರಿಂದಹುದೆನಿಸಿ ದಾನವರ ||
ನಿವಹಕೋಟಿಯ ನಿಮಿಷವರ್ಧದೊ |
ಳವನಿಗೊಱಗಿಸಿ ಮರಳ್ವ ಸಾಹಸ |
ದವರದೊಂದಕ್ಷೋಹಿಣೀಬಲ ಖಚರ ನೋಡೆಂದ || ೧೩

ಅತ್ತಲದೆ ಷೋಡಶಸಹಸ್ರದ |
ಮತ್ತಕಾಶಿನಿಯರ ತನಯರು |
ನ್ಮತ್ತಹರೆಯದ ಕುವರರಗಣಿತರೆಮ್ಮನೀಕ್ಷಿಸುತ ||
ಒತ್ತಿಕಾದುವೆನಾವನಿವರೊಳು |
ಕೃತ್ತಿವಾಸಸುರೇಂದ್ರದಿವಿಜರ |
ವೊತ್ತವಲ್ಲದೆ ಉಳಿದ ಭಟರೆಣೆಯಲ್ಲ ನೋಡೆಂದ || ೧೪

ಬಗೆವಡವರಾಜೆಯಲಿ ಸಲೆ ಮೂ |
ಜಗವನೊಂದಂಬಿನಲಿ ಮೋಹಿಪ |
ವಿಗಡನವನಚ್ಯುತನ ಪ್ರತಿಬಿಂಬವನು ತಾಳ್ದಿಹನು ||
ಜಗದ ಚೆಲುವರ ಗೆಲುವ ಸೌಂದರ |
ದೊಗುಮಿಗೆಯ ರಣದಸಮಸಾಯಕ |
ಝುಗಝುಗಿಪ ವರಮೀನಕೇತನನವನ ನೋಡೆಂದ || ೧೫

ಇವ ಕಣಾ ಹೆಮ್ಮಗನು ಲಕ್ಷ್ಮೀ |
ಧವಗೆ ತಾನೇನೆಂಬೆನೀತನ |
ತವಕದತಿಸಾಹಸವದಚ್ಚರಿ ಶಂಬರಾಸುರನ ||
ಅವಗಡದ ಸಮರದಲಿ ಕೊಂದನು |
ಭುವನಭೀಕರಶೂರನೆಮ್ಮಯ |
ಬವರ ತನಗೊರ್ವಂಗೆ ಸರಿ ಹೋಗೆಂಬ ಗರ್ವಿತನು || ೧೬

ಅತುಳವಿಕ್ರಮಶಾಲಿ ವರಪಶು |
ಪತಿಯ ಘನತಪಗೇಡಿ ಮಿಕ್ಕಿನ |
ಯತಿಮುನೀಶ್ವರ ಯೋಗಿಜನಸಂಕುಲಕೆ ಹೃಚ್ಛೂಲ ||
ರತಿಮುಖಾಂಬುಜವಿಕಸಿತಾರ್ಯಮ |
ನಿತರರಂತಿವನಲ್ಲಲೇ ಹರಿ |
ಸುತನು ಪ್ರದ್ಯುಮ್ನಾಭಿಧಾನನು ನೋಡು ನೀನೆಂದ || ೧೭

ಇವನ ಮುಂಭಾಗದಲಿ ಸೇನಾ |
ರ್ಣವವು ತಮಗೆಂದೆಂಬ ಬಿಂಕದ |
ಬವರದತಿಬಲನಾಯಕರು ತೂಗುತ್ತ ಕಯ್ಗಣೆಯ ||
ತವಕಿಸುತ ತಳ್ಳಂಕದಲಿ ನರ |
ನಿವಹವಿದಿರಲ್ಲೆಂಬ ಪಟುಭಟ |
ರವಗಡಿಸುತಕ್ಷೋಹಿಣಿಯ ಖಚರೇಂದ್ರ ನೋಡೆಂದ || ೧೮

ಅತ್ತಲೈದನೆ ಸಕಲಲೋಕವ |
ಪೆತ್ತವನು ವೈಕುಂಠಪತಿ ಸ |
ರ್ವೋತ್ತಮನು ಎನ್ನಂತರಂಗಸ್ಥಿರದಿ ನೆಲಸಿರುವ ||
ನಿತ್ಯನಿರ್ಮಲಮೂರ್ತಿ ವರಶರ |
ಣಾರ್ತಜನರಕ್ಷಕನು ಶಾತ್ರವ |
ಮತ್ತಗಜಹರಿ ಕೃಷ್ಣದೇವನ ನೋಡು ನೀನೆಂದ || ೧೯

ನಗೆಮೊಗದ ಕತ್ತುರಿಯ ತಿಲಕದ |
ಹೊಗರೊಗುವ ನವರತ್ನಮಕುಟದ |
ಬಗೆಬಗೆಯ ಚಿತ್ರದಲಿ ರಾಜಿಪ ಮಕರಕುಂಡಲದ ||
ಜಗಜಗಿಪ ವರಪೀತವಸನದ |
ನೆಗಹಿ ತೋಱುವ ಗರುಡಕೇತನ |
ದಗಡುದೈತ್ಯವಿರೋಧಿಯನು ನೋಡೆಂದನಾಪಾರ್ಥ || ೨೦

ವೃಷಭಪತಿಯುಂದದಲಿ ನೆಲಸಿಹ |
ಪಶುಪತಿಯು ತೆಂಕದಲ್ಲಿ ಹಂಸೆಯ |
ಲೆಸೆದು ರಾಜಿಪ ಸರಸಿರುಹಸಂಭವನ ಬಗೆಯಲ್ಲಿ ||
ಅಸಮಖಗಪತಿವಾಹನದಿ ರಂ |
ಜಿಸುವ ಪರಮಾನಂದಮೂರ್ತಿಯು |
ಬಿಸಜನಾಭನ ನೋಡು ಗಂಧರ್ವೇಶ ಮನ ದಣಿಯೆ || ೨೧

ವರವಿರಿಂಚಿಸುರೇಂದ್ರದಿಗುಪಾ |
ಲರುಗಳಗಣಿತಕೋಟಿ ಶತಸಾ |
ಸಿರದಿವಾಕರಚಂದ್ರಶರಧಿಗಳಿಹುವು ಶತಕೋಟಿ ||
ಪರಿಕಿಸಲ್ಕೀಹರಿಯ ರೋಮಗ |
ಳಿರುವ ಕುಳಿಯುಲಿ ಮೆಱೆವ ಲೋಕವ |
ವಿರಚಿಸುವಡೆನ್ನಳವೆ ಖಚರಾಧೀಶ ನೋಡೆಂದ || ೨೨

ಉರುತರಸ್ಮೃತಿವೇದಶಾಸ್ತ್ರದ |
ಪರಮವಿದ್ಯವನಱಿದು ಮುಗ್ಧನ |
ತೆಱದಲಿಹ ಸತ್ಪುರುಷನಂದದಿ ಸಕಲಭುವನಗಳ ||
ಧರಿಸಿ ಜಠರಾಂತರದಿ ಲೋಕದ |
ನರರ ಬಗೆಯಲಿ ನಾಟಕವ ನೆರೆ |
ಮೆಱೆವನೀಶ್ರೀಕೃಷ್ಣನೆಲೆ ಖಚರೇಶ ನೋಡೆಂದ || ೨೩
ಈತನಜಮಿಳ ವರವಿಭೀಷಣ |
ಭೂತಳಾಧಿಪನಂಬರೀಷ ಮ |
ಹಾತಿಬಲ ಪ್ರಹ್ಲಾದಮುಖ್ಯರನಂತಶರಣರನು ||
ಪ್ರೀತಿಯಲಿ ನೆರೆ ಸಲಹಿ ಘನಕರು |
ಣಾತಿಶಯದಲಿ ನಮ್ಮ ರಕ್ಷಿಪ |
ಲೀತೆಱದಿ ಕೃಷ್ಣಾಭಿಧಾನದಿ ತೋಱುತಿಹನೆಂದ || ೨೪
ಈರಮೇಶನ ಬಳಿಯಲಿಹುದು ಪು |
ರಾರಿಬ್ರಹ್ಮೇಂದ್ರಾದಿದಿವಿಜರ |
ಭಾರಿಸಮರದಿ ನಿರ್ಣಯಿಪ ಚಾತುರ್ಯವಿಕ್ರಮವು ||
ಚಾರುರತ್ನಕಿರೀಟಧರರು ವಿ |
ಶಾರದರು ಆಯುಧಸಮಗ್ರದ |
ಧೀರರೆರಡಕ್ಷೋಣಿಬಲವಿಹುದತ್ತ ನೋಡೆಂದ || ೨೫
ಎನುತಲರ್ಜುನ ಮನದೊಳಗೆ ವರ |
ವನಜನಾಭನ ದಿವ್ಯಮೂರ್ತಿಯ |
ನನುನಯದೊಳಿಂಬಿಟ್ಟು ತನುವನು ಮಱೆದು ಭಕ್ತಿಯಲಿ ||
ಮನುಮಥನ ಪಿತ ರಾಮ ಲಕ್ಷ್ಮೀ |
ಘನಕುಚದ್ವಯನ್ಯಸ್ತಹಸ್ತನೆ |
ಕನಕವಸ್ತ್ರಾಲಂಕೃತನೆ ಸಲಹೆನುತಿರ್ದನರೆನಿಮಿಷ || ೨೬
ಅಂತರಂಗದ ಭಕ್ತಿಗಾನಿಗ |
ಮಾಂತರಂಗನು ಮೆಚ್ಚಿದನು ತ |
ನ್ನಂತರಂಗದಲೆಲೆ ಮಹೀಪತಿ ಕೇಳು ವಿಸ್ಮಯವ ||
ಎಂತು ಬಣ್ಣಿಪೆ ನರನ ಭಾಗ್ಯದ |
ಸಂತಸವನಾರಱಿವರನಿಮಿಷ |
ಕಾಂತಬ್ರಹ್ಮೇಶಾದಿಗಳು ಹೊಱತಾಗಿ ಲೋಕದಲಿ || ೨೭

ತೆಱನ ನರನಿಂದಱಿತು ಲಕ್ಷ್ಮೀ |
ವರನು ಮಾನಸನಲ್ಲವೀಸಂ |
ಗರವನರ್ಜುನ ಗೆಲಿದು ಸಲಹುನನೆಂತು ತನ್ನುವನು ||
ನ್ನರೆ ವಿಚಿತ್ರವಿದೆಂದು ಮನದೊಳ |
ಗುರುತರದ ತಿರುವೇಂಕಟೇಶನ |
ಸ್ಮರಿಸಿ ಖಚರನು ಚಿಂತಿಸಲು ನಗುತಿರ್ದನಾ ಪಾರ್ಥ || ೨೮

ಅಂತು ಸಂಧಿ ೧೯ ಕ್ಕಂ ಪದ ೧೦೭೩ ಕ್ಕಂ ಮಂಗಳಂ

## ಇಪ್ಪತ್ತನೆಯ ಸಂಧಿ

ಸೂಚನೆ|| ಶರಣಜನಸುರಧೇನು ಶಾತ್ರವ |
ಗಿರಿಕುಲಿಶ ಶ್ರೀಕೃಷ್ಣ ಹಲಧರ |
ಗೊರೆದನತಿವಿಸ್ತರದಿ ಪಾರ್ಥನ ಬಲದ ಪಟುಭಟರ ||

ಭರತವಂಶಾಂಭೋಧಿವರ್ಧನ |
ಸರಸಕೈರವವಿಚಿತ್ರ ಧನಪತಿ |
ಸುರಪಹಿಮಗಿರಿಯಂತೆ ಕನಕಸುಭೋಗಧೈರ್ಯಗುಣ ||
ಭರಿತಶಾತ್ರವಮೇಘಮಾರುತ |
ಧುರವಿಜಯ ಜನಮೇಜಯಕ್ಷಿತಿ |
ವರನೆ ಕೇಳ್ಕೈ ಮುಂದಣದ್ಭುತರಸಕಥಾಗಮವ || ೧

ತುರಗಗರ್ಜನೆ ದೇವದತ್ತದ |
ಬಿರಿಸಿನಾರ್ಭಟೆ ಗಾಂಡಿವದ ದು |
ರ್ಧರಗುಣದ ರವ ಹನುಮನಬ್ಬರ ಕಲಿಧನಂಜಯನ ||
ಭರದ ಸಿಂಹಧ್ವಾನವೆಂಬಿವು |
ಸುರನರೋರಗಲೋಕಭೀಕರ |
ತರಮೆನಿಸಿತೇನೆಂಬೆನವನೀಪಾಲ ಕೇಳೆಂದ || ೨

ಆಲಿಸಿದನಬ್ಬರವನಾವನ |
ಮಾಲಿಯುಗ್ರಜನಖಿಳವಾದ್ಯದಿ |
ಘೀಳಿಡುವ ರಭಸಗಳ ರಣವಱಿತ ಭೇರಿ ಶಂಖಗಳ ||
ಮೇಲೆ ಹನುಮನ ಗರ್ಜನೆಯ ತುಱು |
ಗಾಳಿಗಳ ಹೇಷಿತರವವ ಸುರ |
ಪಾಲತನಯನ ಗಾಂಡಿವದ ದುರ್ಧರಗುಣಧ್ವನಿಯ || ೩

ತಿರುಗಿ ಕಂಡನು ರಾಮನಸತಿಪ |
ಸ್ಫುರಬಲಾಂಬುಧಿಯಾಯುತವ ಮದ |
ಕರಿಘಟಾವಳಿಯೋಡುಗಲ್ಲಿನ ತುರಗಚಯ ತೆರೆಯ ||
ವರವರೂಥವ್ರಜದ ಸುಳಿಗಳ |
ಮೆಱೆವ ಬಹಳಚ್ಛತ್ರಬುದ್ಬುದ !
ನರನಿಕಾಯದ ಜಲಚರಾಳಿಯೊಳೆಸೆವ ಪರಿಪಡಿಯ || ೪

ಖವಖವಿಸಿ ನಗುತೊಲೆದು ಮಕುಟವ |
ನಿವರ ನೋಡೈ ಕೃಷ್ಣ ಹುಲುಪಾಂ |
ಡವರಿಗೆಲ್ಲಿಂದೊದಗಿತೀಯದ್ಭುತಮಹಾಸೇನೆ ||
ಭವವಿರಂಚಿಸುರೇಂದ್ರರೀಕ್ಷಿಸ |
ಲವಗಡವು ತಾನೆನಿಸುತಿದೆ ಬಳಿ |
ಕಿವರದಾರೆಂಬುದನು ನೀ ವಿಸ್ತರಿಸಿ ಹೇಳೆಂದ || ೫

ಅವಧರಿಪುದೆಲೆ ರಾಮ ಸೇನಾ |
ರ್ಣವದ ಮಧ್ಯದೊಳಮಲಸಿತಸೈಂ |
ಧವಚತುಷ್ಟಯದಿಂದೆಸೆವ ನವರತುನಮಯರಥದಿ ||
ದಿವವ ಮುಟ್ಟುವ ರುಕ್ಮತಾಳ |
ಜ್ಝವಿಯ ಸಿಂಧದ ಸಿರಿಯುಲೆಸೆವವ |
ತಿವನ ಸಮಬಲನೆನಿಪ ಗಂಗಾಸುತನು ನೋಡೆಂದ || ೬

ಅರುಣಮಯವಾಜಿಗಳ ನಿರುಪಮ |
ತರಣಿಕಿರಣಪ್ರಭೆಯ ಮಣಿಮಯ |
ವರರಥಾಗ್ರದೊಳುಲಿವ ಹೇಮಘಟಧ್ವಜದಲೆಸೆವ ||
ಪಂಪರಿಯ ಶಸ್ತ್ರಾಸ್ತ್ರನಿಚಯವ |
ಧರಿಸಿ ಶೌರ್ಯದಿ ಮೆಱೆವ ಘನಸಂ |
ಗರಧುರೀಣನು ದ್ರೋಣನವ ಬಲರಾಮ ನೋಡೆಂದ || ೭

ಬಳಿಕಲಾತನ ಬಲಗಡೆಯುಲು |
ಜ್ಜ್ವಲಿಪ ಮಣಿಮಯರಥಕೆ ಹೂಡಿದ |
ಬಲುಜವಾಶ್ವದ ಪಂಚಮುಖಕೇತನದ ದೀಧಿತಿಯ ||
ವಿಲಸಿತಾಂಗದ ವೀರರಸ ನೆರೆ |
ತುಳುಕುತಿಹ ರಣರಂಗಧೀರನು |
ಜಲಜಶರರಿಪುರೂಪನಶ್ವತ್ಥಾಮನವನೆಂದ || ೮

ಖುರಪುಟದೊಳವನಿಯನು ಕೆದಕುತ |
ಧುರದ ವಾದ್ಯನಿನಾದಕೊಲಿದ |
ಬ್ಬರಿಸಿ ನಭಕುಪ್ಪರಿಪ ತುರಗಚತುಷ್ಟಯದಲೆಸೆವ ||
ವರರಥದೊಳಸ್ತ್ರೌಘವಗಣಿತ |
ಮೆಱೆಯೆ ಬಿಲ್ಗೊಂಡಂಬ ನೆರೆ ನಿ |
ರ್ಭರದಿ ಸಂಧಿಸುತಿಹ ಕೃಪಾಚಾರಿಯನ ನೋಡೆಂದ ||
ಮೂಡುವೆಳನೇಸಱಿನ ಕಿರಣದ |
ಝೂಡಿಗಳಿಗೆಣೆಯೆನಿಪ ರತ್ನದ |
ಗಾಡಿಕೆಯ ರಥದೊಳಗೆ ಮಂಡಿಸಿ ತರಣಿತೇಜದಲಿ ||
ರೂಢಿಸಿದ ಬಿಲುವಿದ್ಯೆಯಲಿ ಪಡಿ |
ಪಾಡು ಭಾರ್ಗವಗೆನಲು ತಮ್ಮನ |
ನೋಡುತವೆ ನಸುನಗುತಲಿಹ ಕಲಿ ಪಾರ್ಥನವನೆಂದ ||
ಇಹನವನ ರಥದೊತ್ತಿನಲಿ ಘನ |
ದಹಿಯುಕೇತನದಿಂದ ಹಾಯ್ಕುವ |
ಬಹಳ ಸೀಗುರಿಚಮರಿಗಳ ಸತ್ತಿಗೆಯ ನೆಳಲಿನಲಿ ||
ಕಹಳೆಗಳ ನಿಸ್ಸಾಳಕೋಟಿಯ |
ರಹಿ ಮೆಱೆಯೆ ನೃಪವರರ ಮಧ್ಯದಿ |
ಬಹಳಶೌರ್ಯೋರ್ಜ್ವಲಿತ ದುರ್ಯೋಧನನ ನೋಡೆಂದ ||
ಆತನೆಡಬಲವಂಕದಲಿ ಸಹ |
ಜಾತದುಶ್ಶಾಸನನು ದುರ್ಜಯ |
ನೀತ ದುಸ್ಸಹಮುಖ್ಯರಿಹರವರನುಜಶತಕದಲಿ ||
ಕಾತರಿಸುತನುವರಕೆ ಸೈನ್ಯಸ |
ಮೇತದಿಂದಗ್ರಜನ ನೇಮುವ |
ನಾತು ನಮ್ಮಯ ಬಲದ ಮೇಲುಜ್ಜ್ವಳಿಸುತಿಹರೆಂದ ||
ಬಲಗಡೆಯಲೆಸೆವವರು ನೂರ್ವರು |
ಬಲಯುತರು ಕೌರವಕುಮಾರರು |
ಲಲಿತರತ್ನಾಭರಣ ಮುತ್ತಿನ ಹಾರಗಳ ಧರಿಸಿ ||
ವಿಲಸಿತಾಂಬರ ಗಂಧ ಕತ್ತುರಿ |
ತಿಲಕಗಳನಡವಳಿಸಿ ಹಯಸಂ |
ಕುಲ ಗಜಸ್ಯಂದನದಲೆಸೆದಿಹರವರ ನೋಡೆಂದ ||

ಇವರ ಬಲವದೆ ನೋಡು ವಿಲಯದ |
ಶಿವನ ಹಣೆಗಣ್ಣುರಿಯ ಝಾಡಿಯ |
ನಿವಹಮೆನೆ ಹೊಗರೆಸೆವಡಾಯುಧಗಳ ಗಡಾವಣೆಯ ||
ಸವರಣೆಯ ಸನ್ನಹದಲತಿಬಲ |
ವವನಿಯುಗಲಕೆ ಕರಿರಥಾಶ್ವದಿ |
ವಿವರಿಸುವಡರಿದೆನಲು ಏಕಾದಶ ಮಹಾಕ್ಷೋಣಿ || ೧೪

ಕೇಳಿದಾಗಲೆ ಬಂನೊದಗಿತೀ |
ಮೂಲದೇಶಾಧೀಶನಾಥರಿ |
ಗೋಲೆಗಳ ಕಳುಹಲ್ಕೆ ತಡವಿನಿತಿಲ್ಲದತಿಭರದಿ ||
ನೀಲವಸನನೆ ಚಿತ್ತಯಿಸು ಪಾಂ |
ಚಾಲಕುಂತೀಭೋಜಮತ್ಸ್ಯರು |
ಮೇಲೆ ಬಂದರು ಬಂಧುತನದನುವಿನಲಿ ಕೇಳೆಂದ || ೧೫

ದ್ರುಪದ ದೃಷ್ಟದ್ಯುಮ್ನ ಬಳಿಕಾ |
ನೃಪರ ಸೇನಾಜಾಲ ಸೃಂಜಯ |
ನಪರಮಿತವಿಕ್ರಮ ಯುಧಾಜಿತ್ತುತ್ತಮೌಜಸರು ||
ಉಪಮಿಸಲ್ಕಳವಡದ ಮತ್ಸ್ಯಾ |
ಧಿಪರ ಸಹಿತವೆ ಬಂದಿಹರು ಬಲು |
ಶಪಥದಲಿ ಬಲ ಮೂಱುಱಕ್ಷೋಹಿಣಿಯು ಗಡಣದಲಿ || ೧೬

ಅವರ ಮೋಹರದೆಡೆಗಡೆಯುಲಿ |
ರ್ಪವರು ಕುಂತೀಭೋಜಕೇಕಯ |
ರಿವರು ಮಾತಾಮಹರು ಕುಂತಿಯ ವರಕುಮಾರರಿಗೆ ||
ಇವರ ಬಳಿಯಲಿ ವಿಲಯದಂತ್ಯದ |
ಶಿವನ ಹಣೆಗಣ್ಣುರಿಗೆ ಸಮವಹ |
ಭುವನಭೀಕರಶೂರರೆರಡಕ್ಷೋಣಿಯಿಹುದೆಂದ || ೧೭

ಬಳಿಕಲವಱತೊತ್ತಿನಲಿ ತೋಱುವ |
ಬಲುಪರಾಕ್ರಮನಿಧಿಗಳೆನಿಸುವ |
ರಿಳೆಗೆ ಪಾಂಡ್ಯಶಿಖಂಡಿ ಸೋಮಕ ಮುಖ್ಯನಾಯಕರು ||
ತಿಳಿಯಲವದಿರ ಸನಿಯದಲ್ಲ |
ಗ್ಗಳೆಯರಿಹುದಕ್ಷೋಹಿಣೀಬಲ |
ಹಲನೆ ಚಿತ್ತೈಸೆಂದು ನುಡಿದನು ನಗುತಲಸುರಾರಿ || ೧೮

ಇತ್ತ ನೋಡೆಲೆ ರಾಮ ದೈತ್ಯರ |
ನೊತ್ತ ಶಿಶುಪಾಲಾತ್ಮಜರು ಸಹಿ |
ತತ್ಯಧಿಕರಣಶೂರರೆನಿಸುವರವರಸಂಖ್ಯಾತ ||
ಹತ್ತುಗೆಗೆ ವರದೃಷ್ಟಕೇತುವ |
ರೋತ್ತಮರು ಸಹಿತವರ ಬಲ ಬಲು |
ಮೃತ್ಯುವನು ಕೈಕೊಳ್ಳದವರಕ್ಷೋಣಿಯಿಹುದೆಂದ || ೧೯

ಎಣಿಸಲದೆ ಹದಿನೆಂಟಕ್ಷೋ |
ಹಿಣಿಯು ಬಲವರ್ಜುನಗೆ ಕೇಳ್ ತತ್ |
ಕ್ಷಣವಿರದೆ ನಡೆತಂದು ಬೆರಸಿತು ಸಕಲನೃಪರೆನಲು ||
ಎಣಿಸಲೇನದು ಇನ್ನು ತೋಱ್ವೆ |
ಬಣಗು ಪಾಂಡವರೆಂಬವರ ದು |
ರ್ಗುಣವಿಭೂಷಣಮೂರ್ಖರನು ಸಾಕೆಂದನಾರಾಮ || ೨೦

ಆದಡೀಕ್ಷಿಪುದಖಿಳಸೈನ್ಯವ |
ಹೋದಧಿಯ ನಡುಗಡೆಯ ಮಂದರ |
ಭೂಧರದವೊಲ್ಗಜದಮೇಲೆಸೆಯುತ್ತ ಬಲ್ಗದೆಯ ||
ಮೋದದಿಂ ನೇವರಿಸುತಾಹವ |
ವೈದಿದೇ ತನಗೆನುತಲಿಹ ಛಲ |
ವಾದಿ ಮಾರುತನಂದನನು ಕಲಿಭೀಮನವನೆಂದ || ೨೧

ಗಿರಿಸಿಭದ ಭೇರುಂಡಪಕ್ಷಿಗೆ |
ಮೆಱೆವೆರಡು ಘನಪಕ್ಷದಂತಿರೆ |
ಮರುತಸುತನಿದ್ದೆಸೆಯಲೆಸೆವಾಮಾದ್ರಿನಂದನರು ||
ವರವರೂಥಗಳಲ್ಲಿ ಪಿಡಿದಿಹ |
ಶರಶರಾಸನ ಬತ್ತಳಿಕೆಗಳ |
ಲರಿಭಯಂಕರ ನಕುಲ ಸಹದೇವರನು ನೋಡೆಂದ || ೨೨

ಇಹರವರ ಹಿಂಭಾಗದಲಿ ರಣ |
ವಿಹಿತಶೌರ್ಯರು ಪಾಂಡುಪೌತ್ರರು|
ಮಿಹಿರತೇಜೋಮಯರು ಪರಬಲಕಾಲಭೈರವರು ||
ಮಹಿಯೊಳಗ್ಗದ ರಿಪುಕುಮಾರರ |
ಸಹಸವೆನಿಪಂಬುಧಿಯ ಸೀಂಟುವ |
ಡಹಿಕಬಡಬಾನಲರು ಪಂಚದ್ರೌಪದೀಸುತರು || ೨೩

ಬಳಿಕಲವರಾಜೆಯಲಿ ಹನುಮನ |
ಹಳವಿಗೆಯಲೆಸೆಯುತ್ತ ಪವನನ |
ಗೆಳೆಯನಿತ್ತ ಮಹಾರಥಕೆ ಘನಶುಭ್ರಹಯ ನಾಲ್ಕ ||
ಅಳವಡಿಸಿ ದೇವೇಂದ್ರ ಕೊಟ್ಟ |
ಗ್ಗಳಕಿರೀಟವ ಧರಿಸಿ ಮೆಱೆವವ |
ಛಲಯುತನು ಬಲರಿಪುವಿನಾತ್ಮಜ ಪಾರ್ಥನವನೆಂದ || ೨೪

ಹರವಿರಂಚಿಸುರೇಂದ್ರದಿಕ್ಪಾ |
ಲರು ಗಣಾಧಿಪ ವೀರಭದ್ರನು |
ಪರಕುಮಾರಸ್ವಾಮಿ ಪಾರ್ವತಿ ಮುಖ್ಯದೇವಗಣ ||
ಸುರವಸುಗಳಿತ್ತಮಲಶಸ್ತ್ರೋ |
ತ್ಕರಗಳನು ರಥದೊಳಗೆ ತುಂಬಿಸಿ |
ಪರಮಸಂತಸದಿಂದೆಸೆವನಿವ ಪಾರ್ಥ ನೋಡೆಂದ || ೨೫

ನೋಡವನ ಮೊಗಸಿರಿಯ ಶೌರ್ಯದ |
ಮೋಡಿಯನು ಹರುಷೋದ್ಗಮದಲ |
ಕ್ಕಾಡುವಂಬಕವಾರಿಧಾರೆಗಳೊಗೆಯೆ ಮನದೊಳಗೆ ||
ಖೋಡಿಯಿಲ್ಲದೆ ಗಾಂಡಿವವ ನೆರೆ |
ನೋಡಿ ಹೆದೆಯೇಱಿಸಿ ಗುಣಧ್ವನಿ |
ಮಾಡುತಿಹನಿಳೆ ಬೆದಱಲರ್ಜುನನಧಿಕಬಲಯುತನು || ೨೬

ತೃಣಕೆ ಬಗೆಯನು ಈಗ ಸಮರಾಂ |
ಗಣದೊಳೊದಗಿರುವಮಿತಸೇನೆಯು |
ನಣುವಿನಿಂದತಿಸುಲಭಮೆಂದಿಹ ತನ್ನ ಸಹಯಿಗರ ||
ಗಣಿಸನೆಮ್ಮನು ಶೌರ್ಯದಲಿ ತತ್ |
ಕ್ಷಣದೊಳಗೆ ನೆರೆ ಗೆಲಿದು ಖಚರನ |
ಮಣಿಪುರಕೆ ಮಗುಳ್ದೈದಿಸುವ ದೃಢನವನಲಿದೆಯೆಂದ || ೨೭

ಎನಲು ಕಿಡಿಕಿಡಿಯಾಗಿ ಬಲನೆಂ |
ದನು ನರಾಧಮನಿವನನೀಪರಿ |
ಘನವ ಮಾಡುವೆ ನೋಡು ಪ್ರಳಯಾನಲನ ಸಣಸಿದೊಲು ||
ತನಗೆ ಗಹನವೆ ನೋಡಲವ ತ |
ಮ್ಮನುವರವ ಗೆಲುವವನೆ ಮನದೊಳಲು |
ಕನಲಿದಡೆ ಕಲ್ಪಾಂತರುದ್ರನ ಬಗೆಯೆವಾವೆಂದ || ೨೮

ಸರಸಿಜಾಸನರುದ್ರದಿಕ್ಪಾ |
ಲರುಗಳೊಂದಾಗಿವನ ಸಹಯಕೆ |
ಬರಲಿ ನಿಮಿಷಕೆ ಗೆಲುವೆನವರನು ಬಗೆವೆನೇ ನರನ ||
ಕೊರತೆಯೊಂದಿದೆ ತನಗೆ ತಂಗೆಯು |
ಕೊರಳ ಘನಮಾಂಗಲ್ಯ ಸೂತ್ರ |
ಸ್ಮರಣೆ ಬಹುದದಱಿಂದ ಸೈರಿಸ ಬೇಹುದವಗೆಂದ || ೨೯

ಅದಱ ಮಾತೇನಂತಿರಲಿ ತೋ |
ಱದೆ ಮಹೀಶರ ಸೇನೆಯನು ನೀ |
ಮುದದಿ ಪಾರ್ಥನ ಭೀಮಯಮಳರ ಮುಖ್ಯರಾದವರ ||
ಪದುಮನಾಭನೆ ಧರ್ಮಜನದೆ |
ಲ್ಲಿದಱೊಳಗೆ ಕಾಣಿಸನು ನರನಾ |
ಸ್ಪದದಲಿಹ ಗಯನೆಲ್ಲಿ ಹೇಳೆನಗೆಂದನಾರಾಮ || ೩೦

ಅರಸನಿಹನಾನರನ ಬಲಕು |
ತ್ತರದ ಹಿಂಭಾಗದಲಿ ಭೂಸುರ |
ನರರ ಮಧ್ಯದೊಳನುಜನನುವರದಾಗುಹೋಗುಗಳ ||
ಪರಿವಿಡಿಯ ಜಯಲಾಭವಾರ್ತೆಯ |
ನರಿವನಕ ಬಳಿಕಲ್ಲಿ ದ್ರೌಪದಿ |
ವೆರಸಿ ಕಾನನಭೂಮಿಯಲಿ ಚಿಂತಿಸುತ ಮನದೊಳಗೆ || ೩೧

ಅರಿಯಿಹನು ಫಲುಗುಣನ ಬೆನ್ನಿನ |
ಮಱೆಯಲಮಳಾಸ್ತ್ರಗಳ ಧರಿಸಿಹ |
ವರನಿಷಂಗದ ಮಧ್ಯದೇಶದಿ ಬಲನೆ ಚಿತ್ರೈಸು ||
ತೆರನಿದೀಗರ್ಜುನನುಪಾಯದಿ |
ಹರಣ ತನಗಂತರಿಸುವನ್ನೆಗ |
ಮಱೆವಿನಿಂಸಲಹುವೆನು ಖಚರನನೆಂಬ ಭರದಿಂದ || ೩೨

ಈ ಪರಿಯಲಸುರಾರಿ ರಾಮಂ |
ಗಾಪರಾಕ್ರಮಪಾರ್ಥಸೇನೆಯ |
ಸೈಪಿನಿಂ ತೋಱಿಸಲು ತಲೆದೂಗುತ್ತ ಬಲರಾಮ ||
ಚಾಪವನು ಧ್ವನಿಮಾಡೆ ಕೆದಱಿತು |
ಶ್ರೀಪತಿಯ ತಿರುವೇಂಕಟನ ಬಲ |
ಭೂಪ ಜನಮೇಜಯನೆ ಮುಂದಣ ಕಥೆಯನಾಲಿಪುದು || ೩೩

ಅಂತು ಸಂಧಿ ೨೦ ಕ್ಕಂ ಪದ ೧೧೧೭ ಕ್ಕಂ ಮಂಗಳಂ.

# ಇಪ್ಪತ್ತೊಂದನೆಯ ಸಂಧಿ.

---

ಸೂಚನೆ || ಸುರನರೋರಗರದುರಲಾ ದಿ |
ಕ್ಕರಿಕಮಠರೆದೆ ಬಿದುರೆ ಮುರಶಂ |
ಹರನ ಪಾರ್ಥನ ದಳದ ಚೂಣಿಯು ಸಮರ ರಂಜಿಸಿತು ||

ಭರತಕುಲಜಾತಾವನೀಶ್ವರ |
ವರಶಿರೋಮಧ್ಯಸ್ಥಿತೋಜ್ವಲ |
ಪರಮನಾಮಕರತ್ನ ವೈರಿನೃಪಾಭ್ರಪವಮಾನ ||
ಶರಣಜನಸುರಭೂಜರಾಜಿತ |
ತರಣಿವಿಮಲಸುತೇಜಪಾಂಡವ |
ಧರಣಿಪಾತ್ಮಜತನಯ ಕೇಳ್ ಮುಂಗತೆಯ ಕೌತುಕವ || ೧
ರಾಮಕೃಷ್ಣರ ನೇಮದಲಿ ಯುಧಿ |
ರಾಮವಿಕ್ರಮದಿಂದ ಸಂಗರ |
ಕಾಮಹಾದಳ ನಡೆಯಿತೊಂದೇ ಮುಖದಲಾರ್ಭಟಿಸಿ ||
ಸಾಮಜಾಯುತಹಯರಥಂಗಳ |
ಭೀಮಪಟುತರಘನಪದಾತಿ |
ಸ್ತೋಮವಚಲಿತಶೌರ್ಯಗರ್ವೋತ್ಸವದ ಭರದಿಂದ || ೨
ಹರಿಯ ಬಲ ನಡೆತರಲು ಬಳಿಕಾ |
ಹರಿಯ ನಂದನ ತನ್ನ ಸೇನೆಗೆ |
ಕರವ ಬೀಸಲು ಹರಿಯ ಸೈನ್ಯದ ಸನ್ನಿಧಾನಕ್ಕೆ ||
ಕರಿರಥಾಶ್ವಪದಾತಿ ದೊರೆಗಳು|
ಭರದಿ ನಡೆದುದು ಶೌರ್ಯದುತ್ಸವ |
ದುರುಬಿನಲಿ ಘರ್ಜಿಸುತ ಬಹುರಣವಾದ್ಯರವ ವೊಳಗೆ || ೩
ಘನತರದ ಬಲವೆರಡು ಸಂಧಿಸಿ |
ವಿನುತರಣದಾರ್ಭಟೆಗಳಲಿ ವರ |
ಸುನಿಶಿತಾಸ್ತ್ರೌಘವನು ತೆಗೆತೆಗೆದೆಚ್ಚು ಮುಂಬರಿದು ||
ಕನಲಿ ನುಡಿಗಳಲಾಲಿ ಬೊಬ್ಬಿರಿ |
ದನುವಱಿತು ಬಿಲ್ಲಾಳು ಸಮರವ |
ನೊನರಿಸಿತು ಪಯಪಾಡುಪಂಥಗಳಲಿ ಪಚಾರಿಸುತ || ೪

ಮುಂದಕಿಕ್ಕಿದ ಹಜ್ಜೆಯನು ಮಿಗೆ |
ಹಿಂದಕಿಕ್ಕದೆ ರಿಪುಗಳಂಗವ |
ನೊಂದು ಶರದಿಂದೆಸೆಯಲುರದೊಳ್ನಾಂಟಿ ಬೆನ್ನಿನೊಳು ||
ಸಂಧಿಸಲು ರಕುತಗಳು ಜೋರಿಡೆ |
ನಿಂದು ಕಾದುವರೆರಡು ತಟ್ಟಿನ |
ಲೆಂದು ಬಿಲ್ಲಾಳೇನನುಸಿರುವೆನಸಮಸಂಗರವ ||

ಆವ ಕಡೆಯಲಿ ನೋಡೆ ಬಿಲ್ಗಳ |
ಜೇವಡೆದು ತಿರುವಿನಲಿ ಶರಗಳ |
ನೋವಿ ಕೆನ್ನೆಗೆ ಸೇದಿ ತೆಗೆತೆಗೆದೆಚ್ಚು ಮೂದಲಿಸಿ ||
ಹೇವದಲಿ ಕೆಡಹಲ್ಕೆ ಬೀಳ್ವರು |
ಸಾವಿರದಸಂಖ್ಯಾತಬಲವತಿ |
ರಾವದಲಿ ಬಳಿಕೆರಡು ತಟ್ಟಿನ ಬಿಲ್ಲಿನತಿಬಲರು || ೬

ಹರಿಗೆ ಕತ್ತಿ ಕಠಾರಿ ತೋಮರ |
ಪರಶು ಕಕ್ಕಡೆ ಶೂಲನತಿಭೀ |
ಕರದ ಮುದ್ಗರ ಭಿಂಡಿವಾಲ ಗದಾದಿ ಶಸ್ತ್ರದಲಿ ||
ವರನಿಪುಣ ಸುಭಟಾಳಿ ಕಾದಿತು |
ಕರಚರಣಕಟಿಜಾನುಜಂಘೆಗ |
ಳಿರದೆ ಕಡಿಮುಯವಾಗೆ ಬೇಸಱದುಭಯಕಟಕದಲಿ || ೭

ಸಡಿಲ ಬಿಡೆ ವಾಘೆಗಳನಾಕ್ಷಣ |
ಘುಡುಘುಡಿಪ ಹೇಷಾರವಂಗಳ |
ಲೆಡೆಯುದಿಲ್ಲೆಂದೆನಿಸಿ ಮರುತನ ವೇಗವಂ ಮೀಱಿ ||
ಪಡೆಯೊಳಾನಲು ತೇಜಿಗಳ ಕೊಂ |
ಡೆಡೆವಿಡದೆ ರೋಷದಲಿ ಹೊಕ್ಕಿಱಿ |
ದಡಿಮುಗುಚಿ ರಾವುತರ ಕೊಂದರು ರಾವ್ತಸಂದೋಹ || ೮

ಉಳಿವಡೆದು ಸಿಂಗಾಡಿಯನು ಬರೆ |
ಸೆಳೆದು ಬಾಣವ ಹೂಡಿ ಧುರಸ |
ಮ್ಮಿಳಿತದಲಿ ತೆಗೆದೆಸೆಯೆ ಬಾಯಿಲಿ ನಾಂಟಿ ನೆತ್ತಿಯಲಿ ||
ಚಳಕದಿಂದಲಿ ಹೊಱಡುತಿಹುವುದ |
ನಳವಡಿಪರಾರೆಣಿಸೆ ಲೋಕದ |
ಬಳಕೆಯಂತವರಲ್ಲ ಹರಿನರದಳದ ರಾವುತರು || ೯

ಏಱುವರು ಶತಸಾಸಿರಂಗಳ |
ವಾರುವದ ರಾವುತರು ಬಳಿಕವ |
ರಾಱಿ ಬೊಬ್ಬಿಱಿದಿದಿರಿಗೈತಹ ಹಯಕುಲಂಗಳನು ||
ರಏಱುಗಾಣಿಸುತವರ ಮೆಯ್ಯೊಳ |
ಗೂಱಿ ಶರಗಳ ಕರದ ಚಾಪವು |
ನಾರಿಗಳು ಹಱಿವಂತೆ ತೆಗೆತೆಗೆವೆಸುತಲಿಹರೆಂದ || ೧೦
ಹಯಕುಲದ ದೇಹಂಗಳಲಿ ಶರ |
ಮಯವೆನಿಸಿ ರಾವುತರ ಮೆಯ್ಯಲಿ |
ನಿಯಮಿಸಲ್ಕರಿದೆಂಬೊಲಸ್ತ್ರಾವಳಿಯ ಕುಪ್ಪಳಿಸಿ ||
ಭಯವು ಬಾರಿಸೆ ಜೋಡುಗಳ ಏ |
ಸ್ಮಯವದಾಗಲು ಕಡಿವರಾಹರಿ |
ಹಯ ಸುತನ ವಸುದೇವಪುತ್ರನ ಬಲದ ರಾವುತರು || ೧೧
ತಿರುಹಿಯಂಕುಶದಿಂದ ನೆತ್ತಿಯ |
ನಿಱಿದು ಕಾಲ್ಗಳೊಳೊತ್ತಿ ಮಿಗೆ ಹೂಂ |
ಕರಿಸಿ ಸೇನೆಗೆ ಕಏಸಿ ಒಱಿಕೈಗೆಸೆವ ಸರಪಳಿಯ ||
ತ್ವರಿತದಿಂ ತೊಡೆಹೊಕ್ಕು ಕರಿಮದ |
ಕರಿಯುಹೊಯ್ಲುಯ್ದುಬ್ಬರಿಸಿ ಮಾ |
ದರನು ಧರೆಗುರುಳಿಸಿದುವಾಕ್ಷಣ ಕೋಟಿಸಂಖ್ಯೆಯಲಿ || ೧೨
ಮರಳಿ ಮತ್ತೊಂದೆಸೆಯುಲಿಹ ಕರಿ |
ತೆರಳಿ ಸರಪಳಿಯಿಂದ ಶತಸಾ |
ಸಿರ ಭಟರನಶ್ವಗಳ ಹೊಯ್ದೊಯ್ದರಸಿ ಕೋಪದಲಿ ||
ಮೊರೆಮೊರೆದು ಹೂಂಕರಿಸೆ ಮಾವ್ತರು |
ಕರದಿ ತಟ್ಟುತ ಮಸ್ತಕಾಗ್ರವ |
ಹೊರಜೆಘಂಟಾವಳಿಯ ಸೈತಿರಿಸುತ್ತ ತಱುಬುವರು || ೧೩
ಕಾಲುಗೊಳೆಯುಲಿ ಕೊಂದುದೈದಾ |
ಱೇಳು ಲಕ್ಷವನಧಿಕದಳವನು |
ಸೀಳಿದುವು ದಂತಂಗಳಿಂದ ಸಹಸ್ರಸಂಖ್ಯೆಗಳ ||
ಬೀಳಿಚಿದುವೆರಡರ್ಬುದವನಾ |
ಧೀಳಸರಪಳಿಯಿಂದ ನಿಮಿಷಕೆ |
ಕಾಲನಾಲಯ ತುಂಬಿ ತುಳುಕಿಸಲಾಡೆ ಗಜಸಿವಹ |

ಅರೆದ ಹೂರಣದಂತೆ ಸವರಿದು |
ವೆರಡು ಕಟಕದ ದಂತಿಸೇನೆಯ |
ನುಱುಬುತಿಹ ಯಮರಾಜಕಳುಹಿದ ಚರರದೆಂಬೋಲು ||
ಮುಱಿಯ ಮಾತೇನಿನ್ನು ಮಾರಿಯ |
ಮುಱಿಗಳಂದದಿ ಕಂಡವರನುಱಿ |
ತಱುಬಿ ಕೊಲುತಿಹುವುಭಯಸೈನ್ಯದ ವೀರಸಂಘವನು || ೧೫

ಹೊಕ್ಕ ಮೈಯಲಿ ಕೋಟಿ ಸಂಖ್ಯೆಯ |
ನಿಕ್ಕುವುವು ಪಯದಳವ ಹಯಗಳ |
ನೆಕ್ಕತುಳದಲಿ ಸೀಳಿ ಬಿಸುಡುತ್ತಿಹುವು ನಾಲ್ಕೆಂಟು ||
ಲಕ್ಕಗಳ ನಭಕಿರದುರುಳ್ವುವು |
ಪಕ್ಕಘಂಟಾವಳಿಗಳಿಳೆಯೊಳು |
ಸೊಕ್ಕಿ ಸೋಲುವ ಕರಿಗಳಿದಿರಿಲಿ ನಿಲುವರಾರೆಂದ || ೧೬

ಸಿಡಿಲಿನಂತಾರ್ಭಟೆಯ ಮಿಂಚಿನ |
ಸಡಗರದವೊಲು ದಾಡೆಗಳ ರುಚಿ |
ಯಡೆಪಿಡದೆ ಸುರಿವಂದುಧಾರೆಯ ತೆಱದಿ ಬಱಿಕೈಯ ||
ಕೊಡಹೆ ಹೊಱಡುವ ವಾರಿಸಾರದಿ |
ಪೊಡವಿಗಿಳಿದುವೊ ನೀಲಮೇಘದ |
ಪಡೆಯೆನಲು ರಣರಂಗಮಧ್ಯದಿ ಮೆಱೆದುವಾನೆಗಳು || ೧೭

ಕುದುರೆಗಳ ಚಪ್ಪಂಸಿ ಗಾಳಿಯು |
ಹದನಱಿತು ಶೈಲಗಳನೀಂಟಿಸಿ |
ಅದುರಗಂತಾಧ್ವಜದ ಕಂಭವನೋಜೆಯಿಂದಿರಿಸಿ ||
ಕದನದೊಳ್ ಸ್ಯಂದನವ ಸುಳಿಸುವ |
ವಿಧವ ತೋಱಲು ಬೇಕೆನುತಲತಿ |
ಮುದದಿ ಸಾರಥಿಗಱುಹಿ ರಥಿಕರು ರಥಿಕರನು ತಾಗಿ || ೧೮

ಧನುವಿಗಂಬನು ಹೂಡಿ ರಥಿಕರ |
ತನುಗಳಿಗೆ ಸಾರಥಿಗಳಿಗೆ ಕೇ |
ತನಗಳಿಗೆ ಕುದುರೆಗಳಿಗೊಂದೇ ಬಾಱ ತಾಕುವವೊಲು ||
ಅನುವಱಿತು ತೆಗೆದೆಚ್ಚು ಕೆಡೆಯೆಂ |
ದೆನುತ ಬೊಬ್ಬಿಱಿದಾರ್ಭಟಿಸಿ ವರ |
ಸುಸಿಕ್ಷಿತಾಸ್ತ್ರದ ಮಳೆಯ ಪುನರಪಿ ಕಱಿಯುತಿಹರೆಂದ ||

ಘೂತುರೇ ರಥಿಕಾಳಿ ಸಮರ |
ಖ್ಯಾತರಹುದಹುದೆಣಿಸಿ ನೋಡಲು |
ಬೀತ ಹುಲುಸರಳುಗಳಲೇನಹುದೀಮಹಾಧುರಕೆ ||
ನೂತನದ ಮಂತ್ರಾಸ್ತ್ರಗಳ ಸ |
ತ್ವಾತಿಶಯವುಂಟಾವಡೈದಿಸಿ |
ಮಾತು ಬೇಡಿನ್ನಾವುದೆನುತೆಚ್ಚರು ಮಹಾರಥರು || ೨೦

ಶರವ ಶರದಿಂ ಕಡಿದು ರಥಿಕರ |
ಶರವಳೆಯೊಳದ್ದುತ್ತ ಸಾರಥಿ |
ವರಹಯಾವಳಿಕೇತನಂಗಳ ನಿಮಿಷಮಾತ್ರದಲಿ ||
ಧರಣಿಗೊಱಗಿಸೆ ಬಳಿಕ ಮತ್ತೊಂ |
ದುರುತರದ ರಥವೇಱಿ ಕೆಯ್ಯೊಡ |
ನಿರದೆ ರಿಪುಗಳನೆಚ್ಚು ಪುನರಪಿಯೆಸುತಲಿಹರೆಂದ || ೨೧

ಸರಳು ದೇಹವ ನಾಟಲದ ಕಿ |
ತ್ತುಗುತರಪ ಮುದ್ದುಗಳ ಹಾಯ್ಕುತ |
ತುರಗಗಳ ಚಪ್ಪರಿಸಿ ಪೀಳೆಯುಗೊಂಡು ರೋಷದಲಿ ||
ಅರರೆ ಕಾಣಲುಬಹುದೆನುತ ನಿ |
ರ್ಭರದಿ ಮಂತ್ರಿಸಿ ಬಾಣಜಾಲವ |
ನಿರದೆ ಕವಿಸುವರಂತು ತೀವ್ರದಿ ರಥಿಕಸಂದೋಹ || ೨೨

ಇನಿತು ಬಗೆಬಗೆಯಿಂದ ಸಮರವ |
ನನುಕೊಳಿಸಿ ಮಗುಳಾಚತುರ್ಬಲ |
ಕನಲಿ ತಮ್ಮೊಳು ದ್ವಂದ್ವಯುದ್ಧದಲೊದಗಿಯೊಳಹೊಕ್ಕು ||
ವಿನುತಮದಕರಿಶಯವರಸ್ಯಂ |
ದನದ ಭಟರೊಗ್ಗಿನಲಿ ಕವಿದರು |
ಸುನಿಶಿತಾಸ್ತ್ರಂಗಳಲಿ ತೆಗೆತೆಗೆದೆಸುತಲಾಕ್ಷಣದಿ || ೨೩

ಮಗುಳೆ ರಥಿಕರು ರಾವುತರು ಘನ |
ದಿಗಿಭನಿಭದಿಭದವರು ಕಾಲಾ |
ಳುಗಳ ಮೇಲಸ್ತ್ರಗಳ ನಡೆಸುತರೆಲ್ಲರೊಂದಾಗಿ ||
ತಗಳು ಮಗುಳಾಗ ಸಮಸಮರದ |
ಲಗಣಿತದ ಭಟನಿವಹವಡಗೆಡೆ |
ದುಗುಳಿಚಿದರಸುಗಳನು ಯಾದವಪಾಂಡವರ ದಳದಿ || ೨೪

ಸರಳಿನಲಿ ಕುಂತದಲಿ ಗದೆಯಲಿ |
ಪರಶುತೋಮರಭಿಂದಿವಾಳದಿ |
ಸುರಗಿಯಲಿ ಲವುಡಿಯಲಿ ಮುಸಲದಲಾಕೃಪಾಣದಲಿ ||
ಅರರೆ ಧೀರುರೆ ಪೂತು ಮಝುರೆನು |
ತರವರಿಸಲೆಚ್ಚಾಡಿದರು ಬಲ |
ವೆರಡಱಲಿ ಬೇಸಱದೆ ರಣಮಂಡಲದಿ ಸಮವಾಗಿ || ೨೫

ಬಿದ್ದುದಗಣಿತ ದೊಡ್ಡೆಯರಡರ |
ಉದ್ದುರುಟುಕರಿರಥಹಯಾವಳಿ |
ಮದ್ದನರೆದನೊ ಕಾಲನೀನೆರೆದವಿಳಬಲಕೆನಲು ||
ಹದ್ದುಕಾಗೆಯು ಬಳಗಕೀಬಲ |
ಬಿದ್ದಿನರು ತಾವಾಗರೆನೆ ಸ |
ನ್ನದ್ಧರಾದವರುರುಳಿದರು ರಣಭೂಮಿಯಗಲದಲಿ || ೨೬

ನರ ಹರಿಗು ಕರುಳೊಕ್ಕು ವೀರರ |
ಶಿರಹಡಿದು ನೆಲಕುದರಿ ತೊಡೆ ನಡು |
ಮುರಿದು ಕೈಕಾಲುಡಿದು ಘನಸಂಗ್ರಾಮಭೂಮಿಯಲಿ ||
ತುರಗರಥಸಂಕುಲವು ವರಮದ |
ಕರಿಹಯಾರೋಹಕರು ಕಾಲಾ |
ಳೊರಗಿತಾಕ್ಷಣಕುಭಯಕಟಕದೊಳರಸ ಕೇಳೆಂದ || ೨೭

ಎಲ್ಲಿ ನೋಡಲು ಸರಳು ತಾಗಿಯೆ |
ತಲ್ಲಣಿಸುವರು ಕೆಲರು ಪುನರಪಿ |
ಎಲ್ಲಿ ನೋಡಲು ಸಬಳ ಮುದ್ಗರ ಕುಂತ ಖಡ್ಗದಲಿ ||
ಝಲ್ಲಿಸುವ ಪಟ್ಟಸದಲಸಿಗದೆ |
ಯಲ್ಲಿ ತಾಗಿದ ಗಾಯದಲಿ ಬಲು |
ಬಲ್ಲಿದರು ನೆಲಕುರುಳಿ ಹೊರಳುವರುಭಯಕಟಕದಲಿ || ೨೮

ಕಾಲುಗಳ ಖಂಡಿಸಲು ಮದ ಶುಂ |
ಡಾಲಚಯವಿಳೆಗೊಱಗಿ ಬಿದ್ದುವು |
ಮೇಲೆ ರಾವುತರಡೆಗೆಡೆಯೆ ದೇಹದೊಳು ಶರ ನಾಂಟೆ ||
ಮೇಲುಮೇಲಜಗೆಡೆದುವಖಿಳ ಹ |
ಯಾಳಿ ಕೇತನ ಚಕ್ರರಥ್ಯಕ |
ರೋಳಿ ಮುರಿಯಲು ಮುಗ್ಗಿದುವು ರಥಜಾಲವವನಿಯಲಿ || ೨೯

ಕಡೆದ ಕರಿಗಳ ಪೂರ್ಣಪ್ರಾಯದಿ |
ಮಡಿದ ಹರಿಗಳ ಚೂರ್ಣಮಯಮಾ |
ಗುಡಿದ ರಥಚಕ್ರಗಳ ದೆಸೆದೆಸೆಗುರುಳ್ವ ಪಾಯ್ದಳಕೆ ||
ಎಡೆದೆಱಪ ಮಿಗೆ ಕಾಣೆನದ ಜಗ |
ದೊಡೆಯ ತಾನೇ ಬಲ್ಲನಲ್ಲದೆ |
ಪಡೆಯೆರಡರಲ್ಲಳಿದ ಸೇನೆಯನಱಿವನಾರೆಂದ || ೩೦

ಕರಿತುರಗಕಾಲಾಳ ಗಾಯದ |
ಲೊರೆವ ರುಧಿರದ ಹೊನಲು ಮೆಱೆದುದು |
ಸುರಗಿರಿಯ ತಪ್ಪಲಲಿ ಪರಿತಹ ಜಾಂಬುನದಿಯಂತೆ ||
ವರರಣಾಂಗಣ ಭೂಮಿಯಲಿ ಹೊಳೆ |
ಹರಿಯುತಿಪುದದಱೊಳಗೆ ವೀರರ |
ನೊರೆರಕುತಗಳನಱಸಿ ಕುಡಿದುವು ಶಾಕಿನೀನಿವಹ || ೩೧

ನೆಣವಸೆಯ ಪರಿತಿಂಬ ಮಾಂಸವ |
ನಣೆದು ಕರುಳೊನಮಾಲೆಗಳ ತಾ |
ವೆಣಿಸಿ ಕೊರಳಲಿ ಧರಿಸಿ ಮಜ್ಜೆಯನುಂಗಿ ತೇಗುತಲಿ ||
ಕುಣಿಕುಣಿದು ಪೊಗಳುತ್ತ ಪಾಡುತ |
ಲಣಕವಾಡುತ ತಿರುಗುತಿಹುವಾ |
ರಣದೊಳಗೆ ಭೇತಾಳಭೂತಗಳಧಿಕಸಂಭ್ರಮದಿ || ೩೨

ಬಳಿಕಲೀಪರಿಯಲ್ಲಿ ಬಲದ್ವಯ |
ಛಲಪದಂಗಳ ಸಾಹಸದಿ ಸ |
ಮ್ಮಿಳಿತದೊಡನೆಚ್ಚಾಡಿ ಕೆಡೆಯಲು ಕಂಡು ಕುರುರಾಯ ||
ಕೆಲದಲಿಹ ಗುರುಭೀಷ್ಮಗುರುಸುತ |
ರಲಘುಬಲಕೃಪಸೈಂಧವಾದ್ಯರ |
ಜಲರುಹಾಕ್ಷನ ಮೇಲೆ ಕಾದುವುದೆನುತ ನೇಮಿಸಿದ || ೩೩

ನೇಮವನು ಕೈಕೊಂಡು ವರಸಂ |
ಗ್ರಾಮಧೀರರು ತವಕದಿಂದಲಿ |
ತಾಮರಸಲೋಚನನ ಸನಿಯಕೆ ಬಂದು ಖಾತಿಯಲಿ ||
ಭೀಮವಿಕ್ರಮ ದ್ರೋಣ ಭೀಷ್ಮಸ |
ನಾಮಕರ್ಣಕಳಿಂಗಗುರುಸುತ |
ರಾ ಮಹಾಸ್ತ್ರಂಗಳಲಿ ತುಂಬಿದರಚ್ಯುತನ ರಥವ || ೩೪

ಒಂದುದೆಸೆಯಲಿ ಕರ್ಣಗುರುಸುತ |
ರೊಂದು ದೆಸೆಯಲಿ ದ್ರೋಣಭೀಷ್ಮರು |
ನಿಂದು ಮುರಹರನೊಡನೆ ಕದನವ ತೆಗೆದು ಯದುಬಲವ ||
ಹಿಂದೆ ಮುಂದೆ ಸಮೀಪದೆಡಬಲ |
ದೊಂದೆಸೆಗೆ ತೆರಪಿಲ್ಲದಂತಾ |
ನಂದದಲಿ ತರಿದೆಚ್ಚು ಕೊಂದರು ಕೋಟಿಸಂಖ್ಯೆಗಳ || ೨೫

ಇನಿತನೆಲ್ಲವ ನೋಡಿ ಕೋಪಿಸಿ |
ದನುಜಹರ ಪಟುತರದ ಶಾರ್ಙ್ಗವ |
ನನುಕೊಳಿಸಿ ವೇಗದಲಿ ಹೆದೆಯ್ಯಳಿಸಿ ಸಗ್ಗೊಂಡು ||
ಕನಲಿ ಕಿವಿವರೆ ತೆಗೆದು ಪಾರ್ಥನ |
ಮೊನೆಯ ಸೇನೆಯ ತಱುಬಲಾಹರಿ |
ಯನು ನಿಲಿಸಿ ಯಾದವರ ರಥಿಕರು ನಿಂದರಿದಿರಾಗಿ || ೨೬

ಗುರುಸುತನೊಳಾಸಾಂಬ ಹಲಧರ |
ಸುರನದೀನಂದನನ ಸಾತ್ಯಕಿ |
ಗುರುವಿನೊಳ್ ಕೃತವರ್ಮ ಕೃಪನೊಡನರ್ಕಸಂಭವನು ||
ತಱುಬಿದನು ಮನಸಿಜನ ಸೈಂಧವ |
ದುರುಳ ಸೌಬಲರೊಡನೆ ಹರಿಮೊ |
ಮ್ಮರು ಸೆಣಸಿ ಹೊಯ್ದಾಡಿದರು ತಮತಮಗೆ ತವಕದಲಿ || ೨೭

ಅತ್ತಲಸುರಾರಾತಿ ಭೀಮನ |
ನೊತ್ತಿ ಒರೆ ಪವಮಾನಸುತ ಗದೆ |
ಯೆತ್ತಿ ಹರಿಯಿದಿರಿನಲಿ ನಡೆತಂದುರುಬಲಾಕ್ಷ್ಣಿಕೆ ||
ಒತ್ತರಿಸಿ ಭೋಜಾಂಧಶರೆದು |
ವೊತ್ತವನಿಲಜನೊಡನೆ ಮಿಗೆ ಧೃತ |
ವೆತ್ತು ಕಾದಿದರಖಿಳಶಸ್ತ್ರದಲಮರರಹುದೆನಲು || ೨೮

ಬಳಿಕ ಮುರರಿಪು ವಿಲಯರುದ್ರನ |
ಮುಳಿಸಿನಲಿ ಪಾಂಚಾಲ ಮತ್ಸ್ಯರ |
ಲಳವಿಗೊಡುತ್ತೈತಂದ ಸಹದೇವಕನ ನಕುಲನನು ||
ನೆಲೆಗೆಡಿಸಿ ಸಾರಥಿರಥಾಶ್ವಂ |
ಗಳನು ಬಳಿಕೈಯಲ್ಕೆ ಪುನರಪಿ |
ಬಲುರಥಂಗಳೊಳಶ್ವಸಾರಥಿವೆರಸಿ ಸೂಕಿದರು || ೨೯

ಏನ ಹೇಳುವೆನರಸ ಕೌರವ |
ಮಾನವೇಂದ್ರನ ಬಲದ ಪೌರುಷ |
ದಾನಿಕೆಯ ಹರಿಬಲದ ವೀರರ ಸಾಹಸವ ನಿಲಿಸಿ ||
ಭೂನಭೋಂತರ ತುಂಬೆ ಶರಸಂ |
ಧಾನದಲಿ ಕೆಡೆಯೆಚ್ಚು ಹಯರಥ |
ದಾನಮಾತಂಗಗಳ ಹುಡಿಹುಡಿಮಾಡಿದರು ಬಡದೆ || ೪೦

ಒತ್ತಿ ಬರಲಸುರಾರಿ ಸಕಲಭ |
ಟೋತ್ತಮರ ನಿಮಿಷಾರ್ಧದಲಿ ಬಲ |
ವೆತ್ತಲುಱುಬದಡತ್ತ ಬೆಂಬಿಡದಾಳನೆವರಿವರಿದು ||
ಮಿತ್ತುವೊಗದೆಱಿದಂತೆ ಕೊಲುತಿಹ |
ಬಿತ್ತರದಲೆಲೆ ಭೂಪ ವರಪುರು |
ಷೋತ್ತಮನ ಸಾಹಸವ ವರ್ಣಿಸಲಲಂದು ತನಗೆಂದ || ೪೧

ಮೂಱು ಶ್ರೀಪರ ರಿಪುಬಲವ ಹದಿ |
ನಾಱು ಕೋಟಿಯು ರಥಚಯವನಿ |
ನ್ನೂಱುಲಕ್ಷವ ಗಜಘಟಾಳಿಯನೆಂಟುಲಕ್ಷವನು ||
ವಾರುವಂಗಳ ತಟ್ಟಿನೊಳಗಿ |
ನ್ನೂಱು ಲಕ್ಷದ ಬಲುಭಟರ ಹೊಂ |
ದೇಱು ಸಾರಥಿ ತುರಗ ಸಿಂಧಗಳುಡಿಯೆ ತೆಗೆದೆಚ್ಚು || ೪೨

ಮತ್ತೆ ಭಟರೊತ್ತರಿಸಿ ಕವಿಯಲು |
ಹತ್ತಿಸಿದನಂಬುಗಳ ಬೆಂಬಡ |
ದೆತ್ತಿದುವು ಚತುರಂಗದೊಡಲಿನ ಜೀವಮಾರುತನ ||
ಪತ್ತಿರಥಹಯಗಜಸಮೂಹದಿ |
ಸತ್ತವರನಿನಿತೆಂದು ಗಣಿಸಲು |
ಚಿತ್ರಗುಪ್ತರು ಬಲ್ಲರುಳಿದರಿಗಳವೆ ಹೇಳೆಂದ || ೪೩

ಜ್ವಲನಮುಖದೀಪ್ತಿಗೆ ಪತಂಗಾ |
ವಳಿ ಸುಳಿದು ಕೆಡುವಂತೆ ವಾರಿಧಿ |
ನಿಳಯನಸ್ತ್ರಾಗ್ನಿಪ್ರಭೆಯಲ್ಲಿ ಪಾಂಡವರ ಸೇನೆ ||
ನಿಲಲು ಬಲ್ಲದೆ ತಂಡತಂಡದಿ |
ಕೊಲುತ ಬಹ ಶರಜಾಲಕವನೀ |
ತಳದ ಮೇಲೊಱಗಿದರು ಸೀಗುತ ದೊರೆಯ ಧನಋಣವ || ೪೪

ತ್ರಿಣಯ ನೊಸಲಕ್ಷಿಯನು ತೆಱೆದನೊ |
ಮಣಿಯ ಪಟುತರವಾಯ್ತೊ ರವಿಜಗೆ |
ರಣಮುಖದೊಳಳಿವಹುದು ನಿಮಗೆಂದಜನು ಬರೆದಿರ್ದ ||
ಪಣೆಯ ಲಿಖಿತವು ತೀಱೆತೋ ರಿಪು |
ಗಣಕೆ ತಾನೆಂದೆಂಬ ತೆಱದಲಿ |
ಫಣಿಶಯನ ಕೆಡಹಿದನು ಪಾರ್ಥನ ಬಹಳಸೈನಿಕವ || ೪೫

ಹತ್ತು ಪದ ಚರರಿಂಗೆ ಹಯಕಿ |
ಪ್ಪತ್ತು ಗಜಕ್ಕೈವತ್ತು ರಥಕೞ |
ವತ್ತರೆಣಿಕೆಯಲೆಚು ಬೆಂಬಿಡದಾಸೆವರಿವರಿದು ||
ಮತ್ತೆ ರಥಿಕಗಜಾಶ್ವದವರಿಗೆ |
ಹತ್ತುಹತ್ತಂಬುಗಳನೊಡಲೊಳು |
ಹತ್ತಿಸಿದನಸುರಾರಿಯವನೀಪಾಲ ಕೇಳೆಂದ || ೪೬

ಆರು ಬಿಡಿಸುವರಿನ್ನು ಪ್ರಳಯದ |
ಭೈರವನ ಕಾಹುರವಕಾಮದ |
ನಾರಿಗಬ್ಜಭವಾದಿಗಳಿಗಸದಳದ ಕಾರ್ಯ.ಗು ||
ಭೂರಿಪಾಂಡವಸೇನೆಗೊದಗಿದ |
ಭೂರಿಕಠಿನೋಪದ್ರವಕ್ಕಂ |
ದೋರುಗುಡಿಸುತ ಭಯದಿ ಚಲಿಸುತ ಬಹಳಪರಿವಾರ || ೪೭

ಮೊರೆಯಿಡುವ ಸೇನಾಬ್ಧಿಗಭಯದ |
ಕರವ ನೀಡುತ ಕೌರವೇಂದ್ರನು |
ತಿರುಗಿ ತನ್ನತಿಬಲರ ಮುಖವನು ನೋಡಲಾಕ್ಷಣಕೆ ||
ಭರದಿ ಯಾದವವೀರರೆಲ್ಲರ |
ಮುರಿದತುಳಶೌರ್ಯದಲಿ ಮುರಸಂ |
ಹರನ ರಥವನು ಸರಳ ಸರಿವಳೆಯಿಂದ ನಾದಿದರು || ೪೮

ಬಂದರೋ ಫಲುಗುಣಗೆ ಕೌರವ |
ವೃಂದ ಸಹಯಿಗರಾಗಿ ತಮ್ಮೊಡ |
ನಿಂದು ಕದನಕೆ ಸೆಣಸಿದರೊ ಮಜಭಾಪು ತಪ್ಪೇನು ||
ಬಂಧುಗಳನುಪಚರಿಸಲೇ ಬೇ |
ಕೆಂದು ಶ್ರೀತಿರುವೇಂಕಟೇಶನು |
ನಿಂದನವಧಾನದಲಿ ಕುರುಸೇನಾಬ್ಧಿಗಿದಿರಾಗಿ || ೪೯

ಅಂತು ಸಂಧಿ ೨೧ ಕ್ಕಂ ಪದ ೧೧೫೫ ಕ್ಕಂ ಮಂಗಳಂ.

# ಇಪ್ಪತ್ತೆರಡನೆಯ ಸಂಧಿ

ಸೂಚನೆ ‖ ಧೀರ ಶೌರ್ಯೋದಾರ ಯದುಕುಲ ।
ವೀರ ಶ್ರೀಹರಿ ಕೌರವೇಂದ್ರನ ।
ಭೂರಿಬಲವನು ಜೈಸಿದನು ಸಮ್ಮೋಹನಾಸ್ತ್ರದಲಿ ‖

ರಾಜವಂಶಾಂಬೋಧಿವರ್ಧನ ।
ರಾಜ ರಿಪುಗಿರಿವಜ್ರ ನವರತಿ ।
ರಾಜನಿಭಸೌಂದರ್ಯ ಸುಮನಸರಾಜಸಮಭೋಗ ‖
ರಾಜಶಾಶಲಧೈರ್ಯ ರವಿಸಮ ।
ತೇಜ ಘನದೀನಾಮನಾಮರ ।
ಭೂಜ ಜನಮೇಜಯನೆ ಕೇಳ್ ಮುಂದಣ ಕಥಾಗಮನ ‖ ೧

ನೆರೆದು ಮುತ್ತಿದ ಕೌರವೇಂದ್ರನ ।
ಧುರಗಳೊಳಗಗಣಿತದ ದೊರೆಗಳ ।
ತರುಬಿ ಭರದಲಿ ಕಾದಿ ಬಳಿಕವರಧಿಕಶೌರ್ಯಗಳ ‖
ನೆರೆ ಗೆಲಿದು ರೋಷದಲಿ ಮಿಕ್ಕಿನ ।
ಸೊರಜುಸೇನೆಗೆ ತನ್ನ ನಿಜವೋ ।
ಹರನನೊಡ್ಡಾಗಿರಿಸಿದನು ಮುರವೈರಿಯಾಕ್ಷಣಕೆ ‖ ೨

ಬಲವ ಸೈತಿರಿಸಿದನು ತನ್ನಯ ।
ಕೆಲಬಲದಲಿಹ ಮದನ ಸಾತ್ಯಕಿ ।
ಹಲನನನಿರುದ್ಧಾದಿಗಳ ನಿಜಬಲದ ರಕ್ಷಣೆಗೆ ‖
ಜಲರುಹಾಕ್ಷನು ನಿಲಿಸಿ ತಾ ಕೊಳು ।
ಗುಳಕೆ ನಿಂದಾಗ್ರಹದಿ ಸರಳಿನ ।
ಮಳೆಯ ಕರೆಯುತ ತರುಬಿ ಬರಲಾಭೀಷ್ಮನಿದಿರಾದ ‖

ಹರಿಯು ಶರವನು ಕಡಿದು ಗಂಗಾ ।
ವರಸುತನು ಸರಳೈದರಲಿ ರಥ ।
ಹರಿಯು ಸಾರಥಿ ಚಕ್ರಗಳಿಗೆಂಟಂಬನಳವಡಿಸಿ ‖
ಹರಿಯು ಹದಿನೈದರಲಿ ಬಳಿಕವೆ ।
ವರಪತಾಕೆಯನೊಂದು ಬಾಣದಿ ।
ಮುರಿಯೆಸೆದು ಬೊಬ್ಬಿರಿದನಾಯದುಸೇನೆ ಕಳವಳಿಸೆ ‖ ೪

ವೂತು ಮಝುರೇ ಭೀಷ್ಮ ಸುಭಟ |
ವ್ರಾತದೊಳಗಗ್ಗಳೆಯನಹುದೈ |
ತಾತನಲ್ಲವೆ ಪಾಂಡುದುರ್ಯೋಧನರಿಗೇನರಿದು ||
ಈತಗಳ ಪರಿಬಕ್ಕೆ ಕುರುಸಂ |
ಜಾತಸೈನ್ಯಸಮೇತ ನಡೆತಂ |
ದೋತು ನಮ್ಮನು ಗೆಲಿದು ಹೋಗದೆ ಮಾಣೆ ದಿಟನೆಂದ || ೫

ಎಲೆ ಮುರಾಂತಕ ನಿನ್ನ ಪದಯುಗ |
ನಳಿನಕರುಣಾದೃಷ್ಟಿಯುಳ್ಳನ |
ಕಿಳಿಯೊಳಿದಿರಾರುಂಟು ನಿಮ್ಮುಪದೇಶವೆಲೆ ತನಗೆ ||
ತ್ರಿಪುಲಜರ್ುನನೊಡನೆ ಕಡುಪ |
ವ್ಮಳಿತನುತನವಾದ ದೇವನು |
ಮುಳಿದ ಕಾರಣವೆಂತೊ ನೋಡಲು ಬಂದೆನೈಸೆಂದ || ೬

ಎನುತ ಸರಳ್ಮಯುವನು ಕೃಷ್ಣನ |
ಪನಿಯುಕೆಯ್ದಿವೆನೀಗಳೆಂದೇ |
ಧನುವಿಗಪುರಿಸಿ ಬಿಡುವ ಸಮಯದೊಳಾಶರಾಸನವ ||
ಪವಣಿಸಿದ ಸರಳುಗಳ ತುತ್ತುನು |
ಅತಿನಲು ಖಂಡಿಸಿ ಯೆಂಟು ಬಾಣದಿ |
ಚಿನಕಡಿದನಾರಥವ ಹಯುಗಳ ಕೇತನಾವಳಿಯು || ೭

ಕರದ ಧನು ಶರ ರಥ ರಥಾಶ್ವಗ |
ಳುರುಳುಗಡಿಯಲು ನಗುತ ಭೀಷ್ಮಕ |
ತ್ವರಿತದಿಂ ಮತ್ತೊಂದು ಮಣಿರಥವೇರಿ ಸೂರಿಯುಲಿ ||
ವರಶರಾಸನಕಂಟ ತೊಡರಿಚಿ |
ಧಿರುರೆ ಮುರಹರ ಲೇಸು ಬಿಲ್ಲಾ |
ಳರಿಗೆ ಗುರುವಲ್ಲಾ ವಿಚಾರಿಸೆ ಹೇಳಲೇನೆಂದ || ೮

ಕರದ ಬಿಲ್ಲು ವರೂಥ ಹೋಯ್ತೆಂ |
ದಿರಲು ಬೇಡಾ ನಿಮ್ಮ ಚಿತ್ತದಿ |
ಧುರಮುಖದೊಳಾನಾವನೆಂಬುದ ಕಾಣಬಹುದೀಗ ||
ಹರಿಹರಬ್ರಹ್ಮಾಮಹೇಂದ್ರರ |
ಶಿರಕೆ ಬೆವರನು ತಹೆ ಕಣಾ ಹುಲು |
ಸುರಗಿರರ ವಿಕ್ರಮುವನಣುವಿಗೆ ಬಗೆವನಲ್ಲೆಂದ || ೯

ಅಹುದಹುದು ತಪ್ಪಲ್ಲ ನಿಮ್ಮಯ |
ಮಹಿಮೆ ಘನವೆಲೆ ಭೀಷ್ಮ ಬಲ್ಲೆವು |
ಸಹಸಿಯಹುದದಕೇನು ಭಾರ್ಗವಸಂಪ್ರದಾಯವಲ ||
ವಿಹಿತದಿಂದೆಮ್ಮೊಡನೆ ನೀ ಕಡು |
ರಹವಮಾಡುವುದುಚಿತ ಶೌರ್ಯದ |
ವಹಣಿಯೊಳಮ್ಮತುಂಟು ವಿಹಿತೋಕ್ತಿಗಳಲೇನೆಂದ || ೧೦

ಅವಧರಿಪುದಸುರಾರಿ ಹಿಂದಣ |
ಭವದಿ ಭಾರ್ಗವನಾಗಿ ತನಗತಿ |
ಧ್ರುವದ ಶರಕೌಶಲವನುಪದೇಶಿಸಿದೆ ಕೃಪೆಯಿಂದ ||
ಅವತರಿಸಿ ಕೃಷ್ಣಾವತಾರದ |
ಲವನಿಭಾರವ ಕಳೆಯಲೆಂದೇ |
ಭುವನಕಿಳಿದುದ ಬಲ್ಲೆನಿದಕನುಮಾನವೇನೆಂದ || ೧೧

ನೀವು ಹಿಂದಕೆ ತನಗೆ ಕರುಣದ |
ಲಾವ ಪರಿಯಲಿ ಕಲಿಸಿದಿರಿ ಮಗು |
ಳಾವ ವಿಧದಲಿ ತೋರ್ಪನೆಂಬುದ ಚಿತ್ತದೊಳಗಿಟ್ಟು ||
ಸಾವಧಾನದೊಳೆರಡು ಗಳಿಗೆ ಮ |
ಹಾವಿಚಿತ್ರದಿ ನೋಡ ಬೇಹುದು |
ಪಾವನನು ತಾನಹೆನು ದಿಟವೆನುತೆಚ್ಚನಾ ಭೀಷ್ಮ || ೧೨

ಹಿಂದೆ ನಾವ್ಕಲಿಸಲ್ಕೆ ಸಫಲವು |
ಬಂದುದೈ ಕೆಯ್ಯೊಡನೆ ತಾವಿ |
ನ್ನೆಂದು ಫಲವೇನದನು ಹಾವಿಗೆ ಹಾಲನೆಱೆದೊಲಿದು ||
ಛಂದದಿಂದಲೆ ಸಾಕಲದು ಖತಿ |
ಯಿಂದ ತನ್ನನೆ ಕೊಲುವ ಸಾಮ್ಯವು |
ಇಂದು ಬಂದುದು ಭೀಷ್ಮ ಕೇಳೆಂದೆಚ್ಚನಸುರಾರಿ || ೧೩

ಒಂದು ಹಾಸಿಗೆ ಭೋಜನಾದಿಗ |
ಳೊಂದು ತಳಿಗೆಯೊಳನುದಿನವು ತಾ |
ನೊಂದು ನಾನೊಂದೆನಿಸದತಿಹಿತದಿಂದ ತಂಗಿಯನು ||
ಬಂಧುಕೃತ್ಯದಿ ಕೊಟ್ಟುದಕೆ ಪ್ರತಿ |
ಯಿಂದ ತೋಱಿದ ಪಾರ್ಥ ಕೆಯ್ಯೊಡ |
ನಂದು ಜನ್ಮಾಂತರದ ಪಾತಕದ ಗಣಿಸಲೇಕೆಂದ || ೧೪

ಎನುತ ಗಂಗಾಸುತನ ಶರೆಗೆದಿಸ |
ಲನುವಱಿತದಂ ಕಡಿದು ವೇಗದಿ |
ಸುನಿಶಿತಾಸ್ತ್ರಗಳೇಳಱಿಂ ಮುರಹರನ ಹಯಕುಲವ ||
ಚಿನಗಡಿದನೆಂಟಱಲಿ ಸೂತನ |
ತನುವಿಗೊಂದನು ಕೊಟ್ಟು ಬೊಬ್ಬಿ |
ಟ್ಟನು ಧರಾತಳವದುರೆ ಯದುಬಲ ಬೆದಱಿತೆ ಕಲಿಭೀಷ್ಮ || ೧೫

ಎಡೆಬಿಡದೆ ಬಹ ಭೀಷ್ಮನಸ್ತ್ರವ |
ನಡುವೆ ಖಂಡಿಸಿ ಕೃಷ್ಣ ಜಾಷ್ನಪ |
ಪಡೆದ ಮಗಗೆಂಟುವನು ರಥಹಯಕೇತನಕೆ ನಾಲ್ಕ ||
ತಡೆಯದೈತಹ ಬಹಳಸೇನೆಗೆ |
ಕಡುಗಿ ಹವಿನಾಱಂಬ ಸಂಧಿಸಿ |
ಪೊಡವಿ ಕಂಪಿಸಿ ಗೋಳಿಡಲು ಬೊಬ್ಬಱಿದು ತೆಗೆದೆಚ್ಚ || ೧೬

ರಥಹಯಾವಳಿ ಕೆಡೆಯೆ ಸುಮುಹಾ |
ರಥನು ಹೆದಱದೆ ಕೂಡೆ ತಾ ಹೊಸ |
ರಥವ ವೇಗದಲೇಱಿ ಮುರಹರನೊಡನೆ ಕಾಳೆಗಕೆ ||
ಪೃಥಿವಿ ನೆಗ್ಗಲು ಕಪಿಸಿ ಸಮರ |
ವ್ಯಥೆಯ ನೋಡದೆ ಭೀಷ್ಮ ಒರೆ ಮುರ |
ಮಥನ ಕೆಯ್ಯೊಡನೆಚ್ಚು ಬೇಗದಿ ರಥವ ಖಂಡಿಸಿದ || ೧೭

ಒಡನೆ ಮತ್ತೊಂದತಿಶಯದ ರಥ |
ಕಡಱಿ ಬರುತಿರೆ ಮಧ್ಯಮಾರ್ಗದಿ |
ಕೆಡೆಯಲೆಚ್ಚನು ಕೃಷ್ಣನವ ಮಗುಳೊಂದು ರಥವೇಱಿ ||
ಘುಡುಘುಡಿಸುತಾರ್ಭಟಿಸಿ ಬರಲದ |
ಹುಡಿಯುಮಾಡಿದನಿಂತು ಮುರಹರ |
ಕಡಿದು ಬಿಸುಟನು ರಥಶತವನೇನೆಂಬೆನದ್ಭುತವ || ೧೮

ಎಲ್ಲಿ ತ್ರೈಮೂರ್ತಿಗಳ ರಣದಲಿ |
ಘಲ್ಲಿಸುವ ಸಾಮರ್ಥ್ಯ; ಪುನರಪಿ |
ಎಲ್ಲಿ ಸುರಗಿರರಡ್ಡವಿಸಿದರೆ ಕೆಡಹಿ ಬಳಿಕವರ ||
ಹುಲ್ಲುಕಡ್ಡಿಗೆ ಒಗೆಯುನೆಂಬೀ |
ಸಲ್ಲಲಿತದಾಳಾಪ; ಹೇಳೈ |
ಖುಲ್ಲತನ ಬೇಡೆಮ್ಮೊಡನೆ ಹೋಗೆಂದನಸುರಾರಿ || ೧೯

ಆಡಿದುದು ಹುಸಿಯಲ್ಲ ನೀ ಹೋ |
ಗಾಡಿಕೊಂಡೈ ನೂಱು ರಥವನು |
ಖೋಡಿಯಿಲ್ಲದ ಸುಭಟನಹೆ ರಣರಂಗಮಧ್ಯದಲಿ ||
ಪಾಡ ಕಾಣೆನು ನಿನಗೆ ಗರುಡಿಯ |
ಲಾಡಿದಂತಿರದಾಜಿರಂಗದ |
ಸೂಡು ತಾನದು ಬೇಱೆ ಹೋಗೆಲೆ ಭೀಷ್ಮ ಎನುತೆಚ್ಚ || ೨೦

ಆಗಲದಕೇನೆನ್ನ ಜಱೆದಪೆ |
ಹೋಗ ಬಿಡುವೆನೆ ದೇವ ಮತ್ಸ್ಯನ |
ಲಾಗಿನಲಿ ಶರಧಿಯನು ಪೊಕ್ಕಡೆ ಕೂರ್ಮರೂಪಿನಲಿ ||
ಸಾಗರದಿ ಮುಳುಗಿದಡೆ ಸೂಕರ |
ನಾಗಿ ವಿತಳವ ಹೊಗಲು ನರಹರಿ |
ಯಾಗಿ ಕಂಬದಲೊದರೆ ತಾಗದೆ ಮಾಣೆ ತಾನೆಂದ || ೨೧

ರಣಕೆ ನಿಲ್ಲದೆ ಬ್ರಹ್ಮಚರ್ಯದಿ |
ಬಣಗುದೇಶಿಗನಾಗಿ ವನದಲಿ |
ಹಣುಗಳನು ಹಂಪಲನು ಮೆಲುತವೆ ಹಾಱುವನ ತೆಱದಿ ||
ಜುಣುಗಿದರೆ ರಾಜ್ಯವನುಳಿದು ಮೃಗ |
ಗಣವ ಸೇರಲು ಬಳಿಕ ಶರಧಿಯೊ |
ಳಣಗಿ ವಾಸವ ಮಾಡಿಕೊಂಡಿರೆ ಬಿಡುವನಲ್ಲೆಂದ || ೨೨

ನಿಮಿಷ ಸೈರಿಸಿ ನೋಡುವುದು ವಿ |
ಕ್ರಮವನೆಲೆಯಸುರಾರಿ ನೀನೆಂ |
ದಮಲಪಟುಕಾರ್ಮುಕವ ಜೇವಡೆದತುಳಬಾಣವನು ||
ಕ್ರಮದಿ ಸಂಧಿಸಿ ರಥವ ಸೂತನ |
ನಮಿತವೇಗತುರಂಗಗಳ ನಾ |
ಕ್ರಮಿಸಿ ಪೊಲ್ಗುಱೆ ಮಾಡಿ ನಗುತಿಂತೆಂದನಾಭೀಷ್ಮ || ೨೩

ಮದನಪಿತ ಕಮಲಜನ ಜನಕನು |
ತ್ರಿದಶವಂದ್ಯನು ಜಗದೊಡೆಯನಂ |
ಬುದನು ಮನದಲಿ ತಿಳಿದು ಮಿಗೆ ಸೈರಿಸಿದೆನಿನ್ನೆವರ ||
ಯದುತಿಲಕ ನೋಡೆನ್ನ ಶೌರ್ಯದ |
ಹದನ ನಿನ್ನನು ಮೆಚ್ಚಿಸುವೆ ತಾ |
ಸದರನಲ್ಲೆನುತೆಚ್ಚು ಕಡಿದನು ರಥವ ಸಾರಥಿಯ || ೨೪

ಹಲಗೆ ಹತ್ತಂಗಜಗೆ ನಾಲ್ಕತಿ |
ಬಲಶತಂಗನಿರುದ್ಧ ಸಾತ್ಯಕಿ |
ಗಳಿಗೆ ಶರವೈದೈದನಾಸಾಂಬಂಗೆ ಶರ ಮೂಱು ||
ಅಳವಡಿಸಿ ಕೃತವರ್ಮಗೆಂಟನು |
ಉಳಿದ ಯಾದವಬಲಕೆ ಸಾವಿರ |
ಬಲುಸರಳ್ಗಳನೆಚ್ಚು ಮಸೆಗಾಣಿಸಿದನನಿಬರನು || ೨೫

ತರತರಿಸಿದುವು ತೇರು ಸೂತರು |
ಹೊರಳಿದರು ಮೈಮಱೆದು ಹಯ ಕಾ |
ಲ್ಗೆರೆದುವತಿಹೇಷಿತದಿ ಮದನಗೆ ಮೂರ್ಛೆಗಾಣಿಸಿತು ||
ಹರಿಯನುಜ ಸಾತ್ಯಕಿಗೆ ವರಹಲ |
ಧರಗೆ ಮಸೆಗಾಣಿಸಿತು ಸಾಂಬಗೆ |
ಹರಿಯ ವೊಮ್ಮಂಗುಳಿದ ವೀರರಿಗಱಿಕೆ ಬಡವಾಯ್ತು || ೨೬

ಕಂಡು ಕಂಸವಿರೋಧಿ ಇವನು |
ದ್ದಂಡತನವನು ಬೇಸಗೆಯ ಮಾ |
ರ್ತಂಡನಂದದಿ ಕನಲಿಯುಗ್ರಾಕಾರವಾಗುತ್ತ ||
ಚಂಡಪಟುತರಸಿಂಹರವದಲ |
ಖಂಡವಿಕ್ರಮನಿದಿರಿನಲಿ ಮುಂ |
ಕೊಂಡು ನುಡಿದನು ಮನದ ಖಾತಿಯ ಭರದ ಬಿಗುಹಿನಲಿ || ೨೭

ಕೊಡಹುವೆನು ದೇಹವನು ಶರದಲಿ, |
ಕುಡಿಸುವೆನು ರಕುತವನು ಶಾಕಿನಿ |
ವಡೆಗೆ, ಮೇಳವೆ ತನ್ನೊಡನೆ, ತಡವೇತಕೆಂದೆನುತ ||
ಘುಡುಘುಡಿಸಿ ಕೋಪದಲಿ ಪೊಗರಿನ |
ನಿಡುಸರಳ್ಗಳ ಶಾರ್ಙ್ಗಕೆಯ್ದುಸಿ |
ಫಡ ಫಡೆನುತಸುರಾರಿ ಮೂದಲಿಸಿದ ನದೀಸುತನ || ೨೮

ಎಲವೊ ಗಂಗಾತನಯ ನೀನೆ |
ನ್ನೊಳಗನಱಿಯದೆ ಸಮರಭೂಮಿಗೆ |
ಬಲುಗಣೆಯಭಟನೆಂದು ಸರಿಸದಿ ನಿಂದು ಕದನವನು ||
ಬಳಸಿದೆಯಲಾ ಲೇಸು ಸೈರಿಸು |
ತಿಳಿದು ನೀನೀ ದಿವ್ಯವಿಶಿಖವ |
ನಿಳಿಕೆಗೆಯ್ದಡೆ ಧನುವ ಹಿಡಿಯೆಂದೆನುತೆ ಹರಿಯೆಚ್ಚ || ೨೯

ಅದುಬಳಿಕ ತೀವ್ರದಲಿ ಬಂಪವ |
ನೆದೆಯ ಕೀಲಿಸೆ ನಿಲ್ಲಲಾಱದೆ |
ಯೊದೆದುಕೊಂಡಾಭೀಷ್ಮ ಮೈಮಱೆದೊಱಗೆ ಮೂರ್ಛೆಯಲಿ ||
ಹದನಱಿತು ಸಾರಥಿ ರಥಾಶ್ವನ |
ನಥಿಕತೀವ್ರದಿ ಮಾರಳ ತೆಗೆಯಲು |
ಹೆದಱಿದುದು ಕುರುರಾಜಸೇನಾಂಬೋಧಿ ಕಳವಳಿಸೆ || ೩೦

ಅನಿತಱೊಳು ಗುರುಸೂನು ಭೀಷ್ಮನ |
ತನುವಿನುರುಘಾಯವನು ಕಾಣುತ |
ವನರುಹಾಕ್ಷನ ತಡೆದು ನುಡಿಸಿದನೆಲೆ ಮುರಾಂತಕನೆ ||
ಮನವಚನಕಾಯದಲಿ ಪುನರಪಿ |
ಕನಸಿನೊಳಗಾದಡೆಯು ಪಾಂಡವ |
ಜನಪತಿಗಳೊಳ್ಸೆಣಸೆ ಜಯವೆತ್ತಣದು ನಿಮಗೆಂದ || ೩೧

ಅಹುದಹುದು ಒಳಿತೇನು ಘನತರ |
ಸಹಸಿಗಳು ಪಾಂಡವರು ವಿಗೆ ನಿ |
ರ್ವಹಿಸಿ ಬಾಳುವನಾವನವರಿದಿರಿನಲಿ ಜಗದೊಳಗೆ ||
ವಿಹಿತವಹುದಾಮೋಲೆ ಹಿತದಿಂ |
ಸಹಸಿಗಳು ನೀವಾಗಿ ಬರೆ ವಿ |
ಗ್ರಹದ ಜಯ ನಮಗೆತ್ತಣದು ಕೇಳೆಂದನಸುರಾರಿ || ೩೨

ಎನುತಲವಧಾನದಲಿ ಪಿಡಿದಪ |
ಧನುವನಿಕ್ಕಡಿಯಾಗಿ ಖಂಡಿಸಿ |
ಘನತರದ ರಥ ಸೂತ ತುರುಗಾವಳಿಯ ಚಕ್ರಗಳ ||
ಅನುವಱಿತು ವೇಗದಲಿ ತುತ್ತುಮು |
ಱಿನಲು ಕಡಿದೈದಂಬಿನಲಿ ಗುರು |
ತನಯನಂಗವನೆಚ್ಚು ಬೊಬ್ಬಿಱಿದನು ಮುರಧ್ವಂಸಿ || ೩೩

ನಗುತಲಶ್ವತ್ಥಾಮ ಕನಲಿದು |
ಮುಗುಳೆ ಹೊಸರಥವೇಱಿ ಕೇಳಿಲೆ |
ಖಗಗಮನ ತುಂತುರ್ವನಿಗೆ ವೊಗದೆಗೆವುದೇ ವಡಬ ||
ಅಗಣಿತದ ಯದುಬಲವನೆಲ್ಲವ |
ಚಿಗುಳಿದುಳಿದಾಮೋಲೆ ನಿನ್ನಯ |
ವಿಗಡಶೌರ್ಯವ ಮುಱಿಯದಾಮರಳುವೆನೆ ಎನುತೆಚ್ಚ || ೩೪

ಬಲ್ಲೆವಾವ್ ಗುರುಸೂನು ನಿಮ್ಮಯ |
ಬಲ್ಲಹಿಕೆಯನು ದ್ರುಪದಜಾತೆಯ |
ಸಲ್ಲಲಿತ ವೈವಾಹಕಾಲದಿ ಹಾಱುವನ ಧುರಕೆ ||
ನಿಲ್ಲಲೋಡಿದ ವೀರರೆಂಬುದ |
ನಿಲ್ಲಿ ಸಂಶಯವೇಕೆ ಬಱಿದೇ |
ಖುಲ್ಲತನದಿಂದೆಮ್ಮ ಕೆಣಕದೆ ಕೆಲಕೆ ಸಾರೆಂದ || ೩೫

ಶಿವಶಿವಾ ನಾವ್ ಪಾರ್ವರಾವಗ |
ಮವಗಡದ ಸಮರಂಗಕಳುಕಿಯೆ |
ಬವಣೆಗೊಂಬುದು ಸಹಜ! ನೀವ್ ಕ್ಷತ್ರಿಯರು; ಮಾಗಧನ ||
ನಿವಡಿಸಿದ ರಣದಲ್ಲಿ ನಿಲ್ಲದೆ |
ಯವನಿಯಲಿ ಚಾಶೀತಿದುರ್ಗದ |
ಗವಿಗಳೊಳ್ ಹೊಕ್ಕಡಗಿ ಜೀವಿಸಿದದಟರಹುದೆಂದ || ೩೬

ನೀರೊಳಗೆ ಮುಳುಗಿದನ ಭಯದಲಿ |
ಧಾರಿಣಿಯ ಪೊತ್ತವನ ದಾನವ |
ನಾರಯನು ಕೊಂಪಿಹುದಲ್ಲದೆ ಬಳಿಕ ಶೌರ್ಯದಲಿ ||
ಮಿಾಱಿ ತಲೆಯಿಲ್ಲದ ಕಬಂಧನ |
ಹಾಱಿಸಿದೆ ಶರದಿಂದ ಕೋತಿಯ |
ನೋರೆಯಲಿ ನಿಲಲಂಜಿ ಮೋಸದಿ ಕೊಂದ ಭಟನೆಂದ || ೩೭

ಎಂದು ಹರಿಯೆಚ್ಚಂಬ ಕಡಿಯುತ |
ಲೊಂದು ನಿಮಿಷದೊಳಾಮುರಾರಿಯ |
ನಂದಗೆಡಿಸುವೆನೆನುತಲೆರಡಂಬಿನಲಿ ತೆಗೆದೆಸೆಯೆ ||
ಬಂದ ಶರವನು ಕಡಿದು ಹರಿ ಗುರು |
ನಂದನನ ಸರ್ವಾಂಗವನು ಶರ |
ದಿಂದ ಹೂಳಿದನಧಿಕ ಚಿತ್ರದೊಳರಸ ಕೇಳೆಂದ || ೩೮

ಅದಱಿನಿಂ ಗುರುಸೂನುವಿನ ತನು |
ಗದಗದಿಸಿ ರಥಕೊಱಗೆ ಕಂಡನು |
ಕದನದಲಿ ಕಲಿ ದ್ರೋಣನಣುಗನ ಸಮರದೋಟವನು ||
ಹೃದಯ ಕಾಹೇಱಿದುದು ಕಂಗಳೊ |
ಳೊದಗಿದುದು ಕಡುಗೆಂಪು ರೋಷದ |
ಹೊದಱು ಹರಿಯಿತು ಭರದ ಬಿಗುಹಿನಲೆಯ್ದಿದನು ಹರಿಯ || ೩೯

ಇತ್ತಲಿತ್ತಲು ಕೃಷ್ಣ ನಿಲುನಿಲು |
ಮತ್ತಗಜ ಹುಲ್ಲ ಧೇನು ಭಂಡಿಯು |
ನೆತ್ತು ಹಕ್ಕಿಯು ಹಾವ ಗೆಲಿದಿಹೆನೆಂಬ ಗರ್ವವನು ||
ಮುತ್ತಯುಸನಣುಗಸನು ಸೋಲಿಸಿ |
ಕೆತ್ತುಕೊಂಡಿಹ ಸಾಹಸವ ನ |
ಮ್ಮತ್ತ ಕೈಮೋಜಿನುತ ತೆಗೆತೆಗೆದೆಚ್ಚು ಬೊಬ್ಬಿರಿದ || ೪೦

ಫೂತು ಗರುಡಿಯು ಗುರುಗಳೊಳ್ ಸ |
ತ್ವಾತಿಶಯವುಂಟೆಂಬವೆನ್ನಾಯ |
ಬೀತ ಶೌರ್ಯವನೆಣಿಸಲೇಕಾಹವಕೆ ನೆರೆ ನಿಂದು ||
ಖ್ಯಾತರಹುದೆಂಬಂತೆ ಘನದ್ಧೈ |
ರ್ಯಾತುರದೊಳೀರಣವ ಜೈಸಿಯು |
ರಾತಿಗಯನನು ಸಲಹುವುದೆ ಬಲುಹೆಂಗನಸುರಾರಿ || ೪೧

ಗರುಡಿಯುಲಿ ಶಿಷ್ಯರಿಗೆ ವಿದ್ಯವ |
ಪರುತವಿಸ ನಿಪ್ಪುಣತ್ವವಲ್ಲದೆ |
ಧುರಮುಖದಿ ನಿಂದಾರ್ಭಟಿಸುವುದು ಸದರವೆ ದ್ವಿಜರ ||
ಸರಸವಿದ್ಯವ ಬಿಟ್ಟು ಕ್ಷತ್ರಿಯ |
ರಂತೆ ? ಧುರಕಿದಿರಾಗಿ ಒಹ ನರ |
ಗುಜಿಗಳೆಂಬಂನೇನ ಮಾಡುವೆನೆನುತ ಹರಿಯೆಚ್ಚ || ೪೨

ಬಳಿಕಲಸುದಿನ ತುಱುವ ಕಾವವ |
ರಿಳೆಯೊಳತಿಬಲರಾಗಿ ವೀರರ |
ನಿಳಿಕೆಗೆಯ್ಯಲು ಬಹುದು ಗಡ ತಾವೀಗ ಜಗಕಧಿಕ ||
ಕುಲದಲುದಿಸಿದ ಪಾರ್ಶ್ವರಸ್ತ್ರೀ |
ಜ್ವಲಿತರಹುದೇನರಿದೆ ಮುರಹರ |
ತಿಳಿದುಕೊಳ್ಳದೆಯೆಮ್ಮ ಹಳಿವುದನೀತಿ ನಿನಗೆಂದ || ೪೩

ಎಂಬ ಮಾತಿನ ಹೊಱಗೊಳಗೆ ಹರಿ |
ಯಂಬ ಸಂಧಿಸಿ ದ್ರೋಣ ಪಿಡಿದಿಹ |
ಹೊಂಬರಹದಾಯತದ ಧನುವನು ಕಡಿದು ಟೆಕ್ಕೆಯವ ||
ಅಂಬರಾಗ್ರಕೆ ನೆಗೆಯಲೆಚ್ಚು ವಿ |
ಡಂಬಿಸುವ ರಥ ಕುದುರೆ ಸಾರಥಿ |
ಗಿಂಬು ತಾನಿಲ್ಲದೊಲು ಹೂಳಿದನಸ್ತ್ರಜಾಲದಲಿ || ೪೪

ಮುರನ ಗೆಲಿದಿಹೆನೆಂದು ಭುಜಬಲ |
ನರಕದೈತ್ಯನನರಿದೆನೆಂವೇ |
ದುರಳ ಸಾಲ್ವನ ಹಂಸಡಿಬಿಕರ ಕಾಲಯುವನನನು ||
ಸುರರಿಗಲಗಣಸಾದ ಕಂಸನ |
ಮುರುಳುಶಕಟ ಬಕಾಸುರಾನ್ವಯು |
ರುರುವ ಖಳರನು ತಱಿದ ಸಾಹಸವಿನಿತಲೇ ಎಂದ || ೪೫

ವನಧಿಯುಂಗಕವ ಕ್ಷಣದೊಳಾವೋ |
ಶನವ ಕೊಂಬ ಮಹಾತಿಬಲರಿಗೆ |
ಬಿನಗು ಕಾಲ್ವೊಳೆ ದಾಂಟಲಘಟಿತವಪ್ಪುದೇ ಸುರರು ||
ಮುನಿಯೆ ಖಡ್ಡಿಗೆ ತಾರದವ ತಾ |
ನೆನೆವನೇ ನೀನೆಚ್ಚ ಬಾಣವ |
ವನಜಲೋಚನ ನಗಿಸದಿರು ಹೋಱಸಾರು ಬೇಗೆಂದ || ೪೬

ಅಡಿದುದು ಪುಸಿಯಲ್ಲ ಪರಿಕಿಸಿ |
ನೋಡು ನಮ್ಮ ಚಮತ್ಕೃತಿಯನೆಸು |
ತೀಡಿರುವ ರೋಷದಲಿ ಸಾರಥಿ ಕುದುರೆ ಟೆಕ್ಕೆಯವ ||
ಜೋಡು ಸೀಸಕ ರಥವ ಹುಡಿಹುಡಿ |
ಮಾಡಿ ಹರಿಯಂಗವನು ಶರದಲಿ |
ತೋಡಿ ಬೊಬ್ಬಿಱಿದಾಱಿ ಶೌರ್ಯದಿ ಮೆಱೆದನಾದ್ರೋಣ || ೪೭

ಸರಳ ಘನತೆಗೆ ಮೆಚ್ಚಿ ಹರಿ ಪ್ರತಿ |
ಶರವ ಸಂಧಿಸಿಯೆಸೆವ ಸಮಯಕೆ |
ನೆರೆದ ಯದುಬಲವೆಲ್ಲ ದ್ರೋಣನ ಮುಸುಕಿ ಶರವಳೆಯ ||
ಕಱೆಯೆ ಘಟಸಂಭವನು ಕಾಣುತ |
ಕಿಱುನಗೆಯ ಕೇವಣಿಸಿ ಲಕ್ಷ್ಮೀ |
ವರನ ಸೇನೆಯ ಸವಱ ತೊಡಗಿದನರಸ ಕೇಳೆಂದ || ೪೮

ನೊರಜು ಪಾಳೆಯಗೂಡಿ ವೈಶ್ವಾ |
ನರನೊಡನೆ ಸೆ[illegible]ಲ್ಕೆ ಗಮಿಸಿದ |
ಪರಿಯಿದಾಯ್ತೀಯಾದವರು ನಮ್ಮೊಡನೆ ಸೆಣಸಿದುದು ||
ಉರವಣಿಸಬೇಕೆಂದು ಬಾಣವ |
ತಿರುಹಿ ಗುರು ತೆಗೆದೆಚ್ಚು ಕೆಡಹಿದ |
ನರರೆ ಯಾದವಬಲವನೆಲೆ ಜನನಾಥ ಕೇಳೆಂದ || ೪೯

ಮೂಱು ಬಾಣದಲಂಗಜನ ಹೆಱ |
ಸಾರಲೆಚ್ಚನು ಬಳಿಕ ಸಾಂಬನ |
ಸಾರಿಯೈದಂಬುಗಳ ಜೋಡಿಸಿ ಹಣೆಯನೊಡೆಯೆಚ್ಚ ||
ವೀರಸಾತ್ಯಕಿ ಭೋಜರನು ಹದಿ |
ನಾಱು ಬಾಣದೊಳಿಟ್ಟು ಹಯಕುಲ |
ವಾರಣಂಗಳನುಱುಬಿ ಕೊಂದನು ಬಾಣಸಾಸಿರದಿ || ೫೦

ಆಱು ಲಕ್ಷ ತುರಂಗಮುವ ಗಜ |
ಮೂಱು ಲಕ್ಷವ ವರರಥವನೈ |
ನೂಱು ಪದಚರರಲ್ಲಿ ಕೋಟಿಯನಗಣಿತಾಸ್ತ್ರದಲಿ ||
ಧೀರಮನ್ಮಥ ಸಾಂಬ ಸಾತ್ಯಕಿ |
ವೀರರಿನಿಬರ ಸೇನೆಯಲಿ ಬಲು |
ಶೂರರನು ಕೆಡಹಿದನು ಶೌರ್ಯದಿ ರಣದೊಳಾದ್ರೋಣ || ೫೧

ಬಳಿಕ ರಾಮನ ಸೇನೆಯಲಿ ತಾ |
ಮುಳಿದು ಕೊಂದನು ಲಕ್ಷ ಕುದುರೆಯ |
ನಳಿಸಿದನು ಹದಿನೆಂಟು ಸಾವಿರ ಮತ್ತಗಜಘಟೆಯ ||
ಇಳೆಗೊಱಗಿಸಿದನೆಂಟು ಸಾವಿರ |
ಬಲುರಥಿಕರೆಂಬವರ ಗಣನೆಗೆ |
ತಿಳಿಯೆ ಕೊಂದನು ಮೂಱು ಕೋಟಿ ಪದಾತಿಯನು ದ್ರೋಣ || ೫೨

ಹಲಧರಗೆ ನೂಱಂಬ ಸಾತ್ಯಕಿ |
ಯಳವ ಮುಱಿಯಲು ನೂಱು ಸಾಂಬನ |
ಛಳಶಿಳೀಮುಖಪಂಶತಿಯಲೈದಾಶುಗದಿ ಸ್ಮರನ ||
ಜಲರುಹಾಕ್ಷನ ವೊಮ್ಮಗೆಂಟನು |
ಕಲಿತ ಶರವಿಪ್ಪತ್ತ ಭೋಜಂ |
ಗಳುಕದೆಚ್ಚನು ದ್ರೋಣನಾಕ್ಷಣಕೊಂದು ಸೂಳಿನಲಿ || ೫೩

ಇನಿತನೆಲ್ಲವ ನೋಡಿ ಬಳಿಕವೆ |
ದನುಜಹರ ನಿಜಶಾರ್ಙ್ಗಕಂಬನು |
ಮುನಿಸಿನೊಳ್ಮಿಗೆ ಹೂಡಿ ದ್ರೋಣನ ಕರೆದು ಮೂದಲಿಸಿ ||
ಘನಪರಾಕ್ರಮ ಚಾಪವಿದ್ಯಾ |
ಮನುಮಥಾರಿಯದೆಂಬ ಬಿರುದನು |
ನಿನಗೆ ಮಾಣಿಪೆ ನೋಡೆನುತ ತೆಗೆದೆಚ್ಚ ಬೊಬ್ಬಿಱಿದ || ೫೪

ಈಸರಳ ಪರಿಹರಿಸಿಕೊಂಡಡೆ |
ನೀ ಸಮರ್ಥನು ಕೇಳಿದ್ಯೆ ತಮ |
ಗೀಶಪಥ ತಪ್ಪಿದರೆ ಶರಸನ್ಯಾಸವಹುದಿದಕೆ ||
ಮೋಸಹೋಗದೆ ನಿನಗೆ ಸಾಹಸ |
ವೇಸಿಹುದು ಸಂಘಟಿಸಿಯಿಾಕ್ಷಣ |
ಕೈಸರಲಿ ಪರಿಹರಿಸಿಕೊಳ್ಳೆಂದೆಚ್ಚನಸುರಾರಿ || ೫೫
ಹುಸಿಯು ಬಲ್ಲದೆ ಹರಿಯು ವಚನವು |
ವಿಶಿಖ ಬಳಿಕಲಮೋಘದ್ರೋಣನ |
ಮುಸುಕಿ ಕೊಂಡೆದೆಗುಚ್ಚಳಿಸೆ ಬಿಸಿರಕುತ ಹೊನಲಿಡಲು ||
ಬಸವಳಿದು ರಥದೊಳಗೆ ಕೆಡೆದನು |
ಬಿಸರುಹಾಕ್ಷನ ಕೂಡೆ ಕೊಂಬುದೆ |
ನುಸಿಗಳಿಗೆ ರಣವೆಂದು ಗುಹಿಲಿಕ್ಕಿತು ಸುರಸ್ತೋಮ || ೫೬
ಕಂಡು ಕೃಪನತಿಕೋಪದಲಿ ಮುಂ |
ಕೊಂಡು ಚಾಪವ ಮಿಡಿದು ತಾ ಕೈ |
ಕೊಂಡು ಶರವಳಿಗರೆದು ಹರಿಯುರವಣೆಯ ನಿಲಿಸುತ್ತ ||
ದಿಂಡುದರಿವೆನು ಕ್ಷಣದೊಳೆನುತವೆ |
ತಂಡತಂಡದೊಳಿಹ ಬಲವ ಕಡಿ |
ಖಂಡವನು ಮಾಡುತ್ತಲಿರ್ದನು ರಣದೊಳೆಡಪಡದೆ || ೫೭
ಎರಡು ಬಾಣದಿ ಕೃಪನ ಮರ್ಮವ |
ಮುರಿಯುಲೆಚ್ಚು ತದೀಯರಥ ಹಯ |
ವರಪತಾಕಾದಂಡವನು ನಾಲ್ಕಂಬಿನಿಂದಿಸಲು ||
ತರಹರಿಸಿಕೊಳಲಾರದಾತನು |
ಮರಳಿದನು ಕಲಿಕರ್ಣ ಕಾಣುತ |
ಸ್ಮರಪಿತನ ತಾಗಿದನು ವಾಚಿಸಿ ತನ್ನ ವಿಕ್ರಮವ || ೫೮
ಕೇಳು ಮಾಧವ ಕರ್ಣನೆಂಬನ |
ಗಾಳಿ ಸೋಂಕಿದಡಂಜಿ ಸುರದಿ |
ಕ್ಪಾಲಕರು ದೆಸೆದೆಸೆಗೆ ಹೋಗುವರು ಬರಿದೆ ನೀನೆನ್ನ ||
ಸೋಲಿಸುವೆನೆಂದೆನುತ ನಿಲುವುದು |
ಕಾಲಮಹಿಮೆಯದಲ್ಲವೇ ಭುವ |
ನಾಳಿಯೊಳ್ನಿನ್ನಂತೆ ಮರುಳರ ಕಾಣೆನೆನುತೆಚ್ಚ || ೫೯

ಜಾಣನಹೆ ಬಳಿಕೇನು ಸೂತ |
ಶ್ರೇಣಿಯಲಿ ಕುರುರಾಯ ತನ್ನಯ |
ಪ್ರಾಣ ನೀನೆಂದನುದಿನವು ಹದಿನೆಂಟು ಕೋಟಿಯನು ||
ಕೇಣವಿಲ್ಲದೆ ಕೊಟ್ಟ ವೊಡೆಯನ |
ಮಾಣದೊಪ್ಪಿಸಿ ಬಂದೆ ಖಚರಗೆ |
ಕಾಣೆ ನಿನಗೆ ಸಮಾನ ಸುಭಟರನೆನುತ ತೆಗೆದೆಚ್ಚ || ೬೦

ಜಡಧಿಶಯನನೆ ಕೇಳು ಸಮರವು |
ಕಡುಬಿನಿಟ್ಟಾಟವೆ ಮಹಾರಥ |
ರೆಡೆವಿಡದೆ ಸೈರಿಸುವರೋಡುವರೊಮ್ಮೆ ಗೆಲುತಿಹರು ||
ನೃಪಸರೋಜಭವಾಮರೇಂದ್ರರಿ |
ಗೆದರು ಬಹುದುಂಟದಕೆ ತಮ್ಮನು |
ಕೆಡನುಡಿವುದಾವಂಗ ನಿನಗೆನುತೆಚ್ಚನಾಕರ್ಣ || ೬೧

ರಣಮುಖದಿ ಹದಿನೆಂಟು ಸೂಳಲಿ |
ತ್ರಿಣಯ ಬ್ರಹ್ಮರ ಸಾಕ್ಷಿಯಲಿ ರಿಪು |
ಗಣಭಯಂಕರ ಮಾಗಧನಿಗೋಡಿದ ಮಹಾತ್ಮನೆಲೇ ||
ಬಣಗು ದಾನವರೊಡನೆ ಸಮರವ |
ಕೆಣಕಿ ಜಲಚರನರಮೃಗಂಗಳ |
ಭಣಿತೆಯಲಿ ಗೆಲಿದತುಳಬಲ ನೀನೆಂದನಾಕರ್ಣ || ೬೨

ಏನು ಪಡೆದನೊ! ಕೌರವೇಂದ್ರನ |
ನೂನಧನವನು ಕೊಟ್ಟು ಪ್ರತಿದಿನ |
ಹೀನಜಾತಿಯ ಮುಚ್ಚಿಸಿ ತನ್ನ ಸಮಾನನೆಂದೆನಿಸಿ ||
ಸಾನುರಾಗದಿ ಸಲಹಿದಕೆ, ಬಹು |
ಮಾನಭಂಗವು ಬಂದುದೈಸೆ, ನ |
ಏನನಿರ್ಮಲಕೀರ್ತಿಯುಂಟೇ ಕರ್ಣ ಹೇಳೆಂದ || ೬೩

ಹಾಲನೂಡಿಸಿದವಳ ವೊಣಗಿಪ |
ಗಾಲಿಗಳ ಮರಗಳನು ಹೋಱಿಯ |
ಲಾಲಿತದ ಧೇನುವನು ಹಾವನು ತೃಣದ ರಕ್ಕಸನ ||
ವೈಲಿಗೆಯ ತೊಳೆದವನ ಮಲ್ಲರ |
ಮೇಲು ಮನೆಗಡರಿದನ ಕೊಂದ ಏ |
ಶಾಲಸಾಹಸಿಯಹುದು ನೀನೆಲೆ ಕೃಷ್ಣ ಕೇಳೆಂದ || ೬೪

ಖಚರಗೊಪ್ಪಿಸಿ ಕೊಟ್ಟೆವೊಡೆಯನ |
ಖಚರಿಯರು ನಗುವಂತೆ ನೀನಿಂ |
ದಚಲಪಾರ್ಥನು ಗಯನ ಕೆಯ್ವಿಡಿದೆವೆಮ್ಮೊಳಾಹವಕೆ ||
ಪ್ರಚುರತನ ಮಿಗಲಖಿಳಬಾಂಧವ |
ನಿಚಯವನು ತಾ ನೆರಹಿ ನಿಂದಿಹ |
ವಚಿಸಲೇನದ ಕರ್ಣ ತುದಿಯಲಿ ಕಾಣಬಹುದೆಂದ || ೬೫

ಭರದ ಭಯದಿಂದಸುವ ಸಲಹೆನ |
ಲಿರದೆ ಮುಱಿವೊಕ್ಕವನ ಮನ್ನಿಸಿ |
ಕರವಿಡಿದು ಕೊಂಡಿರ್ಪನರ್ಜುನ ಕ್ಷಾತ್ರಧರ್ಮದಲಿ ||
ಒರೆಯಲೇತಕೆ ಶರಣಾಗತಿಕನ |
ಮುರಳಿ ಶತ್ರುವಿಗೊಪ್ಪಿಸಿದ ನರ |
ನರಕಭಾಜನನಪ್ಪನೈ ಎನುತೆಚ್ಚನಾ ಕರ್ಣ || ೬೬

ಕೇಳಿ ಕಿಡಿಕಿಡಿಮಸಗಿ ಸಮರಾ |
ಭೀಳದೈತ್ಯವಿರೋಧಿಯಿವದಿರ |
ಜಾಳುನುಡಿಗಳಲೇನು ಹುರುಳಿಲ್ಲೆನುತ ಖಾತಿಯಲಿ ||
ಹೂಳುವೆನು ಶರಮುಖದಲೆಂದಮ |
ರಾಳಿ ಹೊಗಳಲು ಭಾನುತನಯನ |
ಮೇಲೆ ನಿಶಿತಾಸ್ತ್ರಗಳ ಮಳೆಯನು ಕಱೆದು ಬೊಬ್ಬಿಱಿದ || ೬೭

ಉರುತರಾಂಕುಶದಿಂದಲಿಱಿದಡೆ |
ಮರಳದಿಹ ಮದದಂತಿ ಹುಲುಗುಂ |
ಗುರುಗಳೊಱಲು ಕೆರಳಬಲ್ಲುದೆ ಕೃಷ್ಣ ನೀನಿಸುವ ||
ಕಿಱುಸರಳ ಹೊಱಹೊಱಗೆ ತಾ ಮಡ |
ಮುರಿಯಲರಿವೆನೆ ಬಱಿದೆ ನಗಿಸದೆ |
ವರಮಹಾಮಂತ್ರಾಸ್ತ್ರವುಳ್ಳಡೆ ಹೂಡು ಬೇಗೆಂದ || ೬೮

ಗಿಡವ ಕೀಳ್ವುದಕೇಕೆ ಸಾಣೆಯು |
ಹಿಡಿದ ಕೊಡಲಿ ನರಾಧಮನೆ ನಿ |
ನ್ನಡಗ ಬಡಿಸುವಡೇಳೆ ವರಮಂತ್ರಾಸ್ತ್ರಚಯವೆನುತ ||
ತುಡುಕಿ ಕೆಂಗಱಿಗೋಲ ಶಾರ್ಙ್ಗಕೆ |
ತೊಡಿಸಿಯಾಕರ್ಣಾಂತಕೆಯ್ದಿಸಿ |
ಫಡಯೆನುತ ತೆಗೆದೆಚ್ಚು ಬೊಬ್ಬಿಱಿದನು ಮುರಧ್ವಂಸಿ || ೬೯

ಉರದಿ ನೆಟ್ಟಂಬುಗಳು ಬೆನ್ನಲಿ |
ಹೊಱಟು ಭೂಮಿಗೆ ಕೀಲ ಕೊಟ್ಟುವು |
ನೊಱೆ ರಕುತವವಯವದೊಳೊರೆಯಲು ಕರ್ಣ ಮೈಮಱೆಯೆ ||
ಅಱಿತು ಸಾರಥಿ ಗಿಂಡಿಯುದಕದ |
ಲೊಱೆವ ರಕುತವ ತೊಳೆದು ಗಾಯಕೆ |
ಭರದಿ ಮದ್ದನು ಹಾಯ್ಕಿ ಕವಳವನಿತ್ತನೊಡೆಯಂಗೆ || ೭೦

ತರಹರಿಸಿ ಕಣ್ದೆಱೆದು ನರಕ |
ಪ್ಪುರದ ವೀಳೆಯಗೊಂಡು ಸಡಿಲಿದ |
ಶರಗಳನು ಸಂವರಿಸಿ ಕೊಂಡೆದ್ದುಗ್ರಕೋಪದಲಿ ||
ಅಱಿವೆನಿನ್ನರಗಳಿಗೆಮಾತ್ರಕೆ |
ಕಱುವ ಕಾವನ ಶಕ್ತಿಯನು ಬಳಿ |
ಕೊಱೆಯಲೇಕೆನುತೆಂಟು ಬಾಣವ ಹೂಡಿದನು ಕರ್ಣ || ೭೧

ಮತ್ತೆ ರಥವನು ನಾಲ್ಕು ಬಾಣದಿ |
ಹತ್ತಱಿಂದಶ್ವಗಳ ಬಳಿಕಿ |
ಪ್ಪತ್ತು ಮಾರ್ಗಣದಿಂದ ರಥದಚ್ಚುಗಳ ನೊಗ ಸಹಿತ ||
ಬಿತ್ತರದ ಸಾರಥಿಯನೆಂಟಱ |
ಲೆತ್ತಿ ಬಹ ಕೇತನವನೈದಱ |
ಲತ್ಯಧಿಕಸಾಹಸದಿ ತೆಗೆತೆಗೆದೆಚ್ಚನಾ ಕರ್ಣ || ೭೨

ಮುರಹರಗೆ ನೂಱೆಂಟು ನಾಲ್ವಲಿಯು |
ಸರಿಸಕ್ಕೈವತ್ತೇಳು ಸಾತ್ಯಕಿ |
ಸ್ಮರರಿಗೈವತ್ತೈದು ಕೃತವರ್ಮಕಗೆ ಸಾಂಬನಿಗೆ ||
ಧುರವಿಜಯನನಿರುದ್ಧ ಮುಖ್ಯರಿ |
ಗಿಱದೆ ನೂಱಂಬುಗಳನೆಚ್ಚರು |
ತರದ ಯದುಬಲಕಗಣಿತಾಸ್ತ್ರವ ಸುರಿದು ಬೊಬ್ಬಿಱಿದ || ೭೩

ಗಜಚಯವನೊಱಸಿದನು ಹಯಕುಲ |
ಗಜಬಜಿಸಲೊಱಗಿಸಿದ ರಥಗಳ |
ನಜಿಗುಜಿಮಾಡಿದನು ಪದಚರಕೋಟಿಯನು ಅರೆದ ||
ಭಜನೆಗೆಡಿಸಿದನಧಟರನು ಸೂ |
ರ್ಯಜನ ಸರಿ ಭಟನಾವನಿಲ್ಲೆಂ |
ದಜ ಸುರರು ಕೊಂಡಾಡೆ ಕಾದಿದನಸಮಸಮರದಲಿ || ೭೪

ಭರದಿ ಬಹ ಪೆಸರುಳ್ಳ ಭೂಪರ |
ಶಿರವ ಚಂಡಾಡಿದನು ಯಾದವ |
ರರಸನಪುದೆನೆ ಕಾದಿದನು ರಪಿತನುಜನಾಜಿಯಲಿ ||
ವರಗಜಾರೋಹಕರ ತಲೆಗಳ |
ನೆರಡು ಕಡಿಮಾಡಿದನು ರಾವ್ತರ |
ತರಿದು ಕೆಡಹಿದ ರಥಿಕರನು ರಥಸಹಿತ ವೋದಿದನು || ೨೦

ಒದೆದು ಕೊಂದನು ಸಾಂಬಸಾತ್ಯಕಿ |
ಗದಗಡಿಸಿ ಹೊರಳಿದನು ಬಳಿಕಾ |
ಗದನು ಶರಹತಿಗೆಚ್ಚರುತ ವ್ಯೈವರ್ಣಿಯು ತಿರುತಿರ್ದ ||
ಮದವೊದಱಿ ಓಲರಾಮು ಕೊಂಡ |
ಗ್ಗದ ಮಹಾಮುಸಲವನು ರವಿಜನ |
ಸದೆದು ಭೂತಕೆ ಬಲಿಯು ಕೊಡುವೆನೆನುತ್ತ ಗರ್ಜಿಸಿದ || ೨೧

ಬಳಿಕಲೇವೇಳುವೆನು ಕರ್ಣನ |
ಕಲಿತರಣವಾಯತನ ಮುರಹರ |
ಹಲಧರರ ಸಮ್ಮುಖಕೆ ಮಾರ್ಗಣ ಶತವನೆಯ್ದುಸುತ |
ಉಳಿದ ಯದುಬಲವೀರ ನಿಚಯ |
ಕ್ಕಳುಕದಗಣಿತಮಾರ್ಗಣಂಗಳ |
ಸುಳಿಸಿ ರಣದೊಳಗೆಲ್ಲ ತಾನೆಸಿಸಿದನು ಸೋಸ್ಪರಗೆ || ೨೨

ಭರದೊಳೈತಹ ಶರಗಳಿಗೆ ಮಿಗೆ |
ಹರುಷಮುಖದಿಂದೊಲೆದು ಶಿರವನು |
ನರಕಮರ್ದನ ರಾಮುನನು ಹಿಂದಿಕ್ಕಿ ಕೋಪದಲಿ ||
ವರಮಹಾಸ್ತ್ರಂಗಳಲಿ ಕರ್ಣನ |
ಕರದ ಧನುಕುದುರೆಗಳ ಸಾರಥಿ |
ಗಿರದೆ ಹದಿನೈದಱಲಿ ಹರುವನು ಕಂಡನಾಕ್ಷಣದಿ || ೨೩

ಕರ್ಣ ಲೇಸೈ ನಿನ್ನ ಸಮರದ |
ನಿರ್ಣಯಕೆ ಮೆಚ್ಚಿದೆನು ಭಳಿರೆ ಪ |
ಕರ್ಣನಾಗಲು ಬೇಡ ಶರವಿಹವೆಮ್ಮವವಗಡವು ||
ಚೂರ್ಣವನು ಮಾಡುವೆನು ಎನುತಾ |
ಕರ್ಣಪೂರಿತವಾಗೆಸೆಯೆ ಸಂ |
ಪೂರ್ಣಘಾಯವ ಮಾಡಿದುವು ರವಿಸುತನ ದೇಹದಲಿ || ೨೪

ಹರಿಯ ಶರಹತಿಯಿಂದ ರವಿಸುತ |
ಮುಱಿದು ತನುವನು ಬಳಿಕ ಕಂಗಳ |
ನರೆಮುಗಿದು ಕೊಂಡಾವರೂಥದಿ ಮಲಗಿ ಡೆಂಢೆಣಿಸೆ ||
ತಿರುಗಿಸಿದನಾರಥವ ಸೂತನು |
ಮುಱಿಯ ಮಾತೇಕೈವರಿಗೆ ಕೇ |
ಳಱಿಕೆಯಿಂದಾಯ್ತೊಂದೆ ಗತಿ ನರನಾಥ ಕೇಳೆಂದ || ೮೦

ಅಸಮಯುದಲಿ ಕೌರವಾತ್ಮಜ |
ವಾಸುದೇವನ ಮೇಲೆ ಸಮರವ |
ಸೂಸುತಿರೆ ಲಕ್ಷ್ಮೀಶ ಮುಳಿದವನೇರ್ವ ರಥಹರಿಯ ||
ಈಸುಗಳ ಸಾರಥಿಯ ಯಮನ ನಿ |
ವಾಸಕೆಯ್ದಿಸಿ ಮಗುಳೆ ಮೆಯ್ಯಲಿ |
ಹಾಸಿದನು ನಿಶಿತಾಸ್ತ್ರಗಳನಸುರಾರಿಯಾಕ್ಷಣದಿ || ೮೧

ನಗುತ ಕೌರವರಾಯ ತಾನಿಂ |
ದಗಧರನ ಕೂಡಾಜಿರಂಗಕೆ |
ಹೊಗುವೆನೆನುತವೆ ಸಕಲಶಸ್ತ್ರಾಸ್ತ್ರಗಳ ಸಂವರಿಸಿ ||
ಬಗೆಬಗೆಯ ಕಹಳಾರವಂಗಳ |
ನಗಣಿತದ ಭೇರಿಗಳ ರಭಸದಿ |
ಜಗವು ಕಂಪಿಸಲೆಯ್ದಿದನು ಸಂಗ್ರಾಮಗಹ್ವರಕೆ || ೮೨

ಮುರಿದ ದಳ ಸಂವರಿಸಿ ಕೌರವ |
ಧರಣಿಪಾಲನ ಹಿಂದೆ ನಡೆದುದು |
ಗುರುಜ ಕರ್ಣ ಕಳಿಂಗ ಕೃಪ ಗುರು ಭೀಷ್ಮ ಮೊದಲಾದ ||
ಧುರಧುರಂಧರರಸ್ತ್ರಶಸ್ತ್ರದ |
ಪರಿವಿಡಿಗಳಿಂದಾರ್ದು ಮುತ್ತಿತು |
ತರಣಿಯನು ಮೇಘಾಳಿ ಮುಸುಕುವ ತೆಱದೊಳಾಹರಿಯ || ೮೩

ಅರಿತಿಮಿರಮಾರ್ತಂಡ ಬಂದನು |
ಧುರಕೆ ಮಲೆವರ ಗಂಡ ಬಂದನು |
ಕೆರಳಿದತಿಗರ್ವಿತರವರ ಸರ್ವಾಪಹಾರಕನು ||
ಭರಿತಶೌರ್ಯೋದಾರ ಶಾತ್ರವ |
ಕರಿಮೃಗೇಂದ್ರನು ಬಂದ ಬೇಗದಿ |
ಶರಹರಿಸಿಕೊಳ್ಳಸುರಹರಯೆಂದೊದಱಿದುವು ಕಹಳೆ || ೮೪

ರಾಜರಾಜನು ಬಂದ ಶಾತ್ರವ |
ರಾಜನಳಿನದಿನೇಶ ಬಂದನು |
ತ್ರೈಜಗತ್ಪ್ರಖ್ಯಾತ ಬಂದನು ಭೂವರರ ತಿಲಕ ||
ರಾಜಶೇಖರ ಬ್ರಹ್ಮಮುಖ್ಯರ |
ನಾಜಿರಂಗಕೆ ನೆರೆವನಱಸುವು |
ದೀಜಿನಗುಯಾದವರ ನಂಬದಿರೆನುತಲೊದಱಿದುವು || ೮೨

ನಡೆಸಿ ಮ್ಮುಂದಕೆ ರಥವ ಕೌರವ |
ಪೊಡವಿಪತಿ ಕೋಪದಲಿ ಮುರಹರ |
ನಡುಗುತಿಪ ವೃದ್ಧರನು ಬಾಲರ ವಿಪ್ರಸಂಕುಲವ ||
ತೊಡರಿ ಗೆಲಿದಿಹೆನೆಂಬ ಬಿಂಕದ |
ಬಡಿವರಿಯುಸಱಿದೆನ್ನಯ |
ಕಡುಹ ಕಾಣಲು ಬಹುದು ನೋಡುವೆನೆನುತ ತೆಗೆದೆಚ್ಚ|| ೮೩

ಏನು ಬಂದೆಯ ಪೂರ್ವ ಕುರಪತಿ |
ಕಾನನದ ದಾಯಿಗರಿಗೊಡವಿದ |
ಹಾಸಿಪರಿಬವು ನಿನ್ನದೆಂದೇ ಬಂದೆಯೈ ಧುರಕೆ ||
ಆನಲಾಪವೆ ನಿನ್ನ ಸೇನಾಂ |
ಭೋನಿಧಿಯ ಹೊಯ್ಲುಗಳಸಿದಕನು |
ಮಾನವೆಲ್ಲಯುದೆನುತ ಕಡಿದೊಡನೆಚ್ಚನಸುರಾರಿ || ೮೪

ಇದಕೆ ಸಂಶಯುವೇಕೆ ಕೇಳ್ಳೈ |
ಮಧುಮಥನ ಬಳಿಕಾವು ನಮ್ಮಯ |
ಸದನದಂತಃಖೇದದಲಿ ಕಲಹಿಸುವುದದು ಸಹಜ ||
ಕದನ ಪರರಿಂದಾಗೆ ಮೋಹಾ |
ಸ್ಪದವ ಕೊಟ್ಟರೆ ಲೋಕವೆಮ್ಮನು |
ಸದೆಗರೆಂದಾಡುವುದು ದಿಟವೆಂದೆಚ್ಚನಾಭೂಪ || ೮೮

ಬರಲು ಬಳಿಕೇಸಿದು ಸೊಯಂಬರ |
ಧರಣಿ ವೈಭವಮಲ್ಲ ಜೂಜಿನ |
ನೆರೆವಣಿಗೆಯಲಿ ಗೋತ್ರಜನರನು ಗೆಲಿದ ತೆಱನಲ್ಲಾ ||
ಅಱಸಱಿಸಿ ಸಭೆಯಲ್ಲಿಯಂಗನೆ |
ಯೊಱಲೆ ವಸ್ತ್ರವ ಸೆಳೆಸಿದಂತ |
ಲ್ಲರಸ ನಿಷ್ಠುರಸನುತ ಸದರವೆ ಎನುತ ಹರಿಯೆಚ್ಚ || ೮೯

ಕರೆದು ಮೊಲೆಯನು ಕೊಟ್ಟವಳ ನಿಜ |
ಹರಣವನು ಹಾಱಿಸಿದ ಗರ್ವದಿ |
ಹರಿವ ಭಂಡಿಯನೊದೆದ ಸಾಹಸದತಿಶಯದ ಮದದಿ ||
ಹರುಷದೊಳ್ಕಾಳಿಂಗನಾಗನ |
ಶಿರದಿ ನಟಿಸಿದುರ್ಗಮ್ಮಹದ ಸೀ |
ಸರರ ಸಳಿದರೆ ಧೀರನೇ ಎನುತೆಚ್ಚನಾಭೂಪ || ೯೦
ಬೂಟಕದ ಮಾತುಗಳ ನುಡಿದೇ |
ನಾಟಕವ ನಟಿಸುವೆ ಕಣಾ ಭಂ |
ಡಾಟವಿದು ಗುಣವಲ್ಲ ಗರುವರಿಗೆಣೆಸಿ ನೀ ಮುನ್ನ ||
ಮೀಟೆನಿಪ ಸಮರದಲಿ ಶೌರ್ಯದ |
ಘಾಟರನು ವಿಕ್ರಮದಿ ಗೆಲಿದಿಹ |
ಪೋಟಕನ ನಮ್ಮಲ್ಲಿ ಕೊಂಬುದೆ ಎನುತ ಹರಿಯೆಚ್ಚ || ೯೧
ಬಾಲಭಾಷೆಯನಾಡುವುದು ಪಶು |
ಪಾಲರಾದರಿಗುಚಿತ ಧರಣೀ |
ಪಾಲರಾದರಿಗನುಚಿತವಲೇ ವಿಷಮಸಮರದಲಿ ||
ಕೋಲ ಮೊನೆಯಲಿ ವೈರಿರಾಯರ |
ನಾಳಿಗೊಂಬುದು ಸಹಜ ಬಱಿದೇ |
ಜಾಳುನುಡಿಗಳಲೇನು ಫಲವೆಂದೆಚ್ಚನಾಭೂಪ || ೯೨
ಆವ ಸಮರವ ಗೆಲಿದೆ ಒಳಿಕಲ |
ದಾವ ಭೂಪರ ಹಣಿದೆ ಜಗಳದೊ |
ಳಾವ ರಣದೊಳಗಾರ ಸದೆದಿಹೆಯದನು ವಿಸ್ತರಿಸು ||
ನಾವು ಬಲ್ಲೆಱಿಕೆಯಲಿ ದ್ರುಪದಗೆ |
ಹೇವಮಾಗಳಾಗಿ ದೆಸೆ ಪಥ |
ವಾವುದೆಂದೋಡಿದ ನೃಪಾಧಮನಾರು ಬೆಸಸೆಂದ || ೯೩
ಮಗುಳೆ ಒಲ್ಲೆವು ಬಳಿಕಲಾತನ |
ಮಗಳ ಮದುವೆಯಲೋಡಿ ಬಂದುದ |
ಹಗರಣದ ಮಾತಲ್ಲ ಪುನರಪಿ ಘೋಷಯಾತ್ರೆಯಲಿ ||
ಆಗಡುಗಂಧರ್ವಕನು ನಿನ್ನನು |
ಬಿಗಡರಿಹ ನಿನ್ನನುಜರನು ಬಲು |
ನೊಗದ ಹಗ್ಗದಿ ಕಟ್ಟಿ ಪಿಡಿಕೊಂಡುಯ್ದ ಕಥನವನು || ೯೪

ಕಂಡಡಿನಿಕೀ ನಾವು ಕಾಣದ |
ಕಂಡೆವೆನಬಾರದು ಸುಯೋಧನ |
ಭಂಡತನಕಿನ್ನೇನು ಕಡೆವೊದಲಿಲ್ಲವೆಣಿಸಿದರೆ ||
ಚಂಡಭುಜಬಲ ಶಾತ್ರವರ ರಣ |
ಮಂಡಲದಿ ತಱಿದೊಟ್ಟಿ ಮೆಱಿವು |
ದ್ದಂಡತನವೆಳ್ಳನಿತ ಕಾಣೆನು ಹೇಳಲೇನೆಂದ || ೯೫
ಕಲಸಗೂಳನು ತಿಂದು ಕಲ್ಲಿಯು |
ಚಳಕದಲಿ ಕೈಗೊಂಡು ಕಾನನ |
ದೊಳಗೆ ಕಱುಗಳ ಕಾದು ಬಕಗಾರ್ದಭರ ಮಿಗೆ ಕೊಂದು ||
ಹಲವು ದನುಜಾಧಮರ ಗೆಲಿದತಿ |
ಸುಲಭಸಂಗ್ರಾಮದಲಿ ಮಾಡಿದ |
ಕಲಿ ಕಣಾ ನಿನಗಾರು ಸರಿ ಹೋಗೆನುತ ನೃಪನೆಚ್ಚ || ೯೬
ಕನಲಿ ಮುರರಿಪು ಹೂಡಿದನು ನಿಜ |
ಧನುವಿಗನಲಾಸ್ತ್ರವನು ಬಳಿಕದು |
ಕೊನರುಗಿಡಿಗಳ ಸಾರದಲಿ ಭುಗುಭುಗಿಸಿ ದೆಸೆದೆಸೆಗೆ ||
ಜನಪನೆಡೆಗೆಯ್ತರಲು ಕಾಣುತ |
ವಿನುತವರುಣಾಸ್ತ್ರವ ಪ್ರಯೋಗಿಸಿ |
ಘನತರದಿ ಬೊಬ್ಬಿಱಿದು ತೆಗೆದೆಚ್ಚನು ಮಹೀಪಾಲ || ೯೭
ಅದುಬಳಿಕ ಕಲ್ಪಾವಸಾನದ |
ಮೊದಲ ಮಳೆ ಸುರಿವಂತೆ ಬೇಗದಿ |
ಉದುರಿ ಕಿಡಿಗಳ ನುಂಗಿದುದು ಯದುಬಲವು ನೀರಿಂದ ||
ಗದಗದಿಸುತಿರ್ಪನ್ನಬರ ಹರಿ |
ಹೆದೆಗೊಳಿಸಿ ಮರುತಾಸ್ತ್ರವನು ತೊಡ |
ಲುದಕವನು ಪೀಱಿತು ಕ್ಷಣಾರ್ಧದೊಳರಸ ಕೇಳೆಂದ || ೯೮
ಬಳಿಕನೆ ಕುರುಪತಿ ಪರ್ವತಾಸ್ತ್ರವ |
ತೊಡಲು ಮುರಹರ ಕಂಡು ಕುಲಿಶವ |
ತೊಡರಿಚಿಯೆ ತೆಗೆದಿಸಲು ಕೌರವನುರಗಬಾಣವನು ||
ಪೊಡವಿ ಕಂಪಿಸಲೆಚ್ಚು ಬೊಬ್ಬಿಡೆ |
ಜಡಧಿಶಯನನು ತಾರ್ಕ್ಷ್ಯಬಾಣದಿ |
ಹುಡಿಹುಡಿಯು ಮಾಡಿದನು ಸರ್ಪಾವಳಿಯ ನಿಮಿಷದಲಿ || ೯೯

ನಿಂದು ಕುರುಪತಿ ತನ್ನ ಸೇನೆಯ |
ನೊಂದುಗೂಡಿಸಿ ಕರಿರಥಾಶ್ವವು |
ಮಂದಿ ಸಮರಥರತಿರಥರು ತಾವೆಲ್ಲರೊಡಗೂಡಿ ||
ಹಿಂದೆ ಮುಂದೆ ಸಮೀಪದೆಡೆಯಲಿ |
ಬಂದು ಶರಗಳ ಹೂಡಿದರು ಗೋ |
ವಿಂದನದಕೊಂದನುವ ನೆನೆದನು ತನ್ನ ಮನದೊಳಗೆ || ೧೦೦

ನಾಣುಗೇಡಿಗಳಿವದಿರೆಲ್ಲರ |
ತ್ರಾಣಗೆಡಿಸುವೆನೊಂದುಪಾಯದಿ |
ಕೇಣವಿಲ್ಲದೆ ದಿವ್ಯಶರಗಳ ಹೂಡಲೇಕಿನ್ನು ||
ಮಾಣಲದು ಸಮ್ಮೋಹನಾಸ್ತ್ರದಿ |
ಕೇಣಿಗೊಂಬೆನೆನುತ್ತ ದಿವಿಜ |
ಶ್ರೇಣಿ ಬೆರಗಾಗಲ್ಕೆ ಹೂಡಿದನಾಮಹಾಶರವ || ೧೦೧

ತೆಗೆದು ಕಿವಿವರೆಗುಗಿದು ಸತ್ವದ |
ಲಗಧರನು ಬೊಬ್ಬಿರಿಯುತೆಚ್ಚನು |
ಹಗರಣವನೇನೆಂಬೆನೆಲೆ ಜನಮೇಜಯಕ್ಷಿತಿಪ ||
ವಿಗಡದುರ್ಯೋಧನನು ಮೊದಲಾ |
ಗಗಣಿತದ ಸೇನೆಯೊಳಗಸಿಬರು |
ಮುಗಿದರಕ್ಷೌಯುಗಂಗಳನು ಕಲಿಭೀಷ್ಮ ಪೂರ್ತಾಗಿ || ೧೦೨

ತುರಗಸಮಿತಿಯಃ ಮೇಲೆ ರಾತ್ರಿ |
ವರರಥಿಕರಾರಥಚಯದಿ ಮದ |
ಕರಿಸಮೂಹಗಳಲ್ಲಿ ಮಾವ್ತರು ವಿಕತಪಾಯಿದಳ ||
ಒರಗಿತಲ್ಲಿಯದಲ್ಲಿ ನಗುತವೆ |
ಕರೆಸನ್ನೆ ತಿರುವೇಂಕಟೇಶನು |
ಧುರಕೆ ಭೀಮಾರ್ಜುನರ ಬರಹೇಳೆನುತ ಖತಿಯಲಿ || ೧೦೩

ಅಂತು ಸಂಧಿ ೨೨ ಕ್ಕಂ ಪದ ೧೪೩೪ ಕ್ಕಂ ಮಂಗಳಂ.

# ಇಪ್ಪತ್ತಮೂಱನೆಯ ಸಂಧಿ

---

ಸೂಚನೆ || ರಾಯರಿಪುಗಜಸಿಂಹ ನಿರ್ಝರ |
ರಾಯ ಶಾತ್ರವಗಿರಿಕುಲಿಶ ಯದು |
ರಾಯನಹ ಶ್ರೀಕೃಷ್ಣ ಕೊಂದನು ಕಲಿ ಘಟೋತ್ಕಚನ ||

ವೀರವಿಕ್ರಮನಖಿಳರಿಪುಸಂ |
ಹಾರ ರಣಭಾರ್ಗವನತುಳಶೃಂ |
ಗಾರ ನೂತನಮದನನಪರಿಮಿತಾರ್ಥಿಮಂದಾರ ||
ಚಾರುಗುಣಭೂಷಣ ಕ್ಷ್ಮಾಪ |
ಸ್ವಾರಭೂನಿಭ ಶಶಿಕುಲೋತ್ತಮ |
ಧೀರ ಜನಮೇಜಯನೆ ಮುಂದಣ ಕಥೆಯ ಸಂಗತಿಯ || ೧

ಮುರಳಿದನು ಪಾಳೆಯಕೆ ಯಾದವ |
ರರಸ ಬಲ ಕೃತವರ್ಮ ಸಾತ್ಯಕಿ |
ಸ್ಮರನು ಮೊದಲಾದಖಿಳಬಲದೊಡನತುಳಪುರುಷದಲಿ ||
ತರಣಿಯುನಿತಱಿಕೊಳಸ್ತಶೈಲಕೆ |
ಸರಿದನಾಸಂಗರದ ವಾರ್ತೆಯ |
ನೊರೆವೆನೆಂದು ರಸಾತಳಕೆ ಪೋಪಂತೆ ಬೇಗದಲಿ ||

ಹಾಱಿದುವು ಪಕ್ಕಿಗಳು ನೀಡ |
ಕ್ಕೋರಣದಿ ಕಾಣಿಸಿದುವಭ್ರದಿ |
ತಾರೆಗಳು ತಮ ತುಂಬಿತೆಣ್ದೆಸೆಗತಿವಿಚಿತ್ರದಲಿ ||
ಭೂರಮಣಿಯಲ್ಲಡೆಗೆಡೆದ ಕುರು |
ವೀರ ಯಾದವಬಲದ ಪೆಣಗಳ |
ಭೂರಿಜಂಬುಕಭೂತಭೇತಾಳಗಳು ಸಾರಿದುವು || ೩

ಅಡಗುಗಳನೊಡೆ ಮೆದ್ದು ಕರುಳ್ಗಳ |
ನೊಡನೊಡನೆ ನೆಱೆ ನುಂಗಿ ರುಧಿರವ |
ಕುಡಿಕುಡಿದು ಚಪ್ಪರಿದು ಮಜ್ಜೆಯ ತಿಂದು ಮಾಂಸಗಳ ||
ಕೊಡುತಲಿಕ್ಕೆಲದಖಿಳಭೂತಕೆ |
ಗುಡಿವಿಡಿದು ಪಾಡುತ್ತ ಕುಣಿಯುತ |
ಝಡಿತೆಯಲಿ ನಲಿದಾಡುತಿರ್ದುವು ಶಾಕಿನೀನಿವಹ || ೪

ಮಿದುಳನಸಗಿಯುತ ಸುಂಟಿಗೆಯ ಕೆಳ |
ತುದಿಯೆಲುವ ಮುಱಿದಿಟ್ಟು ನರಿಗಳ |
ನದುರಿ ಹೊಱವಡಿಸುತ್ತ ತಿಳಿರಕುತವನು ಮೊಗೆಮೊಗೆದು ||
ಮುದದಿನೀಂಟುತ ಚದುರನಹನೆಂ |
ದೆದುವರನ ಹೊಗೞುತ್ತಲಾಡುತ |
ಮದಿಸಿ ರಣರಂಗದಲಿ ಡಾಕಿನಿಚಯಗಳೊಪ್ಪಿದುವು || ೫

ಅರೆವೆಣನನೆಳೆದೆಳೆದು ತಿಂದುವು |
ನರಿಗಳಗಣಿತವಲ್ಲಿ ನೆರಳುವ |
ಕರಿತುರಗದಾಲಿಗಳ ಚಂಚುಗಳಿಂದಲಿಱಿದಿಱಿದು ||
ಹಱಿದು ತಿಂದುವು ಘೂಕಚಯ ಮೈ |
ಮಱಿದು ಮೂರ್ಛೆಯಲಿರ್ಪವರ ನಿ |
ರ್ಭರದಿ ತೋಳುಗಳುಡಿದು ತಿಂದುವು ಹೇಳಲೇನೆಂದ || ೬

ಅನಿತಱೊಳ್ಕುರುಸೇನೆ ಸಮ್ಮೋ |
ಹನದ ಸೊಗಡನು ಪರಿಹರಿಸಿಕೊಂ |
ಡನುವರಾಂಗಣಭೂಮಿಯಲಿ ಮಱಿದೊಱಗಿದವರೆಲ್ಲ ||
ಕನಸುಗಂಡಂತೆದ್ದು ಜರ್ಜಿಸಿ |
ಘನತರದ ಚಿಂತೆಯಲಿ ತಾವಿಹ |
ವನದ ತಪ್ಪಲ ಪಾಳೆಯಕ್ಕೆಯ್ದಿದರು ಮುಸುಕಿನಲಿ || ೭

ಸರಿದನನಿಲಾತ್ಮಜನು ಯಮಳರ |
ವೆರಸಿ ಸಾಳಿನ ಧುಂಕೆ ತನ್ನಯ |
ವರತನೂಜನ ನೆನೆವ ಭರದುದ್ಯೋಗಮನನಾಗಿ ||
ಸುರಪಸುತ ಪಾಂಚಾಲ ಕೇಕಯ |
ಗುರುವಿರಾಟಸಮೇತವಾದಿನ |
ದಿರಳು ತಮ್ಮಾಶ್ರಮಕೆ ಬಂದೆಱಗಿದನು ಧರ್ಮಜಗೆ || ೮

ಧುರಕೆ ನಡೆದಂದವನು ಚೂಣಿಗ |
ಳೆರಡು ಬಲ ಹೊಯ್ದಾಡೆ ಯಾದವ |
ಕುರುಮಹೀಶರೊಳುಭಯವೀರರ ಸಮರದಾಗಮವ ||
ಹರುಷು ಸಮ್ಮೋಹನದಿ ಕೌರವ |
ರರಸಸಹಿತಕ್ಷೋಣಿ ಬಲವಿಳೆ |
ಗೊಱಗಿದನಿತವನರಸಗಭಿವರ್ಣಿಸಿದನಾಪಾರ್ಥ ||

ಎನಲು ದುಮ್ಮಾನದಲಿ ಭೂಪನು |
ಮನದೊಳಗೆ ಚಿಂತಿಸುತ ನಾಳಿನ |
ನೆನಹದೇನೆಂದೆನಲು ಕೈಮುಗಿದನ್ನಿಲನಂದನನು ||
ಜನಪ ಚಿಂತೆಯದೇತಕೀಗಳು |
ವನಜಗರ್ಭಾಂಡವದು ಮುಳಿದಡೆ |
ತನಗೆ ಘನವೇ ಯಾದವರ ಬಲಗಿಲಗಳಕಟೆಂದ || ೧೦

ಭುಜಪರಾಕ್ರಮವಿದೆ ವಿರೋಧಿ |
ವ್ರಜಗಿರಿಗೆ ಕುಲಿಶಾಯುತದ ಘನ |
ತ್ರಿಜಗಭೀಕರಗದೆಯಿದೆ ಕೊ ಭೂಪಾಲ ಮತ್ಕರದಿ ||
ಅಜಸುರಾಂತಕಸುರಪರುದ್ರಾ |
ತ್ಮಜರು ಮೊದಲಾಗಿತ್ತ ಶರವಿವೆ |
ವಿಜಯನಲ್ಲಾ ಮಹಿಪ ಸಂಶಯವೇಕೆ ರಣಕೆಂದ || ೧೧

ಜನಪ ಚಿತ್ತೈಸೀರಣಾಯತ |
ವೆಸಗೆ ತನಗೆಂದೊದರುತ್ತೈದರೆ |
ಮನುಜಪತಿಗಳು ಪಾಂಡ್ಯ ಮತ್ಸ್ಯರು ದ್ರುಪದ ಮೊದಲಾಗಿ||
ನಿನಗೆ ಚಿಂತೆಯಿದೇಕೆ ನೆನೆವೆನು |
ತನುಜ ವೀರ ಘಟೋತ್ಕಚನ ಜವ |
ನನು ಮಹಾಭೈರವನ ಬಗೆಯದ ದೈತ್ಯನವನೆಂದ || ೧೨

ಮಗನ ಬಲದೊಳಗಂಜನಾಚಲ |
ದೊಗುಮಿಗೆಯಲೊಬ್ಬೊಬ್ಬ ದೈತ್ಯನ |
ಬಿಗುಹ ಪೇಳಲಸಾಧ್ಯ ಹರಿಹರಕಮಲಗರ್ಭರನು ||
ಬಿಗಿದು ರಣರಂಗದಲಿ ಕೆಡಹುವ |
ವಿಗಡರದೆ ಯಾದವರ ಮಾತೇ |
ನುಗುಳುಸೀರ್ಕೈಸೆನುತ ಮಿಗೆ ಘರ್ಜಿಸಿದನಾಭೀಮ || ೧೩

ಜೀಯ ದುಗುಡವಿದೇಕೆ ಹರ ನಾ |
ರಾಯಣರು ಕಮಲಜಸುರೇಂದ್ರ ನಿ |
ಕಾಯಮುಖ್ಯರು ಸಂಗರಕೆ ಬರಲವರೊಡನೆ ಸೆಣಸಿ ||
ಬೀಯಮಾಡಿ ವಿರೋಧಿಬಲವನ |
ನಾಯಸದಲವರುಗಳ ಮೆಚ್ಚಿಸಿ |
ಕಾಯುವೆನು ಗಂಧರ್ವಕನ ತಾನೆಂದನಾಪಾರ್ಥ || ೧೪

ಎನಲು ಸಂತಸದಿಂದಲವನಿಪ |
ನನುಜರುಗಳೊಡಗೂಡಿ ಕೌರವ |
ಜನಪತಿಯು ಪಾಳೆಯಕೆ ಬಂದವರುಗಳನುಪಚರಿಸಿ ||
ವನಜ ಮರಳಿದು ನಿದ್ರಿಸಲು ಬಳಿ |
ಕಿನನು ನಡೆದನು ಮೂಡಣಾದ್ರಿಯು |
ವನಜವಧುಗಳ ನೆರೆವ ಭರದುದ್ಯೋಗಮನನಾಗಿ || ೧೫

ನಂಬಿದವರನು ಸಲಹುವುದೆ ಗುಣ |
ವೆಂಬರಖಿಳಾಗಮದಲೆಂದಿನ |
ಸಂಬುಜಾಳಿಯ ಮುಗುಡನನು ಪರಿಹರಿಸಿ ಬೇಗದಲಿ ||
ಇಂಬುಗೊಂಡಿಹ ಭೃಂಗ ಪುಂಜವ ಮದೆ |
ಯಂಬರದ ತಾರೆಗಳು ಮುಸುಳಿನ |
ಲಂಬುಜಾಪ್ತನು ಬಿಡಿಸಿದನು ಜನಜನಿತತಮಭಯವ || ೧೬

ಉದಯವಾಗದ ಮುನ್ನ ಯಾದವ |
ರುದಿತಬಲಸನ್ನಾಹದಲಿ ಯು |
ದ್ಧದ ಗಡಾವಣೆಯಿಂದ ಹೊಕ್ಕರು ಕಾಳೆಗದ ಕಣನ ||
ಮಧುಹರನು ಬಲರಾಮಸಾತ್ಯಕಿ |
ಕದನಗಲಿ ಕೃತವರ್ಮ ಸಾಂಬನು |
ಮದನನನಿರುದ್ಧಾದಿಗಳು ಗಡಣದಲಿ ನಸುನಗುತ || ೧೭

ಮೆರೆವ ಸಮ್ಮೋಹನಶರಾಗ್ನಿಗೆ |
ಕುರುಕುಲಾಬ್ಧಿಯನಾಹುತಿಯ ಕೊ |
ಟ್ಟಿರನೆ ಧುರಕೆಯ್ತಂದ ಭಾವವನರಸ ಚಿತ್ತೈಸು ||
ಶರನಿಧಿಯನುದರಾಗ್ನಿ ನೀಂಟುವ |
ಪರಮಮುನಿಕುಂಭಜನ ತೆರದಲಿ |
ಮೆರೆದು ಭಟ್ಟರನಟ್ಟಿದನು ಹರಿ ಪಾರ್ಥನಿದ್ದೆಡೆಗೆ || ೧೮

ಬಂದು ಭಟ್ಟರು ಫಲುಗುಣನಿಗಿಂ |
ತೆಂದು ನುಡಿದರು ಮರುಳೆ ಕೌರವ |
ಹಂದೆಗಳು ನಿನಗಾಪ್ತರೆನುತಲು ಪರಮಬಲಯುತರು ||
ಎಂದು ನಂಬಿಹೆ ಇದರೊಳೇನಹು |
ದೆಂದು ಜಗದುದ್ದಂಡಹರಿಯೊಳ್ |
ಬಂಧುರದ ಸಂಗರಕೆ ನಡೆಯೆಂದೆಳೆದರರ್ಜುನನ || ೧೯

ದಾನವಾಂತಕನೊಡನೆ ಸಂಗರ |
ಕಾನುವರೆಯುಜಹರರಿಗಸದಳ |
ಮಾನವರ ಪಾಡೇನು ಫಲುಗುಣ ಬಱಿದೆ ಕೆಡೆದೀಗ ||
ಮಾನದಲಿ ತಂದಿತ್ತು ಖಚರನ |
ಕಾನನದಿ ಬಹುಸುಖದೊಳಿಹುದನು |
ಮಾನವಾದರೆ ರಣಕೆ ನಡೆಯೇಳೆಂದರಾಚರರು || ೨೦

ಅಜನು ಮಗ ಶಿವಸಖನು ದೇವ |
ವ್ರಜ ಮಹೋರಗ ಯಕ್ಷಮುಖ್ಯರು |
ಭುಜಗಶಾಯಿಗೆ ಸೇವಕರು ಮುದದಿಂದ ನಿಮ್ಮವನು ||
ಸೃಜಿಯಿಸಿದ ಪಿತರಾದ ಹರಿಸೂ |
ರ್ಯಜ ಸಮಾರಣರಾಶ್ರಿನೇಯರು |
ಭಜಿಸುವರು ನಿಮಗಾರು ಗತಿಯಿನ್ನೆಂದರಾಚರರು || ೨೧

ಅರಸ ಧರ್ಮಜಗೆಂದಿಗೆಯು ದು |
ರ್ಧರದ ಸಮರವ್ಯಸನ ತಾನಿ |
ಲ್ಲ...ನಕುಲ ಸಹದೇವ ಪಂಚದ್ರೌಪದೀಸುತರು ||
ತರಳರುಳಿದಿಹ ದೃಪದ ಮತ್ಸ್ಯರು |
ಪರಮಬಂಧುಗಳೀರ್ವರಿಗೆ ಯಿಾ |
ಧುರದ ವಿಜಯವದೆಂತು ನಿನಗಹುದೆಂದರಾಚರರು || ೨೨

ಎಲ್ಲಿ ನೋಡಲು ನಿಮಗೆ ಸಹಯಿಗ |
ಳಿಲ್ಲವೀಯದುವರನ ಜಯಿಸಲು |
ಬಲ್ಲಿದನು ಕಲಿ ಭೀಮ ನೀಸಹಿತೀಗ ಧೈರ್ಯದಲಿ ||
ಉಲ್ಲಸದಿ ಕಾದುವೆವು ಎಂಬೀ |
ಬಲ್ಲವಿಕೆಗೊಂದೆಯಿಾಯಾಹವ |
ಕಿಲ್ಲ ಗತಿ ಕಲಿಪಾರ್ಥ ಕೆಡಬೇಡೆಂದರಾಚರರು || ೨೩

ಕೇಳಿ ಕಿಡಿಕಿಡಿಮಸಗಿ ಕೋಪ |
ಜ್ವಾಲೆಯಂಬರಕಡರೆ ಇವದಿರ |
ಸಾಲಗೆಯ ಕೊಯ್ದಿಳುಹಿ ನಿಜಭುಜಶೌರ್ಯಗರ್ವದಲಿ ||
ಖೂಳೆಯಾದವಬಲಮಹಾಬ್ಧಿಯ |
ಕಾಲುಹೊಳೆಯಂದದಲಿ ದಾಂಟುವೆ |
[illegible]ಗೊನೆಮುಂ ಕಲಿ ಬೀಮನುರಿದೆದ್ದ || ೨೪

ಸ್ವೈರಿಸನಿಲಜನುರುವಣೆಯು ಮಿಗೆ |
ತೀರುವುದೆ ಮನವಱಿಕೆಯಲ್ಲಿಯ |
ಪಾರ ಕೇಣಿಯ ಸಾಲವೀಭಟ್ಟರನು ತಾ ಕೊಲಲು ||
ವಾರಿಜಾಕ್ಷನ ಧುರದ ಜಯ ಕೈ |
ಸಾರುವುದೆ ನಮಗಕಟವೊಡೆಯನ |
ಪೌರುಷವ ಚರರುಗ್ಘಡಿಪರದಕೆಂದನಾಪಾರ್ಥ || ೨೫

ಎಂದು ಭೀಮನ ನಿಲಿಸಿಯವರೊಡ |
ನೆಂದನಹುದಸುರಾರಿಯಿದಿರಲಿ |
ನಿಂದಿರಲು ವಶವಾಗದಾಬ್ರಹ್ಮೇಂದ್ರಮುಖ್ಯರ್ಗೆ ||
ಸಂದೆಗವು ತಾನಿಲ್ಲ ನೀವೀ |
ಗೆಂದ ತೆಱದಲಿ ಖೇಚರನ ನಲ |
ವಿಂದ ಸಂಗಡ ಕೊಂಡು ಬಹೆನೀಘನರಣಾಂಗಣಕೆ || ೨೬

ಹರಿ ವೊದಲು ಹರ ಬ್ರಹ್ಮಮುಖ್ಯರು |
ಹರುಷ ಮಿಗೆ ಹಾರೈಸುವಂತೀ |
ಧುರಮುಖದಿ ತಾನಿಂದು ಬಲಶರಧಿಯನು ಕುಡಿಕುಡಿದು ||
ಪರಮಸಂತಸದಿಂದ ಗಯನನು |
ಹರಿಯ ಸತ್ಕೃಪೆಯಲ್ಲಿ ನಂಬುಗೆ |
ಕರವ ನೀಡಿಸಿ ಸಲಹಿ ಕಳುಹುವೆನೆಂದನಾಪಾರ್ಥ || ೨೭

ಇಸಿತನಿತ ಬಿನ್ನೈಸಿ ಫಲುಗುಣ |
ಸನಿಯಕೆಯ್ದಿದನೆಂದದವ(?) |
ರ್ಗನುನಯದಿನುಡುಗೊಱೆಯನುಚಿತವನಿತ್ತು ಬೀಳ್ಕೊಟ್ಟು ||
ಘನಹರುಷದಿಂದುಬ್ಬಿ ತನ್ನಯ |
ನೆನಹು ಸಫಲವಿದೆಂದು ಕೃಷ್ಣನ |
ಮನ ಬರಿಸಲಿದು ಸಮಯವೆಂದನು ಮನದೊಳಗೆ ಪಾರ್ಥ || ೨೮

ಬಳಿಕ ಭಟರೆಯ್ತಂದು ಹರಿಪದ |
ನಳಿನಕಾನತರಾಗಿ ಪಾರ್ಥನ |
ನೆಲೆಯನಚಲಿತದೃಢವನತುಳಿತವಾಕ್ಯವೈಖರಿಯ ||
ಜ್ವಲನಸಖನಾತ್ಮಜನು ನುಡಿದ |
ಗ್ಗಳದ ಕರ್ಕಶಭಾಷೆಗಳನೊಂ |
ದುಳುಹದನಿತನು ಹೇಳಿದರು ಹರಿಬಲರು ಬೆಱಗಾಗೆ || ೨೯

ಏನ ಹೇಳುವೆವಗಧರನೆ ಹುಲು |
ಮಾನಸರ ತೆಱನಲ್ಲವನ ನ |
ವೀನವಧಿಕಚರಿತ್ರಯನು ಪೊಗಳುವಡೆ ಫಣಿಪತಿಯು ||
ಆನನದಲುದಿಸಿರುವ ರಸನೆಗೆ |
ಳಾನಲಾಱವು ಜೀಯ ಚಿತ್ತೈ |
ಸಾ ನರನ ವಿಕ್ರಮವನೆಂದರು ಚರರು ಕೈಮುಗಿದು || ೩೦

ಹರಿಹರಬ್ರಹ್ಮೇಂದ್ರದಿಕ್ಪಾ |
ಲರು ತರಣಿ ಚಂದ್ರಮರು ಗಂಧ |
ರ್ವರು ಮಹೋರಗ ಯಕ್ಷರಾಕ್ಷಸಮುಖ್ಯರೊಂದಾಗಿ ||
ಧುರಕೆ ಬರಲನಿಬರನು ಜಯಿಸಿಯೆ |
ಶರಣುಹೊಕ್ಕನ ಸಲಹದೇ ತಾ |
ಮರಳಿದರೆ ತವಭಜಕನಲ್ಲೆಂದುಸಿರು ಹೇಳೆಂದ || ೩೧

ಹಲವು ಮಾತೇನಿನ್ನು ದಾನವ |
ಕುಲದಿಶಾಪಟನೆಸೆವ ಚಕ್ರಕೆ |
ತಲೆಗುಡುವ ಮನವಲ್ಲದನ್ಯಥವಿಲ್ಲ ಹೀಗಯನ ||
ಅಳುಕಿ ಕೊಡುವವನಲ್ಲ ಬಂದೆಸು |
ಕೊಳುಗುಳಕೆ ತಡವಿಲ್ಲ ಹೇಳೆಂ |
ದೊಳಗುನುಡಿದುಪಚರಿಸಿ ಕಳುಹಿದನೆಂದರಾಚರರು || ೩೨

ಮುನ್ನ ಚಕ್ರದ ಧಾರೆಗಾಹುತಿ |
ಗೆನ್ನ ಶಿರವನು ಮಾಡಿ ನಿನ್ನ ಜ |
ಗನ್ನಿವಾಸನ ಕೆಯ್ಯ ರಕ್ಷಿಸಿ ಕಳುಹುವನ್ನಬರ ||
ಬೆನ್ನ ಬತ್ತಳಿಕೆಯಲಿ ಕುಳಿತಿಹು |
ದನ್ಯವನು ಚಿಂತಿಸದಿರೆಂದು |
ತ್ಪನ್ನಮತಿ ಗಯನೊಳಗೆ ಪೇಳ್ದಿಹನೆಂದರಾಚರರು || ೩೩

ಕಾಣಬಹುದೀಗೆನುತಲಾಗೀ |
ರ್ವಾಣಪತಿವಂದ್ಯನು ಕುಮಾರ |
ಶ್ರೇಣಿಯಾದವಸೈನ್ಯವನು ಬಳಿಕೆರಡು ಪಕ್ಷದಲಿ ||
ಮಾಣದಿಹುದೆಂದಾಗ್ರಹದಿ ಬಲು |
ಬಾಣವನು ನೇವರಿಸುತಱಿಗಳ |
ಹೂಣುವೆನು ಶರಜಲಧಿಯೊಳಗೆಂದಿದಿರನೀಕ್ಷಿಸಿದ || ೩೪

ಅಸಿತಜಿಕೊಳ್ಳವಮಾನನಂದನ |
ವನಜನೇತ್ರೆ ಹಿಡಂಬಿಗುದಿಸಿದ |
ತನಯನನು ನೆನೆಯಲ್ಕ ಘರ್ಜಿಸುತಧಿಕಕೋಪದಲಿ ||
ಘನವಿಕೃತವೇಷಗಳಲೆಸೆದಿಹ |
ದನುಜಬಲವನು ಕೂಡಿಕೊಂಡಾ |
ವನಕೆ ಬಂದನು ಮೂಱುಕೋಟಿಯಲಂಘಟೋತ್ಕಚನು || ೧೫
ಕುರೊಡಲ ಜುಂಜುರಿನ ತಲೆಗಳ |
ಕೋರೆಗಳ ಅತಿದೀರ್ಘದೇಹದ |
ಲೋರೆನೋಟದ ರಕ್ತವರ್ಣದ ನಯನದಿಂಸೆಸೆದು ||
ಭೂರಿಬಲವನು ನುಂಗಿ ತೇಗುವ |
ಭಾರಿಯಾಕಳಿಕೆಗಳಲೆಸುಪರಿ |
ವಾರದಂತೆಯ್ತಂದು ನಿಂದರು ಭೀಮನಿದಿರಿನಲಿ || ೧೬
ಬರುತ ಧರ್ಮಜ ಭೀಮ ಪಾರ್ಥರಿ |
ಗೆಱಗಿ ಬೆಸನೇನೇಳು ಶರಧಿಯ |
ಸುರಿವೆನೋ ಕೈಲಾಸಕಾಂಚನಪರ್ವತಂಗಳನು ||
ಮುರಿದು ಪಿಡಿಕಲ್ಲುಗಳ ತೆಱದಿಂ |
ದಿರಿಸುವೆನೊ ಪದಿನಾಲ್ಕು ಲೋಕವ |
ನೊಱಸಿ ನುಂಗಲು ತೆರಳುವೆನೊ ಬೆಸಸೆಂದನಾದನುಜ || ೧೭
ನಗುತ ಧರ್ಮಜನಣುಗನಾಡಿದ |
ವಿಗಡವಾಕ್ಯಕೆ ಪರಿಣಮಿಸಿ ಸೀ |
ನಗಧರನ ಸೇನಾಂಬುಧಿಯನೀಂಟೆಂದು ಬೀಳ್ಕೊಡಲು ||
ಅಗಣಿತದ ಹರುಷದಲಿ ಕರಗಳ |
ಮುಗಿದು ಬಂದನು ಸೇನೆಸಹಿತವೆ |
ಜಗವ ನುಂಗಲು ಬಪ್ಪ ವಿಲಯದ ಕಾಲನಂದದಲಿ || ೧೮
ನಡೆದರರಿಬಲದತ್ತ ಮೋರೆಯ |
ಕಡುಹುಗಳ ಕರ್ಕಶದ ನೋಟದ |
ಕುಡಿವರಿವ ಮೀಸೆಗಳ ಕಂಗಳೊಳೇಳ್ವ ಕಿಡಿಗಳಲಿ ||
ಪೊಡವಿ ದಡದಡಿಸಲ್ಕೆ ಶರಧಿಯೊ |
ಳೆಡೆವಿಡದೆ ಧರೆ ನಡವ ತೆಱದಲಿ |
ಸಿಡಿಲುಗಳನತಿಗಳೆವ ರಭಸದಿ ದೈತ್ಯಸೇನಾಳಿ || ೧೯

ತಾರಕಾಸುರಸೇನೆ ಗುಹಪರಿ |
ವಾರಕಿದಿರಾದಂತೆ ಜಂಭನ |
ಭೂರಿಬಲ ಜವದಿಂದ ಸುರಪನ ದಳಕೆ ಹರಿವಂತೆ ||
ವೀರಕುಂಭಶ್ರವಣಬಲ ರಘು |
ವೀರಸೈನ್ಯಕೆ ಬೆಱಗಿನೊಳ್ತಲೆ |
ದೋಱುವಂತೆದುಬಲಕೆ ಕವಿದುದು ಭೀಮಸುತಸೇನೆ || ೪೦

ಜವನ ಪಟುಭಟರಂತೆ ಘನಮೃ |
ತ್ಯುವಿನ ಕಿಂಕರರಂತೆ ವರಶಾ |
ಹುವಿನ ಸಹಚರರಂತೆ ಭೈರವನಾಪ್ತಬಲದಂತೆ ||
ಶಿವನ ಸೇವಕರಂತೆ ಶಕ್ತಿಗೆ |
ಕವಿದು ಕೊಂಡೆಯ್ತಪ್ಪ ಮರುಳ್ಗಳ |
ನಿವಹಮೆನೆ ಯದುಬಲಕೆ ಕಾಣಿಸಿತಸುರಸಂದೋಹ || ೪೧

ಕಾರಿರುಳ ತಿರುಳಂತೆ ರಾಹುಶ |
ರೀರಕಾಂತಿಯ ತೆಱದೆ ಯಮುನ ಕ |
ಠೋರದಂಗಚ್ಛವಿಯೊಲಂಧಾಸುರನ ಕಾಂತಿಯೊಲು ||
ವಾರುಣಾಸುರನೆನಿಪ ದೈತ್ಯನ |
ಮೈರುಚಿಯನನುಕರಿಸಿ ತೋಱುವ |
ಘೋರಭೀಕರರಕ್ಕಸರು ಮುಕ್ಕೋಟಿ ಕಾಣಿಸಿತು || ೪೨

ಕಾಣುತಾಕ್ಷಣ ಯದುಬಲದವರ |
ಪ್ರಾಣಗಳು ಹಮ್ಮೈಸಿ ಹರೆದುವು |
ಕ್ಷೋಣಿಯಿಂ ನಭಕುಪ್ಪಳಿಸೆ ಶಾರ್ದೂಲಮಂ ಕಂಡ ||
ಏಣತತಿಯಂದದಲಿ ರಾಮನ |
ಬಾಣಮಂ ಕಂಡಬುಧಿ ನಡುಗುತ |
ತ್ರಾಣಗೆಟ್ಟಂದದಲಿ ಹೆದಱಿತು ಹೇಳಲೇನೆಂದ || ೪೩

ಶಿವಶಿವಾಪದಮಾವುದೆಂದೇ |
ತಮತಮಗೆ ಯದುಸೇನೆ ದಾನವ |
ನಿವಹಮಂ ಕಾಣುತ್ತ ದೆಸೆದೆಸೆಗೋಡಿ ಬೋಯನುತ ||
ಭುವನ ಬಾಯ್ದೆಱೆಯದೇ ಎನುತವೆ |
ಜವಗತಿಯಲಿ ಯಥಾಯಥದಿ ಮಾ |
ಧವನ ಬಗೆಯದೆ ಪರಿಯುತಿಹುದೇನೆಂಬೆನೈಯೆಂದ || ೪೪

ಅನಿತಱೊಳ್ ದೈತ್ಯೇಂದ್ರಬಲ ನಡ |
ದನಿಲವೇಗದಿಯೊದಗಿ ಹರಿಬಲ |
ವನಧಿಯನು ಕಲಕಿದುದು ಸೇನೆಯ ಮುಂಗುಡಿಯ ಹೊಯ್ದು ||
ಕನಕರಥಹಯಗಜಘಟೆಯ ಮುರಿ |
ದನಿತು ಪಾಯದಳಂಗಳನು ಮಿಗೆ |
ಮುನಿದು ಸವಱಿತು ನಿಮಿಷಮಾತ್ರದೊಳರಸ ಕೇಳೆಂದ || ೪೫

ಅಡಸಿ ಹೊಕ್ಕರು ಬಲವ ಬೇಗದಿ |
ಹಿಡಿಹಿಡಿದು ನುಂಗಿದರು ತಲೆಗಳ |
ನೊಡೆದು ಕೊಂದರು ಕಾಲ್ಗಳನು ಹಿಡಿದಪ್ಪಳಿಸಿ ಕೆಲರ ||
ಬಡಿದು ಕೆಡಹಿದರಾರ್ಭಟಿಸಿ ಕೆಲ |
ಕಡೆಯ ಶೂಲದಲಿಱಿದು ಕೊಂದರು |
ಮಡಮುರಿಯಲಡಗೆಡಹಿ ಸದೆದರು ಕೋಟಿಸಂಖ್ಯೆಗಳ || ೪೬

ಮುರಿಮುರಿದು ಮುಕ್ಕಿದರು ಕೋಟಿಯು |
ಗಿರಿಗಳಿಂದಪ್ಪಳಿಸಿ ಕೋಟಿಯು |
ತರುಗಳಲಿ ಹೊಯ್‌ಹೊಯ್ದು ಸದೆದರು ನಾಲ್ಕುಕೋಟಿಗಳ ||
ಉರುತರದ ಗದೆಗಳಲಿ ಬಡಿಯುತ |
ಲರೆದು ಶತಕೋಟಿಯನು ಕೊಂದರು |
ಮಱೆಯ ಮಾತಿನ್ನಾವುದಸುರರಿಗಿದಿರದಾರೆಂದ || ೪೭

ತೂಱಿದರು ತೂಳಿದರು ತುಳಿದರು |
ಕೇಱಿದರು ಕೆಡಹಿದರು ಸತ್ವದಿ |
ಚೀಱಿದರು ಚೀಕಾತುಮಾಡಿದರರ್ಧನಿಮಿಷದಲಿ ||
ಆರು ನಿಲಬಹುದಮಮ ವಿಲಯದ |
ಭೈರವನ ಬಲದಂತೆಯೊಂದೇ |
ಬಾರಿ ಮುಳಿದರೆಯುಟ್ಟಿ ಸದೆದರು ಕೋಟಿಸಂಖ್ಯೆಗಳ || ೪೮

ಕಾರುಗಲಸಿದರಮಮ ಯದುಬಲ |
ವೀರರನು ದೈತ್ಯೇಂದ್ರಬಲವದ |
ನಾರು ಬಣ್ಣಿಸಬಹುದು ನೋಡಲು ಸಾವಿರಾನನದಿ ||
ಧಾರಿಣಿಯ ಪೊತ್ತಿರುವ ದಂತಿಗು |
ವಾರಿಸುವಡಳವಲ್ಲ ಶಿವಶಿವ |
ವಾರಿಜಾಸನ ಬಲ್ಲನೆಲೆ ಭೂಪಾಲ ಕೇಳೆಂದ || ೪೯

ಮಡಿಯದಿಹ ಕರಿಯಿಲ್ಲ ದೈತ್ಯರ |
ಕಡಿತಕೊಳಗಾಗದ ಹಯಂಗಳ |
ಪೊಡವಿಯೊಳು ತಾ ಕಾಣೆ ದಾನವನಿವಹಕಿದಿರಾಗಿ ||
ಉಡಿಯದಿಹ ರಥರಾಜಿಯುಂಟೇ |
ಕಡೆಗೆ ನೋಡಲು ಮುಡುಹುದಲೆ ಕೈ |
ತೊಡೆಗಳುಡಿಯದ ಪಾಯದಳವೊಂದಿಲ್ಲ ಕೇಳೆಂದ || ೫೦

ಜಲಜಭವ ಕಲ್ಪಾವಸಾನದಿ |
ಮುಳಿದು ಲೋಕವ ಕೊಲಲು ರವಿಜನು |
ಕಳುಹಲೆಯ್ತಂದತಿಭಯಂಕರಕಿಂಕರವ್ರಜವೊ ||
ಪ್ರಳಯಕೋಪದ ಕಾಲರುದ್ರನ |
ತಲೆಯ ಕಣ್ಣಿಂದಿಳಿವ ಬಳಗವೊ |
ತಿಳಿಯಲರಿದೆಂಬಂತೆ ಸವರುತಲಿರ್ದರರಿಬಲವ || ೫೧

ದಳವು ದಳದುಳಿಸಲ್ಕೆ ಕಾಣುತ |
ಹಲಧರನು ಪ್ರದ್ಯುಮ್ನ ಸಾತ್ಯಕಿ |
ಯಲಘುಬಲ ಕೃತವರ್ಮ ಸಾಂಬಾದಿಗಳು ತಮತಮಗೆ ||
ಸೆಳೆದು ಬಾಣಾಸ್ತ್ರವನು ಕವಿಸಿಹ |
ಬಲುಗಣೆಯ ರಕ್ಕಸರ ಶಿರಗಳ |
ಮುಳಿಸಿನಲಿ ಕಡಿದೊಟ್ಟಿದರು ರಣಭೂಮಿಯಗಲದಲಿ || ೫೨

ಮತ್ತೆ ಮೇಲಾಂತುವ ನಿಶಾಚರ |
ಮೊತ್ತವನು ಶರಜಾಲದಲಿ ತಲೆ |
ಯೆತ್ತಲೀಸದೆ ಹರಿಹರಿದು ನಾಲ್ದೆಸೆಯೊಳತಿಬಲರು ||
ಕತ್ತರಿಸಿ ನಡು ಜಾನು ಜಂಘೆಯ |
ಮೊತ್ತ ಬಲದಲಿ ಸವಱಿದರು ರಾ |
ಜೋತ್ತಮನೆ ಕೇಳೇನನುಸಿರುವೆನದುಭುತಾಹವವ || ೫೩

ಬಳಿಕಲೊಂದೆಸೆಯಲ್ಲಿ ದೈತ್ಯನು |
ಮುಳಿದು ಗದೆಯನು ತಿರುಹಿ ಯಾದವ |
ಹುಲುಬಲವ ಕೊಲಲೇನದೆಲ್ಲಿಹನವರ ವಲ್ಲಭನು ||
ಇಳೆಯೊಳುದುಭವಿಸಿರ್ದ ದನುಜರ |
ಗೆಲಿದ ಪರಿಯಂತಲ್ಲ ತನ್ನಯ |
ಬಳಕೆ ಬೇಱಿಹುದೆನುತಲಱಸುತ ಬಂದನಾಹರಿಯ || ೫೪

ಹರಿಯನಱಸುತ ಬರಲು ಕಂಡರು |
ಸ್ಮರ ಮುಸಲಿಯನಿರುದ್ಧ ಸಾತ್ಯಕಿ |
ಧುರವಿಜಯಸಾಂಬಾದಿಗಳು ತಮತಮಗೆ ಶರವಳೆಯ ||
ಕಱೆದು ಭೀಮಾತ್ಮಜನ ಮೇಲರೆ |
ವರಿಸದಂಗೆಯ್ಸಿದರು ಹೊಯ್ದರು |
ಗಿರಿಯೊಡನೆ ಸಮರವನು ಕೆಣಕಿದ ಕರಿಗಳಂದದಲಿ || ೫೫

ರಕ್ಕಸಮರವಿರೋಧಿಯುಕ್ಕಟ |
ಮಕ್ಕಳಾಟಿಕೆಯಾಯ್ತು ಎಣಿಸಲು |
ಅಕ್ಕಜವನೇನೆಂಬೆ ನುಸಿಗಳು ನಮ್ಮೊಡನೆ ಸೆಣಸಿ ||
ಕಕ್ಕಸದ್ಧಕೋಪದಲಿ ಗೆಲುವೆಂ |
ಬಕ್ಕರದಿಸದಿರಾದರಿನ್ನೇ |
ತಕ್ಕೆ ಸಮರದ ಕಾಂಕ್ಷೆ ಭಳಿರೆಂದೊಲೆದನಾನನವ || ೫೬

ನೂಱು ಶರದಲಿ ಸಾಂಬನನು ಇ |
ನ್ನೂಱಱಲಿ ಸಾತ್ಯಕಿಯನೆಚ್ಚು |
ನೂಱು ಸರಳಿಸಲಂಗಜನನನಿರುದ್ಧಗಾನೂಱು ||
ಮೂಱಱಲಿ ಕೃತವರ್ಮಕನ ಏ |
ಳ್ನೂಱು ಬಾಣದಿನುಳಿದ ಯಾದವ |
ವೀರರನು ಕೆಡೆಯೆಸೆದು ಬಲನನು ನೋಡುತಿಂತೆಂದ || ೫೭

ಹಲವನೊಂದನೆ ಧರಿಸಿ ಬಂದೈ |
ಹಲಧರನೆ ಬಳಿಕೆಲ್ಲ ವೃಷಭಂ |
ಗಳು ನಿಧಾನಿಸೆ ಪಾಶತತಿಯೆಲ್ಲಿದಕೆ ನೊಗ ಮೇಣು ||
ತಿಳಿಯುದಿದೆ ಕರ್ಬೊನ್ನವಿರಚಿತ |
ಮೊಳೆಯುದೆಲ್ಲಿಯುದಾವಗ ಹರಿವ |
ಜಲಸಮೃದ್ಧಗಳುಂಟೆ ಕೃಷ್ಯಾರಂಭತತಿಗೆಂದ || ೫೮

ಉರುತರದ ಮುಸಲವಸು ಹಸ್ತದಿ |
ಧರಿಸಿದೇತಕೆ ರಾಮ ಹಲಮುಖ |
ದುಱುಜಿನಿಂ ಬೆಳೆಯಾದ ಸಿರಿಯುನು ಭವಿಸಿ ಭುಂಜಿಸುವ ||
ಪರಿಯೊ ಧುರಮುಖದಲ್ಲಿ ರಿಪುಗಳ |
ತಱಿದು ಭುಜಶೌರ್ಯವನು ಮೆಱೆಯುಲು |
ನೆರೆ ವಹಿಸಿಕೊಂಡಿರುವ ಬಗೆಯೋ ತಿಳಿಯುಹೇಳೆಂದ || ೫೯

ಎಲವೊ ಖೂಳರ ತಿಲಕ ದಿಟವಹು |
ದಿಳೆಯೊಳಿದಿರ್ದಾದರಿಯು ಕಾಯುವೆ |
ಲಲಿತಕೃಷ್ಯಾರಂಭಧರಣಿಯು ನಿಜಭುಜವೆ ಪಾಶ ||
ಉಳುವ ವೃಷಭಗಳೆಮ್ಮ ಕರಗಳು |
ಮಿಳಿಯು ಮೊಳೆ ನೊಗ ಮೇಣು ಶರತತಿ |
ತಿಳಿಯೆ ರಿಪುಗಳ ರುಧಿರಜಲವಿದಕಾವೆ ಕಾರ್ಷಿಕರು || ೬೦

ಉರುತರದ ಹೃದಯದಲಿ ನೆಲಸಿಹ |
ಭರದ ಕೋಪವೆ ಬೀಜವದರಲಿ |
ನೆರೆದ ಬಲು ಬೆಳೆ ಫಲವ ಮುಸಲದಿ ಭಳಿಸಿ ಪಾಕಿಸುತ ||
ಧುರದ ಹಬ್ಬದಿ ಭೂತಕೋಟಿಗೆ |
ಚಿರದಲಾತಣವಿಕ್ಕುಸುವೆ ಸೀ |
ನಿರದೆ ನೋಡುವುದೆಮ್ಮ ಶೌರ್ಯವನೆನುತ ಮೇಲ್ವಾಯ್ದು || ೬೧

ಹೊಯ್ದು ಮುಸಲದಿನಸುರನುರವನು |
ಕೆಯ್ದಣಿಯೆ ಬಲರಾಮ ಪುನರಪಿ |
ಹಾಯ್ದು ಹಲದಲಿ ಸೆಳೆಯೆ ಖಳಕಾಲಾಂತಕನ ತೆಱದಿ ||
ಮೆಯ್ದೆಗೆದು ಬೊಬ್ಬಿಟ್ಟು ಗದೆಯಲಿ |
ಹೊಯ್ದು ರಾಮನನಪ್ಪಳಿಸಿದನು |
ಕಾಯ್ದುಕೊಳ್ಳೈ ತನುವನೆನುತರೆಯುಟ್ಟಿದನು ಬಿಡದೆ || ೬೨

ಅನಿತಱತೊಳ್ಳೆರ್ಜಿಸುತ ಮುಸಲದಿ |
ಕೊಸರಿ ರಕ್ಕಸನುರವ ಹೊಯ್ದನು |
ಕಸಲಿ ದೈತ್ಯನು ಗದೆಯಲೆಱಗುತ ಬಲನ ವಿಗ್ರಹವ ||
ಮನುಮಥನ ಸಾತ್ಯಕಿಯು ಸಾಂಬನ |
ವಿನುತ ರಥಹಯಸಾರಥಿಗಳನಿ |
ತನು ಘನವುನೋವೇಗದಲಿ ಹುಡಿನೂಡುತೆಯ್ತಂದ || ೬೩

ಶಿರ ವೊಡೆಯೆ ತಂಗಜನ ರಾಮನ |
ವರಶರೀರದೊಳೊಱಕೆಯಾಯಿತು |
ಮಱವೆದೋಱಿತು ಸಾತ್ಯಕಿಗೆ ಸಾಂಬನಿಗೆ ಶರನಾಂಟಿ ||
ಧರಣಿಗೊಱಗಿದನೇನನೆಂಬೆನು |
ಭರದ ಭೂತದ ತೆಱದಿ ದೈತ್ಯನು |
ತಿರುಗುತಿರ್ದನು ಗದೆಯ ತಿರುಗುತ ತೀವ್ರಕೋಪದಲಿ || ೬೪

ಸೂಳುಸೂಳಿಗೆ ಹೊಯ್ದನೈದಾ |
ಐಕೇಳು ಲಕ್ಷಗಜಂಗಳನು ರಥ |
ಜಾಲವೆರಡಯುತವನು ತಱಿಗನು ಹಯದ ನಿಮಿಷದಲಿ ||
ತೂಳಿಸಿದ ದಶಲಕ್ಷವನು ಕಾ |
ಲಾಳಿನಲಿ ಖತಿಯಿಂದ ದೈತ್ಯನು |
ಬೀಳಿಚಿದನೈನೂಱು ಲಕ್ಷವ ಹೇಳಲೇನೆಂದ || ೬೫

ಆರಿದರೆ ತಾನೊಂದು ಕೋಟಿಯ |
ಮೋರೆಯಲಿ ಧರೆಗೊಱಗುತಿರ್ದುದು |
ಭೋರೆನರೆಯಲು ಬಲಮಹಾಂಬುಧಿ ಕಲಕಿಯಬ್ಬಿದುವು ||
ತೀರುವುದು ಬಲುಶರದ ಘಾಯದ |
ಊರುಕರಚರಣಂಗಳುಡಿದೈ |
ದಾರು ನಿಬ್ಬದಸಂಖ್ಯೆಯಿಂ ಯದುನಾಥಪರಿವಾರ || ೬೬

ಏನನೆಂಬೆನು ಭೂವರನೆ ಯದು |
ಸೇನೆಯೊಳಗುಳ್ಳಖಿಳವೀರರ |
ಕಾನನಕೆ ಬಲಿಗೊಟ್ಟು ಗಜರಥತುರಗಕಾಲಾಳ ||
ನ್ಯೂನವಿಲ್ಲದೆ ತಱಿದು ಮಿಗೆ ಮದ |
ದಾನೆಯಂತಿಹ ಕಲಿಘಟೋತ್ಕಚ |
ದಾನವನ ಕಂಡುಗ್ರಕೋಪದಿ ನಿಂದನಾರಾಮ || ೬೭

ತುಡುಕಿ ಮುಸಲವ ಕಲಿಘಟೋತ್ಕಚ |
ನೆಡೆಗೆ ಬಂದನು ಹಿಂತೆ ಕೌರವ |
ಪೊಡವಿಪನ ಕರಿಪುರವನಧಿಕಹಲಾಗ್ರದಿಂದೆತ್ತಿ ||
ಝುಡಿತೆಯೊಳ್ ಸುರನದಿಯೊಳಾಳಿಸೆ |
ನಡೆದ ಕೋಪಕೆ ಬಳಿಕ ಸಾಸಿರ |
ಮಡಿಯೆನಲು ಘುಡುಘುಡಿಸಿ ರೌದ್ರಾವೇಶಮನನಾಗೆ || ೬೮

ಹಸುಳೆಯೊಡನೇತಕೆ ರಣಾಗಮ |
ಕುಶಲವೆಲೆ ಬಲರಾಮ ಬಲುಗೆ |
ವ್ಯಸನಮುಸಾಹಸನೆಂದು ಪೇಳುವರಖಿಳಜನ ನಿನ್ನ ||
ಎಸೆವ ಶರಕೌಶಲವ ತೋಱಿಂ |
ದುಸಿರಿ ಚಾಪಕೆ ತೊಡಿಸಿದನು ಪೊಸ |
ಮಸೆಯ ವಿಶಿಖವನಿದೆ ಕೊ ಎಂದೆನುತೆಚ್ಚನಾಭೀಮ || ೬೯

ಸರಳ ಕಡಿದನು ರಾಮು ಭೀಮನ |
ಮರಳಿ ಶರದಿಂದೆಚ್ಚು ಕೇಳೈ |
ಮರುತಸುತ ಬಲ್ಲಿದನು ನೀನಹೆ ನಿನಗೆ ಸಂಧಿಯಲಿ ||
ಕರಿಸಹಸ್ರದ ಘನಪರಾಕ್ರಮು |
ವಿರುತಲಿಹುದನು ಕೇಳಿ ಬಲ್ಲೆನು |
ಸರಿ ಕಣಾ ನಮ್ಮಿಬ್ಬರಿಗೆ ಸಮರಂಗ ಕೇಳೆಂದ || ೭೦

ಇತ್ತಲೀಪರಿ ಒಲಗೆ ಭೀಮಗೆ |
ಹತ್ತಿದುದು ಬಲು ಸಮರ ಬಳಿಕದ |
ಬಿತ್ತರಿಸುವೆನು ಕೇಳಿದೈ ನೃಪ ಕಲಿಘಟೋತ್ಕಚನು ||
ಮುತ್ತಿ ಮೊಗದೊಗಂತೆ ಯಾದವ |
ಮೊತ್ತವನು ಹರಿಹರಿದು ಕೊಲುತಿರ |
ಲೆತ್ತ ಪೋಪವೆನುತ್ತ ಮೊರೆಯಿಟ್ಟುದು ರಮಾವರಗೆ || ೭೧

ಕಂಡು ಮುರಹರ ದೈತ್ಯರೊಳಗು |
ದ್ದಂಡಬಲ ಬಳಿಕಿವನ ಸರಿಸದ |
ಲಂಡಲೆದು ನಿಲಲೆಮ್ಮ ಬಲದೊಳು ತೀರದಾರ್ಗೆಂದ ||
ಕಂಡ ಕಡೆಗೋಡುವರ ನಿಲಿಸಿಯು |
ಖಂಡವಿಕ್ರಮನಿದಿರಿನಲಿ ಮುಂ |
ಕೊಂಡು ನಿಂದೆಸೆಯುತ್ತ ನುಡಿದನು ತೀವ್ರಕೋಪದಲಿ || ೭೨

ಎಲೆಲೆ ದನುಜಾಧಮನೆ ಯಾದವ |
ಹುಲುಬಲರು ಸರಿಯಲ್ಲವೆಂದೇ |
ಹಲವು ಗಳಹುತಲಿರ್ಪೆ ನೀ ತೃಣವಲ್ಲದೆನಗಿದಿರೆ ||
ತಿಳಿಯಲಿಲ್ಲವೆ ಮುನ್ನ ರಕ್ಕಸ |
ಹುಳುಗಳೆನಗಿದಿರಾಗಿ ಸಮರವ |
ಬೆಳಸಿ ತಾವೇನಾದರೆಂಬುದ ಮನದಿ ನೀನೆಂದ || ೭೩

ಗಹಗಹಿಸಿದನು ದನುಜ ನಭದ |
ಲ್ಲಿಹ ಸುರರು ತಲ್ಲಣಿಸಲದ್ರಿಯು |
ಗುಹೆಗಳೊಳ್ ದನಿದೋರುತಿ ಯದುಬಲವೆಲ್ಲ ಹಮ್ಮೈಸೆ ||
ಮಹಿ ನಡುಗೆ ದಿವವದುರೆ ಕೇಳೆಲೆ |
ವಿಹಗವಾಹನ ನಮ್ಮೊಡನೆ ಬಲು |
ಸಹಸ ಕೊಂಬುದೆ ಬಿಡದೆ ಹುಲುಬಲದೇಕೆ ಸಾರೆಂದ || ೭೪

ಬಱಿದೆ ಬಿಡುವವನಲ್ಲ-ನಿನ್ನನು |
ತಱಿದು ಶಾಕಿನಿಯರಿಗೆ ಬೋನವ |
ನಿರಿಸಿ ಬಳಿಕವೆ ಪಾಂಡುಪುತ್ರರ ರಕ್ತಮಾಂಸಗಳ ||
ಮರುಳುಬಳಗಕೆ ನೀಡಿ ಗಯನನು |
ವರಸುದರ್ಶನಕಾಹುತಿಯ ಸಂ |
ಗರಮುಖದೊಳಿಂತಿತ್ತಡಲ್ಲದೆ-ದೈತ್ಯ ಕೇಳೆಂದ || ೭೫

ಇಳೆಗಧಮ ಮುರ ನರಕ ಮಾಗಧ |
ಹುಲುಡಿಬಿಕನನು ಸಾಲ್ವ ಕಂಸನು |
ಬಲವಿಹೀನನು ಹಂಸ ಶಿಶುಪಾಲಕರು ಮೊದಲಾದ ||
ಖಳರ ಕೊಲುವಡೆ ಛೂಪುದೋಱದೆ |
ಹಲವು ಗಿರಿದುರ್ಗಗಳು ಕಾನನ |
ಜಳಧಿಗಳ ಹೊಕ್ಕತುಳಸಾಹಸಿಯೆಂದನಾದೈತ್ಯ || ೭೬

ಎನುತ ಕೃಷ್ಣನ ರಥವ ಬೇಗದಿ |
ದನುಜ ಬಂಸೆಳೆದಂಬರಾಗ್ರಕೆ |
ಘನತ್ವರಿತದಿಂದೆತ್ತಿ ನೆಲಕಪ್ಪಳಿಸಲಂಘೈಸೆ ||
ವನಜನಾಭನು ಜಿಗಿದು ಮತ್ತೊಂ |
ದನುಪಮಿತಮಣಿಮಯದ ರಥವನು |
ಜನಮನೋಹರಮಾಗಲೆಯ್ದಿದನತಿಸರಾಗದಲಿ || ೭೭

ಎಲವೊ ಖೂಳರ ತಿಲಕ ರಕ್ಕಸ |
ಕುಲಕೆ ತಿಳಿಯಲು ಕಾಲನಹೆ ತಾ |
ಬಳಿಕ ದೈತ್ಯಮಹಾರ್ಣವಕೆ ಬಡಬಾಗ್ನಿಯೆನಿಸುವೆನು ||
ಮುಳಿಯೆ ದಿಪಿಜಾರಾತಿಪರ್ವತ |
ಗಳಿಗೆ ಕುಲಿಶ ಕಣಾ ನಿಧಾನಿಸಿ |
ಗಳಹು ನೀನೆಂದನುತ ಸುರಿದನು ಸರಳನಸುರಾರಿ || ೭೮

ನಿರುತ ನೆಲವಿಗೆ ಹಾಱಲಾಱದೆ |
ಹರಿಪಥಕೆ ಲಂಘಿಸುವೆನೆಂಬೀ |
ಮರುಳುನರಗುಱಿಗಳಸು ಮಾಡುವುದೇನು ನೀ ಮುನ್ನ ||
ನೊರಜುದೈತ್ಯರಿಗಳುಕಿ ಬಂದಾ |
ಶರಧಿಯನು ಮನೆಮಾಡಿ ಕೊಂಡೀ |
ಹರಿಯೆನಱಿದವರೊಡನೆ ಹೆಮ್ಮೆಯದೇಕಕೆನುತೆಚ್ಚ || ೭೯

ಕರಿಗಳನು ತುಳಿದೊಟ್ಟಿ ಕೇಸರಿ |
ಮರಳಿ ಗವಿಯಲಿ ನಿಲುವ ತೆರದಲಿ |
ನೊರಜುದಾನವಗಣಸಮೂಹವ ಕೊಂದು ಬಳಿಕಿನಲಿ ||
ದುರುಳದೈತ್ಯರು ಸುಳಿಯೆ ಭರದಲಿ |
ಮುರಿದು ನುಂಗಲು ಹೊಂಚಿಕೊಂಡಿಹ |
ಹರಿಯವೋಲ್ ಶರಸಿಧಿಯೊಳಡಗಿಹೆವೆಂದನಸುರಾರಿ || ೮೦

ಕೇಳಿ ಕಿಡಿಗಳನುಗುಳಿ ರೋಷ |
ಜ್ವಾಲೆಯಂಕುರಿಸಲ್ಕೆ ಲಕ್ಷ್ಮೀ |
ಲೋಲನಿದಿರಲಿ ಬಾನ್ಸೋಂಕಿದು ಬಂದನು ಘಟೋತ್ಕಜನು ||
ಹೂಳಿದನು ಮುರವೈರಿ ಸಾಸಿರ |
ಕೋಲುಗಳ ಬಾಯೊಳಗೆ ಲಕ್ಕಿಸ |
ದಾಳವಾಡುತ ದನುಜನೆಂದನು ಮಂದಹಾಸದಲಿ || ೮೧

ಹಲವು ಸಿಡಿಲಿನ ಜಾಲ ಸ್ಫುರಂಬು |
ಲ್ಕಳುಕದಿಹ ವಿಂಧ್ಯಾದ್ರಿ ಮುಳ್ಕುಗ |
ಳೊಲೆಯೆ ಯುಕ್ತಿಯಿಂದಂಬಲ್ಲದೆ ಕೃಷ್ಣ ನೀನೆಸುವ ||
ಹುಲುಸರಳ ಹೊಡೆಗೆ ನಡುಗುವ |
ಬಲುಮೆ ಮುರಿವುದೆ ಎನುತ ದೈತ್ಯನು |
ಬಲುಭಯಂಕರ ಮಾಯದಾಕೃತಿಗಳಲಿ ಗಮಿಸಿದನು || ೮೨

ತಾಗಿದನು ಕರಿಯಾಗಿ ಹೆಬ್ಬುಲಿ |
ಯಾಗಿ ನಖದಂಷ್ಟ್ರಗಳ ಹರಿಸುತ |
ಕೂಗಿದನು ಗ್ರಹವಾಗಿ ನಭಃಪರ್ಯಂತರವು ಬೆಳೆದು ||
ಭೋಗಿಸಂಕುಲವಾಗಿ ಬಂದನು |
ಸಾಗರದ ತೆರೆಯಾಗಿ ಮುಳುಗಿಸಿ |
ಲಾಗಿನಲಿಯುರಿಯುಟ್ಟಿ ಕೊಂದನು ಸಕಲಸೈನಿಕವ || ೮೩

ನರಿಯು ತಂಡಗಳಾಗಿ ಬಿರ್ದನು |
ನರಿಯ ರೂಪಿನೊಳಟ್ಟಿಸೀಳ್ದನು |
ಹರಿಯ ವೇಷದ ತಾಳಿ ತಿಂದನು ಬಲದ ನಿಮಿಷದಲಿ ||
ಉರುತರದ ಮಳೆಯಾಗಿ ಸಿಡಿಲಿನ |
ಭರದಿ ಕೊಂದನು ಕೆಲರ ತಗುಳ್ದಿನ |
ಪರಿಯ ಗನ್ನೆಯುಲುಟ್ಟುತಿರ್ದನು ಸಕಲ ಯದುಬಲವ || ೮೪

ಹಳಚಿದನು ಕಬೊರ್ಗೆಯ ತೆಱದಲಿ |
ಹೊಳಕಿದನು ಭೇರುಂಡರೂಪಿನ |
ಒಳುಕಿಸಿದನಾಕ್ಷಣಕೆ ಶರಭನ ರೂಪ ಕೈಕೊಂಡು ||
ತುಳುಕಿದನು ಕಾಡ್ಗೋಣನಂದದಿ |
ಪ್ರಳಯದೆಮಕಿಂಕರರ ಬಗೆಯಲಿ |
ಮುಳಿದು ಕೊಂದನು ಕಲಿಘಟೋತ್ಕಚನಮಿತಸೈನಿಕವ || ೮೫
ಏನನೆಂಬೆನು ಭೂವರನೆ ಕೇ |
ಳಾನಿಶಾಚರನಸಮಸನುರವ |
ದಾನಿಕೆಯ ದೈತ್ಯಾನುರರದಟಂಗಿವಗೆ ಸರಿಯುಂಟೆ (?) ||
ದಾನವಾಂತಕನವನ ರಣದ ಸಿ |
ಧಾನಕತಿಪರಿಣಮಿಸಿ ಬಳಿಕವ |
ಧಾನದಲಿ ಗೆಲಿವನು ಕಣಾ ಪ್ರತಿಮಾಯೆಯಿಂದಾಗ || ೮೬
ಕರಿಗೆ ಕರಿ ಹರಿಗೆ ಹರಿ ಗಿರಿ ಗಿರಿ |
ಗುರಗಕುರಗ ವ್ಯಾಘ್ರ ಕಾಸರಿ |
ಶರಭ ಶರಭಕೆ ಕಬೊರ್ಗೆಗೆ ಕಬೊರ್ಗೆ ಸಿಧಾಸಿಸಲು ||
ನರಿಗೆ ನರಿ ಕಾಡ್ಗೋಣ ಕೋಣಗೆ |
ಧರೆಗೆ ಧರೆ ಯುದ್ಧದಲಿ ಮಾಯೆಯ |
ನೆರಡುಮಡಿಯೆನೆ ಸೃಜಿಸಿದನು ಬಹುದಾನವಧ್ವಂಸಿ || ೮೭
ಆವನ ಬಲಕಕ್ಷಯದ ಬಾಣವ |
ಭವಸಖನು ತೊಡಲೊಂದು ಹತ್ತಾ |
ಗವಗಡಿಸಿ ಶತಸಾಸಿರಂಗಳು ಲಕ್ಷಸಂಖ್ಯೆಯಲಿ ||
ತವತವಗೆ ಹೊಂಚುತ್ತ ದಾನವ |
ನಿವಹವನು ನಿಮಿಷದಲಿ ಕಾಲನ |
ಭವನಕಯ್ದಿಸಿತೇನನೆಂಬೆನು ಹರಿಶರೋನ್ನತಿಯ || ೮೮
ಕಂಡು ದಾನವನಾಗ ಬಲಿಪನು |
ದಿಂಡುಗೆಡಹಿದ ಪರಿಯ ಧನುವನು |
ಕೊಂಡು ಕೋಪದಲುರಿದು ಶಕ್ತಿಯಲೆಚ್ಚು ತನಗಿಡಲು ||
ಅಂಡಲೆದು ಬರುತಿರ್ಪ ಶರವನು |
ಖಂಡಿಸಿದನಸುರಾರಿ ಮಧ್ಯದಿ |
ಬಂಡತನವೇಕೆನುತಲೈದಂಬಿನಲಿ ನಿಮಿಷದೊಳು || ೮೯

ನೋಡಿದನು ದಾನವನ ಹರುಷದೊ |
ಳಾಡಿದನು ಬಳಿಕೀಸು ರಾಕ್ಷಸ |
ಬೇಡುಗಳೊಳಗ್ಗಳನು ನೀನಹೆ ಗುಣಕೆ ಮತ್ಸರವೆ ||
ಪಾಡ ಕಾಣೆನು ನಿನಗೆ ಸೈರಿಸು |
ಖೋಡಿಗಳೆಯದೆ ತನ್ನ ಬಾಣವ |
ನೀಡಿರಿದು ನೀ ಕಡಿದಡತಿಬಲನಹುದಲೇ ಎಂದ || ೯೦

ಎಂದು ರುಕ್ಮಿಣಿಯರಸ ಕಾರ್ಮುಕ |
ಕೊಂದು ಮೇಘಾಸ್ತ್ರವನು ಸಂಧಿಸಿ |
ಮಂದಮತಿ ದನುಜಾಧಮನೆ ನೀನಿಂದಿದಱ ಸರಿಸದಲಿ ||
ನಿಂದೆಯಾದಡೆ ಸರಳು ನಿನ್ನನು |
ಕೊಂದಡಲ್ಲದೆ ಬಿಡದು ಸಾರಿದೆ |
ನಿಂದಿರದೆ ನೀ ಹೋಗು ಹೋಗೆಲೆ ಮರುಳೆ ಹೋಗೆಂದ || ೯೧

ತೆರಳುವೆನೆ ಗೋಪಾಲ ನಿನಗೀ |
ಮರುಳುತನವೇಕೆಮ್ಮೊಡನೆ ಬಹ |
ಶರವ ಕಡಿವೆನು ಚಿತ್ರದಿಂದಬ್ಜಜನ ಪದದಾಣೆ ||
ತ್ವರಿತದಿಂ ಹೂಡೆನಲು ಏಗೆ ಮುರ |
ಹರನೆಸಲು ಮಧ್ಯದಲಿ ಬರುತಿಹ |
ಶರವನಿಕ್ಕಡಿಮಾಡಿ ಖಂಡಿಸಿ ದೈತ್ಯ ಬೊಬ್ಬಿಱಿದ || ೯೨

ಕೆಡೆದು ಹಿಂದಣ ಭಾಗವವನಿಗೆ |
ಸಿಡಿದು ಬಿದ್ದುದು, ಮುಂದಣರ್ಧವು |
ಝುಡಿತೆಯಲಿ ದಾನವನ ಶಿರವನು ಕೊಂಡು ನಭಕಡರಿ ||
ಒಡನೆ ಬಿದ್ದುದು ಧರೆಗೆ. ದಿಕ್ಕರಿ |
ಯೊಡೆಗೆಡೆಯೆ ಭೂಕಂಪವೆಸೆಯಲು |
ಕಡುಮುದದಿ ತಿರುವೇಂಕಟೇಶನು ನಲಿದು ಬೊಬ್ಬಿಱಿದ || ೯

ಅಂತು ಸಂಧಿ ೨೩ ಕ್ಕಂ ಪದ ೧೫೨೭ ಕ್ಕಂ ಮಂಗಳಂ.

# ಇಪ್ಪತ್ತನಾಲ್ಕನೆಯ ಸಂಧಿ.

ಸೂಚನೆ || ಹಳಚಿದರು ಜಂಭಾರಿನಮುಚಿಯ |
ಕೊಳುಗುಳಕೆ ನಾಲ್ಕೆಂಟುಮಡಿಯಿನ |
ಲಲಘುಬಲಬಲರಾಮಪವನಜರಧಿಕಶೌರ್ಯದಲಿ ||

ವಿಮಲಮತಿ ನೃಪ ಕೇಳು ಲಕ್ಷ್ಮೀ |
ರಮಣ ದೈತ್ಯನ ಧುರದಿ ಸೋಲಿಸೆ |
ಸುಮನಸರು ಕೊಂಡಾಡಲಿತ್ತಲು ಪವನನಂದನನು ||
ಸಮನಿಸಿದ ರೋಷದಲಿ ರಾಮನ |
ನಮಿತಶರಗಳಲೆಸೆಯಲಾಕ್ಷಣ |
ವಮಿತಶರಗಳ ಕಡಿದು ಭೀಮನನೆಚ್ಚು ಬೊಬ್ಬಿರಿದ || ೧

ಎಚ್ಚ ಬಾಣವ ಕಡಿದು ಮಾರುತಿ |
ಮುಚ್ಚಿದನು ಸರಳಿನಲಿ ರಥವನು |
ಹೆಚ್ಚಿ ಬಹ ಕುದುರೆಗಳ ಸೂತನ ರಥದ ಚಕ್ರಗಳ ||
ನಿಚ್ಚಟದಿ ರಾಮನನು ಬೇಗದಿ |
ಒಚ್ಚರಣೆಗೋಲ್ಗಳಲಿ ತೆಗೆಕಿಗೆ |
ದೆಚ್ಚು ಬೊಬ್ಬಿರಿದನು ಜಗತ್ರಯ ಬೆದರಲಾಕ್ಷಣಕೆ || ೨

ಬಳಿಕ ರಾಮನ ಸೇನೆಯಲಿ ಕಡು |
ಮುಳಿದು ಕೊಂದನು ಲಕ್ಷಕುದುರೆಯ |
ನಿಳೆಗೆ ಕೆಡಹಿದನೆರಡುಸಾವಿರ ಮತ್ತಗಜಘಟೆಯ ||
ಬಲುರಥವನೈನೂರು ಕಾಲಾ |
ಳ್ಗಳನು ಕೋಟಿಯ ನಿಮಿಷದರ್ಧಕೆ |
ಕಳುಹಿದನು ಯಮರಾಜನಗರಿಗೆ ಕೂಡೆ ಕಲಿಭೀಮ ||

ಮತ್ತೆ ಸುರಿದನು ಸರಳ ಸೋನೆಯ |
ಮತ್ತಗಜ ರಥ ವಾಜಿ ಪಾಯ್ದಳ |
ದತ್ತ ಹಲಧರನಂಗದಲಿ ತೆರಪಿಲ್ಲವೆಂಬಂತೆ ||
ಬಿತ್ತರಿಸಲಳವಲ್ಲ ಪವನಜ |
ನತ್ಯಧಿಕಸಾಹಸವನೆಂದು ವಿ |
ಯತ್ತಳದಿ ಸುರರುಲಿದು ಕುಸುಮವೃಷ್ಟಿಗಳ || ೪

ಲೇಸು ಲೇಸೆಲೆ ಭೀಮ ಸಮರವಿ |
ಲಾಸ ನೋಡುವುದೆಮ್ಮ ಬಿಲುವಿ |
ದ್ಯಾಸಘಾಡಿಕೆತನವ ನೀ ಲೇಸಾಗಿಯರಿಗೆಗಳಿಗೆ ||
ಆಸವಿಾರಣನಲ್ಲಿಪರಿಯಂ |
ಕಾಸುರದಿದೂರ್ಮುಟ್ಟದಿರ್ದಡೆ |
ಭಾಸುರದ ರಣಕುಶಲನಲ್ಲೆಂದೆಚ್ಚನಾರಾಮ್ನ ||  ೫

ಹರಿಚತುಷ್ಟಯುಕ್ಕೈದು ಶರವನು |
ಹರಿಮಯುದ ರಥಕೆಂಟು ಕುಳಿತಿಹ |
ಹರಿಸುತಗೆ ಹದಿನೆಂಟು ಸಾರಥಿಗೆರಡು ಬಾಣವನು ||
ಹರಿಸಿ ಬಲನತಿಕೋಪದುರುಬೆಯು |
ಹರಿಬದಲಿ ತೆಗೆದೆಚ್ಚನೈ ನೃಪ |
ವರಶಿರೋಮಣಿ ಕೇಳು ಹೇಳುವೆನೇನನದ್ಭುತವ ||  ೬

ನೊಂದನನಿಲಾತ್ಮಜನು ಹಯಗಳು |
ಕಂದಿದುವು ಬಾಣಾಗ್ನಿಕಣದಲಿ |
ಮುಂದುಗೆಟ್ಟನು ಸೂತ ಮಿಗೆ ಮೈಮರೆದು ರಥದೊಳಗೆ ||
ಮಂದರೋಪಮಭೀಮಗೆಚ್ಚಲು |
ಮಂದವಾದುದು ಬಳಿಕಲಾಯುಮ |
ನಂದನನು ಚಿಂತಿಸುತಲಿರ್ದನು ಕಾನನಾಂತರದಿ ||  ೭

ಅನಿತರೊಳ್ ಸಹದೇವನಕುಲರು |
ಕನಲಿ ಶರಗಳ ಪೂಡಿ ಬಲರಾ |
ಮನ ಸಮಿಾಪಕೆ ಸುಳಿಸೆ ಮಧ್ಯದಿ ಕಡಿದು ಬಾಣಗಳ ||
ಜನಪನನುಜರು ಬಂದಿರ್ರೈ ಭೀ |
ಮನ ಹರಿಬ ತಮಗೆಂದು ನಗುತವೆ |
ಸುನಿಶಿತಾಸ್ತ್ರಗಳಿಂದಲೆಚ್ಚನು ಮುಳಿದು ಬಲರಾಮ ||  ೮

ಸುಳಿಯ ಬಲ್ಲದೆ ಪೆರ್ಬುಲಿಯ ಮುಂ |
ದುಲಿದು ಮರಿಹುಲ್ಲೆಗಳು ಸಿಂಹವ |
ಬಳಸಿ ಕರಿ ನಿಲುವುವೇ ಬಲಗಿದಿರಾಗಿ ಹಸುಳೆಗಳು ||
ಕೊಳುಗುಳವ ಕಾವಾಂತು ನಿಲುವ |
ಗ್ಗಳರೆ ತಾಗಿದ ಶರಹತಿಗೆ ಬ |
ದ್ದಳೆಯುಲಡಗೆಡದಿರ್ದರೇನೆಂಬೆನು ವಿಚಿತ್ರವನು ||  ೯

ಕಂಡನೆಚ್ಚಱುದೋಱಿ ಪವನಜ |
ದಿಂಡುಗೆಡದಿಹ ಯಮಳರನು ಬಳಿ |
ಕಂಡಲೆದು ಬಹ ರಾಮನುಱವಣಿಯನು ಸಗಾಢದಲಿ ||
ಚಂಡವಿಕ್ರಮದಿಂದ ನಿಜಕೋ |
ದಂಡವನು ಧ್ವನಿಮಾಡಿ ಸೆಳೆದು |
ದ್ದಂಡಶರವೆಂಟಱಲಿ ಮುಸಲಿಯ ರಥವನೊಡೆಯೆಚ್ಚ || ೧೦

ಸಡಲಿ ಬಿದ್ದುವು ಕೆಲಕೆ ಗಾಲಿಗ |
ಳುಡಿದು ಕೇತನವಿಳೆಗೆ ಕೆಡೆಯಿತು |
ಕಡುಮನದ ಹಯ ನಾಲ್ಕಱಂಗದಿ ಹೊಕ್ಕು ಹಾಯಿದುವು ||
ಝುಡಿತೆಯೊಳ್ನಾರಾಚಸಾರಥಿ |
ಮಡಿಯಲವಸರವಾಯ್ತು ಹಲಧರ |
ಘಡಯೆನುತ ಬೊಬ್ಬಿಱಿದು ಹೊಸರಥಕಡರಿ ಖ್ಯಾತಿಯಲಿ || ೧೧

ಎಲವೊ ಪವನಜ ಸುರಗಿರಿಗೆ ಚಂ |
ಚಲವಹುದೆ ಸುಳಿಗಾಳಿಯಲಿ ಕರಿ |
ಕಳಭಗಳು ಹೆದಱಿಸಲು ಒಲ್ಲವೆ ಮುಸಿದು ಮೃಗಪತಿಯ ||
ಎಲೆವನೆಯ ನಾಯಿಕರಗೆಮ್ಮಯ |
ಬಲುಮೆ ಮುರಿವುದೆ ಸಾಕು ಬಿಸುಡೈ |
ಹುಲುಧನುವ ಗದೆಗೊಂಡು ತನಗಿದಿರಾಗಿ ಬಾಯೆಂದ || ೧೨

ಎನುತ ತನ್ನಯ ಧನುವ ನಿಜಸೂ |
ತನ ಕರದಿ ಕರೆದಿತ್ತು ಬಲುಗದೆ |
ಯನು ನಿಧಾನದಿ ಸೆಳೆದು ಹರಿನಾದವನು ಮಾಡುತ್ತ ||
ಅನುವರದೊಳಿದಿರಾಗಿ ಹಲಧರ |
ಲಖಿಲಜನ ಘರ್ಜಿಸುತ ಕರೆದನು |
ಕಸಲಿ ಶೌರ್ಯವನೇನನುಸಿರುವೆನೆಂದನಾ ಮುಸಿಪ || ೧೩

ಕುಱಿಯ ಹಿಂಡಿನ ಕಾವಲಿಹುದಂ |
ದಱುಹೆ ತ್ರೋಳಗೆ ಕಟ್ಟಳೆಯೆ ಸೀ |
ಗುರುತರದ ಗದೆಗೊಂಡು ಯುದ್ಧಕೆ ನಿಲಲುಬೇಕೆನಲು ||
ಭರದಲದಱಿಂ ಮುನ್ನ ಬಹೆನತಿ |
ತ್ವರಿತದಲಿ ತಾನೆಂದು ರಾಮನೊ |
ಳಿರದೆ ಮೂದಲಿಸುತ್ತ ನಿಂದನು ಭೀಮ ಹರುಷದಲಿ || ೧೪

ಕ್ಷಣದಲಿ ಕಲಿಭೀಮ ಚಾಪವ |
ಮುದದಿ ರಥದೊಳಗಿರಿಸಿ ತಾ ಬೇ |
ಗದಲಿ ಧುಮ್ಮಿಕ್ಕಿದನು ಧಾರಿಣಿಗಧಿಕ ಹರುಷದಲಿ ||
ಗದೆಯ ಕೊಂಡನು ಸಿಂಹನಾದದ |
ಲದುರಲಿಳೆಯಾರ್ಭಟಿಸಿ ಹೊಯ್ದನು |
ಮದನತಾತಾಗ್ರಜನ ವಕ್ಷಸ್ಥಳವ ನಿಮಿಷದಲಿ || ೧೫

ತರಹರಿಸಿ ಬಲರಾಮ ಹೊಯ್ದನು |
ಮರುತಸುತನಂಗವನು ಬಳಿಕವ |
ಬೆರಸಿಹೊಯ್ದನು ಮುಸಲಿಯನು ಹೋರಟ್ಟಿ ಬಲರಾಮ ||
ತಿರುಗಿ ಹೊಯ್ದನು ಪವನತನಯನ |
ಸರಿಸರಿಗೆ ಕಾದಿದರು ಗದೆಯಲಿ |
ಸುರರು ಸ್ವೈರಗಾಗೆ ಧರೆ ನಡನಡುಗೆ ಬೇಸಱದೆ || ೧೬

ಕರಿಕರಿಯ ಹೋರಟೆಯೊ ನೋಡಲು |
ಗಿರಿ ಗಿರಿಯ ಕಾಳಗವೊ ತಾನಿದು |
ಧುರಗಲಿಗಳಾಟೋಪ ಹೊಸತಾಯ್ತೆಂದು ಸುರರುಲಿಯೆ ||
ಎರಡುಗಳಿಗೆ ಗದಾಪ್ರಹಾರದಿ |
ಮಱದಿತರಚಿಂತೆಯನು ಹಲಧರ |
ಮರುತಸುತರೆಡೆವಿಡದೆ ಹೊಯ್ದಾಡಿದರು ರಣದೊಳಗೆ || ೧೭

ಬಿರಿದುದವನೀತಳವು ದಿಕ್ಕರಿ |
ಜರಿದುವೆಣ್ದೆಸೆಗಳಲಿ ಕುಸಿದುವು |
ಕೊರಳು ಫಣಿಪಂಗೇನನೆಂಬೆನು ರಣಚಮತ್ಕೃತಿಯ ||
ಒರಲಿದನು ಕೂರುಮನು ಶರಧಿಗ |
ಳಿರದೆ ತಳವೆಳಗಾದುವಬ್ಬರ |
ಭರದ ಗದೆಹೊಯ್ಲುಗಳಲದ್ಭುತವಾಯ್ತು ಜಗವೆಂದ || ೧೮

ಬಿಸುಟರಿಬ್ಬರು ಗದೆಗಳೆರಡನು |
ರಸಿಕತನದೊಳ್ ಮಲ್ಲಯುದ್ಧವ |
ನೆಸಗಬೇಕೆಂದಾಱ ತೊಡೆಗಳ ಹೊಯ್ದು ಬೊಬ್ಬಿಱದು ||
ಮಸೆದು ಕರಗಳನೊರ್ವರೊರ್ವರು |
ಮಸಗಿದರು ಮುಷ್ಟಿಪ್ರಹಾರದ |
ಲುಸಿರ ತೆಗೆಬಿಗೆಯಿಂದ ಮಂಡಿಯನೊಡ್ಡಿ ಸಮವಾಗಿ || ೧೯

ಹಿಡಿವ ಬಿಡಿಸುವ ಬಿಡಿಸಿದಾಕ್ಷಣ |
ಪೊಡವಿಗುಪ್ಪರಿಸುವ ಮಹಾನಿಲು |
ಕಡೆಯ ಬಂಧವ ಕೊಳುವ ಉಳಿಯುಲಿ ಹೊಗುವ ಹೆರೆದೆಗೆವ ||
ದೃಢದ ಮುಷ್ಟಿಯ ಜಡಿದು ತಲೆಕೆಳ |
ಗಡಿಯು ಮೇಲಾಗೇಳ್ವ ಬಂಧದ |
ಸಡಗರದಿ ಹೆಣಗಿದರು ಹಲಧರಪವನನಂದನರು || ೨೦

ಏಳುವರು ಬೀಳುವರು ನಿಲುವರು |
ಸೂಳುಪಾಳಿಗೆ ಸೈರಿಸುವರೊಡ |
ನಾಳುವಾಡುವರವುಕುವರು ಕೆಡಹುವರು ಹೊಂಚುವರು ||
ಸಾಳುವಂಗಳ ತೆಱದಿ ಗಿಡಗನ |
ಕಾಳೆಗದ ವಿಧದಂತೆ ಕುಕ್ಕುಟ |
ಜಾಲದಂದದಿ ಹೆಣಗಿದರು ಬೇಸಱದೆ ಪಟುಭಟರು || ೨೧

ಹರಿತರಣಿಸುತರಂತೆ ಮುನ್ನಾ |
ಮರುತಸುತ ದಶಕಂಠರಂದದಿ |
ಪರಿಕಿಸಲು ಚಾಣೂರಮಲ್ಲರ ದನುಜಸಂಹರನ ||
ಪರಿಪಡಿಯಲೀಭೀಮಮುಗಧರ |
ಧುರಕೆ ತಾನ್ನೈನೂಱುಸಾಸಿರ |
ಪರಿಯೆನಲು ಹೆಣಗಿದರು ಹಲಧರಪವನನಂದನರು || ೨೨

ರಾಮಭೀಮರ ಕದನ ಜಗಕತಿ |
ಕಾಮಸವ ತೋಱಿದುದು ದಿವಿಜ |
ಸ್ತೋಮ ರಕ್ಕಸಮನುಜರೊಳಗಿನರಂತೆ ರಣಮುಖಗ ||
ಕಾಮಿಗಳ ಕಾಣಿವು ಕುಮಾರ |
ಸ್ವಾಮಿತಾರಕರೆಂಬರಾಜಿಗೆ |
ಯೀಮಹಿಮರಾಟೋಪಕೆಣೆಯಲ್ಲವರ ರಣವೆಂದ || ೨೩

ಈಪರಿಯ ಸಮಸತ್ವಸಹಸವ |
ಲೀ ಪುರಾತನಕಲಿಗಳನು ವಿ |
ಕ್ಷಾಪುರಂದರಕಮಲಗರ್ಭಾಗರಿದೆನಿಪ ರಣದಿ ||
ಚಾಪಗಳಲುರುಗದೆಗಳಲಿ ಸ |
ಕ್ಷೇಪಮಾನಿತ ಮುಷ್ಟಿಯುದ್ಧದಿ |
ಭಾಪುರೇ ಹರನ ಕರಿಗೆಣೆಯುಹರಿವರು ಕೇಳೆಂದ || ೨೪

ಅನಿತಱೊಳ್ ಮುರವೈರಿ ಭೀಮನ |
ಸುನಿಶಿತಾಸ್ತ್ರಂಗಳಲಿ ಮುಸುಕುತ |
ಘನತರದ ಕೋಪದಲಿ ರಾಮನ ನಿಲಿಸಿ ಮುಂದೈದಿ ||
ವಸಧಿಪರಿಯಂತೇಕೆ ಕಾಳೊಗ್ಗೆ |
ಗನುವರದ ಪಯಪಾಡು ನೀನ |
ಣ್ಣನಲಿ ಸಮರಕೆ ಕೆಣಕುವವನೇ ಖೂಳ ಹೋಗೆಂದ || ೨೫

ಮುರರಿಪುವ ಹಿಂದಿಕ್ಕಿ ಸಾಂಬನು |
ಸ್ಮರನು ಕೃತವರ್ಮಾದಿ ಕಲಿಗಳು |
ಮರುತಸುತನನು ಮುಸಕಿದರು ಫಡ ನಿಲ್ಲುನಿಲ್ಲೆನುತ ||
ಸರಳ ಸೋನೆಯು ಸುರಿಯೆ ಪವನಜ |
ತಿರುಹಿ ಗದೆಯಿಂದಪ್ಪಳಿಸಿ ನಿ |
ರ್ಭರದಲರೆಯಟ್ಟಿದನು ಯಾದವವೀರರನಿಬರನು || ೨೬

ತೊಟ್ಟು ಮಾಗಿದ ಫಲನಿಚಯ ಬಿರು |
ಗುಟ್ಟುವನಿಲೋದ್ಧತಿಗುದುರುವೋಲ್ |
ಕಟ್ಟಳವಿಯಲಿ ನಿಂದ ಯಾದವವೀರರಲ್ಲಲ್ಲಿ ||
ತಟ್ಟನುರುಳಿದರನಿಲಜನ ಗದೆ |
ಯಟ್ಟುಳಿಗೆ ಕೈಕಾಲು ತೊಡೆ ಮುರಿ |
ದಿಟ್ಟಡೆಯುದೆಂಬಂತೆ ಬಿದ್ದರು ರಣಮಹೀತಳದಿ || ೨೭

ಸವಱಿ ಯಾದವವೀರವರ್ಗವ |
ನವಿರಳದ ಬಲನಿಚಯವನು ಕಲಿ |
ಪವನಸುತ ನಸುನಗುತ ನಿಂದಿರಲತ್ತಲಾತ್ಮಜನ ||
ಭವಸಖನು ಮಡುಹಿದನದೆಂಬೀ |
ರವವನಾಲಿಸಿ ಕೇಳಿದನು ತ |
ನ್ನವರ ಕೆಯ್ಯಲಿ ಮೂರ್ಛೆಯಿಂ ಬಸವಳಿದನಾಕ್ಷಣಕೆ || ೨೮

ಶಿವಶಿವಾ ಕಾನನದಿ ಸುಖದಲಿ |
ಯುವತಿಸುತನೊಡಸಿರ್ದು ನಮ್ಮಯ |
ಭವನವನು ಮುನ್ನೊಮ್ಮೆ ಗುರುತಱಿಯದೆ ನಿಜಾದರದಿ ||
ಅವತರಸಿದಂದಿಂದು ನೊದಲಾ |
ಹವಕೆ ಬಳಸದ ಹಸುಳೆಯನು ನೆನೆ |
ದವಗಡದ ಸಂಗರಕೆ ಬಲಿಯನು ಕೊಟ್ಟೆನಕಟೆಂದ || ೨೯

ಕೂಳ ಹಂಗಿನಿತಿಲ್ಲ ತನ್ನ ವಿ |
ಶಾಲಭವನಾಂತರದಲಣುಗಗೆ |
ಮೇಲೆ ಕೊಡುತಿಹ ಜೀತವಿನಿತಿಲ್ಲವನೊಡನೆ ಬಂದ ||
ಬಾಳ ರಕ್ಕಸಸೇನೆಗಿನ್ನೇ |
ವೇಳುವೆನು ಬಂದೀ ರಣಾಗ್ರಕೆ |
ಕಾಳುಮಾಡಿದೆಸವನ ನೆನೆಯಲು ಬಹುದೆ ತಾನೆಂದ || ೩೦

ಏಕೆ ಚಿಂತೆ ವೃಥಾಮನೋವ್ಯಥೆ |
ಸಾಕದಂತಿರಲೆಮ್ಮ ಕೊಲಲೆಂ |
ದಾಕೆವಾಳದಿ ಧುರಕೆ ನಿಂದಿಹ ಹರಿಯನುರೆ ಗೆಲಿದು ||
ಲೋಕ ಮೆಚ್ಚಲು ಗಯನ ರಕ್ಷಿಸಿ |
ಪಾಕಶಾಸನ ಬ್ರಹ್ಮರಲ್ಲಿಗೆ |
ಭೀಕರದ ಶೌರ್ಯದಲಿ ಸುತನನು ತಹೆನು ತಾನೆಂದ || ೩೧

ತರಳನನು ತಂದೀಯದಿರ್ದಡೆ |
ಹರಣಗೊಂಬೆನು ಯಮನ ಮೃತ್ಯುವ |
ನೊರಸುವೆನು ಅಜಹರರ ಕೆಣಕುವೆನೆನುತ ಕಲಿಭೀಮ ||
ಭರದ ಶೌರ್ಯದಿ ಗದೆಯ ತಿರುಹುತ |
ನಿರುಪಮಿತ ತಿರುವೇಂಕಟೇಶನ |
ಧುರವನಾಲಿಸುತಿರ್ದನೆಲೆ ಭೂಪಾಲ ಕೇಳೆಂದ || ೩೨

ಅಂತು ಸಂಧಿ ೨೫ಕ್ಕಂ ಪದ ೧೫೫೯ಕ್ಕಂ ಮಂಗಳಂ.

## ಇಪ್ಪತ್ತಾರನೆಯ ಸಂಧಿ

ಸೂಚನೆ || ಭುವನ ಮೂರಱ ಗಂಡ ವರತಾ |
ತ್ರವಶರಥಭೇರುಂಡ ಯದುಬಲ |
ನಿವಹವನು ಸಮ್ಮೋಹನಾಸ್ತ್ರದಿ ಗೆಲಿದನಾಪಾರ್ಥ ||

ಪರಮಪುಣ್ಯಶ್ಲೋಕ ಪಾಂಡವ |
ವರತನೂಭವಪೌತ್ರ ಘನಬಂ |
ಧುರಶಶಾಂಕಫಣೀಂದ್ರಮೃಗಪತಿ ಕ್ಷೀರಪಾರಾಶಿ ||
ಸುರಮಹಾಗಜವೀರ ಹರಗಿರಿ |
ವರನಿಜೋನ್ನತಕೀರ್ತಿಯುತ ಭೂ |
ವರಶಿರೋಮಣಿ ರಾಯ ಜನಮೇಜಯನೆ ಕೇಳೆಂದ || ೧

ನಗಧರನ ಶರದಿಂದ ಮಡಿದಿಹ |
ಮಗನ ನಿಲವನು ಕಂಡು ಪವನಜ |
ಮೊಗದಿ ದುಗುಡವ ಮಾಡಿಕೊಂಡಿರೆ ನೋಡಿ ಮುರವೈರಿ ||
ನಗುತಲೆಂದನು ಭೀಮ ಬಿದ್ದಿಹ |
ವಿಗಡ ದನುಜಂಗೇಕೆ ಹಲುಬುವೆ |
ಯುಗಣಿತದ ವೇದನೆಯು ಕಾಣಲಿಕುಂಟು ಬಳಿಕೆಂದ || ೨

ಬಲ್ಲ ಹಿಡಿ ತಡವೇಕೆ ಗದೆ ತರು |
ವಲ್ಲಿ ನಿನಗಾಪ್ತದ ಸಹಾಯಿಗ |
ಕೆಲ್ಲಿ ಸೈರಿಸಲರಿಯೆವಾಪಿನ್ನೇತಕೇಳೆನಲು ||
ಘಲ್ಲಿಸುವ ಕೋಪದಲಿ ನಿಲ್ಲದೆ |
ತಲ್ಲಣಿಸಿ ಹಲುಬಿಸುತಲಪ್ರತಿ |
ಮಲ್ಲಪವನಜ ಗದೆಯ ಕೊಂಡಿದಿರಾದನಾಹರಿಗೆ || ೩

ಅಸುರಹರಸದ್ಧರ್ಮಕಾರ್ಯವ |
ಹೆಸರಿಸಿದ ಪೂವನ ಕೊಲ್ಲುವ |
ಡಸದಳವು ಕಾಲಂಗೆ ನಮ್ಮದು ರಾಜಧರ್ಮವೆಲೆ ||
ಅಸಮಶೌರ್ಯದಿ ನಿಮ್ಮ ಸಾಹಸ |
ದೆಸಕವಂ ನಿರ್ಣೈಸಿ ಬಳಿಕವೆ |
ಸಸಿನದಿಂ ಸುತನಸುವ ತಾನಾರಯ್ವೆನೆನುತಿರ್ದ || ೪

ಧರ್ಮದಿಂದಲೆ ನಡೆಯಲಾಗಿಯೆ |
ನಿರ್ಮಲದ ಕಾನನವ ಹೊಕ್ಕರಿ |
ಧರ್ಮವೆಂದೇ ನಡೆಯೆ ಬಳಿಕ ಶಿಖಂಡಿತನವಾಯ್ತು ||
ಧರ್ಮವನು ಬಿಡಬಾರದೆಂದೇ |
ದುರ್ಮತಿಗೆ ಮನೆಮಾಡಿ ಕಡೆಯಲಿ |
ನಿರ್ಮಮತೆಯಿಂದಣುಗನನು ಹೋಗಾಡಿದೈಯೆಂದ || ೫

ಲೇಸನಾಡಿದೆ ಕೃಷ್ಣ ಧರ್ಮವೆ |
ಭಾಸುರಾಮಲಕೀರ್ತಿ ಮುನ್ನವು |
ಹೀಶ ರಘುಪತಿ ನಳ ಹರಿಶ್ಚಂದ್ರಾದಿಗಳು ಮುದದಿ ||
ಮೀಸಲಳಿಯದ ಸತ್ಯಕೋಸುಗ |
ವಾಸವಾಧಿಪಬ್ರಹ್ಮರಱಿಯೆ ಮ |
ಹಾಸುಖಂಗಳ ತೊಱೆದು ಪಡೆಯರೆ ತುದಿಗೆ ಸಂಪದವ || ೬

ಅವಚಿಸಿಂದವೆ ಧರ್ಮಕಾರ್ಯವ |
ವಿಧಿಸಲದು ಕೈಗೆಟ್ಟು ರಿಪುಗಳ |
ಸದೆದು ಕೀರ್ತಿಯನೈದಿಪ್ಪುದು ಸಂದೇಹವೇನಿದಕೆ ||
ಇದೆಕೊ ಗದೆ ಬಲ್ಲಿದೆ ಕೊ ತರುವರ |
ಪದೆ ಸಮೀಪದೊಳಾವುದಮರಿಕೆ |
ಮದನಪಿತ ನಿನಗೆಂದು ಗದೆಯನು ಬೀಸಿದನು ಭೀಮ || ೭

ಗದೆಯು ಗಾಳಿಗೆ ಸನಿಯದಲ್ಲಿಹ |
ಕುಧರವಳ್ಳಾಡಿದುವು ವೃಕ್ಷಗ |
ಳದುರೆ ಬೇರ್ಗಳು ಸಹಲಿ ಗಗನಾಂಗಣಕೆ ತಾಗೆಲೆಯ ||
ವಿಧನಿ ಹಾರಿದುವೇನನೆಂಬೆನು |
ಮದನಪಿತ ಮುಂಡಿಸಿದ ಮಣಿರಥ |
ವುದಧಿ ಸುಳಿಯುಂದದಲಿ ತಿರುಗುತಲಿರ್ದುದರಗಳಿಗೆ || ೮

ಬವಣಿಗೊಂಡುವು ಕುದುರೆ ಸಾರಥಿ |
ದಿವಪಥಕೆ ಮನಮಾಡುತಿರ್ದನು |
ವಿವಿಧವಿಧದಿಂದಸುರಮರ್ದನ ಪವನನಂದನನ ||
ಅವಿರಳದ ಸತ್ವಾತಿಶಯದಭಿ |
ನವಕೆ ಪಿಗ್ಗುತ ಶೋಕಮುಖಿಮುಕೊ |
ಳಿನಸ ಗೆಲುವವನಾವನೆಂದನು ತನ್ನ ಮನದೊಳಗೆ || ೯

ಹೋದ ಮಾರಿಯು ಕರೆಯು ಮನೆಯೊಳ |
ಗಾದರಿಸಿ ಕೆಡುವಂತೆ ಕಡೆಯಣ |
ಬೀಡುಗಲಹವ ಕೊಂಡು ಕೊನರುವ ಮುರುಳರಂದದಲಿ ||
ಹಾದಿಗೊಂಡೆಯ್ದುವ ಗಯಾಖ್ಯನ |
ಸಾದರದೊಳವಗಾಗಿ ನಿಜಸುತ |
ಸೋದರಾದಿಗಳಳಿವುದುಚಿತವೆ ಎನುತ ಹರಿಯೆಚ್ಚ || ೧೦

ದೇವ ತಾವಪರಾಧಿಗಳೆ ನೀ |
ವಾವೆಡೆಯಲಹುದೆನಿಸುವಿರಿ ಮು |
ನ್ನಾವಿರಂಚಿಹರಾದಿಸುರರೇನರಿಯರೇನಿದಱ ||
ಭಾವವನು ಗಯ ಭಯದಿ ತನ್ನಯ |
ಜೀವವನು ಸಲಹೆನುತ ಮುಱಿವುಗೆ |
ಕೈವಿಡಿದೆವಾವ್ ರಾಜಧರ್ಮದೊಳೆಂದನಾಭೀಮ || ೧೧

ತೃಣವ ಪರ್ವತವೆನಿಸಿ ಖತಿಯಲಿ |
ಒಣಗುಕಾಯಳೆಕೆ ನಮ್ಮೊಡನೆ ಯುದು |
ಗಣಸಹಿತ ಸಂಗರಕೆ ಬಪ್ಪುದಿದಾವ ಬಲ್ಲವಿಕೆ ||
ಎಣಿಸಲೇತಕೆ ನೀನೆ ನಮ್ಮೊಳು |
ಸೆಣಸಿ ನಿಂದರೆ ಕ್ಷಾತ್ರಧರ್ಮದ |
ಭಣಿತೆಯಲಿ ತಾಗಿದವು ಕೊಂತೆಯುದೇನು ತನುಗೆಂದ || ೧೨

ಬಳಲಿ ಬಳಿಕ ಶಿಖಂಡಿತನ ಮು |
ನ್ನಿರವ ರಾಜ್ಯವು ಹೋಗಿ ಕಾನನ |
ದಿರವು ಘಟಿಸಲಿ ಪುತ್ರಮಿತ್ರಕಳತ್ರಬಂಧುಜನ ||
ತೊಲಗಿ ಬಾಲಾವ್ ಸಖ್ಯವನು ಬಿಡೆನೇ |
ಶರಣುಹೊಕ್ಕನ ಸುಗತಿ ಕೊಡದಿರೆ |
ಮುರಹರನೆ ನೀನಹುದು ನುಡಿಯ ಸ್ವಪಕ್ಷಪಾತಿಯಿಲ್ಲೆಂದ || ೧೩

ವಿನಯವಿಲ್ಲ ಜರ್ನಸನೊಳೆನ್ನಯ |
ಮನವು ಬೇಸುರಾರಿ ಮುನಿಕೆವ್ರೊ |
ಕ್ಕನನು ರಕ್ಷಿಸಿ ಮೆರೆಸಿದ ಕ್ಷಾತ್ರನಾಯಕರನು ಗೆಲುವ ||
ಅನುವರದಿ ಒಳಿಗುಳಿದ ಸೇನೆಯು |
ಇನಜನಗರಿಗೆ ಕಳುಹಿ ಮರಳುವೆ |
ನೆನೆ ಹಿತವ ತಾನೆಂದು ಕೋಪದಿ ಭೀಮ ಘರ್ಜಿಸಿದ || ೧೪

ಬಾಯಿಬಡಿಕನದೆಂದು ನಸಿದುದ |
ಲಾಯುತದಿ ಸಮನಾಗಿ ಸಮರದ |
ದಾಯದಿಂದಲಿ ನಿಂತು ಕಾದಲು ಯೋಗ್ಯನೇ ಬಳಿಕ ||
ರಾಯ ಪಾಂಡುವಿನುದರದಲಿ ಬಂ |
ದೀಯಭ್ರಾತೃರು ಕೆಡಿಸಿಕೊಂಡರ |
ನಾಯಸದಿ ಬಹ ಸಿರಿಯನೆಂದಸುರಾರಿ ಘರ್ಜಿಸಿದ || ೧೫

ಎನಲು ಮುತ್ತಿದರಾಕ್ಷಣಾಕೆ ತನ |
ತನಗೆ ಸಾತ್ಯಕಿ ಸಾಂಬ ಕೃತವ |
ರ್ಮನು ಸ್ಮರಾತ್ಮಜ ಮನಸಿಜನು ಮೊದಲಾದ ಪಟುಭಟರು ||
ಎನುತ ಹಯ ಗಜ ರಥ ಪದಾತಿಗ |
ಳಿನನ ಮುಸುಕಿದ ತಮದ ಪಾಳಿಯು |
ದನುವಿನಲಿ ಮುತ್ತಿರ್ದರೈ ಭೂಪಾಲ ಕೇಳೆಂದ || ೧೬

ತೂಳಿಸಿದರಾನೆಗಳ ಹಯಗಳ |
ನೇಳಿಸಿದರತಿರಥರು ರಥಗಳ |
ಮೇಲುವರಿಸುತ್ತಸಿಲಜನ ಶರಜಾಲದಿಂದೆಸೆಯೆ ||
ಆಲಿಗಳಿಗರಿದೆನಲು ದಶೆಗಳ |
ಮೇಲೆ ಬಿಳಿಯ ನಭಸ್ಸ್ಥಳದಿ ಸುರ |
ಜಾಲ ಕಂಪಿಸಲೆಚ್ಚರೇನೆಂಬೆನು ಮಹಾದ್ಭುತವ || ೧೭

ಕೊಂಬನೇ ಕಣೆಗಿಣೆಯ ಮುನಿದರೆ |
ಜಂಭಭೇದಿಹರಾದಿಗಳನಣು |
ವೆಂಬ ರಣದಲಿ ಭೀಮನುರುಗದೆಗೊಂಡು ಮುಸುಕಿರ್ದ ||
ಶಂಬರಾಂತಕ ಸಾಂಬಸಾತ್ಯಕಿ |
ಯೆಂಬವರನರೆಯಟ್ಟಿ ರಥನಿಕು |
ರುಂಬವನು ಬಿಡದಪ್ಪಳಿಸಿದನು ಸಿಂಹನಾದದಲಿ || ೧೮

ತಿರುಹಿ ಗದೆಯನು ಭೀಮಸೇನನು |
ತರಿದನಾನೆಯ ತಟ್ಟುಗಳ ಸಾ |
ಸಿರದ ಸಂಖ್ಯೆಯ ಹೊಕ್ಕ ಮೊಗ್ಗಲ ಬೀಪಪರಿವರದು ||
ವರರಥವ ಶತಸಾಸಿರಂಗಳ |
ತುರಗನಿಕರವನೊಂದು ಲಕ್ಷವ |
ನೊರಸಿದನು ಕಾಲಾಳ ಕೋಟಿತ್ರಯವ ನಿಮಿಷದಲಿ || ೧೯

ಸೀಳಿ ಹಾಕಿದನಿಭಘಟೆಗಳಾ |
ರೇಳು ಲಕ್ಷವ ಮುನಿದು ರೋಷದಿ |
ಕಾಲುಗೊಲೆಯಲಿ ಕೊಂದನೈಸಾವಿರವನರೆಯಟ್ಟಿ ||
ತೂಳಿದನು ಕರಿಯಿಂದ ಕರಿಯನು |
ಹೇಳಲೇನಿರ್ನ್ಯೆದು ಲಕ್ಷವ |
ಕಾಲನಾಲಯವೆಲ್ಲ ಕರಿಮಯವಾಗೆ ಕಲಭೀಮ || ೨೦

ಜಡಿದು ಪವನಜ ಸಿಂಹನಾದವ |
ಸಡಗರದಲಾರ್ಭಟಿಸಲಾಕ್ಷಣ |
ಮಡಿದುವೈ ಮದದಂತಿ ತೊಡೆನಡುವೊಡುಗಳು ಮುರಿದು ||
ಅಡರಿದಶನಿಯ ಘಾತದಿಂದಲಿ |
ಪೊಡವಿಗೊರಗುವ ಗಿರಿಗಳಂದದ |
ಲೆಡೆಯ ಕಾಣೆನು ಮಡಿದ ಕರಿಗಳನರಸ ಕೇಳೆಂದ || ೨೧

ಎಲ್ಲಿ ನೋಡಲು ಪವನನಂದನ |
ಘಲ್ಲಿಸಲು ಕಡಿವಡೆದ ರಥಚಯ |
ವೆಲ್ಲಿ ನೋಡಲು ಗದೆಯ ಘಾತಿಗೆ ಮಡಿದ ಹಯಜಾಲ ||
ಎಲ್ಲಿ ನೋಡಲು ಭೀಮಕೇಸರಿ |
ಕೊಲ್ಲಲೊಱಗಿದ ಗಜಘಟಾವಳಿ |
ಯೆಲ್ಲದಿಲ್ಲೆನಿಸಿದುದು ಘನಸಂಗ್ರಾಮಭೂಮಿಯಲಿ || ೨೨

ಇದಿರೊಳಾಂಕುವ ಗಜಘಟೆಯ ವೋ |
ಡದನು ನಿಮಿಷದೊಳೊದಗಿ ಹಿಂಭಾ |
ಗದಲಿ ಮುಸುಕುವ ರಥಚಯಂಗಳ ತಿರುಗುತಪ್ಪಳಿಸಿ ||
ಒದಗಿದೆಡಬಲದಶ್ವಚಯವನು |
ಸದೆದು ಪದಚರತತಿಯನಡೆಗೆಡ |
ಹಿದನು ನಲಿನಲಿದಾಡಿ ಬೊಬ್ಬಿಱಿಯುತ್ತ ಕಲಿಭೀಮ || ೨೩

ಮತ್ತೆ ಮುಸುಕಿದ ರಥಿಕರನು ಮಿಗೆ |
ಹತ್ತಿಸಿದನಂಬರವ ಬಿಡದೆಸೆ |
ಯುತ್ತ ಬಹ ರಾವುತರ ಕಳುಹಿದ ಯಮನ ಪಟ್ಟಣಕೆ ||
ಒತ್ತಿ ಬಹ ಗಜಘಟೆ ಪದಾತಿಯ |
ನೆತ್ತಲಿತ್ತಲು ಕೆಡಹಿದನು ಬಲು |
ಮಿತ್ತು ಮೊಗದೆಱೆದಂತೆ ಕೊಂದನು ಭೀಮ ಯದುಬಲವ || ೨೪

ಸ್ಮರನ ಬಲದೊಳಗೊಂದು ಕೋಟಿಯ |
ನೊಱಸಿದನು ಕೃತವರ್ಮಕನ ಮೋ |
ಹರದೊಳೈದರ್ಬುದವ ಸಾಂಬನ ಪಡೆಯೊಳರ್ಬುದವ ||
ಒಱಗಿಸಿದ ಸಾತ್ಯಕಿಯ ಸೇನೆಯ |
ಧುರಗಲಿಗಳಾದವರ ಕೋಟಿಯ |
ನಱಸಿಕೊಂದನು ಭೀಮ ರಾಮನ ಬಲದೊಳರ್ಬುದವ || ೨೫

ವೀರಭದ್ರನ ಭಣಿತೆಯಲಿ ಘನ |
ಘೋರಭೈರವನಂತೆ ಲಯದಲಿ |
ಮಾರಣದ ಜವನಂತೆ ಮೃತ್ಯುವಿನಸುವರದ ತೆಱದಿ ||
ಮಾರಹರ ಮುಳಿದೆದ್ದು ಕೊಲುವ ಕ |
ಠೋರಲಯದಿನದಂತೆ ಸಱೆದ |
ನಾರುಭಟೆಯಲಿ ಕಸಲಿ ಯದುಸೇನೆಯನು ಕಲಿಭೀಮ || ೨೬

ಓಡಿದನು ಸ್ಮರಸೂನು ಚಿಂತೆಯ |
ಮೂಡಿದನು ಕೃತವರ್ಮ ಸಾಂಬನು |
ಹೇಡಿತನವನು ಕಲಿತ ರಣದಲಿ ಭೀಮನುರವಣೆಗೆ ||
ಆಡಲೇನದ ಸಾತ್ಯಕಿಗೆ ಪಗೆ |
ಪಾಡು ಪಲ್ಲಟವಾಯ್ತು ಸ್ಮರ ಹೋ |
ಗಾಡಿದನು ಕಲಿತನವನೆಲೆ ಭೂಪಾಲ ಕೇಳೆಂದ || ೨೭

ಕಂಡಿರೇ ಬಲರಾಮ ಭೀಮನ |
ಚಂಡವಿಕ್ರಮಸಾಹಸವನು |
ದ್ದಂಡವೀರಾವೇಶವನು ನಿಜಬಲದ ಪಟುಭಟರು ||
ಕಂಡ ಕಡೆಗೋಡುವುದ ತಾನೀ |
ಗಂಡಲೆದು ಬೆನ್ನಟ್ಟಿ ಖಳನನು |
ಖಂಡಿಸುವೆ ಮಸ್ತಕವನೆನುತಸುರಾರಿ ನಡೆತಂದ || ೨೮

ಇತ್ತಲೀಹದನಾಗುತಿರೆ ಬಳಿ |
ಕತ್ತ ಯಮಳರು ಕೌರವರ ಬಲ |
ವೊತ್ತ ಪಾಂಡ್ಯ ದ್ರುಪದಮತ್ಸ್ಯಕಳಿಂಗಕೇಕಯರು ||
ಹತ್ತಿಸಿದರಂಬುಗಳ ಯದುಬಲ |
ದತ್ತ ನಾಲ್ದೆಸೆಗಳಲಿ ಮುಸುಕಿದ |
ರೆತ್ತ ನೋಡಿದರತ್ತ ಶರಮಯವಾಯ್ತು ರಣಭೂಮಿ || ೨೯

ಅನಿತರೊಳಗಸುರಾರಿ ಶಾರ್ಙ್ಗಕೆ |
ಸುನಿಶಿತಾಸ್ತ್ರಂಗಳನು ತೊಟ್ಟೆ |
ಚ್ಚನಿಲಜನನೈವತ್ತರಿಂ ಸಹದೇವನಕುಲರನು ||
ಮೊನೆಗಣೆಗಳೀರೈದರಲಿ ಮ |
ತ್ಸ್ಯನ ಬಲಕೆ ಸಾಸಿರ ಶಿಲೀಮುಖ |
ವನು ಕವಿಸಿ ಪಾಂಚಾಲಕೇಕಯಬಲವ ತರುಬಿದನು || ೩೦

ಉರವಣಿಪ ಕುರುಸೇನೆಗಗಣಿತ |
ಶರವ ಸುರಿದನು ಮತ್ತೆ ಭೀಮನ |
ಬರಿಯ ಕೆತ್ತಿದನೆಂಟು ನಾರಾಚದಲಿ ಯಮಳರನು ||
ಕೆರಳಿ ಮೂರಂಬಿನಲಿ ತೆವರಿದ |
ಮರಳಿ ಮರಳೆಂಬತ್ತು ಶರದಲಿ |
ಮರುತಜನ ದೇಹವನು ಕೀಲಿಸಿ ಜರೆದನಸುರಾರಿ || ೩೧

ಶರಮಯವು ಸರ್ವಾಂಗವನಿಲಜ |
ಗಱಿವು ತಪ್ಪಿತು ನಕುಲಸಹದೇ |
ವರನು ಕಂಡನರಿಲ್ಲ ಪಾಂಚಾಲಕರ ಸೃಂಜಯರ ||
ಹರಣಗಳು ಹಾಱಿದುವು ಮತ್ಸ್ಯನು |
ಹೊರಳಿದನು ಕುರುಬಲದ ಹಳಿವನು |
ವಿರಚಿಸುವೆನೇನೆಂದು ತಾನೆಲೆ ಅರಸ ಕೇಳೆಂದ || ೩೨

ವೀರರೆಂಬವರೀಪಥಕೆ ಮೈ |
ದೋಱಿದರು ಹಂವೆಗಳ ಸಮಿತಿಯು |
ನಾರು ಕಂಡವರೆಣಿಸೆ ಯಾದವರರಸನಿದಿರಿನಲಿ ||
ಭಾರಿ ಸಮರಕೆ ನಿಲ್ಲಲಾಱದೆ |
ಚೋರಗಂಡಿಯಲೋಡಲಾನುರ |
ವೈರಿ ಪಾರ್ಥನ ಸನಿಯಕೈದಿಸಿ ರಥವನಿಂತೆಂದ || ೩೩

ದೃಷ್ಟಿ ಪರಿಹರಮಪ್ಪ ತೆಱದಲಿ |
ಸೃಷ್ಟಿಯೊಳು ರಣಬಾಹಿರರ ದು |
ಶ್ಚೇಷ್ಟೆಯಿಂದಲಿ ಕಳುಹಿ ಕಾಲವ ಕಳೆಯಲೇನಹುದು ||
ಅಷ್ಟಮೂರ್ತಿಯಜಾದಿಗಳ ಕ |
ಣ್ಗೆಷ್ಟಮಹವೊಲ್ಲಿಂದು ನೀನು |
ತ್ಕೃಷ್ಟರಣವನು ತೋಱು ಬಾರೈ ಪಾರ್ಥಯೆನುತೆಚ್ಚ || ೩೪

ಸೃಷ್ಟಿಯಲಿ ಧುರಮುಖದಿ ನಿಮ್ಮೊಳು |
ಸಿಷ್ಠೆಯಿಂದಲಿ ನಿಲಲು ಬ್ರಹ್ಮಂ |
ಗಷ್ಟಮೂರ್ತಿಮುಖಾಮರೇಂದ್ರಾದಿಗಳಿಗಸದಳವು ||
ದೃಷ್ಟಿಪಥಕೆಯ್ತರಲು ತಾನೆಂ |
ದೆಷ್ಟಱವನೆಲೆ ದೇವಯೆನುತು |
ತ್ಕೃಷ್ಟವಿನಯದಿ ಪಾರ್ಥನಿದಿರಾದನು ರಣಾಂಗಣಕೆ || ೩೫

ಎಲವೊ ಫಲುಗುಣ ಗಯನ ಕೈವಿಡಿ |
ದಿಳೆಯೊಳೆನಗಿದಿರಾಗಿ ನಿಲುವ |
ಗ್ಗಳಯನೇ ನೀ ಸೊರಜುಗಿರಿಗಂಗೈಪ ತೆಱದಂತೆ ||
ಒಲಿದು ತಂಗಿಯ ಕೊಟ್ಟೆವದಱಿಂ |
ದುಳಿದೆ ನೀನಿನಿತಱಲಿ ಸೆಣಸಿದು |
ತಲೆವೆರಸಿ ಕಾನನಕೆ ಮರಳುವ ಪರಿಯ ಕಾಣೆಂದ || ೩೬

ಪಗೆಸಹಿತ ಪದಿನಾಲ್ಕು ಲೋಕವ |
ಬಗೆದು ಹೊಕ್ಕರೆ ಹೋಗಬಿಡುವೆನೆ |
ವಿಗಡಚಕ್ರದ ಧಾರೆಯಿಂದವೆ ನಿನ್ನ ತಲೆಗೊಳದೆ ||
ಹಗರಣದ ಮಾತಲ್ಲ ಬಂಧು |
ತ್ವಗಳ ನೋಡಿಯೆ ಮನ್ನಿಸುವೆನೆಂ |
ದಗಡುತನದಲಿ ಕೆಟ್ಟ ನಿನಗಿನ್ನಾರು ಗತಿಯೆಂದ || ೪೭
ಅವಧರಿಸು ಮುರವೈರಿ ಲೋಕ |
ವ್ಯವಹರಣೆಯೆಂದೆನ್ನಲಾಗದು |
ತವಚರಣಸೇವೆಯಲಿ ದೃಢತರ ಭಕ್ತ ತಾನಾಗೆ ||
ಅವಗಡದಿ ಬಂದಪಿಳಿದುಳಿತವ |
ತಪಿಸಿ ಶರಣನ ನಿಮ್ಮ ಕೆಯ್ಯಲಿ |
ಭುವನ ಮೆಚ್ಚಲು ಕಾದು ಕಳುಹುವೆನೆಂದನಾಪಾರ್ಥ || ೪೮
ಅಲ್ಲದೆಯು ಧುರಮುಖದಿ ತ್ವತ್ಕರ |
ಪಲ್ಲವದೊಳಸು ತೊಲಗಿದರೆ ಉ |
ತ್ಫುಲ್ಲಪತ್ರಜ ಲೋಕಕತಿಶಯವಾದ ಪದವಹುದು ||
ಒಲ್ಲೆಸಿದನೆಂದಾಜಿಯಲಿ ರಣ |
ಮಲ್ಲ ದಶಶಿರಕುಂಭಕರ್ಣರು |
ನಿಲ್ಲದೇ ವೈಕುಂಠಕ್ಕೈದಿದ ತೆಱನು ತಾನೆಂದ || ೪೯
ಹಿತದಲಹಿತದಲಾದಡೆಯು ಸ |
ನ್ನುತದ ತ್ವತ್ಪದ ಸೇರ್ವುದೆಂಬುದ |
ಸತತ ಬುಧರಲಿ ಕೇಳಿಬಲ್ಲೆನು ದೇವ ಚಿತ್ತೈಸು ||
ಅತಿಶಯದ ಸಾಯುಜ್ಯ ದೊರಕುವು |
ದಿತರಚಿಂತೆಯದೇತಕಾದಡೆ |
ವಿತತರಣಚಾತುರಿಯ ತೋಱಲುಬೇಕು ನಿಮಗೆಂದ || ೫೦
ಹಲವು ಮಾತೇನಿನ್ನು ನಿಮ್ಮ |
ಗ್ಗಳಿಕೆಯೆನಿತುಂಟನಿತಱಲಿ ಕೊಳು |
ಗುಳಕೆ ನಿಂತರೆ ಕಾಣಬಹುದಾನೆಂಬ ಮಾತುಗಳ ||
ಹುಲುನುಡಿಗಳೆಂದೆನ್ನಬೇಡಿರಿ |
ಜಲಜಭವ ಶಂಕರರು ಸಾಕ್ಷಿಯು |
ತೊಲಗಿದರೆ ನಾನೀಗ ಪಾಂಡುವಿನಣುಗನಲ್ಲೆಂದ || ೫೧

ಕೇಳಿ ಕಿಡಿಕಿಡಿಮಸಗಿ ಸಮರಾ |
ಭೀಳದೈತ್ಯವಿರೋಧಿ ನುಡಿದನು |
ಖೂಳ ಬಳಿಕ ಮಾತೇತಕೆಮ್ಮೊಳಗೆಂಬಿನಲಿ ನುಡಿಸು ||
ಕಾಳೆಗದೊಳಿನ್ನರಿಯಬಹುದಂ |
ದಾಳಮಾಡುವ ನರನನೈದಾ |
ರೇಳು ಶರದಲಿ ತೆಗೆದೆಸುತ ಬೊಬ್ಬಿರಿದು ಮಾರಾಂತ || ೪೨

ನಗುತ ಫಲುಗುಣ ಗಾಂಡಿವವ ನೆರೆ |
ಬಿಗಿದು ಹೊದೆಯೇರಿಸಿ ಸರಳ್ಗಳಂ |
ಡೊಗುಮಿಗೆಯ ಭಕ್ತಿಯಲಿ ಹರಿಹರಕಮಲಜರ್ಗೆರಗಿ ||
ನಗರಿಪುವಿಗಭಿನಮಿಸಿ ಲಂಭದ |
ಲೊಗೆವ ಹನುಮಗೆ ಕೈಮುಗಿದು ತುರು |
ಗಗಳಿಗಾನತನಾಗಿ ಪಿಡಿದನು ದೇವದತ್ತವನು || ೪೩

ದೇವದತ್ತದ ರಭಸ ವರಗಾಂ |
ಡೀವದಾರ್ಭಟೆ ತುರಗಹೇಷಿತ |
ಪಾವಮಾನಿಯ ಬಿರಿಸಿನಬ್ಬರ ಫಲುಗುಣನ ನಿನದ ||
ಶ್ರೀವರನ ವರಪಾಂಚಜನ್ಯದ |
ರಾವ ಧನುಷ್ಟಂಕಾರ ಕೇಳಿಸಿ |
ತೀವಸುಧೆ ಪಾತಾಳಕಮರಾವತಿಗೆ ಭಯದೋರೆ || ೪೪

ಶರಧಿ ನಡುಗಿದುವಷ್ಟದಿಕ್ಕಿನ |
ಕರಿಕಮಟರೆದೆಗೆಟ್ಟರಾಕ್ಷಣ |
ವುರುಗಪತಿ ಕುಗ್ಗಿದನು ದೆಸೆ ಕಂಪಿಸಿತು ಹೆದರಿದಗು ||
ತರಣಿಚಂದ್ರಮರವನಿ ಬಿಕ್ಕನೆ |
ಬಿರಿದುದಬುಜಭವಾಮರೇಂದ್ರರು |
ಕಿರುನಗೆಯ ಮೊನೆ ಮಿಸುಗೆ ನೋಡುತಲಿರ್ದರಭ್ರದಲಿ || ೪೫

ಬೀಸಿದುದು ಬಿರುಗಾಳಿ ದಿವದಿ ಪ್ರ |
ವೇಶಿಸಿದುವುಡುಜಾಲ ಕಂಬನಿ |
ಸೂಸಿದುದು ಕರಿತುರಗನಿಕರಕೆ ಭುವನ ಕಂಪಿಸಿತು ||
ವಾಸುದೇವಧನಂಜಯರ ಘನ |
ರೋಷಪಾವಕದಿಂದ ಜಗ ನಿ |
ರ್ಶೈಸಿ ಮುಳಗದೆ ಪೋಗದೆಂದುದು ಸಕಲಸುರನಿಕರ || ೪೬

ಕನಲಿ ಭಾಳೇಕ್ಷಣನವೋಲ್ ನರ |
ಧನುವ ಮಿಡಿಯುತ್ತಿರಲು ಹಲಧರ |
ಮನುಮಥನ ಸುತ ಮದನ ಸಾತ್ಯಕಿ ಸಾಂಬ ಮೊದಲಾದ ||
ಅನುಪಮಿತ ವಿಕ್ರಮರು ಶರವಳೆ |
ಯನು ಕಱೆದು ಫಲುಗುಣನ ಮುಸುಕಿತು |
ವಿನುತೆಯಣುಗನ ಸೆಣಸಲೆಯ್ತಹ ಭೋಗಿಚಯದಂತೆ || ೪೭

ಒಂದು ಕಡೆಯಲಿ ಗಜಘಟಾವಳಿ |
ಸಂದಣಿಸಿ ಮುರಿದಿಟ್ಟಣಿಸುತಿಹು |
ದೊಂದು ತಾಣದಿ ರಥಸಮಿತಿ ಕಾಲೂಱಲೆಡೆಗೊಡದೆ ||
ಒಂದು ದಿಕ್ಕಲಿ ತುರಗಚಯ ಮ |
ತ್ತೊಂದು ದೆಸೆಯಲಿ ಪಾಯದಳವೆ |
ಯ್ತಂದು ಮುಸುಕಿತು ಏನನೆಂಬೆನು ಫಲುಗುಣನ ರಥವ || ೪೮

ಮುಂದೆ ಕೃಷ್ಣನ ಧುರದ ಮೊದಲೆ |
ಹಿಂದೆ ಚತುರಂಗದ ರಣಾರ್ಭಟೆ |
ಸಂದಣಿಸದೆಡಬಲದಲಂಗಜಕುಲಧರಾದಿಗಳು ||
ಸಂದ ಸರಳಿನ ಸೋನೆಯದು ತಾ |
ನೊಂದುಗೂಡಿ ಕಿರೀಟಿಯನು ರಣ |
ದಂದಗೆಡಿಸುವ ತೆಱದಿ ಮುಸುಕಿತು ಹೇಳಲೇನೆಂದ || ೪೯

ನೋಡಿದನು ಕಲಿಪಾರ್ಥ ಹರುಷವ |
ಮಾಡಿದನು ತಾನಿನಿತುದಿನ ಕಾ |
ದಾಡಿ ಸಂಚರಿಸಿದಕೆ ಸತ್ಫಲವಾಯ್ತು ಮದ್ಭುಜದಿ ||
ತೀಡುತಿಹ ಕಂಡೂತಿಯನು ಕಳೆ |
ದೀಡಿರಿದು ಯದುಬಲಕೆ ಪಾಸವ |
ಮಾಡಿಸುವೆ ಹಿರಿಯಯ್ಯನೂರಿನಲೆನುತಲಿದಿರಾದ || ೫೦

ಕ್ಷಣವ ಕೊಡೆ ಪಿತೃದಿವಸದಲಿ ಬ್ರಾ |
ಹ್ಮಣನು ಹಿಗ್ಗುವವೋಲು ನೂತನ |
ತೃಣವ ಕಂಡಡೆ ಧೇನು ಸಂತೋಷಿಸುವ ತೆಱನಂತೆ ||
ಗುಣಯುತೆಯು ಪತಿಸಮಯಕೊದಗಿದ |
ಡೆಣಿಕೆಯಿಂ ನಲಿವಂತೆ ನರ ಬಲು |
ರಣವು ದೊರಕಿದುದೆನುತಲುತ್ಸವದಿಂದ ಬೊಬ್ಬಿಱಿದ || ೫೧

ರೋಮವೆನಿತುಂಟನಿತಱೊಳ್ ಸಂ |
ಗ್ರಾಮವೆಂದೆನಲೊಂದು ಚಲಿಸದು |
ತಾಮಸದ ನಿದ್ರೆಯಲಿ ಕನಸಿನೊಳಾದೊಡರ್ಜುನಗೆ ||
ಕಾಮಸಾತ್ಯಕಿಗಳ ಶರೀರವಿ |
ರಾಮಮಪ್ಪಂತೆಚ್ಚು ಸುಭಟ |
ಸ್ತೋಮಮಂ ತಡೆಗಡಿದು ಕೃಷ್ಣನನಱಸುತೆಯ್ತಂದ || ೫೨

ಮತ್ತೆಮತ್ತೈತಂದು ತನ್ನನು |
ಸುತ್ತಿ ಕೊಂಡೆಸೆಯುತ್ತ ಬಹ ಬಲ |
ಸಾತ್ಯಕಿಯು ಪ್ರದ್ಯುಮ್ನಕೃತವರ್ಮಾನಿರುದ್ಧರಿಗೆ ||
ಹತ್ತುಹದಿನೈದೆಂಟುನೂಱಱ |
ವತ್ತು ಶರದಲಿ ಮುಸುಕಿ ಯದುವೀ |
ರೋತ್ತಮನ ತಲೆಯೆತ್ತದಂತಿರೆಯೆಚ್ಚನಾಪಾರ್ಥ || ೫೩

ಎಡದಲೌಕುವ ಸಾಂಬನನು ಹಣೆ |
ಯೊಡೆಯಲೆಚ್ಚನು ಮೀಱಿ ಬಹ ಬಲು |
ಗದೆಯ ಪ್ರದ್ಯುಮ್ನನ ಶರೀರದಿ ಬೀದಿಗಾಣಿಸಿದ ||
ಒಡನೆ ಹಿಂದಣ ಕಡೆಯಲೆಸುತಿಹ |
ಕಡುಹಿನನಿರುದ್ಧನನು ರಣದಲಿ |
ಕೆಡೆಯಲೆಚ್ಚನು ನಸುನಗುತ ಕಲಿಪಾರ್ಥನಾಕ್ಷಣದ || ೫೪

ಒತ್ತಿ ಬಹ ಕಡುಗಲಿಗಳನು ನಡು |
ನೆತ್ತಿಯೊಡೆಯಲು ತೆಗೆದಿಸುತ ಮಿಗೆ |
ಮತ್ತಗಜವಾವುತರ ರಾವ್ತರ ರಥಿಕಸಂಕುಲವ ||
ಹತ್ತಿಸಿದ ಕರಿಹಯದ ಮೆಯ್ಯಲಿ |
ಮೆತ್ತಿಕೊಂಡೊಲು ಶರಗಳನು ಬಲು |
ಮಿತ್ತು ಮೊಗದೆಱೆದಂತೆ ಸದೆದನು ರಣದಿ ಕಲಿಪಾರ್ಥ || ೫೫

ಇಸಲು ಯಾದವವೀರರೆಲ್ಲರು |
ನಿಶಿತಶರಸಮಿಧೆಗಳಲರ್ಜುನ |
ನಸುವ ಕೊಂಬೆವೆನುತ್ತ ಬೇಱೊಬ್ಬೊಬ್ಬರೆಯ್ತಂದು ||
ಸಿಸಿನೆ ಸರಳಿನ ಮಳೆಯ ಕಱೆಯಲು |
ನಸುನಗುತ ಕಡಿದೆಲ್ಲವನು ಮಗು |
ಳೆಸೆದು ರಣದಲಿ ಚಾರಿಪಲಸಿದನಮಿತಸಾಹಸದಿ || ೫೬

ರಥ ಮುರಿದು ಧನು ಪುಡಿದು ವರಸಾ |
ರಥಿ ಮಡಿದು ಧ್ವಜದಂಡವಾಕ್ಷಣ |
ಪೃಥಿವಿಗೊರಗಲು ಬಳಿಕ ಕೃಷ್ಣನ ಸುತರು ಮೊದಲಾದ ||
ರಥಿಕರನು ಮಾವುತರು ರಾವುತರ |
ವ್ಯಥಿಸಿ ಮೆಯ್ಮುರಿಸಿನಂತೆ ಮಾಡಿತು |
ಪೃಥುಲಬಲಪಾಂಡುವಿನ ತನಯನ ನಿಶಿತಶರಜಾಲ || ೫೭

ಶಿರವೊಡೆದು ನರ ಹರಿದು ತೊಡೆ ನಡು |
ಮುರಿದು ಕೈಕಾಲುಡಿದು ರುಧಿರಗ |
ಳೊಸರಿದು ಭ್ರಮೆಗೊಳಗಾಗಿ ಮಗುಳೋರೊರ್ವರೆಚ್ಚರಿಸಿ ||
ತ್ವರಿತದಿಂದೆಯ್ದೆಂದು ಕವಿಯಲು |
ನರನು ಬಳಿಕವರೆಲ್ಲರನು ಬಲು |
ಸರಳಿನಲಿ ಕೆಡೆಯೆಚ್ಚು ರಣಮಂಡಲದೊಳೊರಗಿಸಿದ || ೫೮

ಎಚ್ಚ ಬಾಣವ ಕಡಿದಡೆಯು ಮಗು |
ಳೆಚ್ಚಡಾಶರ ನಾಂಟಿ ಕೀಳ್ವುದ |
ಕೊಚ್ಚಲಂಗೊಳವಬುಜಾಸನ ಬಾಣಾಳಿ ಮಗುಳವರ ||
ಮುಚ್ಚಿ ಕೆಡಹಲು ತಡೆಗಡಿದರಾ |
ಅಚ್ಚುತನ ಸಮರಥರು ಬೊಬ್ಬಿಡು |
ತೆಚ್ಚು ವೀರರ ಗಾಯ ಕಾಣಿಸಿ ಪಾರ್ಥ ಬೊಬ್ಬಿರಿದ || ೫೯

ಕಾಣುತಾಕ್ಷಣದತಿರಥರು ಮಿಗೆ |
ಹೂಣೆಹೊಕ್ಕಿಂದ್ರಜನ ಮುಸುಕಿ ಕೃ |
ಪಾಣ ದೊಂಕಣಿ ಖಡ್ಗಶರಸಮಿತಿಯಲಿ ತೆಗೆದಿಸುತ ||
ಮಾಣದಖಿಳತುರಂಗ ದ್ವಿರದ |
ಶ್ರೇಣಿ ರಥ ಕಾಲಾಳು ಮುತ್ತಿತು |
ಕಾಣೆನೊಂದರೆಗಳಿಗೆ ಪಾರ್ಥನ ಶಿರಸ ಕೇಳೆಂದ || ೬೦

ತಿರಿಗಿ ತೊಡುತಿಹನೊಮ್ಮೆ ಮುಂದಣೆ |
ಗೊರಗಿಯಿಸುತಿಹನೊಮ್ಮೆಯೆಡೆಯೆಡೆ |
ಗೊರಗಿ ಹಾಯ್ದುವನೊಮ್ಮೆ ಬಲಬಾಗದಲಿ ಬಂದವರ ||
ಹರಿಹರಿದು ತೊಟ್ಟೆಚ್ಚ ಕೃಷ್ಣನ |
ನರಸುತೆಯ್ದಿಹನಾವ ಗರುಡಿಯ |
ಲರಿದನೋ ಕಲಿಪಾರ್ಥನೆಂದುದು ಸಕಲಭುವನಜಯ || ೬೧

ವಿಸಾಳ ಬಹ ಗಜಘಟೆಯು ಹರಣವ |
ಹಾರಲೆಬ್ಬನು ವಾಯುವೇಗದ |
ಲೇಳ ಬಹ ಕುದುರೆಗಳ ಕಾಲ್ಗಳು ಮುಳಿಯೆ ಕೆಗೆದೆಬ್ಬ ||
ಚರುಗಟ್ಟಿ ಪುಲಿ ಬಹ ರಥಂಗಳ |
ಸೂಸು ಹೋಳುಗಳಾಗಲೆಬ್ಬನು |
ದಾರ ಸಾಹಸಮಲ್ಲ ಫಲುಗುಣಸಾರಣಾಂಗಣದಿ || ೬೨

ತಲೆಯುನೆತ್ತಲು ಪಾರ್ಥಶರವಾ |
ಗಳವನುತ್ತರಿಸುವ್ರವ್ರ ರಣದಲಿ |
ಸಿಲಬು ಬಕಿಕವಕಾಕಪಲ್ಲೆನುತಖಿಳವಾಯಿದಳ ||
ಪಿಲುಸರಲ್ಗಳ ಬಿಸುಟು ದೆಸೆದೆಸೆ |
ಗಳಿಗೆ ಹಾಯ್ದರು ಹೊಲದೊಡೆಯ ಬರ |
ಲಳುಕಿ ನೀಡಕ್ಕೈದುತಿಹ ವಿಹಗಾಳಿಯಂದದಲಿ ||

ಆವ ನೇಳೆಯುಲಂಬ ತೊಡುವವ |
ನಾವ ವಹಿಲದೊಳಿಸುವನಾತನ |
ಭಾವವನು ಹರಿಸುಜನುರಾಧಿಪರಡಿಯುರಿಳೆಗೊಳಗಿ ||
ಸಾಮ ಮದಕರಿಘಟೆಯು ಹರಿಗಳ |
ಹೇವಮಾರಿಗಳಹ ಪದಾತಿಯು |
ನಾವಗಂ ನೆರೆ ಕಾಣುತಿರ್ದುದು ಪಾರ್ಥನೆಸುಗೆಯುಲಿ ||

ಹಲಧರನ ಸೈನ್ಯವನು ಸಾಂಬನ |
ದಳವ ಪ್ರದ್ಯುಮ್ನನ ಪದಾತಿಯು |
ನಲಘುಭುಜಬಲ ಸಾತ್ಯಕಿಯ ಚತುರಂಗವಸಿತುವನು ||
ಕಲಿತಬಲಸನಿರುದ್ಧಭಟಸಂ |
ಕುಲವ ಕೃತವರ್ಮಕನ ಸೈನಿಕ |
ಗಳನು ಸಿಮಿಷಾರ್ಧದಲಿ ತರಿತರಿದೊಟ್ಟಿದನು ಪಾರ್ಥ || ೬೫

ಕೃತಯುಗತ್ರೇತಾಯುಗಂಗಳೊ |
ಳತಿಬಲರು ನಳರಾಮನೆನಿಪರು |
ಇತರರಿಲ್ಲವರಂತರಕೆ ದ್ವಾಪರದಿ ಪರಿಕಿಸಲು ||
ಸಿತತುರುಗ ತಾನಲ್ಲದಿಲ್ಲವು |
ನುತಿಪರಾಕ್ರಮ ಚಾಪವಿದ್ಯಾ |
ಮತಿಗಳಿಲ್ಲೆಂದಾಡಿದನು ಕಲಿಹನುಮ ತಲೆದೂಗಿ || ೬೬

ತುರಗಗಳನಿಳಿದೋಡಿ ಬಿಆಯೊಳು |
ಬೆರಳಸಿಟ್ಟೊಱಲಿದರು ರಾವ್ತರು |
ಕರಿಶಿರಂಗಳನಿಳಿದು ಕರಗಳ ಮುಗಿದು ಮಾವುತರು ||
ತರುವನದರಿದಂದದೆ ರಥಿಕರು |
ಹರಿದು ಕೊಳಗುಳಹೊಕ್ಕು ಅತಿಬಲ |
ರಱೆಯುದಂತಿರೆ ಮುಸುಕಿಸಿಂದಲಿ ಜಱುತಿಹರೆಂದ || ೬೭

ಮುಡಿದ ಕರಿಗಳ ಮುಗ್ಗುಲೊಳ್ ಕೆಲ |
ರಡಗಿ ಹರಣವನುಳುಹಿ ಕೊಂಡರು |
ಉಡಿದ ರಥಚಕ್ರಗಳ ಮಱೆಮಲ ಮಲಗಿದರು ಕೆಲರು ||
ಕಡಿದು ಬಿದ್ದಿಹ ಮುಂಡಗಳಯೆಡೆ |
ಯೆಡೆಯೊಳಂತರಿಸಿದುದು ಕೆಲಬರು |
ಮಡಮುಱಿದು ಬಿದ್ದಿರ್ಪರಂದದಿ ಕೆಡೆದಿಹರು ಕೆಲರು || ೬೮

ಹುಲ್ಲ ಕಚ್ಚಿದರಧಿಕಸಟುಭಟ |
ರಲ್ಲಿ ಕೆಲಬರದೇನನೆಂಬೆನು |
ತಲ್ಲಣಿಸಿ ಬೇಗದಲಿ ಸುತ್ತವನೋಱಿದರು ಕೆಲರು ||
ಸಿಲ್ಲದೋಡುತ ಕೆಲರು ಗಿರಿಗುಹೆ |
ಯಲ್ಲಿ ಹೊಕ್ಕರು ರಣದ ಸಾಹಸ |
ಮಲ್ಲ ಪಾರ್ಥನ ಬಾಣಕಿದಿರಹ ವೀರರಾರೆಂದ || ೬೯

ಗಣನೆಗೆಂಟಕ್ಷೋಣಿ ಬಲವದ |
ನೆಣಿಸಿ ಮುನ್ನಿನ ರಣದಿ ಮಡಿದರು |
ಬಣಗುಭಟರೆಂದೆಣಿಪರೆರಡಕ್ಷೋಣಿ ಸರಿಗಣಿತ ||
ತ್ರಿಣಯುಸಹುದೆಂಬಂತೆ ನರನಾ |
ಕ್ಷಣದೊಳೈದಕ್ಷೋಣಿಬಲವನು |
ಹಣಿದನೊಂದಕ್ಷೋಣಿ ನಿಂದುದು ಹೇಳಲೇನೆಂದ || ೭೦

ಮೆಚ್ಚಿದರು ಪರಮೇಶಬ್ರಹ್ಮರು |
ಸಚ್ಚಿ ಶಿರಗಳನೊಲೆದು ಹರುಷದಿ |
ಹೆಚ್ಚಿದನು ಜಂಭಾರಿತನಯನ ರಣಾಚಮತ್ಕೃತಿಗೆ ||
ಜೆಚ್ಚಿದನು ಹನುಮಂತ ಪಾರ್ಥನ |
ನಿಚ್ಚಟದ ಬಿಲ್ಗಾಱತನವನು |
ಸಚ್ಚರಿತನಹುದೆಂದು ಹೊಗಳಿದುದಖಿಳ ಸುರನಿಕರ || ೭೧

ನೋಡಿದನು ಮುರವೈರಿ ಪಾರ್ಥನ |
ಪಾಡುಪಂಥಪರಾಕ್ರಮವ ಮಿಗೆ |
ನೋಡಿ ಶಾಭಾಸು ಭಳಿರೇ ಮಝುಪೂತು ಕಲಿಯುಹುದೊ ||
ಆಡಿದುದು ತಾನೊಂದು ಸಮರವ |
ಮಾಡುತಿಹ ಪರಿಯೊಂದೆನಿಸದೆ ಸ |
ಗಾಢಶೌರ್ಯವ ತೋರಿಸಿದೆ ನಿನಗಾರು ಸರಿಯೆಂದ || ೭೨

ಏಕೆ ಮನೆಮನೆಯಲ್ಲಿ ಮಕ್ಕಳು |
ಮೇಕೆಗೊರಳಿನ ಮೊಲೆಗಳಂದದಿ |
ಸಾಕಿದರಿಗಪಯುಕ್ತವ ತಹ ಸುತರಿರ್ದುಫಲವೇನು ||
ಲೋಕ ಮೆಚ್ಚಲು ನಿನ್ನ ವೋಲು |
ದ್ರೇಕಶೌರ್ಯದೊಳತಿಬಲವ ಮುನಿ |
ದೇಕನಿಮಿಷದಿ ಗೆಲುವ ಸಾಹಸಿಯೊರ್ವ ಸಾಕೆಂದ || ೭೩

ಸುತರಹರು ಕೆಲಕೆಲರು ಮೂರ್ಖರು |
ಮತಿವಿಹೀನರು ಹೇಡಿಗಳು ೞು |
ಷ್ಕೃತಿಗೆ ನೆಲೆಯಾದವರ ನಾ ನೆನೆಯಲ್ಕೆ ಫಲವೇನು ||
ಪಿತನ ಕಣ್ಣಿದಿರಿನಲಿ ಸಮರ |
ಕ್ಷಿತಿಯೊಳಹುದೆಂಬಂತೆ ಕಾದಿದ |
ಸುತನೆ ಸುತನಲ್ಲದಿಹ ಕುಪುತ್ರನೆಂದನಸುರಾರಿ || ೭೪

ಹತ್ತುರೆುಳೆ ಹನ್ನೊಂದದಾಗಿಹ |
ವಿತ್ತನಾಶಕ ಪುತ್ರಜನ್ಮವ |
ನೆತ್ತಿದಳೆ ತನಗೇನು ಸಾಹಸವಿರ್ಪುದನಿತರೊಳು ||
ಚಿತ್ತಚಂಚಲವಿಲ್ಲದಹಿತರ |
ಮೊತ್ತದೊಳ್ ಕೈಮಾಡಿದವ ತಾ |
ನುತ್ತಮದ ಮಗನೆನಿಸುವನು ಪಿತಗೆಂದನಸುರಾರಿ || ೭೫

ಕೇಳಿ ಕಡುರೋಷದಲಿ ಮನುಮಥ |
ನಾಳವಾಡುವ ಪಿತಗೆಂಗಿ ವನ |
ಪಾಲಕನ ಮಾತೇನು ಬೆಸಸೈ ಬೊಪ್ಪ ಫಲುಗುಣನ ||
ಸೋಲಿಸುವೆ ಸಮರದಲಿ ರಿಪುಬಲ |
ಜಾಲಮಂ ತರಿದೊಟ್ಟುವೆನು ಜಯ |
ಲೋಲುಪನು ತಾನೆನಿಸುವೆನು ನೋಡದಟ ನೀನೆಂದ || ೭೬

ಸಾಕು ತಱುವಲಿತನದ ಮಾತುಗ |
ಳೇಕೆ ನಗಿಸದಿರೆಂದು ನೀ ನಿ |
ನ್ನಾಕೆವಾಳರ ಮುಂದೆ ಸಮರವ ಮಾಡಿ ತೋಱಿದೆಲ ||
ನಾಕನಿಳಯರಿಗರಿದೆನಿಪ ಜಗ |
ದೇಕವೀರನು ಪಾರ್ಥನೊಡನಿ |
ನ್ನೇಕೆ ಪೌರುಷವೆಂದು ಹೇಳೆನೆ ಸಮರದಾದಿಯಲಿ || ೭೭

ಹಲದಿ ತಹೆನೆನಬಹುದು ನರನನು |
ಬಲಸಹಿತ ಸಮ್ಮೋಹನಾಸ್ತ್ರದಿ |
ಗೆಲುವೆನೆನ್ನಲುಬಹುದು ಖಚರನ ಕವಲುಮಾರ್ಗಣದಿ ||
ಕೊಲುವೆನೆನ್ನಲುಬಹುದು ಪಾರ್ಥನ |
ಕೊಳುಗುಳಕೆ ನಿಂದಿರಲು ಬಾರದು |
ಕಲಿಮನವು ಕೈಸೊರೆಯೆ ಸುಭಟರ್ಗೆಂದನಸುರಾರಿ || ೭೮

ಗಣ್ಯವೇ ನೀನವಗೆ ನೋಡಾ |
ರಣ್ಯವಾಸಿಯದೆಂದು ಬಗೆವ ಹಿ |
ರಣ್ಯಕಾಕ್ಷನ ಮಡುಹಿದಾದಿವರಾಹ ಪಡಿಯುವಗೆ ||
ಪುಣ್ಯವಂತರು ರಣದೊಳತಿಕಾ |
ಠಿಣ್ಯವೆನಿಸುವನಹಿತರಿಗೆ ನಿ |
ರ್ಣ್ಣಾರನು ಮಾಡುವನು ಶೌರ್ಯದೊಳಸಮಸಾಹಸರ || ೭೯

ಶರಧಿಯೋಳನು ಸುರಿವ ವೈಶಾಖ |
ನರಗೆ ಕಾಲ್ಬೊಳೆ ಗಣ್ಯವೇ ಮದ |
ಕರಿಸಹಸ್ರಾಯುತವ ಸೀಳುವ ಹರಿಗೆ ನರಿಯಿದಿರೆ ||
ಹರಿಹರಬ್ರಹ್ಮರನು ರಣದಲಿ |
ಸರಕುಮಾಡದ ನರನ ಸನಿಯದಿ |
ಜರಡುಗಳು ನೀವ್ ನಿಲಲು ಬಲ್ಲಿರೆ ಎಂದನಸುರಾರಿ || ೮೦

ತಾತ ನೋಡೆನ್ನದಟ ನರಗೆ ವಿ |
ಧಾತ್ರ ನೆರವಾಗಲಿ ರಣಕೆ ವರ |
ಭೂತನಾಥನು ನಿಲಲಿ ಯಮವರುಣಾದಿ ವಾಯುವ್ಯ ||
ವೀತಿಹೋತ್ರಕುಬೇರನಾಪುರು |
ಹೂತಮುಖ್ಯಾಮರರು ಬರಲಿದಿ |
ರಾತು ಕಾದಿಯೆ ಗೆಲವ ತಹೆ ನೋಡೆಂದನಾ ಮದನ || ೮೧

ಬೀಳುಕೊಡಿ ನೀವೆಂದೆನುತ ಸಿರಿ |
ಲೋಲನಂಘ್ರಿಗೆ ನಮಿಸಿ ವರಶರ |
ಜಾಲಗಳನನಿತುವನು ತುಂಬಿಸಿ ರಥದ ಮಧ್ಯದಲಿ ||
ಕೋಲ ತಿರುಹುತ ಬಂದು ಪಾರ್ಥನ |
ಮೇಲೆ ಕವಿಸಿದ ರಥವ ಮುನ್ನಾ |
ಫಾಲಲೋಚನನಿದಿರಿನಲಿ ಮಾರಾಂತು ನಿಂದಂತೆ || ೮೨

ಫಡಫಡೆಲವೋ ಪಾರ್ಥ ತಲೆಯುನು |
ಪೊಡವಿಗಿಳುಹುವೆನೀಗ ಬೇಗದಿ |
ಕೊಡು ಗಯನನಲ್ಲದಡೆ ಪ್ರಾಣವ ಕಾವೆನೇ ನಿನ್ನ ||
ಬಡತನವ ಕೈಕೊಂಡು ಕಾಡೊಳು |
ಗಿಡುಗಿಡುವ ತಿರುತಿರುಗಿಕೊಂಡಿಹ |
ರಡಸಿ ಬಲಯುತರೊಡನೆ ಸೆಣಸುವುದೆತ್ತಲೆನುತೆಚ್ಚ || ೮೩

ಅಳಿಯುಬಂದನೊ ನೆರೆದ ಸೇನೆಯು |
ನಳಿಯು ಬಂದನೊ ತಾನೆ ಪುನರಪಿ |
ಯಳಿಯು ಬಂದನೊ ವಿಗ್ರಹದಿ ಮಶ್ವರಮುಖಾಗ್ನಿಯಲಿ ||
ಅಳಿಯುಬಂದನೊ ತನ್ನ ಪೌರುಷ |
ವಳಿಯು ಬಂದನೊ ದಳವನೆನುತವೆ |
ಗಿಳಿಯುತೇರನ ತೇಜವನವ ನೋಡುತ್ತಲಿಂತೆಂದ || ೮೪

ಅಂಗಹೀನರ ಕೂಡೆ ಸಮರವೆ |
ತುಂಗವಿಕ್ರಮಸುಭಟರಾದರಿ |
ಗಿಂಗಿತದಿ ತಿಳಿದಿರದೆ ಪೌರುಷವಂತ ನೀನೆಂದು ||
ಸಂಗರದಿ ನಿಂದಿಹೆ ಕರ್ಣಾ ಹೆ |
ಣ್ಣಂಗದವನಾಗಿರ್ದು ನಮ್ಮೊಡ |
ನಂಗೈಸಬಹುದೆನುತ ಘರ್ಜಿಸಿ ನುಡಿದನಾಪಾರ್ಥ || ೮೫

ಹಣ್ಣು ಹಂಪಲನ ಮೆಲುತ ವನದಲಿ |
ಹೆಣ್ಣಿನೊಲ್ಮೆಯ ಕಲ್ಲನಾಡುತ |
ಸಣ್ಣಮಳಲಲಿ ಲಿಂಗಗಳ ನೆಲೆ ಮಾಡಿ ಪೂಜಿಸುತ ||
ಹೆಣ್ಣಹರಿಬಕೆ ಶಿರವ ಬಾಗುತ |
ಹೆಣ್ಣು ಶಾಪವ ಧರಿಸಿದ್ದೈ ಮು |
ಕ್ಕಣ್ಣವನ ಬಡಹೋಯ್ ಹೋಗೆಂದೆಚ್ಚನಾ ಮದನ || ೮೬

ಉಣ್ಣದುರವತಿಬಲರ ಶಿರಗಳ |
ನಣ್ಣೆಕಲ್ಲಗಳನಾಡಿ ರಿಪುಗಳ |
ಸಣ್ಣ ಮರಳಿನ ತೆಱದಿ ತೂಱುತ ಪರರ ಸತಿಯಾದ ||
ಹೆಣ್ಣುಬರೆ ತಲೆಬಾಗುತವೆ ಮು |
ಕ್ಕಣ್ಣನಲಿ ಪಡೆದಮಲಶರವನು |
ಹಣ್ಣೆ ವೀರರ ಶಿರವನಿಳುಹುವೆನೆಂದನಾಪಾರ್ಥ ||
ನಡುವು ಬಡವಾಗಡೆಯು ಕೇಸರ |
ಘುಡುಘುಡಿಪ ಮದದಂತಿಗಳ ಮಿಗೆ |
ಒಡಿದು ಬಸಿಱನು ಬಗೆದು ದೇಹವೊಳಿರ್ದ ರಕ್ತವನು ||
ಕುಡಿಪ್ಪದಿಲ್ಲವೆ ಮದನ ನಿನ್ನನು |
ಕಡಿದು ರಣಭೂತಾಳಿಗಿಕ್ಕದೆ |
ಬಿಡೆನೆನುತ ಸ್ಮರನೆಚ್ಚ ಬಾಣವ ಕಡಿದನಾಪಾರ್ಥ ||  ೮೮
ಇಸಲು ಮನಸಿಜನಾಸರಳ್ಗಳ |
ಕುಸುರಿದಱಿದನು ಮಧ್ಯಮಾರ್ಗದಿ |
ಮಿಸುಕಲೀಯದೆ ಮರಳಿ ತೊಟ್ಟೆಚ್ಚನು ಧನಂಜಯನ ||
ದೆಸೆಯದಾವುದು ನಭವದಾವುದು |
ವಸುಧೆಯಾವುದದೆಂಬ ತೆಱದಲಿ |
ವಿಶಿಖಮಂ ತುಂಬಿದನು ರಥಸಾರಥಿ ಹಯಾವಳಿಗೆ ||  ೮೯
ಜಲಧಿಯೊಳ್ಕಡೆಹಾಯಲೀಜುವ |
ಬಲಯುತಗೆ ಕಾಲ್ಹೊಳೆಯು ಗಣ್ಯವೆ |
ತಿಳಿದು ನೋಡಲರಾತಿಸೇನಾರ್ಣವವ ನಿಮಿಷದಲಿ ||
ಬಲುಶರಾಗ್ನಿ ಕಣಾಳಿಯಲಿ ನು |
ಚ್ಚುಳಿಪ ಕಡುಗಲಿ ಪಾರ್ಥ ಕೊಂಬನೆ |
ಹುಲುಸರಳ್ಗಳ ತಡೆಗಡಿದು ನಗುತಿರ್ದನೆಸಲವಿನಲಿ ||  ೯೦
ಮತ್ತೆ ಸುರಿದನು ಸರಳಸಾರವ |
ಹತ್ತುನೂಱಱವತ್ತು ಬಾಣವ |
ಮೆತ್ತಿ ಕೊಂಬೊಲು ರಥಹಯಾವಳಿಯಂಗಮಧ್ಯದಲಿ ||
ಹೊತ್ತುಹೊತ್ತಿಗೆ ಮತ್ತೆ ಮತ್ತೆಱು |
ವತ್ತು ಶರದಲಿ ನರನ ಕವಚವ |
[illegible] ||  ೯೧

ಸಾದು ಕೆರಳಿದ ತೆಱದಲೀಸಂ |
ವಾದ ಲೇಸೆಂದಮರರುಲಿಯುಲು |
ಮಾಧವನ ಮೈದುನನು ಮದನನ ನೋಡಿ ನಸುನಗುತ ||
ಆದಿಯಲಿ ಸಂದವನ ಮಗನೋ |
ಸಾದಿಯಲಿ ಕಂಡಿರ್ಪ ದೇವಗೆ |
ಖೇದಮಂ ಮಾಡಲ್ಕೆ ಸಲ್ಲದು ಮರುಳೆ ಮರಳೆಂದ || ೯೨

ಎನುತಲರ್ಜುನನೆರಡು ಕಂದಲಿ |
ಮನುಮಥನ ರಥಸಾರಥಿಯನೆ |
ಜ್ಞನುವ ಗೆಡಿಸಿ ಮನೋಜ ಪಿಡಿದಿಹ ಧನುವ ಖಂಡಿಸಲು ||
ಕನಲಿ ಮನ್ಮಥನೊಂದು ಹೊಸನೋ |
ಹನದ ಚಾಪಕೆ ಸರಳ ತೊಟ್ಟ |
ಜ್ಞನು ಧನಂಜಯನುರವನೈದಂಬಿನಲಿ ಕೀಳೆಂದ || ೯೩

ಹೂಳಿದಸ್ತ್ರವ ಕಿತ್ತು ಫಲುಗುಣ |
ನಾಳವಾಡುತ ಮದನ ನಿನ್ನಯ |
ಕೋಲು ಪೂಗೋಲೆಂಬರದು ದಿಟವಿಂದು ಭಾವಿಸಲು ||
ಆಲಯದಿ ಸುಖವಡೆಯುತಿಹ ಜನ |
ಜಾಲವಂಜುವುದೀಶರಕೆ ವನ |
ಲೋಲುಪರ ತಾನೇನು ಮಾಡಲು ಬಲ್ಲುದೈಸೆಂದ || ೯೪

ಕುಂತಿದೇವಿಯ ಮಕ್ಕಳಿಗೆ ತಾ |
ನೆಂತು ರಾಜ್ಯವದಿಲ್ಲವೆಂಬ ದು |
ರಂತ ನಾಣ್ಣುಡಿಯನು ವಿವೇಕದಲಱಿದೆ ನಿನ್ನಿಂದ ||
ಕಂತುಜನಕನ ಭಾವಿಸದ ನರ |
ಜಂತುಗಳಿಗೀಗಹನವಲ್ಲದೆ |
ಮುಂತೆ ಸೌಖ್ಯಗಳುಂಟೆ ನೀ ಹೇಳೆನುತ ಸ್ಮರನೆಚ್ಚ || ೯೫

ಎಲವೊ ಮನಸಿಜ ಕೇಳುಭಯಬಲ |
ಗಳಸು ನೇತ್ರಕೆ ನೋಡೆ ಹರಿಗಿವ |
ಬಲಯುತನು ಪೆರ್ಮಗನು ನರನೊಳು ಘಳಿಗೆಪರಿಯಂತ ||
ಕೊಳುಗುಳದೊಳಿದಿರಾಂತನೆಂದ |
ಗ್ಗಳರೆಣೆಸಲಾನಿರ್ದೆನಿನ್ನಗ |
ತಿಳಿದುದಿಲ್ಲ ಕೃತಘ್ನ ನೋಡೆಂದೆಚ್ಚನಾಪಾರ್ಥ || ೯೬

ಎಸೆಯಲಾಶರಘಾತಿಗಂಗಜ |
ನಸು ಸಡಲಿ ಡೆಂಡೆಣಿಸಿ ರಥದೊ |
ಳ್ಬಸವಳಿದು ಬಿದ್ದೇಳಲಾಱದೆ ಮೂರ್ಛೆಗೊಳುತಿರಲು ||
ಸಸಿನೆ ತಿರುಹಿದ ರಥವ ಸಾರಥಿ |
ಮುಸಕದೊಳ್ ಒಲರಾಮ ಕಂಡನು |
ಕುಸುರಿದಱಿವೆನು ನರನನೆನುತೈತಂದನಾಕ್ಷಣಕೆ || ೯೭
ಎನೆಲವೊ ಫುಲುಪಾರ್ಥ ನೀನಸ |
ಮಾನ ಸಾಹಸನೆಂದು ನಮ್ಮಯ |
ಸೇನೆಯೆಲ್ಲವ ಕೊಂದು ಖಚರನ ಕೊಡದೆ ಸಂಗರಕೆ ||
ದಾನವಾಂತಕನೊಡನೆ ನಿಲುವ ನಿ |
ಧಾನ ನಿನ್ನಲಿ ತಿಳಿಯೆನಿನ್ನನು |
ಮಾನವಾವುದು ಹೇಳೆನುತ ತೆಗೆದೆಚ್ಚನಾರಾಮ || ೯೮
ಹುಲುಮನುಜನಹುದೆಣಿಸೆ ನಿಮ್ಮೊಲು |
ಬಲುಸಹಸಿ ತಾನಲ್ಲ ತವಬಲ |
ಜಲಧಿಯನು ಸೆಣಸಿದಡೆ ಕೊಂದುವು ನಮ್ಮ ಸರಳುಗಳು ||
ಜಲರುಹಾಕ್ಷನ ಸನಿಯದಲಿ ಸಲೆ |
ಕೊಳುಗುಳಕೆ ನಿಲಲರಿದು ಪುರಹರ |
ಜಲಜಭವರಿಂದಾತ್ರಿದ್ಯರಿಗೆ ಸಂದೇಹವಿಲ್ಲೆಂದ || ೯೯
ಶರಣುಹೊಕ್ಕನ ಕೊಡುವ ಕೊಡನೆಂ |
ಬಱಿಕೆ ನಿಮಗುಂಟೈಸಲೇ ಕಿಂ |
ಕರನ ಪರಿಯನು ಬಲ್ಲ ಮಹಿಮರಿಗೊರೆಯಲೇನುಂಟು ||
ಸುರಿವೆನಧಿಕಬಲಾರ್ಣವವ ಮುರ |
ಹರಗೆ ನಿಮ್ಮಡಿಯುಂಘ್ರಿಕಮಲಕೆ |
ಬೆಱಗು ಬಾರಿಸೆ ಕಾದುವೆನು ಚಿತ್ತೈಸಿ ನೋಡೆಂದ || ೧೦೦
ನುಡಿಯುತಾತನ ಸರಳ ಕಡಿದನು |
ವೊಡನೆ ಪುನರಪಿಯೈದು ಶರದಲಿ |
ನಡೆಯುತಿಹ ವಾಜಿಗಳನೆಚ್ಚನು ರಥದ ಹಲಗೆಗಳ ||
ಕಡಿದುಬಿಸುಟನಮೋಘಬಾಣದಿ |
ಕಡಿಯಲೆಚ್ಚನು ಧ್ವಜದ ಕಂಬವ |
ನುಡಿಯಲಸದಳ ಪಾರ್ಥನಾರ್ಭಟೆಗಾರು ಸರಿಯೆಂದ || ೧೦೧

ತುರಗರಥಸಾರಥಿಗಳುಡಿದರೆ |
ತೆಉಳುವನೆ ಸಂಗ್ರಾಮಧೀರನು |
ಮರುಳು ಫಲುಗುಣ ನಿನ್ನವೋಲ್‌ದೇಸಿಗನೆ ತಾನೆನುತ ||
ಮಱುರಥದಿ ತುರಗಗಳ ಸೂತನ |
ಶರಸಮೂಹವ ತುಂಬಿ ತಱುಬುವ |
ನರನ ಸರ್ವಾಂಗವನು ಹೂಳಿದನಂಬಿನಲಿ ರಾಮು || ೧೦೨

ಹನುಮ ನೊಂದನು ಸಾರಥಿಯು ನಿಜ |
ತನುವಿಗಾಯುಸ ತೋಱಿದುದು ಸಲೆ |
ವಿನುತರಥವಾಜಿಗಳು ಡೆಂಢೆಣಿಸಿದುವು ನಿಮಿಷದಲಿ ||
ಮನದ ಖತಿಯುಲಿ ಪಾರ್ಥ ಗಣಿಸದೆ |
ಧನುವಿಗಂಬನು ಹೂಡಿ ಲಕ್ಷ್ಮೀ |
ಮನಮನೋಹರನಗ್ರಜನ ಕೀಲಿಸಿದನೆಂಟಱಲಿ || ೧೦೩

ನೊಂದು ಮೂರ್ಛೆಯೊಳೆದ್ದು ದೇಹದಿ |
ನಿಂದ ಶರಗಳ ಕಿತ್ತು ಗಾಯ್ದಗ |
ಳಿಂದೊರೆವ ರುಧಿರವನು ತೊಳೆದೌಷಧಿಯುನುರೆ ಹಾಯ್ಕಿ ||
ನಿಂದು ಪಾರ್ಥನ ರಥವ ಒಲುಗದೆ |
ಯಿಂದ ನೆಲಕಪ್ಪಳಿಸಿ ಬಿಡುವೆನು |
ಎಂದು ಬರಲಂಗ್ಯೆಪ ಸಮುದೊಳೆಚ್ಚನಾಯುಧವ || ೧೦೪

ಕೆಯ್ಯೊಳಿಹ ಬಲುಗದೆಯನಿಡಲದು |
ಮೆಯ್ಯೊಲೆದು ಬಿದ್ದುದು ಧರಾತಳ |
ಕೊಯ್ದನಚ್ಚರಿವಟ್ಟು ಮುಸಲವ ಧರಿಸಿ ಬಲರಾಮ ||
ಹೊಯ್ಯಲನುಮಾಡುತ್ತ ಬರುತಿರೆ |
ಕೆಯ್ಯೊಡನೆ ಮುಸಲವನು ಹಾಱಿಸಿ |
ಮೆಯ್ಯೊಳಗೆ ತುಂಬಿದನು ಸರಳನು ಪಾರ್ಥ ನಿಮಿಷದಲಿ || ೧೦೫

ಮತ್ತೆ ಹಲವನು ಧರಿಸಿ ಹಲಧರ |
ನೆತ್ತಿ ಪಾರ್ಥನ ರಥವ ಪಾರ್ಥನ |
ನೊತ್ತಿಬಹ ಕುದುರೆಗಳ ಹನುಮನ ಸೆಳೆದು ನಿಮಿಷದಲಿ ||
ಮಿತ್ತು ವೊಗದೆಱಿದಂತೆ ವೂಳ್ಪೆನೆ |
ನುತ್ತ ಹರಿತರಲಖಿಳ ಯಾದವ |
ವೊತ್ತ ಮುಸುಕಿತು ಪಾರ್ಥನನು ಹಲಧರನ ಹಿಂದುಳುಹಿ || ೧೦೬

ಏಸಱವನೆಣಿಸಲ್ಕೆ ನರನಿ |
ವ್ಯೋಮಸಮೀಪದಿ ನಿಲಲಿಕಿವನನು |
ಭಾಸುರಾಸ್ತ್ರಗಳಿಂದ ಮುಳುಗಿಸಿ ರಥವನಶ್ವಗಳ ||
ಸೂಸಿ ದೆಸೆಗಚ್ಚರಿಯ ಬೀಱುತ |
ವಾಸವನ ಗದ್ದುಗೆಗೆ ಕಳುಹಿ ಮ |
ಹಾಸುರದಿ ಬಹೆವೆಂದು ನೋಡೆಂದುಱುಬಿದರು ಭಟರು || ೧೦೭

ಎನುತ ರಾಮಗೆ ಕೈಮುಗಿದು ತನ |
ತನಗೆ ಮನಸಿಜ ಸಾಂಬನನಿರು |
ದ್ಧನು ಕ್ಷಣಾರ್ಧದೊಳಂಬ ತಿರುವಿಗೆ ಹೂಡಿ ತೆಗೆದಿಸುತ ||
ಘನತರದ ರೋಷದಲಿ ಬರೆ ಕಂ |
ಡನು ಮನದಿ ನಸುನಗುತಲವರಂ |
ಬನು ಕಡಿದು ಕೆಯ್ಯೊಡನೆ ಪುನರಪಿಯೆಚ್ಚನಾಪಾರ್ಥ || ೧೦೮

ಎರಡು ಶರದಲಿ ಸಾಂಬ ಪಿಡಿದಿಹ |
ವರಧನುವ ತಡೆಗಡಿದು ಮಿಗೆ ಹ |
ನ್ನೆರಡು ಶರದಲಿ ಮದನನನಿರುದ್ಧರನು ಜವಗಿಡಿಸಿ ||
ಉರವಣಿಸಿ ಬಹ ತುರಗ ರಥ ರಥಿ |
ಕರ ಸುಕೇತನ ಚಾಪಗಳನುರೆ |
ಹರಿಯೆಸೆದು ಸೇನೆಯನು ಸವಱಿದನಾಧನಂಜಯನು || ೧೦೯

ಏನ ಹೇಳುವೆನರಸ ಯಾದವ |
ಸೇನೆಯನು ನಿಮಿಷಾರ್ಧದಲಿ ತಱಿ |
ದಾನೆವರಿವಣ್ಣಗಳ ಮೆಯ್ಯೊಳು ಬಾಣಮಯವಾಗೆ ||
ಸಾನುರಾಗದೊಳೆಚ್ಚು ಶರಸಂ |
ಧಾನವನು ಮೇಲ್ಮೇಲೆ ಕವಿಸಿದ |
ಭೂನಭೋಂತರವೆಲ್ಲ ಶರಮಯವಾಗೆ ಕಲಿಪಾರ್ಥ || ೧೧೦

ಉಸಿರಬಹುದೇನರಸ ಸಹಸವ |
ಶಶಿಕುಲೋತ್ತಮ ಕೇಳು ವೀರರ |
ನಸಮಸಾಯಕದಿಂದವೆಲ್ಲರ ಸದೆಬಡಿದು ರಥದಿ ||
ಎಸೆವ ಕಂಬದಿ ನೆಮ್ಮಿ ನಸುನಗೆ |
ಪಸರಿಸಲು ಬಾಣವನು ತೂಗುತ |
ಬಿಸರುಹಾಕ್ಷನನೀಕ್ಷಿಸುತಲರೆಗಳಿಗೆಯಿರುತಿರ್ದ || ೧೧೧

ಅನಿತಱಿಕೊಳ್ ಹತಶೇಷರೆಲ್ಲರು |
ಮನದ ಖತಿಯಲಿ ಕರಿರಥಾಶ್ವಗ |
ಳನಿತುವನು ತಾವೊಂದುಗೂಡಿಸಿ ನಾಲ್ಕುದಿಕ್ಕಿನಲಿ ||
ತನತನಗೆ ಕೈಮಾಡಿ ಸಮರವ |
ನೊನರಿಸುತ ಶರವಳೆಯ ಕಱೆದರು |
ಘನತರದ ರೋಷದಲಿ ಹೇಳುವೆನೇನನದುಬುತವ || ೧೧೨

ತೆರಳಬಲ್ಲನೆ ಸೂರ್ಯ ತಿಮಿರದ |
ಹೊರಳಿ ತೆರೆತೆರೆಯಾಗಿ ಕವಿಯಲು |
ನರನಿವರ ಕೈಕೊಂಬನೇ ಬರಲೆನುತ ಭಾರ್ಗವನ ||
ಪರಿವಿಡಿಯ ಶೌರ್ಯದಲಿ ಘನಸಂ |
ಗರ ಧರಿತ್ರಿಯ ಮಧ್ಯದಲಿ ಬಲು |
ಹರುಷದಿಂ ರಥದೊಳಗೆ ನುಡಿಸುತ ವಿಮಲಗಾಂಡಿವವ || ೧೧೩

ಕೇಳಿದನು ಧರ್ಮಜನು ಗಾಂಡಿವ |
ದೇಳಿಗೆಯ ಠಂಕಾರನಿನದವ |
ತೂಳಿದತಿರಥವರ್ಗ ಕರಿ ರಥ ತುರಗ ಪಾಯಿದಳ ||
ಮೇಳವಿಸಿ ಮುತ್ತಿದುದನೀಕ್ಷಿಸಿ |
ಕಾಳೆಗವು ಬಲುಹಾಯ್ತು ಅನುಜಗೆ |
ಮೇಲುದಳವನು ಕಳುಹಬೇಹುದೆನುತ್ತ ಚಿಂತಿಸಿದ || ೧೧೪

ಭೀಮ ನಡೆ ಸಹದೇವ ಹೋಗು ಸ |
ನಾಮ ನಕುಲನೆ ಜವದಲಾಸಂ |
ಗ್ರಾಮಭೂಮಿಗೆ ತೆರಳು ರವಿಸುತ ಧನುವ ಹಿಡಿ ಗುರುಜ ||
ಸೌಮನಸ್ಯದಿ ಶರವ ಕೊಡು ಗುರು |
ವೇ ಮನೋವೇಗದಲಿ ಹೊಗು ಜಯ |
ಕಾಮಿಗಳು ನೀವೆಲ್ಲ ಪಡಿಬಲವಾಗಿ ನರಗೆಂದ || ೧೧೫

ನಡೆದರಾಕ್ಷಣ ನೇರೆದಪ್ಪಿದ |
ಜಡಧಿ ಜಡಧಿಯ ಬೆರಸಬಪ್ಪೊಲು |
ಪೊಡವಿಪತಿ ಕುರುರಾಯ ರವಿಜ ಕಳಿಂಗ ಗುರುಸುತರು ||
ನುಡಿಯಲರಿದೆನಗಿದನು ಸಿಂಹಳೆ |
ಪಡಿಬಲವು ತಾವಾಗಿ ಕರಿಗಳ |
ಗಡಣ ಬಳಿಕೆಯ್ತಂದು ನಿಂದಂತಾಯ್ತು ಏನೆಂಬೆ || ೧೧೬

ಉರವಣೆಯೊಳೆಯ್ತರುವ ತನ್ನಯ |
ಧುರಸಹಾಯದ ಭಟರ ಕಾಣುತ |
ಕರವ ಮುಗಿದತಿವಿನಯದಿಂದಲಿ ನುಡಿದನೀಧುರದ ||
ಬರವನೆನ್ನಲಿ ದಯಪ ಮಾಡಿಯೆ |
ಹರುಷದಲಿ ನೀವೆನ್ನ ರಣಚಾತು |
ರ್ಯವಿಶೇಷವ ನೋಡಬೇಕೆಂದೆನುತ ನಿಲಿಸಿದನು || ೧೧೭

ನಿಮಿಷ ಸ್ಮರಿಸಿ ನಿಮ್ಮ ಕೃಪೆಯಿಂ |
ದಮರಶಕ್ತಿ ಕೊಂಡಾಡಲಹಿತರ |
ಸಮರದಲಿ ನಿರ್ಜೈಸೆ ನೋಡುವುದೆಂದು ನಸುನಗುತ ||
ಸಮನಿಸಿದ ಸಮ್ಮೋಹನಾಸ್ತ್ರವ |
ಕ್ರಮದಿ ಸಂಧಿಸಿ ತನ್ನ ಮನದೊಳು |
ಯಮತನುಜಸಂಪ್ರೀತನು ನೆನೆಯುತಲೆಚ್ಚನಾಪಾರ್ಥ || ೧೧೮

ಅದರ ಘಾತಿಗೆ ಯಾದವರ ಬಲ |
ಗದಗದಿಸಿ ತೂಕಡಿಕೆಯಲಿ ಬಲು |
ವಿಧದಿ ಮೆಯ್ಗಳ ಮುರಿಯುತೊರಗಿತು ನಿದ್ರೆ ಮುದ್ರಿಸಲು ||
ಮದನಪಿತ ತಾನೊರ್ವ ಹೊರತಾ |
ಗದು ಬುತೋಪಮುಕುರಥಾನೀ |
ಕದಲ ರಾವುತರು ರಥಿಕ ವೀರಪದಾತಿ ನಿಮಿಷದಲಿ || ೧೧೯

ಜಲಜಭವಕಲ್ಪದಲಿ ಲೋಕಂ |
ಗಳು ಜಲದೊಳಡಗಲ್ಕೆ ಯಚ್ಯುತ |
ನುಳಿದು ವಟಪತ್ರದಲಿವೊರ್ವನೆ ವಿಹರಿಪಂದದಲಿ ||
ಬಲಿಮಥನ ತಿರುವೇಂಕಟನು ನಿಜ |
ಬಲಶರಧಿ ಬಲುನಿದ್ದೆಗೆಯ್ಯಲು |
ತಲೆಯ ತೂಗುತಲಿರ್ದನೊಬ್ಬನೆ ರಥದ ಮಧ್ಯದಲಿ || ೧೨೦

ಅಂತು ಸಂಧಿ ೨೫ ಕ್ಕಂ ಪದ ೧೫೦೭ ಕ್ಕಂ ಮಂಗಳಂ.

# ಇಪ್ಪತ್ತಾಱನೆಯ ಸಂಧಿ

ಸೂಚನೆ ॥ ಭುವನಜನ ಭುಲ್ಲವಿಸೆ ಕಮಲಜ ।
ಭವಸುರರು ಪರಿಣಮಿಸೆ ಹರಿನರ ।
ರವಗಡಿಸಿ ಕಾದಿದರು ಚತುರತೆಯಿಂದ ಸಮವಾಗಿ ॥

ರಾಯ ರಾಯರೊಳಧಿಕತರಸು ।
ಶ್ರೀಯುಸದಿ ಪೆಸರ್ವಡೆದಮಲನರಿ ।
ರಾಯಮಸ್ತಕಶೂಲನೆನಿಸುತ ನಿಖಿಳಜಗತಿಯಲಿ ॥
ಕಾಯಜನಸೌಂದರದಿ ನಿರ್ಜರ ।
ರಾಯಭೋಗದೊಳೆಸೆವ ಶಶಿಕುಲ ।
ರಾಯ ಜನಮೇಜಯನೆ ಕೇಳ್ಮುಂದಣ ಕಥಾಗಮವ ॥ ೧

ಹರಿನರರ ಬಲವೆರಡು ಬಳಿಕಾ ।
ಹರಿನರರ ಶರಹತಿಯೊಳೊಱಗಿರೆ ।
ಹರಿನರರು ತಾವಿಬ್ಬರೇ ರಣಕುವಲಯದಿ ನಿಂದ ॥
ತೆಱನ ಕಾಣಿಸಿತುರುವ ಖಳರನು ।
ತಱಿದು ಭೂಭಾರವನು ತಗ್ಗಿಸಿ ।
ಮೆಱೆವ ತೇಜೋಮಯದ ಜೀವರ ಪರಮಪುರಂದದಲಿ ॥ ೨

ಬಱಿತುದೆಂಟಕ್ಷೋಹಿಣೀಬಲ ।
ದೊರೆಗಳೆಲ್ಲರು ಮಡಿದರೀಹುಲು ।
ನರನು ಮಾಡಿದಕೇನನೆಂಬೆನು ಚಿಕ್ಕಮನುಜನಲೆ ॥
ಅಱಿತು ಸರಿಯಲ್ಲದಱ ಕೂಡಣ ।
ತರಚು ಲೇಸಲ್ಲೆಂಬ ಗಾದೆಯ ।
ಮಱಿದು ತಾನೇಕಿವನ ಕೆಣಕಿದೆನೆಂದನಸುರಾರಿ ॥

ಸಹಸವಿವನಲಿ ಮೆಱೆವುದಿವ ನಱಿ ।
ಸಹಸಿ ಪರಿಕಿಸಲುತ್ತಮನು ಸಲೆ ।
ವಿಹಿತವಹ ಕಾರ್ಯವನು ಪಿಡಿದಿಹ ಮೇಲೆ ಮದ್ಭಕ್ತ ॥
ಅಹನು ನಮಗದಱಿಂದ ನೆಲಸಿಡ ।
ಸಹಸವೆಲ್ಲವು ಬಱಿತುದಿವ ನಿ ।
ಗ್ರಹಿಸಿದುದೇ ಕೃತಾರ್ಥತೆಯಾದುದು ಪೇಳಬೇಕೆಂದ ॥ ೪

ಏಕೆ ನೆರಹಿದೆನೀ ಬಲವ ತಾ |
ನೇಕೆ ತದ್ಗತಮನವ ಮಾಡಿದ |
ನೇಕೆ ಗಯನೆಂಬವನದೇತಱ ಕಾರ್ಯ ನಗೆಗೇಡು ||
ಆಕೆವಾಳರ ಮುಂದೆ ತಾ ಬರ |
ಲೇಕೆ ವಿಧಿನಿರ್ಮಿತವಲಾ ಇ |
ನ್ನೇಕೆ ಚಿಂತೆಯೆನುತ್ತ ಮನವನು ತಿರುಹಿದನು ಕೃಷ್ಣ ||
ಮನದ ಖತಿಯುಳ್ಳನಕ ಮಾಡುವೆ |
ಘನತರದ ಸಂಗ್ರಾಮವನು ವರ |
ವಿನುತ ಮಂತ್ರಾಸ್ತ್ರಗಳ ತೂಡುವೆನವನು ಜೈಸಿದಡೆ ||
ಇನರುಚಿತ್ರಯಕೋಟಿಗುಣಿತದ |
ಘನಸುಚಕ್ರವ ತೊಡುವೆನರ್ಜುನ |
ಮನದ ಭಕ್ತಿಯಲದನು ಗೆಲಿದಡೆ ಕಾಂಬೆನೊಂದನುವ ||
ಎನುತ ಮನದೊಳು ನಿಶ್ಚಯಿಸಿ ನಿಜ |
ಧನುವಿಗಂಬನು ಹೂಡಿ ಕಱೆದನು |
ವಿನುತ ಹನುಮಧ್ವಜನ ಕಠಿನೋಕ್ತಿಗಳನಾಡುತ್ತ ||
ಮನುಮಥನ ಬಲರಾಮಮುಖ್ಯರ |
ನನುವರದಿ ಗೆಲದಿಹೆನದೆಂಬೀ |
ಬಿನಗುಬಿಂಕವ ತೋಱಿನುತ ತೆಗೆದೆಚ್ಚನಸುರಾರಿ || ೭
ಧರೆಯೊಳೆಲ್ಲರ ಗೆಲಿದ ಸಾಹಸ |
ಹರಿಯ ಕಾರುಣ್ಯದಲೆ ನೋಡಿದ |
ತೆಱನದೆಲ್ಲವು ಹಸನೆನಿಸುವುದು ಹೋಗಲದಕೇನು ||
ಒರೆಯಲೇತಕೆ ತತ್ತ ಸಮರದೊ |
ಳರಿಯ ಬಹುದೆನುತರ್ಜುನನು ಹರಿ |
ಶರವ ತಡೆಗಡಿದೊಡನೆ ತಾನೆಚ್ಚನು ರಮಾವರನ || ೮
ಎಲವೊ ಫಡಫಡ ಪಾರ್ಥ ತಿಳಿಯಲು |
ಬಲುಭಟನೆ ನೀನೆಳೆಗೆ ಹಿಂದಕೆ |
ಕೊಳುಮುಖದೊಳಿರ್ಪವರ ಹಳ್ಳಿಯ ಬೇಡವಿಂಡುಗಳ ||
ಕುಲಧರವನೇಱಿಹರ ಕೋಣೆಯ |
ನೆಲೆಗಳಲಿ ಗುಹೆಗಳಲಿ ಹೊಕ್ಕಿಹ |
ಹುಲುನರರ ಗೆಲಿದಿರಲು ಧೀರನೆ ಎನುತ ಹರಿಯೆಚ್ಚ || ೯

ದೇವ ನಿಮ್ಮಯ ನುಡಿಗೆ ಪ್ರತಿನುಡಿ |
ಯಾವು ಬಿನ್ನಹ ಮಾಡಲನುಚಿತ |
ನೀವು ವಿಗ್ರಹಮುಖದೊಳೆಂದರೆ ಎಂಬುದದು ಸಹಜ ||
ತೀವಿ ರಣಮುಖದಲ್ಲಿ ಮಲೆತರ |
ನೀವಸುಧೆಗೊಱಗಿಸಿದೆನಲ್ಲದೆ |
ಹಾವು ಹಸುವಿನ ರೂಪ ತಾಳ್ದರ ತಱಿದುದಿಲ್ಲೆಂದ || ೧೦

ನುಡಿಯ ಕೇಳಿಪೆವಗಧರನೆ ತನ |
ಪಡೆಗರದ ಸಾಹಸವ ಕಂಸನ |
ಮಡದಿಯರ ಸುತರಂಗವಸ್ತ್ರವನೊಗೆವ ರಜಕನನು ||
ಹಿಡಿದು ನಖದಲಿ ಗೋಣ ಚಿವುಟಿದ |
ಕಡುಬಿರಸನಾಮುನ್ನ ಹೆಂಗಸ |
ಹಿಡಿದಸುವ ಸೇದಿದನದೆಂಬಪಯಶದ ಮಾತುಗಳ || ೧೧

ಧರೆಯೊಳೆಮ್ಮಾಜ್ಞೆಯನು ಮೀಱಿದ |
ಮರುಳ ಸಿನ್ನಂದದ ಪಿಪೀಲಿಕ |
ನರರನುತ್ತರಿಸಲ್ಕೆ ನಖವಲ್ಲದೆ ನಿದಾನಿಸಲು ||
ಶರಮುಖಕೆ ಮೋಹಾರರುಹ ನರ |
ಗುಱಿಯ ಕೇಳೆನುತಾಳವಾಡುತ |
ಹರಿ ಕನಲಿ ತೆಗೆದೆಚ್ಚನೇನೆಂಬೆನು ಮಹಾದ್ಭುತವ || ೧೨

ದನುಜಹರ ಚಕ್ಕೈಸು ಕಂಸನು |
ಮನದೆ ಭೀತಿಯ ಹಿಡಿದು ವಿಸ್ಮಯ |
ಸನಿಯದೊಳ್ ನಿಲಲಾರದುನ್ನತ ಸೌಧಶಿಖರಿಯಲಿ ||
ಘನಭಯಾನ್ವಿತನಾಗಿರಲು ಕೊಂ |
ದನು ರಮಾಧವನೆಂಬ ಮಾತಿದು |
ನೆನವುತೋರ್ಪುದೊ ಪುಸಿಯೊ ತಿಳಿದಿರದೆನುತ ನರನೆಜ || ೧೩

ಕೆಳಗೆ ಹಲಬರನೂಱಿ ವೃಶ್ಚಿಕ |
ತಳಕಗೊಳ್ ಗೋಡೆಯನಡರ್ದರೆ |
ಕೊಲದಿಹರೆ ಕಂಡವಗು ಬಳಿಕದನಾಪರಿಯಲೆಣಿಸಿ ||
ಕುಲದಲುತ್ತಮ ಪಾರ್ವಪಶುಸಂ |
ಕುಲವ ಬುಧಕಂಟಕರದೆಲ್ಲರೆ |
ಕೊಲುವುದುಚಿತವು ಬಲ್ಲರಿಂಗೆ ಮಹಾತ್ಮಯೆನುತೆಚ್ಚ || ೧೪

ಮುಂದಿವಾಳದ ಮಾತುಗಳ ಚ |
ಕ್ಕಂದಿನಿಂದಿಹ ಕೇಳಮೇಳದೊ |
ಳೆಂದಿಸವೊಳೆನ್ನೊಡನೆ ಗಳಹಲು ಬಿಡುವೆನೇ ನಿನ್ನ ||
ಹಿಂದಕಂಗಜಹರನು ತವ ಮನ |
ದಂದವನು ನೋಡಲ್ಕೆ ಸೆಣಸಿದ |
ಛಂದದಲಿ ತಾ ಬಿಡುವನಲ್ಲೆನುತೆಚ್ಚನಸುರಾರಿ || ೧೪

ಭಾವನವರಿಗೆ ಸರಸತರಸಂ |
ಭಾವನೋಚಿತವಾಕ್ಯವಿದು ಸ್ವ |
ಭಾವಿಕವಲೇ ತಿಳಿಯೆನಗಜಾವರರ ನಿಮ್ಮಡಿಯ ||
ಪಾವನಾಂಕಿತವಿಮಲಪದರಾ |
ಜೀವಯುಗಳದ ಕೃಪೆಯಿರಲು ತಾ |
ನಾವನೆನಗಿದಿರೀಸುರೋರಗಭುವನದೊಳಗೆಂದ || ೧೫

ಪೂತ ಕಲಿಸಲಗೇಕೆ ಘನನ |
ಖ್ಯಾತರಲ್ಲಾ ನೀವು ಘಟಸಂ |
ಜಾತದತ್ತಾಧಿಕಸುವಿದ್ಯಾಸಂಪ್ರದಾಯರಲೆ ||
ಭೂತನಾಥನು ಮೆಚ್ಚುವನು ಪುರು |
ಹೂತಕನ ಘನನಚ್ಚು ಸುಭಟ |
ವ್ರಾತದೊಳಗತಿಹೆಚ್ಚೆನವನಹುದೆನುತ ಹರಿಯೆಚ್ಚ || ೧೬

ಭೂತನಾಥನು ಮೆಚ್ಚಿದೊಲು ಪುರು |
ಹೂತ ಹರುಷಿಸಿದಂತೆ ಘಟಸಂ |
ಜಾತದತ್ತಾಧಿಕಸುವಿದ್ಯವ ತೋಱಿ ನಿಮ್ಮಡಿಗೆ ||
ಪ್ರೀತಿಯನು ಪುಟ್ಟಿಸುವೆ ಬಳಿಕಲ |
ರಾತಿ ಗಯನನು ಕಾದು ಕಳುಹುವೆ |
ಮಾತು ಬೇಱಿನ್ನಾವುದಸುರಾರಾತಿಯೆನುತೆಚ್ಚ || ೧೭

ಎನಲು ಕಾಲಾಂತಕನ ತೆಱದಲಿ |
ಕನಲಿ ಗರುಡಧ್ವಜನು ತೊಟ್ಟೆ |
ಚ್ಚನು ಧನಂಜಯನುರಕೆ ಬಾಣತ್ರಯವ ರಥಹರಿಗೆ ||
ಸುನಿಶಿತಾಂಬಕವೆರಡೆರಡಱಿಂ |
ದನುವಱಿತು ನಡೆಸಲ್ಕೆ ಫಲುಗುಣ |
ನಸಿತುವನು ಮಧ್ಯದಲಿ ಕಡಿದನನೋಘಮಾರ್ಗಣಗಿ || ೧೮

ಇಸುವಸಚ್ಚ ತನೆಡೆಯಲೆಲ್ಲವ |
ಕುಸುರಿದಱವನು ಪಾರ್ಥ ಹರಿ ಮುಗು |
ಳೆಸೆವ ಅವಖಂಡಿಸುವನರ್ಜುನ ಕೃಷ್ಣ ಮುಳಿದಿಸುವ ||
ಸಸಿನೆ ಕಡಿವನು ಸಿತತುರಗ ಬಳಿ |
ಕಿಸುವನಸುರಾರಾತಿಯವ ಕಡಿ |
ದಿಸುತಿಹನು ಬಲವೈರಿಯಾತ್ಮಜನರಸ ಕೇಳೆಂದ || ೨೦

ಒಡನೆ ತೊಡುವನು ಕೃಷ್ಣ ಫಲುಗುಣ |
ನೆಡೆಯಲೇ ತಱದೊಟ್ಟುವನು ಹರಿ |
ಕಡುಮುಳಿದು ಕೆಯ್ಯೊಡನೆ ಬಳಿಕಲವೋಘಬಾಣಗಳ ||
ಬಿಡಲು ನರನೆಲ್ಲವನು ಸಹಸದಿ |
ನಡುವೆ ಖಂಡಿಸಿ ಬಹ ಶರಂಗಳ |
ಸಡಗರವನಾಲಿಸುತಲಿರ್ದನು ಹೇಳಲೇನೆಂದ || ೨೧

ಮೇಲೆ ಮೇಲಸುರಾರಿ ಕೋಪದಿ |
ಕೋಲುಗಳ ಮಳೆಗಱಿಯಲಾಶರ |
ಜಾಲಮಂ ತನ್ನೆಡೆಗೆ ಬರಗೊಡದನಿತುಮಂ ಕಡಿಯೆ ||
ತಾಳಿದನು ಬೆಱಗನು ಮುರಾಂತಕ |
ನಾಳವಾಡಲದೇನು ಬಿಲುವಿ |
ದ್ಯಾಳಿಗಳ ಬಲ್ಲವರೊಳಗ್ಗಳನೆನುತ ಮಗುಳೆಚ್ಚ || ೨೨

ಎಚ್ಚ ಶರವನು ಕಡಿದು ಫಲುಗುಣ |
ಮುಚ್ಚಿದನು ಮುರರಿಪುವ ರಥವನು |
ಸಿಚ್ಚಟದ ಹಯ ನಾಲ್ಕು ಸಾರಥಿ ಕೇತನಂಗಳನು ||
ಬಚ್ಚರಣೆಗೋಲ್ಗಳಲಿ ಸಂಧಿಸು |
ತೆಚ್ಚಡಂಗವ ನಾಂಟೆ ದೇಹದಿ |
ಕೆಚ್ಚುಗೊಂಡುವು ತಿಳಿಯಲರುಣಾಂಬುಗಳು ಪೊನಲಿಡಲು || ೨೩

ಸರಳ ಕಿತ್ತು ರಥಾಶ್ವಸಮಿತಿಯು |
ವರರಥದ ಹಲಗೆಗಳ ಜಕೆಯೊ |
ಳಿರಿಸಿ ಸಾರಥಿಯುಳುಕದೊಲು ಸ್ವೈತಿರಿಸಿ ಕ್ಷಣದೊಳಗೆ ||
ತುರಗಗಳ ಚೋಳೈಸಿ ಕೋಪಿಸಿ |
ಮುರಳಿ ತೊಟ್ಟನು ಬಾಣಜಾಲವ |
ನರರೆ ಕೇಳಿನ್ನೇನು ಛಲಪದವೋ ಮುರಾಂತಕಗೆ || ೨೪

ಜೋಡು ಹರಿದುದು ನರನ ದೇಹದೊ |
ಳೀಡಿರಿದು ನಾಂಟಿದುವು ಶರಗಳು |
ಕೂಡೆ ಹಯ ಕಾಱಿದುವು ರಕುತವ ರಥ ವಿಸಂಚಿಸಿತು ||
ಆಡಲೇನದ ಕಪಿಪತಿಗೆ ಮಾ |
ತಾಡಲಸದಳವಾಯ್ತು ಫಲುಗುಣ |
ನೋಡಿ ಮಿಗೆ ಸೈತಿಟ್ಟ ಸ್ಯಂದನವಾಜಿಟೆಕ್ಕೆಯುವ || ೨೫

ಕೋಪ ಕೊನರಿಡುತರ್ಜುನನು ದೇ |
ಹಾಪದದ ಖಾತಿಯಲಿ ಮುಂದಿಹ |
ತಾಪಸಾಂತರ್ಯಾಮಿಯೀಹರಿಯೆಂಬುದನು ತಿಳಿದು ||
ಚಾಪವನು ಜೇಗೆಯ್ದು ಸಾರಥಿ |
ಗಾಪನಿತು ಕೋಪವನು ಪುಟ್ಟಿಸಿ |
ಭಾಪುರೇ ಗೋಪಾಲ ಎನುತಿದಿರಾದ ಖತಿಯಿಂದ || ೨೬

ಮುಟ್ಟವಿಸಿ ನರರಥವ ನೂಕುತ |
ಲೊಟ್ಟಿದನು ಹರಿಯಂಗದಲಿ ಹೆ |
ಜ್ಜಟ್ಟಿಗಾಂಬವೊಲಸಮಶರಗಳನಧಿಕ ತೀವ್ರದಲಿ ||
ಸಿಟ್ಟುಮಾಡಿದನದಕೆ ಮುರರಿಪು |
ಕಟ್ಟಡಿಯನೀಕ್ಷಣವೆ ದಿಗುಬಲಿ |
ಗೊಟ್ಟು ಬಿಡುವೆನೆನುತ್ತ ಖತಿಯಲಿ ಸೆಳೆದ ಸಾಯಕವ || ೨೭

ದುಷ್ಟಫಲುಗುಣ ಕೇಳು ನಿನ್ನನು |
ಸೃಷ್ಟಿಯಲಿ ಮದ್ಭಕ್ತನೆಂದತಿ |
ಇಷ್ಟದಲಿ ನಾವ್ ಕೂಡಿಕೊಂಡಿರಲಱಿಯದೆಮ್ಮೊಡನೆ ||
ಕಷ್ಟಿಯಾಗಲು ತಱಿವೆ ನಿನ್ನನು |
ಭ್ರಷ್ಟ ಸೈರಿಪುದೆನುತ ಹರಿ ತಾ |
ನಿಟ್ಟುರದ ವಾಕ್ಯದಲಿ ಘರ್ಜಿಸುತೆಚ್ಚನಾನರನ || ೨೮

ದೇವ ತವ ಪದಶರಣನಹುದಿದ |
ಕಾವ ಸಂಶಯಬೇಡ ಮನದಲಿ |
ಕಾವುದೆಂದೇ ಗಯನು ಬಂದರೆ ಕಾದೆ ತಾನೆಂದ ||
ದೇವ ದೇವರ ದೇವ ನಿಮ್ಮಯ |
ಪಾವನಾಂಕಿತವಿಮಲಪದರಾ |
ಜೀವಯುಗಳದ ಭಯವ ಪೇಳಲು ಕಾದನಲ್ಲೆಂದ || ೨೯

ಕಾಯಲಾಪರೆ ಕೈವಿಡಿವುದ |
ನ್ಯಾಯವಿಲ್ಲದೆ ತೆರೆವುದುಳ್ಳಡು |
ವಾಯದಲಿ ಹೊಣೆಯಹುದು ಸಾವರೆ ಸಂಗಡೈದೆಂಬ ||
ನ್ಯಾಯಪದ್ಧತಿಯರಿತು ಗಯನನು |
ಕಾಯುವೆನು ತಾನೆಂದು ಈಗಳು |
ವಾಯದಲಿ ನಿಮ್ಮಂಘ್ರಿಗೊಪ್ಪಿಸೆ ಮೃತ್ಯು ನಗದಿಹಳೇ || ೧೦

ಎನುತ ಹರಿಗೊಂಬತ್ತು ಬಾಣವ |
ಘನಜವದ ಹಯನಾಲ್ಕಕೈದೈ |
ದನಿತುವನು ಸಾರಥಿಗೆ ಜೋಡಿಸಿ ಗರುಡಕೇತನಕೆ ||
ಕನಲಿ ಬಾಣದ್ವಯವನಡಸಿದ |
ಡನುವುದಪ್ಪಿ ಮುರಾರಿ ವಾರುವ |
ವಿನುತ ಸಾರಥಿ ನಾಗರಿಪುಗಳು ನೊಂದರೇನೆಂಬೆ || ೧೧

ಬಾಹಿರಂಗದೊಳಸುರರಿಪು ತಾಳಿ |
ಸಾಹವದಿ ಬಿತಿ ಮಸಗಿದಂತೆಯು |
ಕೋಹಕದಿ ಪಾರ್ಥನನು ಮೂದಲಿಸಿದನು ರೌದ್ರಧರ ||
ಜೋಹವೆಮ್ಮೊಳು ಬೇಡ ನಿನ್ನನು |
ಆಹವದೊಳೆಡಗೆಡಹಿ ಗಯನನು |
ಆ ಹರಾದ್ಯರು ನೋಡೆ ತರಿವೆನು ಎನುತ ತೆಗೆದೆಚ್ಚ || ೧೨

ಏನನುಸುರಲು ಬಹುದು ಹರಿನರ |
ರಾಸಿಕೆಯ ಶರಲಾಘವದ ಸು |
ಮ್ಮಾನವನು ರಣಕೌಶಲದ ಪಾಂಡಿತ್ಯವಚನಗಳ ||
ಭೂನಭೋಂತರದೊಳಗೆಣಿಸೆ ಪಡಿ |
ಯಾನರಾಚ್ಯುತರಲ್ಲದಿಲ್ಲನು |
ಮಾನವೆಲ್ಲಿಯದೆಂದು ನುಡಿದನು ನಗುತ ಮುನಿನಾಥ || ೧೩

ಹರಿನರರು ಮುಳಿದೆಚ್ಚ ಶರತತಿ |
ಯೆರಡು ಗಿರಿರೂಪಾಗಿ ನಿಂದೊಲು |
ಮೆಱೆದುದು ಪಿತ್ತರದಲ್ಲಿ ನೋಟಕರಾಲಿ ಝೊಮ್ಮಿಡಲು ||
ಹರನರರು ತಾವೆಂದ್ರಕೀಲದೊ |
ಳುರುರಣಾಂಗಣದಲ್ಲಿ ಕಾದಿದ |
ಕೆರಡುಮಡಿಯಾಯ್ತೆನಲು ಹೋರಿದರಧಿಕಬಲಯುತರು || ೧೪

ರಾಮರಾವಣಸಮರವನು ರಘು |
ರಾಮರಾವಣತನುಜರಾಜಿಯ |
ರಾಮಕುಂಭಶ್ರವಣರಿಬ್ಬರ ಕದನವೈಖರಿಯ ||
ರಾಮಖರದೂಷಣರ ರಣವನು |
ಪ್ರೇಮದಭಿನವದಿಂದ ನೋಡಿಹೆ |
ಏಮಹಿಮಸಂಘವಣೆ ಪೊಸತೆಂದಾಡಿದರು ಸುರರು ||
ಹರಿನರರ ಸಂಗರವೊ ತಾನಿದು |
ಹರಿಹರರ ಕಾಳೆಗವೊ ಮುನ್ನಿನ |
ಧರಣಿಜಾವರಧರಣಿಯಾತ್ಮಜರಾಜಿಯಭಿನವವೊ ||
ಅರುಹಲಾರಳವತಿಶಯೋದದ |
ಧುರವು ತ್ರೈಜಗದೊಳಗೆ ಪೊಸತೆನೆ |
ಉರುತರದಿ ಕಾದಿದರು ಪಯುಪಾಡಿನಲಿ ಸಮವಾಗಿ || ೩೬
ಎಲೆ ಧನಂಜಯ ಫಾಲಲೋಚನ |
ನೊಳು ವಿಧಾನದಿ ನಿಂದು ಬಲುಕೊಳು |
ಗುಳಮುಖದೊಳೆಚ್ಚಾಡಿ ಪಡೆದಿಹ ಪಾಶುಪತಶರಗಿ ||
ವಿಲಸಿತದ ದಿಕ್ಪಾಲರಸ್ತ್ರಂ |
ಗಳಲಿ ಕಾದಿದನೀಯೆವಲ್ಲಟಿ |
ಹುಲುಸರಳ್ಗಳನಿಸಲು ತೆರಳುವನಲ್ಲ ತಾನೆಂದ || ೩೭
ಫಾಲಲೋಚನಕಮಲಭವದಿ |
ಕ್ಪಾಲಕರ ರೂಪಿಂದ ಕೃಪೆಯಲಿ |
ಪಾಲಿಸಿದ ನಾನಾವಿಧಾಸ್ತ್ರವ ನಿಮ್ಮ ಸನ್ನಿಧಿಗೆ ||
ಪೇಳಿಯುತ್ತೈದಿಸುವೆ ತವಶರ |
ಜಾಲಮಹಿಮೆಯುದೆಂತುಕೊಂಬುದ |
ನೀಲನೀರದಕಾಯ ಚಿತ್ತೈಸೆನುತ ನರನೆಚ್ಚ || ೩೮
ಗೆಲಲು ತೀರದು ಬಾಹುಬಲದೊಳು |
ತಿಳಿಯಲಿವ ದುರ್ಜನನು ಸಾಧನೆ |
ಗಳುಕನಗಣಿತವಿಧದಲಿಮ್ಮವಸುಳಿದು ನಾಶಾಚ ||
ಛಲಪದವ ಮಿಗೆ ಬಿಡನದಲ್ಲವ |
ಒಳಿಕಲೆಮಗಾರೋಪಿಸುವನತಿ |
ಬಲನ ಗೆಲಲಾಯಾಸವೆಂದನು ತನ್ನ ಮನದೊಳಗೆ || ೩೯

ಎನಿತು ಕೂರಂಬುಗಳನೆಚ್ಚಡೆ |
ಚಿನಕಡಿಯುತಿಹನಿವನು ಸಾಕವ |
ನೆನೆಯಲೇತಕೆ ಹೂಡುವೆನು ದಿವ್ಯಾಸ್ತ್ರಸಂತತಿಯ ||
ಎನುತ ತಿಮಿರಾಸ್ತ್ರವನು ಮಂತ್ರಿಸಿ |
ಕನಲಿ ಕಿವಿವರೆಗುಗಿದು ಫಡ ಕೆಡೆ |
ಯೆನುತಲೆಚ್ಚನು ಬೊಬ್ಬಿಱಿದು ನರನೆಡೆಗೆ ಮುರವೈರಿ || ೪೦

ಮುಸುಕಿದುವು ಗಾಡಾಂಧಕಾರದ |
ರಸುನೊಗಳು ದೆಸೆದೆಸೆಗೆ ಲೋಕ |
ಪ್ರಸರ ಹೆದಱಲು ನಗುತ ಫಲುಗುಣ ಸೂರ್ಯಬಾಣವನು ||
ಸಸಿನೆ ಸಂಧಿಸಿ ಬ್ರಹ್ಮರುದ್ರರಿ |
ಗೆಸೆವ ಭಕ್ತಿಯೊಳೆಱಗಿ ತೊಟ್ಟನು |
ವುಸಿರಲೇನರೆನಿಮಿಷಮಾತ್ರಕೆ ಪಸರಿಸಿತು ಜಗವ || ೪೧

ಚಂಡಸೂರ್ಯನ ಕಿರಣವೆಸೆದುದು |
ಲಂಡರಹ ದಾನವರ ಕೊಲುವವ |
ಖಂಡವಿಕ್ರಮವೀರ ನರಹರಿ ಬಹಳಕೋಪದಲಿ ||
ಅಂಡಿಸದೆ ತಾನೆಚ್ಚ ಚಕ್ರದ |
ಕಂಡದುರಿಗೆರಡೆಂಟು ಮಡಿಯೆನೆ |
ಗಂಡುಗಲಿ ನರನೆಚ್ಚ ಭಾಸ್ಕರವಿಶಿಖದುಬ್ಬರವ || ೪೨

ನಿಲಲು ಬಲ್ಲದೆ ತರಣಿಯಿದಿರಲಿ |
ಹಲವು ತಿಮಿರಸಮೂಹವಾಕ್ಷಣ |
ಕೆಲಕೆ ಸರಿದುದು ಕೂಟಸಾಕ್ಷಿಯು ಬಳಗದಂದಲಿ ||
ಜಲರುಹಾಕ್ಷನು ನೋಡಿ ತಾ ಕಡು |
ಮುಳಿದು ಸರ್ಪಾಸ್ತ್ರವ ಪ್ರಯೋಗಿಸಿ |
ಕಳುಹಿದನು ನರನೆಡೆಗೆ ವಿಷಗಳನೂಡಿ ಕೊಲುವಂತೆ || ೪೩

ಉದಿಸಿದುವು ಕಾಕೋದರಾಳಿಗ |
ಳದುಬುತೋಪಮಧೂಪಿನಿಂದವೆ |
ವದನಗಳ ಕರ್ಬೊಗೆಯು ಕಿಡಿಗಳ ಹೊದಱನಲಿ ಜಗವ ||
ಬೆದಱಿಸುವವು ತಂಡತಂಡದಿ |
ಮದನನಯ್ಯನ ಮೈದುನನ ಬಳಿ |
ಗೊದಗಿ ಬರುವನ್ನಬರ ತೊಟ್ಟನು ಗರುಡಬಾಣವನು || ೪೪

ಏನನೆಂಬೆನು ಪಕ್ಷಿಯುಗಳದಿ |
ನ್ಯೂನವಿಲ್ಲದೆ ಜನಿಸಿದಾಪವ |
ಮಾನನುರುವಣೆಗಖಿಳ ಗಿರಿಕುಲ ಚಲಿಸೆ ವೃಕ್ಷಗಳು ||
ಭೂನಭೋಂತರಕಡರಲಂಬುಧಿ |
ತಾ ನೆಗೆದು ತುಳುಕಾಡೆ ಜಗದಳಿ |
ಏನಿಮಿಷಕಾಯ್ತೆಂಬೊಲುದಿಶಿದುವಮಿತಗರುಡಾಳಿ || ೪೫

ಏಸು ಭೋಗಿಗಳಿರ್ಪವಗಣಿತ |
ಕೈಸು ಖಗಪತಿರೂಪರಾಗೆ ಶ |
ಭಾಸೆನುತ ಕಲಿಪಾರ್ಥ ನಸುನಗುತುರಗಸಂಕುಲವ ||
ಮಾಸಲಳಿಯದೆ ಕಬಳಗೊಂಡು ನಿ |
ವಾಸಕೈದುವುದೆನುತ ನೇಮಿಸ |
ಲೈಸುವನು ನಿರ್ಣೈಸಿ ಮರಳಿದುವಮಿತಗರುಡಾಳಿ || ೪೬

ಏನ ಹೇಳುವೆನರ್ಜುನನ ಸಂ |
ಧಾನಶರಚಾತುರಿಮಹಾತ್ಮೆಯ |
ದಾನವಾಂತಕನೇಱಿಕೊಂಡಿಹ ಗರುಡಕುಲವುಳಿದು ||
ಸೂನಶರಪಿತನೆಚ್ಚ ಫಣಿಸಂ |
ತಾನವನು ನಿರ್ಣೈಸಿ ಮರಳಿದು |
ವೇನು ಚಿತ್ರವೊ ಜಿಷ್ಣುತಿಮತ್ಸರದಾಯಿತೋನ್ನತಿಯ || ೪೭

ಒಡನೆ ತೊಟ್ಟನು ಪರ್ವತಾಸ್ತ್ರವ |
ಜಡಧಿಶಯನನು ನರನದಕೆ ಏಂ |
ಗಡಿಸುತೆಚ್ಚನು ಕುಲಿಶಬಾಣವ ಅಸುರಹರನದಕೆ ||
ಕಡುಮುಳಿದು ಧಾರಾಧರಾಸ್ತ್ರವ |
ತೊಡಲು ಪಾರ್ಥ ಪ್ರಭಂಜನಾಸ್ತ್ರದಿ |
ಕೆಡೆಯಿಸಲು ಬಯಲಾಯ್ತು ಮೇಘಸಮೂಹ ನಿಮಿಷದಲಿ || ೪೮

ಕಂಡನಸ್ತ್ರದ ಪರಿಭವವನು |
ದ್ದಂಡದಾನವಕೋಟಿಗಳ ಕಡಿ |
ಖಂಡಮಂ ನೆಱೆಮಾಳ್ಪ ದೇವನು ಕೋಪವಿಮ್ಮಡಿಸೆ ||
ಕೆಂಡಗಳನುಗುಳುತ್ತ ಕಬ್ಬೊಗೆ |
ತಂಡತಂಡದಲೇಳ್ವ ವಿಶಿಖವ |
ಪುಂಡರೀಕಾಯುತದ ಲೋಚನ ತೆಗೆದನಾಕ್ಷಣದಿ || ೪೯

ಮೂಡಿಗೆಯೊಳಿರ್ದಂಬ ಶ್ರೀಹರಿ |
ಗೂಢಿಸುತ ಹಸ್ತದಲಿ ಫಲುಗುಣ |
ನೋಡಿದೈ ಅನಲಾಸ್ತ್ರವನು ಗಯಸಹಿತ ನಿನ್ನವನು ||
ಮಾಡುವುದು ಭಸ್ಮವನು ಬೇಗದಿ |
ನೋಡು ಇದಕೊಂದನುವನೆನುತವೆ |
ಹೂಡಿದನು ಧನುವಿನಲಿ ತ್ರೈಜಗವೆಲ್ಲ ತಲ್ಲಣಿಸೆ || ೫೦

ಅಹುದು ಮುರಹರ ನೀವು ನುಡಿದೀ |
ವಿಹಿತವಾಕ್ಯವು ತಪ್ಪದಾಹವ |
ಮಹಿಯೊಳಗೆ ದುರ್ಜನರ ಪಟ್ಟಿಸಿ ಸಿದ್ಧವೆನಿಸಲ್ಕೆ ||
ಅಹುದೆನಿಸಿಯುಜಹರರ ಕೈಯಲಿ |
ಒಹ ಶರವ ಪರಿಹರಿಸದಿರ್ದಡೆ |
ಅಹಿತ ನಿಮ್ಮಡಿಗೆಂದು ತಿಳಿವುದು ಎಂದನಾಪಾರ್ಥ || ೫೧

ಬಳಿಕ ಮುರಹರ ತೊಟ್ಟನವಸೀ |
ತಳ ಹೆದೆಗಲನಲಾಸ್ತ್ರವನು ಹೆದೆ |
ಗೊಳಿಸಿ ಮಂತ್ರಿಸಿ ಕಾಂಬೆನಿವನಾಯುತವನೆಂದೆನುತ ||
ಝಳದ ಝಾಡಿಯಲುದಿರ್ವ ಕಿಡಿಗಳ |
ಬಳಗಗಳು ಮುಸುಕಿದುವು ಫಲುಗುಣ |
ನೊಳೆನಗೆಯು ಮಹುಳಿಯಲಿ ವರುಣಾಸ್ತ್ರವ ಪ್ರಯೋಗಿಸಿದ || ೫೨

ಒಡ್ಡಿದುವು ಘನಮೇಘಪರ್ವತ |
ದೊಡ್ಡು ತಾನೆಂಬಂತೆ ಸಿಡಿಲಿನ |
ದೊಡ್ಡದನಿ ಮಿಂಚಿನಲಿ ಕಲ್ಪಾಂತ್ಯದಲಿ ಮೇಘಗಳು ||
ಒಡ್ಡಿ ಸುರಿವಂದದಲಿ ಮಳೆವನಿ |
ದೊಡ್ಡ ಭರಿಕೈತೋರದಲಿ ತಾ |
ನಡ್ಡವಿಲ್ಲದೆ ಸುರಿದುದೇನೆಂಬೆನು ಮಹಾವರುಷ || ೫೩

ಉರಿವ ಕಿಡಿ ನಂದಿದುವು ಶಿಖಿಶರ |
ವೊರತೆಯಾಯಿತು ನೀರಿನಲಿ ಕಡು |
ವೇಗನದನೇನೆಂಬೆನರೆನಿಮಿಷದಲಿ ಕುದುರೆಗಳ ||
ವರರಥವ ಸಾರಥಿಯನದ್ದಿದ |
ಶರಮುಖಾಂಬುವಿನೊಳಗೆ ಹರಿ ಕಂ |
ಡುರಿಮಸಗಿ ಕಲ್ಪಾಂತರುದ್ರನ ತೆರದಿ ಕೋಪಿಸಿದ || ೫೪

ಕಾಲಮಹಿಮೆಯುದಲ್ಲದಿರ್ದೊಡೆ |
ಮೇಲುಶರಗಳ ನರನು ಗೆಲುವನೆ |
ಫಾಲಲೋಚನ ಶಂಭು ಶಿವಶಿವಶಿವ ಮಹಾದೇವ ||
ಕಾಲಗತಿಯನು ಕಾಂಬೆನೆನುತವೆ |
ಕಾಲನಸ್ತ್ರವ ಸೆಳೆದು ಹೂಡಿದ |
ಕಾಲರುದ್ರನ ಕೋಪಕಿಮ್ಮಿಗಿಲೆನಲು ಶ್ರೀಕೃಷ್ಣ || ೫೫
ಉದಿಸಿದರು ಕೋಟಾನುಕೋಟಿಗ |
ಳದುಬುತೋಪಮ ಯಮರು ಜಗವನು |
ಹುದುಗಿ ನುಂಗುವ ಭರದಲುಗ್ರಾಕಾರರೂಪಿನಲಿ ||
ಮದಿತಸೈರಿಭವಾಹನದಿ ಬಲು |
ಗುದಿಯು ಪಾಶದ ಹಸ್ತದಲಿ ಘನ |
ದುದಿತಯಮದಂಡದಲಿ ಏಲಯದ ಕಾಲರಂದದಲಿ || ೫೬
ಕುದಿದುದಮರರ ಸೇನೆ ನಾಕವು |
ಹೆದಱಿದುದು ಪಾತಾಳಲೋಕವು |
ಗದಗದಿಸಿ ನಡುಗಿದುದು ಮರ್ತ್ಯರ ಜನವು ಮುಗ್ಗಿದುದು ||
ಉದುರಿದುದು ತಾರೆಗಳು ಆರ್ಯಮ |
ನೊದೆದು ಕೊಂಡನು ಬ್ರಹ್ಮರುದ್ರರು |
ಮದವಳಿದು ಚಿಂತಿಸಿದರಸುರಾರಾತಿಯೆಸುಗೆಯಲಿ || ೫೭
ಕಂಡನರ್ಜುನನಖಿಳಲೋಕವ |
ಹಿಂಡಿ ಹಿಳಿವಸ್ತ್ರವನು ಭಯದಲಿ |
ಕಂಡ ಕಡೆಗೋಡುವ ದಿಶಾಧಿಪರುರಗಮನುಜರನು ||
ಖಂಡಿಸುವುದೀನಿಶಿತಶರವನ |
ಖಂಡಿತದ ರುದ್ರಾಸ್ತ್ರವಂದೇ |
ಕಂಡ ಕೆಲಸವೆನುತ್ತ ನಮಿಸುತ ಸೆಳೆದನಾಕ್ಷಣದಿ || ೫೮
ಬೇಱಿಯುಗ್ರಸ್ತಳದಿ ಹೊದೆಯೊಳ |
ಗೋರೆಯಾಗಿರಿಸಿತ್ತು ಹೂವಿನ |
ತೋರಹಣ್ಣಿನ ಗಂಧಪರಿಮಳದಖಿಳಪೂಜೆಯಲಿ ||
ಮಾರಹರ ಶರಣೆಂದು ಒರೆಯನು |
ವೋರೆಮಾಡುತ ಹಸ್ತದಲಿ ಕೆ |
ಯ್ಯಾರ ತಡವುತ ನರನು ಹೂಡಿದನಾಮಹಾಶರವ || ೫೯

ಕೋಟಿ ಸಿಡಿಲಬ್ಬರಿಸಿದಂದದಿ |
ತಾಟಿಸುತ ಸಿಂಜನಿಯನಲ್ಲಿಂ |
ದೋಟದಲಿ ತಾಕೆಳರಿದಾರ್ಭಟಿಸುತ್ತಲೆಯ್ತ್ತಗಲು ||
ನೋಟಕರ ಕಂಗಳಿಗೆ ಚಿತ್ರದಿ |
ಕೋಟಿಮುಖದಲಿ ಕಾಣಿಸಿತು ಕಂ |
ಡೋಟದಲಿ ದೆಸೆಗಳಿಗೆ ಹರಿದುದು ದೇವತತಿ ಭಯದಿ || ೬೦

ಅಬ್ಬರಿಸಿತಾಗಸವು ದಿವದಲಿ |
ನೊಬ್ಬು ಮುಸುಕಿತು ತಾರಕಾಗಣ |
ಹಬ್ಬಿದುವು ಗಗನವನು ದಿಕ್ತಟವೆಲ್ಲ ಪ್ರತಿಶಬ್ದ ||
ಗಬ್ಬರಿಸೆ ಭೂತಳವು ನಡುಗಿತು |
ನಿಬ್ಬರದಿ ಕುಲಗಿರಿಗಳೊಲೆದುವು |
ಉಬ್ಬುಮುರಿದುದು ಶೇಷರಾಜನ ಕಮಠನೊಳಸರಿದ || ೬೧

ಬಾಣಮುಖದಿಂದುದಿಸಿ ನಿಂದರು |
ಏಣಧರವೌಳಿಗಳು ಕೋಟಿಯು |
ವಾಣಿಯುರಸನು ಹೆದಱಿ ಮುಖವೈದಂಬಕತ್ರಯದಿ ||
ಪ್ರಾಣ ಕಳವಳವಾಗೆ ಕಾಲಗೆ |
ಕ್ಷೋಣಿತಳವಲ್ಲಾಡೆ ಶರಧಿಯು |
ನಾಣುಗೆಡೆ ಧ್ವಜದಗ್ರದಲ್ಲಿಹ ಹನುಮ ಸಂಭ್ರಮಿಸೆ || ೬೨

ಕೆಂಜೆಡೆಯ ಹಣೆಗಣ್ಣ ತಲೆಗಳ |
ಜಂಜಡದ ವನಮಾಲೆಭಸಿತದ |
ಸಂಜೆನಂಕಿತಗಳದ ರೌದ್ರದ ಕೋರೆದಾಡೆಗಳ ||
ರಂಜಿಸುವ ದಶಭುಜದ ವೃಷಭನ |
ಅಂಜದೇಱಿದ ರುದ್ರಕೋಟಿಯು |
ಭಂಜಿಸುವವೊಲು ಜಗವನುದುಭವಿಸಿದರು ನಿಮಿಷದಲಿ || ೬೩

ಕರವ ಮುಗಿದನು ಪಾರ್ಥ ನೀವೀ |
ಶರಮುಖದೊಳುದಿಸಿರುವ ಕಾಲರ |
ಕಱುಬಿ ಮುರಿವುದೆನುತ್ತ ವಿನಯದಲಭಯವನು ಬೇಡೆ ||
ಕರುಣನಿಧಿ ಪರಮೇಶ ಮುದದಲಿ |
ಪರಮಭಕ್ತಿಗೆ ಮೆಚ್ಚಿ ಭರದಲಿ |
ಮುರಿದು ನುಂಗಿದ ನಿಮಿಷಪರ್ಧದೊಳಂತಕವ್ರಜವ || ೬೪

ಭಾವುರೇ ಕಲಿಪಾರ್ಥ ಎಶಿಖದ |
ಚಾಪಳತೆ ಲೇಸಾಯ್ತು ಜಗದಲಿ |
ಕಾಪುರುಷರಪರಮಿತ ಧುರಗಳ ಮಾಡಿ ಮಡಿದವರ ||
ಆಪನಿತ ಕಂಡಿಹೆವು ನಿನ್ನವೊ |
ಲೀಪರಿಯ ಪರಮೇಶಕೋಟಿಯು |
ರೂಪ ತೋಱಿದರಿಲ್ಲ ಸಮರದೊಳೆಂದರಾಸುರರು || ೬೫

ನೋಡಿ ನೋಡಿ ಕಿರೀಟವನು ತೂ |
ಗಾಡಿದನು ಮುರವೈರಿ ಪಾರ್ಥನ |
ರೂಡಿಸಿದ ಬಿಲುವಿದ್ಯ ಬಹಳಿತ ಧೈರ್ಯಶಕ್ತಿಯನು ||
ಮಾಡಿದನು ಹರುಷವನು ಮನದಲಿ |
ನೋಡಬೇಕೆಂದಿರ್ದವೀತನ |
ಪಾಡುಪಂಥಪರಾಕ್ರಮವನೆನುತುಗಿದ ಶಕ್ತಿಯನು || ೬೬

ಫಡಫಡೆಲವೋ ಪಾರ್ಥ ಸೈರಿಸು |
ತಡವು ಬಳಿಕಿನ್ನೇಕೆ ತವ ತನು |
ಪಡಗೆ ಶಾಕಿನಿಯರಿಗೆ ಬೋನವನಿಕ್ಕಿಸುವೆ ಚಣದಿ ||
ಮಿಡುಕದಿರು ಕೊಳ್ಳೆನುತ ತೆಗೆದು |
ಗ್ಗಡದ ಘನತರಶಕ್ತಿಯನು ಕೊಂ |
ಡಿಡಲು ಕಬ್ಬೊಗೆ ಕಿಡಿಯನುಗುಳುತ ಬಂದುದಾಶಕ್ತಿ || ೬೭

ಭುಗಿಲು ಭುಗಿಲೆಂದೆನುತಲುರಿ ತಾ |
ನೆಗೆದುದಾಕಾಶಕ್ಕೆ ಭೂಮಿಯು |
ನಗಲದಲಿ ಹಬ್ಬಿದುದು ಜ್ಯೋತಿರ್ಮಯನು ಕಡುಮುಳಿದು ||
ನಗಧರನೊಳಿದಿರಾದ ವಿಜಯನ |
ನಗಿದು ನುಂಗುವ ಭರದಿ ಬಹವೊಲು |
ದಿಗುತಟವನಾಕ್ರಮಿಸಿ ಭೋರ್ಗರೆಯುತ್ತಲೆಯ್ದಿದುದು || ೬೮

ನಡುಗಿದನು ಸುರಪತಿ ಧನಂಜಯ |
ತುಡುಕಿದನು ಶಕ್ತಿಯನು ಶಮನನು |
ಪಿಡಿದನೆಮದಂಡವನು ಪಾಶವ ವರುಣ ಖಡ್ಗವನು ||
ಮೃಡಸಖನು ಸಂವರಿಸಿ ತಾವಿಹ |
ಕಡೆಗೆ ಮಿಸುಕುವುದೆಂದು ಸಲೆ ತಡ |
ಬಡದಿ ಭೀತಿಯಲದುರುತಿರ್ದರು ಹೇಳಲೇನೆಂದ || ೬೯

ಕಂಡು ಫಲುಗುಣ ನಗುತ ಧನುವಿಗ |
ಖಂಡನಿಶಿತಾಂಬಕವ ಸೇರಿಸಿ |
ಪುಂಡರೀಕಾಕ್ಷನೊಳು ನುಡಿದನು ದೇವ ಕೇಳೆಂದು ||
ಹಿಂಡು ದಾನವಗಣವನೆಲ್ಲವ |
ದಿಂಡುಗೆಡಹಿದ ಶಕ್ತಿಯನು ಕಡಿ |
ಖಂಡಮಪ್ಪೊಲು ಕಡಿವೆ ಚಿತ್ತವಿಸೆನುತ ತೆಗೆದೆಚ್ಚ || ೭೦

ಹಿಂದೆ ಹರಸುತನಿಂದ್ರಕೀಲದಿ |
ಇಂದುಧರನೊಲುಮೆಯಲಿ ಬಲುಕೃಪೆ |
ಯಿಂದ ಕೊಟ್ಟಿಹ ದಿವ್ಯವಿಶಿಖವ ಹೂಡಿ ದನುವಿನಲಿ ||
ಬಂಧುರದ ಭಕ್ತಿಯಲಿ ತ್ತುತಿಸುತ |
ಛಂದದಿಂದಿಡೆ ಶಕ್ತಿಯನು ವ್ರೊಲ |
ವಿಂದ ಕಡಿದುಚ್ಚಳಿಸಿ ಹಾಯ್ದುದು ಷಡ್ವದನನೆಡೆಗೆ || ೭೧

ಕಟಕಟಾ ನೋಡಿವನ ಶೌರ್ಯದ |
ಪಟುತನವನೇನೆಂಬೆ ಧರೆದು |
ಕ್ಕಟದ ಕಠಿನತರೋಗ್ರಶಕ್ತಿಯ ಕಡಿದು ಬೇಗದಲಿ ||
ಲಟಕಟಿಸುತೆವ್ಮೊಡನೆ ರಣದು |
ಬ್ಬಟೆಯ ವಾಕ್ಯದಲಾಳವಾಡುವ |
ಚಟುಲಚತುರತೆಗಾರು ಸರಿಯಿಲ್ಲೆಂದನ ಸುರಾರಿ || ೭೨

ಅಱಿವೆನಿನ್ನೊಮ್ಮಿಗೆ ಧನಂಜಯ |
ನಿರವನೆನುತೆಂದೆಣಿಸಿ ಮನದಲಿ |
ಸರಸಿಜಾಸನಶರವ ಶಾರ್ಙ್ಗಕೆ ಹೂಡಿ ಬರೆಸೆಳೆದು ||
ತ್ವರಿತದಲಿ ಸಿತಹಯನನೀಕ್ಷಿಸಿ |
ಶರವ ತಱಿಯ್ಯೆ ಪಾರ್ಥ ಬಹುಸಂ |
ಗರಧುರೀಣನು ಬ್ರಹ್ಮವಿಶಿಖವನೆನುತ ತೆಗೆದೆಚ್ಚ || ೭೩

ಶರವದಾವುದು ಗಣ್ಯ ತವಪದ |
ಸರಸಿಜಂಗಳ ಕೃಪೆಯಲೆನಗೆಲೆ |
ಮುರಹರನೆ ಬ್ರಹ್ಮಾಸ್ತ್ರವಾಗಲಿ ಬ್ರಹ್ಮಜನಕಶರ ||
ಉರುವಣೆಯೊಳೆಯ್ತರಲು ನೀವಿದ |
ನಱಿದುಕೊಂಡಿಹುದಾವ ವೇಗದಿ |
ಪರಿಹರಿಸಿ ಕಳುಹುವೆನು ಚಿತ್ತೈಸೆಂದನಾಪಾರ್ಥ || ೭೪

ಅಂಜಿಸಲು ಬಂದವನು ತಾ ಮು |
ನ್ನಂಜಿ ಕೆಡೆವಂದದಲುಪಾಂಗುದಿ |
ಭಂಜಿಸುವ ಸಾಮರ್ಥ್ಯವುಂಟದಕೇನು ಸಂಕಲ್ಪ ||
ರಂಜಕದ ಮಾತಲ್ಲ ನಮ್ಮದು |
ಕಂಜನಾಭನೆ ಕೇಳೆನುತ್ತ ಧ |
ನಂಜಯನು ಹೂಡಿದನು ಬ್ರಹ್ಮಾಸ್ತ್ರವನು ಪ್ರತಿಯಾಗಿ || ೭೫

ನಿಮಗೆ ನಮಗಿನ್ನೊಬ್ಬ ಮಹಿಮನು |
ಸಮರಸದಲಾದರಿಸೆ ಕೊಟ್ಟಿಹ |
ನಮಲಶರವೆರಡಱ ನಿದಾನದ ಗುರುಲಘುತ್ವವನು ||
ಕ್ರಮದಲೀಕ್ಷಿಪುದೆನುತ ಧನುವಿಂ |
ಗಮರಿಕೆಯ ನೆರೆಮಾಡಿ ವಾಣೀ |
ರಮಣದತ್ತಮಹಾಸ್ತ್ರವನು ತಿಗೆದೆಚ್ಚನಾಪಾರ್ಥ || ೭೬

ಬರಲು ನಿಂದಿದಿರಾಗಿ ಬ್ರಹ್ಮನ |
ಶರವೆರಡು ತಕ್ಕೈಸಿ ಸೋದರ |
ಪರಿವಿಡಿಯ ಭಾವದಲಿ ಹರ ನಮ್ಮಿರ್ವರೊಳು ನಮಗೆ ||
ಒರೆದು ಕಮ್ಮಱಗೇಱಿಯೊಳು ತಾ |
ಹರಿಹರಿದು ಸೂಜಿಯನು ಮಾಱುವ |
ತೆಱದೊಳಿವರಿಕ್ಕುವರು ಕದನವನೆನುತ ನಗುತಿಹುವು || ೭೭

ಬಂದ ಬಟ್ಟೆಯಲೆಯ್ದಿ ತಾವರ |
ವಿಂದಜನ ಸನ್ನಿಧಿಗೆ ತೆರಳುವೆ |
ವೆಂದು ಬ್ರಹ್ಮಾಸ್ತ್ರಗಳೆರಡು ಭರದಿಂದ ಸರಿಯಲ್ಕೆ ||
ಅಂದ ಲೇಸೆನುತ ಭವ ಹೊಗಳಿದ |
ಇಂದುವಂಶಾಗ್ರಣಿಯ ಚಿತ್ರೈ |
ಸೆಂದು ವೈಶಂಪಾಯ ಜನಮೇಜಯಗೆ ವಿರಚಿಸಿದ || ೮

ಭಲರೆ ಭಾಪುರೆ ಪಾರ್ಥ ನೀ ಕೊಳು |
ಗುಳಸಮರ್ಥನು ಲೇಸು ಮೆಚ್ಚಿದೆ |
ಅಳುಕದೆನಗಿದಿರಾಗಿ ನಿಂದೈ ಸಮರಭೂಮಿಯಲಿ ||
ಇಳೆಯೊಳುಂಟೇ ಗುಣಕೆ ಮತ್ಸರ |
ಚಲವನಾಡಲದೇಕೆ ಸೈರಿಸು |
ಚಲಿಸದಿರು ಕಲಿಯಾಗಿ ನಿಂದಿಹುದೆನುತಲಿಂತೆಂದ || ೭೯

ಕರೆದು ಕೊಳ್ಳೈ ಕಾವ ಜನರನು |
ಹರಸುರಪದಿಕ್ಪಾಲಮುಖ್ಯರ |
ಧುರಮುಖದೊಳಿದಿರಾಂತು ನೀ ನಿಲಲಾಱದಂಬುಧಿಯ ||
ತರತರದ ಲೋಕಗಳ ಪದಿನಾ |
ಲ್ಕಱಲಿ ಪೊಕ್ಕೊಡೆ ಕೊಲುವುದಲ್ಲದೆ |
ಪರಿಹರಿಪ ಶರವಲ್ಲ ನಾರಾಯಣಮಹಾವಿಶಿಖ || ೭೦

ಇನ್ನೆಗಂ ಸೈರಿಸಿದ ತೆಱದಂ |
ತಿನ್ನಿರಲುಬೇಡಮಲಶರದಲಿ |
ನಿನ್ನ ಕೆಡಹದೆ ಮಾಣೆನೊಂದೇನಿಮಿಷವರ್ಧದೊಳು ||
ಬನ್ನಣೆಯ ಮಾತೆಂದಿರದೆ ಸಂ |
ಪನ್ನ ಸಾಹಸವೆಂತಿಹುದು ತೋ |
ಱಿನ್ನ ಕಣ್ಣಿದಿರಿನಲೆನುತ ಮೂದಲಿಸಿದನು ನರನ || ೭೧

ಮತ್ತೆ ಮಾತೇಕೃಷ್ಣ ಕಿಂಕರ |
* ಹೊತ್ತುವೇಳೆಯ ಮನುಜನೆಂದೇ |
ಚಿತ್ತವಿಸಲಾಗದು ಮಹಾದಿವ್ಯಾಸ್ತ್ರಗಳಸಿಸಲು ||
ಎತ್ತಿ ಬಿಸಡುವೆನೆನುತ ತಾಮು |
ನ್ನೊತ್ತಿ ಭಾಷೆಯ ಮಾಡಿಹೆನು ಬೇ |
ಸತ್ತಿರಾದಡೆ ನಿಲುವುದಲ್ಲದೊಡಳುಕದೆಸೆಯೆಂದ || ೭೨

ಬಳಿಕ ಹೂಡಿದ ರುಕ್ಮಿಣೀಧವ |
ಘಳಿಗೆಯರ್ಧಕೆ ಸಕಲಲೋಕವ |
ಮುಳಿದು ಸಂಹಾರವನು ಮಾಡುವ ಭೀಕರಾಸ್ತ್ರವನು ||
ಜಲಧಿ ತಳವೆಳಗಾಗಲವನೀ |
ತಳ ಹೆದಱಿ ದೆಸೆ ಬಾಯಬಿಡೆ ಶಶಿ |
ಜಲಜಮಿತ್ರರು ನಡುಗೆ ದಿಕ್ಕರಿಕಮರೆದೆಯಾಱಿ || ೭೩

ಬಿಱಿದುದವನೀತಳವು ಸರಸಿಜ |
ತರುಣನಂಡಸುಮಂಡಲವು ಕಾ |
ನಿರದೆ ತಿರುಗಿತು ಭ್ರಮಣೆಗೊಂಡಂತಖಿಳತೀವ್ರದಲಿ ||
ಆರುಭಟೆ ಘನವಾಯ್ತು ದಿಕ್ಕಿಲಿ |
ತೋಱಿತಖಿಲೋತ್ಪಾತ ಸುರರೆದೆ |
ಯಾಱಿದರು ಹರಿಶರದ ಮುಖಶಿಖಿಗರಸ ಕೇಳೆಂದ || ೭೪

ತಿಳಿಯಲೀ ಪರಿಯಲ್ಲಿ ಜನ ತಳ |
ವೆಳಗುಗೊಳುತಿರೆ ಪಾರ್ಥನಿರ್ದನು |
ಜಲಧಿಯೊಳನು ಕುಡಿದು ತೇಗುವ ವಡಬನಂದದಲಿ ||
ಆಳುಕದಾಭೀಕರದ ಶರಕಾ |
ಗಲೆ ದೃಢಧನುಗೆ ಹೂಡಿದನು ಮುನಿ |
ತಿಲಕ ಚಿತ್ತೈಸಮಲಬ್ರಹ್ಮಶಿರೋಮಹಾಶರವ || ೮೫

ಸ್ಮರಿಸಿ ಬಳಿಕರ್ಜುನ ಮಹೇಶಗೆ |
ಕರವ ನೊಸಲಲಿ ಚಾಚಿ ಪಾಂಡುವಿ |
ನರಸಿತಿ ಪತಿವ್ರತೆಯುಳಾದಡೆ ಧರ್ಮನಂದನನು ||
ಧರೆಗೆ ಸತ್ಯಸುಶೀಲನಾದಡೆ |
ಹರಿಗೆ ತಾ ನಿಜಭಕ್ತನಾದಡೆ |
ಪರಿಹರಿಸಲೀಶರದಿ ಬಹ ಶರವೆನುತ ತೆಗೆದೆಚ್ಚ || ೮೬

ಒದವಿದಾಪತ್ತುಗಳ ಜಪದಿಂ |
ದೊದೆದು ತವಿಸುವ ಯೋಗಿಯಂದದಿ |
ಮದನಪಿತನೆಚ್ಚ ಮಲದಿವ್ಯಾಸ್ತ್ರಗಳಿಗೊಂದೊಂದು ||
ವಿಧವಱಿತು ಪ್ರತಿಶರಗಳಲಿ ಗೆಲಿ |
ದದುಬುತದ ನಾರಾಯಣಾಸ್ತ್ರವ |
ಮುದದಿ ಬ್ರಹ್ಮಶಿರೋಮಹಾಸ್ತ್ರದಿ ಗೆಲಿದನಾಪಾರ್ಥ || ೮೭

ಅವರ ದಿವ್ಯಾಸ್ತ್ರಂಗಳೆರಡಾ |
ದಿವಪಥಕೆ ಹಾಯ್ದಡಗಿದುವು ಸುರ |
ನಿವಹ ಬೆಱಗಾಗಲು ಧನಂಜಯನದಟ ಕೊಂಡಾಡಿ ||
ತವಕದಿಂ ತಿರುವೇಂಕಟೇಶನು |
ಭುವನಭೀಕರತರಕಠೋರದ |
ಲವಗಡಿಪ ಚಕ್ರಪ್ರಯೋಗಕೆ ಮನವ ಮಾಡಿದನು || ೮೮

ಅಂತು ಸಂಧಿ ೨೬ ಕ್ಕಂ ಪದ ೧೫೯೧ ಕ್ಕಂ ಮಂಗಳಂ.

# ಇಪ್ಪತ್ತೇಳನೆಯ ಸಂಧಿ

ಸೂಚನೆ|| ವರಸುದರ್ಶನಧಾರೆಗಳುಕದ |
ನರನ ಮನ್ನಿಸಿ ಗಯನ ಕರುಣಿಸಿ |
ಮರಳಿದನು ದ್ವಾರಕಿಗೆ ನಿಜಬಲದೊಡನೆ ಮುರವೈರಿ ||

ಆಲಿಸುವುದೆಲೆ ಸೋಮಕುಲನೃಪ |
ಮೌಳಿಮಣಿ ಹರಿನರರ ಚರಿತೆಯ |
ಲೀಲೆಯನು ಮನದಣಿಯಲೊರೆವೆನು ವರಕಥಾಮೃತವ ||
ಶೂಲಪಾಣಿಯ ನೇತ್ರಶಿಖಿಯ ಕ |
ರಾಳಿಯುಜ್ವಲವಾಯಿತೆನೆ ಸಿರಿ |
ಲೋಲನುರಿದೆದ್ದನು ಮಹಾರೌದ್ರದ ಸಗಾಢದಲಿ || ೧

ಹಲವು ಮಂತ್ರಾಸ್ತ್ರಂಗಳೆಲ್ಲವು |
ಸ್ಖಲಿತವಾದವುದೆಂದು ಕೊಬ್ಬಿದ |
ಕಲುಷಕಾಯನ ಚಕ್ರಧಾರಾನಲಗೆ ಬಲಿಗೊಟ್ಟು ||
ಬಳಿಕವನ ಮುಱಿವೊಕ್ಕ ಖಚರನ |
ಕೊಲುವೆ ನಿರ್ಭರ ಚಕ್ರದಿಂದಲಿ |
ಹಲವು ಮಾತೇನೆನುತಲುಗಿದನು ವರಸುದರ್ಶನವ || ೨

ಅದುರಿತಬುಜಭವಾಂಡ ಬ್ರಹ್ಮನು |
ಹೆದಱಿದನು ಪ್ರತಿಸೃಷ್ಟಿಗಾಗಲೆ |
ವೊದೆದು ಕೊಂಡುವು ದಿಕ್ಕರಿಗಳೆಂಟುರಗ ಕಮಠಾಳಿ ||
ಬಿದುರದಂಕುಶವಿಕ್ಕಿ ಕರಿಯನು |
ಹದಗೊಳಿಸಿ ಹೊರೆಸಾರಲಂಗೈ |
ಸಿದನು ಸುರಪತಿ ಏನನೆಂಬೆನು ಚಕ್ರದುರುವಣೆಯ || ೩

ಶರಧಿ ತಳವೆಳಗಾದುದಾಕ್ಷಣ |
ಬಿರಿದುದವನೀತಳ ದಿವಾಕರ |
ಸರಸಿಜಾರಿಗಳೋಡಿ ಮತ್ತೊಂದೆಸೆಗೆ ಗಮಿಸಿದರು ||
ಗಿರಿಗಳಲ್ಲಾಡಿದುವು ಬೀಸಿದ |
ಮರುತ ಮೇರೆಯ ಮೀಱಿ ಜಗತಿನ |
ಹರಣದಂದಿನ ಲಕ್ಷಣಂಗಳು ತೋಱಿದವುವೆಂದ || ೪

ಮೋಡದಲಿ ಹುದುಗಿರ್ದ ಸೂರ್ಯನು |
ರೂಢಿಯಲಿ ಕಾಣಿಸುವವೊಲ್ಮುಱಿ |
ಮಾಡಿದಸಿತಾಂಬರದ ಗವಸಣಿಗೆಯನು ಕಳಚಲ್ಕೆ ||
ತೀಡಿದುದು ತತ್ಪ್ರಭೆ ಜಗಂಗಳ |
ನಾಡಲೇನದನಮಮ ಹರಿ ಖಯು |
ಖೋಡಿಯಿಲ್ಲದೆ ಪಿಡಿದನಾದಕ್ಷಿಣಸುಹಸ್ತದಲಿ || ೫

ವರಪಿತಾಮಹಪ್ರಳಯದಂದೀ |
ಧರೆಯ ದಹಿಸಲು ತಿಳಿದು ಶತಸಾ |
ಸಿರದಿವಾಕರ ತಾಗಲೊಂದೇ ಕ್ಷಣದಲುದಯಿಸಿದ ||
ತೆಱದಿ ಕಾಣಿಸಿತೇನನೆಂಬೆನು |
ಹರಿಯ ಚಕ್ರದ ಪರಿಯ ಭೋಗಿಪ |
ಸುರನರಾವನಿಯೆಲ್ಲ ಜೇಗುದಿಗೊಂಡು ದಾಕ್ಷಣಕೆ || ೬

ಆಯಿತಾಯಿತು ಪಾಂಡವರಿಗೆ; |
ಹಾಯ ಬಂದುದು ತಮಗಕಟ ಜೆ |
ನ್ನಾಯಿತ್ತೈ ವಿಧಿಕೃತವ ಮೀಱಲು ಒಳಿಕಲಾರ ವಶ ||
ದಾಯಿಗರು ಕೆಡಲೆಣಿಸಿನಾವ |
ಶ್ರೇಯಸವ ಬಯಸಿದರೆ ಕೃಷ್ಣನು |
ಪಾಯದಲಿ ಚಕ್ರವನು ತುಡುಕಿದನೆಂದ ಕುರುರಾಯ || ೭

[illegible]ಜೇಯ ಚಿಂತಿಸಲೇಕೆ ಕೃಷ್ಣನ |
ಮಾಯೆಯನು ಗೆಲಬಹುದದೆಂತೆನೆ |
ವಾಯುವೇಗದೊಳೋಡಿ ರಣಭೂಮಿಯನು ನೆರೆ ದಾಂಟಿ ||
ಆಯುಧವ ಬಿಟ್ಟಿರ್ದ ನರನನು |
ನೋಯಿಸದು ಹರಿಚಕ್ರವಿನಿತಕು |
ಪಾಯುವಿದು ತಾ ಬಲ್ಲೆನೆಂದನು ಶಕುನಿ ಕೈಮುಗಿದು || ೮

ತೆಗೆಯದೇತಱ ಮಾತು ಸುಭಟಾ |
ಳಿಗಳು ನಗುವರು ಕಾಯವಿದು ತಾ |
ಬಗೆಯೆ ಅಜನುಳ್ಳನ್ನ ಬಾಳ್ವುದೆ ಕಕ್ಕುಲಿತೆಯೇಕೆ ||
ಅಗಣಿತದ ದುರ್ಯಶವ ನೆನೆದರೆ |
ಜಗವು ಮೆಚ್ಚದು ಶಕುನಿ ಬಂದುದ |
ನೊಗುಮಿಗೆಯ ಧೈರ್ಯದಲಿ ತವಿಸುವೆನೆಂದನಾಭೂಪ || ೯

ನರಪನೊರೆಗಳಚಿದ ಕಟಾರಿಯು |
ಕರದಲಾಯುತಮಾಗಿ ರಣದಲಿ |
ನರನು ಬಿದ್ದನದೆಂಬ ವಾರ್ತೆಯು ಕೇಳಿದಾಕ್ಷಣದಿ ||
ಹರುವ ಕಾಂಬೆನೆನುತ್ತಲಿರ್ದನು |
ಮರುತಸುತ ತಿರುಹುತ್ತ ಗದೆಯುನು |
ಬರಲಿ ನೋಡುವೆನೊಮ್ಮೆ ಚಕ್ರದ ಪರಿಯನೆನುತಿರ್ದ || ೧೦

ಕರೆದು ಸಹದೇವನನು ನಕುಲನು |
ಸುರಪಸುತನಳಿದಂತರದಿ ತಾ |
ವಿರವುದನು ಚತವ್ರೊಬ್ಬರೊಬ್ಬರು ಕೈದಣಿಯೆ ಕಾದಿ ||
ಧರೆಗೊಱಗಿಸುವೆವೀತನುವನೆಂ |
ದೊರೆಯೆ ಮನದಲಿ ನಗುತಲಿರ್ದನು |
ಪರಮಸುಜ್ಞಾನೈಕನಿಧಿ ಸಹದೇವನತಿಮುದದಿ || ೧೧

ವಿಧವೆತನದಲಿ ತನುವ ನೀಗುವು |
ದಧಮಯೋಚನೆ ರಮಣರಿರೆ ಸ |
ನ್ನಿಧಿಯುಲೇ ಹರಣವನು ಕಳಿವೆನೆನುತ್ತ ಪಾಂಚಾಲಿ ||
ಮಧುರಿಪುವಿಗಭಿನಮಿಸಿ ಮನದಲಿ |
ಸುಧೆಯು ಪಾನವ ಮಾಡುವಂತಾ |
ವಿಧದಿ ವಿಷವನು ಧರಿಸಲುದ್ಯೋಗಿಸಿದಳಾಕ್ಷಣಕೆ || ೧೨

ಹರಹರಾ ಬಲವಂತನೆಂದೇ |
ನರನ ಮಱೆವ್ರೊಕ್ಕೆನು ವೃಥಾ ಶ್ರೀ |
ಹರಿಯ ಶರಣವ ಹೊಗಲು ತನ್ನಯ ತನುವ ಕಾವನಲ ||
ಪರಿಹರಿಸಲಾರಳವು ಧಾತ್ರನ |
ಪರಿಯನೆನುತವೆ ಖಚರ ಚಿಂತಿಸಿ |
ಮರುಗಿ ಪಿತೃಸತಿಸುತರ ನೆನೆನೆನೆನೆನೆದು ಹಲುಬಿದನು || ೧೩

ನೋಡಿದನು ನಗುತರ್ಜುನನು ಮಾ |
ತಾಡಿಸಿದ ವಿನಯದಲಿ ಗಯನನು |
ಹೂಡಿದವಗಡ ಚಕ್ರ ತನ್ನನು ಕೊಲುವುದಂತರದಿ ||
ಮೂಡಿಗೆಯೊಳಿಹ ನಿನ್ನ ಶಿರವ ಸ |
ಗಾಥತೀವ್ರದಿ ತಱೆವುದೆಂದೆ |
ಮಾಡದಿರು ಸಂಕಲ್ಪವನು ಮನವಚನಕಾಯದಲಿ || ೧೪

ಎನುತ ಗಯನನು ಸಂತವಿಸಿಯು |
ರ್ಜುನನು ರಥಮಧ್ಯದೊಳು ಚಲಿಸದೆ |
ಮನದ ದೃಢತೆಯಲೇಕಚಿತ್ತದಲಿರಲು ಮುರವೈರಿ ||
ಇನರುಚಿತ್ರಯಕೋಟಿಗುಣಿತದ |
ವನಜಭವಕಲ್ಪಾಂಡಕೋಟಿಯ |
ಮುನಿದಡಡಗಿಪ ಚಕ್ರವನು ತುಡುಕಿದನು ನಿಜಕರದಿ || ೧೫

ಎಲವೊ ಫಲುಗುಣ ದಿವ್ಯಶರಗಳ |
ಹಲವ ಪ್ರತಿಕರದಿಂದ ಗೆಲಿದಿಹ |
ಬಲುಮೆಯಿಂದಿಹೆ ಲೇಸು ಬಳಿಕೀಚಕ್ರಕಾಹುತಿಯ ||
ತಿಳಿಯಲೇನನು ಕೊಡುವೆ ಖಚರನ |
ತಲೆಯ ಕೊಡುವೆಯೊ ಮೇಣು ನಿನ್ನಯ |
ಗಳವ ಕೊಡುವೆಯೊ ಹೇಳು ಜೇಗದಲೆಂದನಸುರಾರಿ || ೧೬

ತರಹರಕೆ ಠಾವಿಲ್ಲ ತಿಳಿ ನಿ |
ಮ್ಮರಸ ಧರ್ಮಜನನು ವೃಕೋದರ |
ವರನಕುಲಸಹದೇವ ದ್ರೌಪದಿಯಾದಿಯಾದವರ ||
ಕರದ ಚಕ್ರಕೆ ಗಯನನೊಪ್ಪಿಸಿ |
ಹರಣಮಂ ಬಳಿಕುಳುಹಿಕೊಂಬೀ |
ನೆರವಣಿಗೆ ಲೇಸೆನುತ ನುಡಿದನು ಮುಳಿದು ಮುರವೈರಿ || ೧೭

ಅಳುಕಿ ಭೀತಿಯೊಲೋಡಿ ಬಂದನ |
ತಲೆಯನರಿವುದು ನೀತಿಯಲ್ಲಲೆ |
ಬಲರುಹಾಕ್ಷಸಮಕ್ಷಮದಿ ಧುರವಾಗಬೇಕೆಂದು ||
ಒಲವಿನಲಿ ನಿಂದಿರ್ಪ ವೀರರ |
ಗಳನವರಿವುದು ಸಹಜ ದೇವರು |
ತಿಳಿಯದಿಹ ನಿಜಕಾರ್ಯವೇನಿಹುದೆಂದನಾಪಾರ್ಥ || ೧೮

ತಲೆಯ ಕೊಡಲಾಗುರ್ಂಟು ನಿನ್ನಯ |
ಸುಲಲಿತೋಜ್ವಲಕರದಲೆಸೆದಿಹ |
ವಿಲಸಿತದ ಚಕ್ರಾಹುತಿಗೆ; ಹರಕಮಲಜಾದಿಗಳ ||
ನೆಲೆಗಧಿಕಸಾಯುಜ್ಯಪದವಹು |
ದುಳಿದ ಮಾತಂತಿರಲಿ ಮೈದುನ |
ಚಲಿತನೋ ನಿಶ್ಚಲನೊ ಚಿತ್ತೈಸೆಂದನಾಪಾರ್ಥ || ೧೯

ಮೊದಲು ನಿಲುಕಡೆಯಾದ ಬಳಿಕವೆ |
ತುದಿಗೆ ಬಡ್ಡಿಯ ಮಾತು ಕೇಳುವ |
ಹದನು ಮುರಹರ ನಿನ್ನ ಕರದಲ್ಲಿರ್ದ ಚಕ್ರವನು ||
ಇದಿರಗೆಯ್ತರಗೊಡುವಡೈಸೆ |
ಎದಿತವಿರ್ವರ ಶಿರವ ಕೊಡುವುದು |
ಸದರವೆಂದಿರಬೇಡ ಚಿತ್ತದೊಳೆಂದನಾಪಾರ್ಥ || ೨೦

ಅಱಿತು ತವ ಮೈದುನನ ಶಕ್ತಿಯ |
ಅಱಿಯದವನಂದದಲಿ ತನ್ನನು |
ಮರುಳುಮಾಡುವುದೇಕೆನುತ ಕಲಿಪಾರ್ಥ ನಸುನಗುತ ||
ಒರೆಗಳೆದು ಪಾಶುಪತಬಾಣವ |
ಸ್ಮರಿಸಿ ಹರಮಂತ್ರಾಗಮುವ ನಿ |
ರ್ಭರದಿ ಧನುವಿಗೆ ಹೂಡಲುದ್ಯೋಗಿಸಿದನಾಕ್ಷಣಕೆ || ೨೧

ಕಂಡನಾಕಮಲಜನು ನರನು |
ದ್ದಂಡ ಘನಶೌರಿಯೋದ್ಧತಿಯನ |
ಖಂಡಕೌಮೋದಕಿಗೆ ಸರಿ ಯಿಾಲೋಕ ಪದಿನಾಲ್ಕು ||
ಖಂಡಪರುಶುವಿನಸ್ತ್ರವಾರನು |
ಹಿಂಡಿ ಹಿಳಿವುದೊ ತಿಳಿಯೆವಾವಿದ |
ಕಂಡು ನಿಲ್ಲಿಸದಿರುವುದನುಚಿತವೆನುತ ಮನದಂದ || ೨೨

ಮಗನ ಮಾತಂತಿರಲಿ ತಮುಗೆಯು |
ಹೊಗುವಡಿನ್ನಿಂಬಿಲ್ಲ ಲೋಕವು |
ಎಗಡ ಖಚರನ ದೆಸೆಯುಲಳಿವಂತಾಯ್ತು ಮನದೊಳಗೆ ||
ಅಗಿವ ಚಿಂತಾಭರದಿ ಬ್ರಹ್ಮನ |
ಮೊಗವ ನೋಡುತಲೇನು ತೆಱನೆಂ |
ದೊಗುಮಿಗೆಯ ಭೀತಿಯಲಿ ನಡುಗುತಲಿರ್ದನಮರೇಂದ್ರ || ೨೩

ಇನಿತನೆಲ್ಲವ ಕಂಡು ಗೌರೀ |
ವನಿತೆಯರಸನು ತನ್ನ ಚಿತ್ತದಿ |
ಸುನಿಶಿತದ ವರಚಕ್ರಪಾಶುಪತಾಸ್ತ್ರವೆರಡಱಲಿ ||
ವನರುಹಭವಾಂಡವು ಕ್ಷಣಾರ್ಧಕೆ |
ಮನವಱಿಕೆಯಲಿ ದಹಿಸಿ ಪೋಪುದು |
ವಿನಯದಲಿ ಬಳಿಕಿರ್ವರನು ಸಂತೈಸಬೇಕೆಂದ || ೨೪

ಎನುತಲಲ್ಲಿಂದೆದ್ದು ಕಮಲಾ |
ಸನನೊಡನೆ ತೆರಳಲ್ಕೆ ಸುರಪತಿ |
ಯನಲ ರವಿಸುತ ರಾಕ್ಷಸಾಧಿಪ ವರುಣ ವಾಯುವ್ಯ ||
ಮನಸಿಜಾರಿಸಖಾದಿಗಳು ಸಹ |
ವನಕೆ ಬಂದರು ಹರಿನರರ ನಡು |
ಸನಿಯದಲಿ ತಾ ನಿಂದು ನುಡಿದನು ಪಾರ್ವತೀನಾಥ || ೨೫

ಲೇಸು ಮುರಹರ ನಿನ್ನ ಕೋಪದ |
ವಾಸಿಪಂಥಗಳಿವನ ಕೂಡೆ ಸೆ |
ಬಾಸು ಭಳಿರೇನೆಂಬೆ ನಗಿಸುವೆ ನಿಗಮಸಂಕುಲವ ||
ಏಸು ಘನವೈ ಮೈದುನನ ಕೂ |
ಡೀಸು ಛಲಪದವುಂಟೆ ಸೈರಿಸು |
ವಾಸುದೇವನೆ ದೂರದೃಷ್ಟಿಯ ತಿಳಿದು ನೋಡೆಂದ || ೨೬

ಪರಿಕಿಸಲು ನಾರಾಯಣನು ನೀ |
ನರನು ಫಲುಗುಣನೀರ್ವರವನಿಯು |
ಭರವನಿಳುಹಲು ಮನುಜವೇಷವ ತಾಳಿಹಿರಿ ಬಳಿಕ ||
ಒರೆಗೆರಡು ಸುರಗಿಯಹಾಯ್ತಿದ |
ಪರಿಯದಾಯ್ತಲೆ ಕೃಷ್ಣ ನೀವಿ !
ಬ್ಬರುಗಳೊಂದೇ ತನುಗಳಲ್ಲವೆ ತಿಳಿದುಕೋ ಎಂದ || ೨೭

ಸಕಲನೀತಿರಹಸ್ಯವನು ಸು |
ವ್ಯಕ್ತದಿಂ ನೀನರಿಯದವನೇ |
ಭಕತವತ್ಸಲನೆನಿಸಿ ತ್ವತ್ಪದ ಭಜಕನಾಗಿಹನ ||
ಪ್ರಕಟಿಸಿದೆ ವರಚಕ್ರಧಾರೆಗೆ |
ವಿಕಲದಿಂಧಾಹುತಿಯ ಕೊಡುವೀ |
ಯುಕುತಿ ಲೇಸಲ್ಲೆಂದು ನುಡಿದನು ನಗುತ ಮದನಾರಿ || ೨೮

ಎಳೆಯ ಗುಬ್ಬಿಯ ಮೇಲೆ ಸತ್ವದಿ |
ಜಳಜಸಂಭವಶರವ ಹಾಯ್ತಿದ |
ಬಳಕೆಯಂತೀಗರ್ಜುನನ ತಲೆಗೊಳಲು ಕೋಪದಲಿ ||
ಉಳಿದು ಸಚರಾಚರವನೆಲ್ಲವ |
ಗಳಿಗೆಯರ್ಧಕೆ ನುಂಗಿ ತೇಗುವ |
ವಿಳಸಿತದ ಚಕ್ರವನು ಹೂಡಲು ಬೆಳಗದಾಯ್ತೆಂದ || ೨೯

ಆದಿಪುರುಷನ ಕೂಡೆ ಪಾರ್ಥನು |
ಕಾದಿದಕೆ ಮೆಚ್ಚಿದೆವು ನಮ್ಮೇ |
ಪಾದಿಯಲ್ಲವೆ ನೀವು ನಿಮಗೆಮಗುಂಟೆ ಖಯಖೋಡಿ ||
ಭೇದವಳಿದಾವಿಬ್ಬರೊಂದೇ |
ಹಾದಿಯಲಿ ಒಲಿದಿವನ ಪಾಲಿಸಿ |
ಸಾದರದಿ ಕಳುಹುವುದು ಶ್ರುತಿಮತವೆಂದನಗಜೇಶ || ೩೦

ಏನ ಮಾಡಲುಬಹುದು ಬಳಿಕ ಸ |
ಮಾನದೈವದ ಮನದ ಬಿರುಬನು |
ಸಾಸುರಾಗದಿ ಹರನು ನಿಲಿಸಿದ ಕೇಳು ಕ್ಷಿತಿಪಾಲ ||
ದಾನವಾರಣವಾಜಿಯುನು ವಷದ |
ದಾನೆ ಸೈರಿಸಿ ತವಿಪುದಲ್ಲದೆ |
ಕಾನನದ ಜಂಬುಕನು ಬಿಡಿಸಲು ಬಲ್ಲುದೇ ಎಂದ || ೩೧

ಈತೆಱದೊಳುಪಚರಿಸಿ ಕೃಷ್ಣನ |
ಖ್ಯಾತಚಕ್ರವನೊರೆಗೆ ಹಾಯ್ಕಿಸಿ |
ವಾತಜನ ತಮ್ಮನನು ನೋಡಿ ಪುರಾರಿ ಹರುಷದಲಿ ||
ಏತಕಾಗ್ರಹ ಪಾರ್ಥ ನಿನ್ನ ಮ |
ಹಾತಿಶಯರಣಕುಶಲಚತುರತೆ |
ಭೂತಳಕೆ ಹೊಸತಾಯ್ತು ತೊಡದಿರು ಪಾಶುಪತಶರವ || ೩೨

ಮುಂದನೇಕ ಮಹೋಗ್ರಕಾರ್ಯದ |
ದಂದುಗಗಳುಂಟದಕೆ ನಿನಗಿರ |
ಲೆಂದು ಕೈವರ್ತಿಸಿದೆವಲ್ಲದೆ ಈಮಹಾಶರವ ||
ಇಂದು ನೀ ಮೂರ್ಖತೆಯೊಳೀಗೋ |
ವಿಂದನೊಳು ಹೂಡಲ್ಕೆ ಕೊಟ್ಟೆವೆ |
ಚೆಂದವಾಯ್ತು ವಿವೇಕತೆಗೆ, ಗವಸಣಿಗೆಗೊಳಿಸೆಂದ || ೩೩

ಮೆಚ್ಚಿದೆವು ಹರಿಸಹಿತ ನಿನ್ನಯ |
ನಿಚ್ಚಟದ ದೃಢತರದ ಶೌರ್ಯಕೆ |
ಮುಚ್ಚುಮಱೆಯೇಕಿನ್ನು ನಮ್ಮಿಬ್ಬರಿಗೆ ಭಕ್ತನಲೇ ||
ಸಚ್ಚರಿತನಹುದಿಲ್ಲಿ ಬಾರೈ |
ಇಚ್ಛಕದ ಮಾತಲ್ಲ ನಮ್ಮದು |
ಮೆಚ್ಚರವೆ ಗುಣಕೆಂದು ನುಡಿದನು ನಗುತ ಮದನಾರಿ || ೩೪

ಹರನ ಕರುಣಕಟಾಕ್ಷದಳತೆಯ |
ನರಿದು ನರ ಶರಧನುವ ರಥದೊಳ |
ಗಿರಿಸಿ ಹರನಸ್ತ್ರವನು ಮೂಡಿಗೆಗೈದಿಸಿಯೆ ಬಳಿಕ ||
ವರವರೂಥವಿನಿಳಿದು ಭಕ್ತಿಯೊ |
ಳೆಱಗಿದನು ಸಾಷ್ಟಾಂಗಯುತನಾ |
ಗರವರಿಸದಭವನನು ಸ್ತುತಿಮಾಡಿದನು ವಿನಯದಲಿ || ೩೫

ತ್ರಾಹಿ ಗೌರೀನಾಥ ಪುರಹರ |
ತ್ರಾಹಿ ವಿಶ್ವವರೂಥ ಶಂಕರ |
ತ್ರಾಹಿ ಸನಕಾದ್ಯಖಿಳಮುನಿಜನವಿನುತಚರಣಯುಗ ||
ತ್ರಾಹಿ ಸುರನಗಚಾಪ ಪಶುಪತಿ |
ತ್ರಾಹಿ ಬ್ರಹ್ಮೇಂದ್ರಾದಿವಂದಿತ |
ತ್ರಾಹಿ ತ್ರಾಹಿ ಎನುತ್ತ ಸನ್ನುತಿಗೆಯ್ದನಾಪಾರ್ಥ || ೩೬

ಜಯ ರಜತಗಿರಿವಾಸ ಶಂಭುವೆ |
ಜಯ ಸದಾಶಿವಮೂರ್ತಿ ಪುರಹರ |
ಜಯ ಜಗತ್ಪಾವನ ಮಹೋದ್ಧತಕಲುಷತಿಮಿರಾರ್ಕ ||
ಜಯ ಪರಾತ್ಮ ಪರೇಶ ಪರಶಿವ |
ಜಯ ಜಗತ್ತ್ರಯನಾಥ ಭಕ್ತಾ |
ಶ್ರಯಸಮಾಹಿತಮೂರ್ತಿ ಜಯಜಯತೆಂದನಾಪಾರ್ಥ || ೩೭

ನೀಲಲೋಹಿತ ಶರಣು ನಿರುಪಮ |
ಫಾಲಲೋಚನ ಶರಣು ದಕ್ಷವಿ |
ಭಾಳ ಸ್ಮರಹರ ಶರಣು ಗಂಗಾಧರ ಮಹಾದೇವ ||
ಶೂಲಡಮರುಗಹಸ್ತ ಶರಣು ವಿ |
ಶಾಲಗುಣಗಣನಿಲಯ ಶರಣು ಕ |
ಪಾಲಮಾಲಾಸ್ಕಂಧ ಶರಣೆನುತಿರ್ದನಾಪಾರ್ಥ || ೩೮

ಇಂತು ಬಲುಬಗೆಯಿಂದ ನುತಿಸಲು |
ಸಂತಸದಿ ಪರಮೇಶನೆಲೆ ಧೃತಿ !
ವಂತನಹ ಕಲಿಪಾರ್ಥ ಮೆಚ್ಚಿದೆವಿಬ್ಬರಾವ್ ನಿನಗೆ ||
ಎಂತು ಮನದಲಿ ಬಯಕೆಯದನೀ |
ಭ್ರಾಂತಿಗೊಂಡಿರದೀಗ ಕೇಳ |
ತ್ಯಂತಹರುಷದೊಳೆಂದು ನುಡಿದನು ಕೃಪೆಯಲಗಜೇಶ || ೩೯

ನಗುತಲರ್ಜುನನೊಳ್ಳಿತೆನುತವೆ |
ತೆಗೆದನೈಂದ್ರಮಹಾಸ್ತ್ರವಿಹ ಮಣಿ |
ಡಿಗೆಯು ಮಧ್ಯದೊಳಿರ್ಪ ಗಯನನು ಹರುಷದುಬ್ಬಿನಲಿ ||
ಒಗುವ ಪುಳಕದೊಳವನನಾಗಲೆ |
ನಗನಿವಾಸನ ಚರಣಕೆಯ್ದಿಸಿ |
ಮುಗಿದ ಕರಗಳಲವನ ಕಾವುದೆ ವರವು ತನಗೆಂದ || ೪೦

ಹರಣಭೀತಿಯಲೋಡಿಯೆನ್ನನು |
ಶರಣುಹೊಕ್ಕಿಹ ಗಯನ ಸಲಹಿದ |
ಡುರುತರದ ವರಗಳನು ಕೊಟ್ಟಂತಹುದು ನೀವೆಂದು ||
ನರನು ಹರುಷದಿ ಕೇಳೆ ಗಿರಿಜಾ |
ವರನು ಹರಿಯುನು ಕರೆದು ಖಚರಗೆ |
ಭರವಸವ ಕೊಡವೇಳ್ವುದೆಂದನು ಮಧುರವಚನದಲಿ || ೪೧

ಖಗಗಮನಗೆಡೆಗೆಡಹೆ ಗಯನನು |
ನೆಗಹಿಬಾರೈ ಎನುತ ಕರುಣದೊ |
ಳೊಗುಮಿಗೆಯ ಹರುಷದಲಿ ಭಯಬೇಡೆಂದು ಸಂತವಿಸಿ ||
ಭೃಗು ಪರಾಶರ ಧ್ರುವ ವಿಭೀಷಣ |
ಸುಗುಣಶುಕ ಪ್ರಹ್ಲಾದ ಮುಖ್ಯರ |
ನಗಣಿತಾವೇದದಲಿ ಸಲಹಿದ ಕರದಿ ಕೈವಿಡಿದ || ೪೨

ನಂಬು ನೀನೆಲೆ ಖಚರಪತಿ ನೆರೆ |
ನಂಬಿದವ ನರನೆನಗೆಯಾತನು |
ನಂಬಿದೆಂದೇ ನಿನ್ನ ಸಲಹಿದುದೆಮ್ಮ ನಂಬಿಗೆಯು ||
ಶಂಬರಾಂತಕನಾಣೆ ಕಾದೆನು |
ನಂಬಿ ಸುಖದಲಿ ರಾಜ್ಯವಾಳೆಂ |
ದಂಬುಜೋದರ ಗಯನನತಿಕೃಪೆಯಿಂದ ಮನ್ನಿಸಿದ || ೪೩

ಪೊಡೆದುವಮರರ ಭೇರಿ ನಿಗಮಗ |
ಳೆಡಹಿ ನುತಿಮಾಡಿದುವು ಸುರರು |
ಗ್ಗಡದ ಹೂಮಳೆಗಱೆದರಾಹರಿಹರರ ಮೈಗಳಲಿ ||
ಜಡಧಿಘೋಷದಲೆಲ್ಲರಾಕ್ಷಣ |
ಬಿಡದೆ ಹೊಗಳಿದರರ್ಜುನನ ವರ |
ದೃಢತರದ ಸಾಹಸಕೆ ಹೇಳುವೆನೇನ ಕಾನೆಂದ || ೪೪

ಬಳಿಕಲಾಪರಮೇಶ ಮೆಚ್ಚಿದೆ |
ನೆಲೆ ನರನೆ ನೀ ಗಯನ ಕೈವಿಡಿ |
ದಳುಕದಾಡಿದ ಭಾಷೆಯನು ನೆರೆ ಸಲಿಸಿಕೊಂಡವಗೆ ||
ಜಳಜನಾಭನ ಕೆಯ್ಯ ನಂಬುಗೆ |
ಗೊಳಿಸಿದತಿಚತುರತೆಗೆ ಮಿಕ್ಕಿನ |
ಬಳಕೆ ಯೇತಕೆ ಕೇಳು ಮತ್ತೊಂದತಿಶಯದ ವರವ || ೪೫

ಅವಧರಿಸು ಪರಮೇಶರ ಕರುಣದ |
ಲೆವಗೆ ನೀವ್ ಮನ್ನಿಸುವ ವರಗಳಿ |
ಗವನಿಪತಿ ಧರ್ಮಜನು ಪಾತ್ರನುಯೇನರಿವ ತಾನು ||
ಅವಗಡದ ಮಾತಲ್ಲವೆನ್ನಲು |
ಭವನು ನಗುತೆಮುಸೂನುವಿಹ ವೈ |
ಭವಮಹಾವನದಲ್ಲಿಗಟ್ಟಿದನನುಚರರ ಮುದದಿ || ೪೬

ಬಂದರಭವನ ಭೃತ್ಯರರ್ಜುನು |
ನಂದನನ ಕಂದನ ಸಮಿಾಪದಿ |
ನಿಂದು ಘನಗಂಭೀರವಾಕ್ಯದಿ ನುಡಿದರಿಂತೆಂದು ||
ಇಂದುಧರ ನಿಮ್ಮನು ಕರೆತರ |
ಲೆಂದು ಕಳುಹಿದ ನೀವು ತೆರಳುವು |
ದೆಂದೆನಲು ಘನಹರುಷಶರಧಿಯೊಳದ್ದನಾಭೂಪ || ೪೭

ಎನೆ ಹಸಾದವೆನುತ್ತ ಧರ್ಮಜ |
ನನುನಯದೊಳಿರದೆದ್ದು ಗೌರೀ |
ವನಿತೆಯರಸನ ಸನ್ನಿಧಿಗೆ ನಡೆತಂದು ಬಲವಂದು ||
ಘನತರದ ಭಯಭಕ್ತಿಯಿಂದಲಿ |
ವಿನುತಿಸಿದನನುಪಮದ ಶ್ರುತಿಗಳ |
ಮನಕೆ ನಿಲುಕದ ಶಿವನನೆಲೆ ಭೂಪಾಲ ಕೇಳೆಂದ || ೪೮

ಕೇಳು ಧರ್ಮಜ ನಿನ್ನ ಸತ್ಯದ |
ಶೀಲಕರ್ಜುನನುರುಪರಾಕ್ರಮ |
ದೇಳಿಗೆಗೆ ಮುಱಿಹೊಕ್ಕ ಖಚರನ ಕಾದ ದೃಢತರಕೆ ||
ಲೀಲೆಯಿಂದಲಿ ಮೆಚ್ಚಿದೆವು ಸಿರಿ |
ಲೋಲಸಹಿತಾವೀಗ ಮನಕನು |
ಕೂಲವಾಗಿಹ ವರವ ಕೊಡುವೆವು ಬೇಡು ನೀನೆಂದ || ೪೯

ಎನಲು ಭಯಭಕ್ತಿಯಲಿ ಹರನನು |
ಮನದಣಿಯೆ ನುತಿಪಾಡಿ ಧರ್ಮಜ |
ವಿನಯಪೂರ್ವಕದಿಂದ ಬಿನ್ನೈಸಿದನು ನಿಜಮತವ ||
ತನಗೆ ವರವನು ಕೊಡುವಿರಾದಡೆ |
ವಿನುತಬಲವೆರಡಱಲಿ ಮಡಿದಿಹ |
ಘನತರದ ಚತುರಂಗ ಬದುಕುವ ತೆಱನ ಕರುಣಿಪುದು || ೫೦

ಮಡಿದ ಸೇನೆಯೊಳೊರ್ವರಾದಡೆ |
ಪೊಡವಿಗೊಱಗದ ತೆಱದಿಯೆಲ್ಲರ |
ಝಡಿತೆಯಲಿ ಬದುಕಿಸಿದಡದು ತನಗುತ್ತಮದ ವರವು ||
ಮೃಡನೆ ಕರುಣಿಪುದೆನಲು ತಾ ಕೈ |
ವಿಡಿದು ಸೇನೆಯ ನಿಮಿಷಮಾತ್ರದ |
ಲೊಡನೆ ಬಳಿಕೆಬ್ಬಿಸಿದನಗಜೇಶ್ವರನು ಕರುಣದಲಿ || ೫೧

ಏನು ಘನವೆಣಿಸಲ್ಕೆ ಲೋಕದಿ |
ದಾನವಾಂತಕ ಬ್ರಹ್ಮರುದ್ರರು |
ಸಾನುರಾಗದೊಳೊಲಿದ ಮನುಜರಿಗಖಿಳಕಾಮ್ಯಗಳು ||
ಶ್ರೀನಿವಾಸನೆ ದೊರೆಕೊಳಲಿಕನು |
ಮಾನವೇನೆಲೆ ಭೂಪ ಪಾಂಡವ |
ಸೇನೆ ನಿಮಿಷದೊಳೆದ್ದು ನಲಿದುದು ಹರುಷದುಬ್ಬಿನಲಿ || ೫೨

ಬಳಿಕ ಮುರಹರನೆಡೆಗೆ ಪಾರ್ಥನು |
ಲಲಿತಹರುಷದೊಳೈದಿ ನಿಜಕರ |
ಗಳನು ಮುಗಿದಡೆಗೆಡೆದು ನುತಿಸಲು ತೊಡಗಿದನು ದೃಢದಿ ||
ಜಲರುಹಾಕ್ಷ ರಮಾಮನೋಹರ |
ಬಲವಿರೋಧಿಪ್ರಮುಖವಂದಿತ |
ವಿಲಸಿತಾಮಲಚರಣಕಮಲ ನಮೋನಮೋಯೆಂದ || ೫೩

ತ್ರಾಹಿಯಖಿಳೋರ್ವೀಶ ಮುರಹರ |
ತ್ರಾಹಿ ಲಕ್ಷ್ಮೀನಾಥ ನರಹರಿ |
ತ್ರಾಹಿ ಮನ್ಮಥಕೋಟಿ ನವಲಾವಣ್ಯ ಪರಮಾತ್ಮ ||
ತ್ರಾಹಿ ನಿಗಮಶಿರೋವಿಭೂಷಣ |
ತ್ರಾಹಿ ವಿತತಾನೇಕಗುಣಗಣ |
ತ್ರಾಹಿ ದುಷ್ಟಾಸುರತಮಃಪಟಲಾರ್ಕ ಶರಣೆಂದ || ೫೪

ಕ್ಷಮಿಸುವುದು ಯದುನಾಥ ಪುರುಷೋ |
ತ್ತಮ ಪುರಂದರಮುಖ್ಯಸುರಮುನಿ |
ವಿಮಲತರಣಿ ಶಶಿಕ್ರತು ಸ್ಮೃತಿವೇದ ಸಂರಕ್ಷ ||
ಕಮಲಭವ ಕಮಲಾಸ್ತ್ರಪಿತ ಭೂ |
ರಮಣ ದೈತ್ಯವಿರೋಧಿ ರಾಘವ |
ಅಮಿತಘೋರಶತಾಪರಾಧನ ಕರುಣಿಸುವುದೆಂದ || ೫೫

ಭೋಗಿಶಯನನೆ ಶರಣು ಗರ್ವಿತ |
ಭೋಗಿಮರ್ದನ ಶರಣು ನಿರ್ಮಳ |
ಭೋಗಿಪತಿಸಹಜಾತ ಶರಣು ಕೃಪಾಂಬುನಿಧಿ ಶರಣು ||
ಭೋಗಿಭೂಷಣವಿನುತ ಶರಣ್ಯ |
ಭೋಗಿಶಾತ್ರವವರವರೂಥನೆ |
ಯೋಗಿಹೃದಯಾನಂದ ಶರಣೆನುತಿರ್ದನಾಪಾರ್ಥ || ೫೬

ನಾಗಪತಿರಿಪುಭೇದಿ ರಕ್ಷಿಸು |
ನಾಗಪತಿರಕ್ಷಕನೆ ರಕ್ಷಿಸು |
ನಾಗಪತಿನಿರ್ದಳನೆ ರಕ್ಷಿಸು ನಾಗಮದಹರಣ ||
ನಾಗಪತಿಕಮಠೇಂದ್ರನಾಶಾ |
ನಾಗಪತಿಗಾಧಾರ ರಕ್ಷಿಸು |
ನಾಗಪತಿಗತಿರೂಪ ರಕ್ಷಿಪುದೆಂದನಾಪಾರ್ಥ || ೫೭

ರಾಮ ಸಹಭವವಿನುತ ಭಾರ್ಗವ |
ರಾಮ ಮುರಸಂಹರಣ ವಿಮಲಾ |
ರಾಮಭೂಮಿಪ್ರಾಂತಸಲಿಲವಿಹಾರ ಶ್ರೀಕೃಷ್ಣ ||
ಭೀಮವಿಕ್ರಮ ನಿಖಿಳದೈತ್ಯವಿ |
ರಾಮ ಯದುಕುಲವಾರ್ಧಿವರ್ಧನ |
ಸೋಮ ರಕ್ಷಿಸು ರಕ್ಷಿಸೆನುತೆಡೆಗೆಡೆದನಾಪಾರ್ಥ || ೫೮

ಜಲಧಿಶಯನನೆ ಜಯತು ನಿರ್ಮಲ |
ಜಲಧಿಮಥನನೆ ಜಯತು ಗರ್ವಿತ |
ಜಲಧಿಬಂಧನ ಜಯತು ಜಲನಿಧಿಸದೃಶಗಂಭೀರ ||
ಜಲಧಿವಾಸನೆ ಜಯತು ಕಲ್ಮಷ |
ಜಲಧಿಪೋತನೆ ಜಯತು ರಿಪುಕುಲ |
ಜಲಧಿಬಾಡಬ ಜಯತು ಜಯಜಯತೆಂದನಾಪಾರ್ಥ || ೫೯

ಹರಿಯು ವರನರಹರಿಯು ಮೋಣ್ಗಂ |
ಹರಿಯು ಪ್ರಾಣೇಶ್ವರಿಯೆನಿಸಿ ಜಗ |
ವಱಿಯೆ ತೊಳಲಿದ ದೇವನೆಂಬುದ ತಿಳಿದು ಸೆಣಸಿದನು ||
ಅಱಿಯೆನೆಂಬಿನೆ ನಿನ್ನ ಮಹಿಮೆಯ |
ಸಱಿತಱಿತು ಮಿಗೆ ಕೆಟ್ಟೆನೆನ್ನಲಿ |
ಕರುಣವೇತಕೆ ದೇವ ನಿಗ್ರಹಿಸೆಂದನಾಪಾರ್ಥ || ೬೦

ಸರಸಿರುಹಭವಸುರಪ ಮುಖ್ಯಾ |
ಮರರು ಸುರಮುನಿವರ್ಗವೆಲ್ಲವು |
ನಿರತ ಭಜಿಸಿಯು ಕಾಣರನುದಿನ ನಿನ್ನಮಹಿಮೆಯನು ||
ಪರಕೆ ಪರತರವಸ್ತುವೆನಿಸುವ |
ಪರಮಪುರುಷನ ದಿವ್ಯಮೂರ್ತಿಯ |
ಸರಿಯೆನಿಸಿ ಕಾದಿದ ದುರಾತ್ಮನ ನೋಡುವರೆ ಎಂದ || ೬೧

ತಂದೆ ವನದಲಿ ಮಡಿದ ಬಳಿಕವೆ |
ತಂದೆ ನೀನೇ ತಾಯಿ ನೀನೇ |
ಬಂಧು ನೀನೇ ಬಳಗ ನೀನೇ ಸಖನು ಗುರುದೈವ ||
ಎಂದೆನಿಸಿ ರಕ್ಷಿಸಿದ ದೇವನು |
ಎಂದು ಚಿತ್ತದಿ ತಿಳಿಯದಧಮನ |
ಕೊಂದುಕೆಡುಹುವುದುಚಿತ ಚಕ್ರದಲೆಂದನಾಪಾರ್ಥ || ೬೨

ಕಲುಷಕಾಯನ ಕಪಟಚಿತ್ತನ |
ಕುಲವಿಘಾತನ ಕುಪಿತರೂಪನ |
ಖಳನ ಮಾಡಿದ ಲೇಸ ಮಱೆವನ ಗುರುವಿಘಾತಕನ ||
ಇಳೆಗೆ ಬಾಹಿರನೆಂಬರಲ್ಲದೆ |
ಕುಲದಲುತ್ತಮರೆನ್ನರದಱಿಂ |
ಜಲರುಹಾಕ್ಷನೆ ತುಡುಕು ಚಕ್ರವನೆನ್ನ ಮೇಲೆಂದ || ೬೩

ಎನಿತು ಬಗೆಯಲಿ ಮುಂದೆ ಭಕ್ತಿಯ |
ನಿನಗೆ ಮಾಡಲ್ಕಂತರಂಗದಿ |
ಮನಕೆ ತೋಱದೆ ದ್ರೋಹಿಯಿವನು ಕೃತಘ್ನನಹನೆಂದು ||
ಕನಕಪಾತ್ರೆಯೊಳಮೃತರಸಭೋ |
ಜನವನಿಕ್ಕಿದ ತಂದೆತಾಯ್ಗಿರ |
ಡನು ಬಗೆದ ಖಳತಿಲಕಗುಂಟೇ ಸ್ವರ್ಗ ಹೇಳೆಂದ || ೬೪

ದೈವದೂರಗೆ ಖಳಗೆ ಶಠನಿಗೆ |
ದೈವನಿಂದಕನಾದವಗೆ ಘನ |
ದೈವದುರುತರಮಹಿಮೆಯನು ಕೇಳುತ್ತ ಕರ್ಣದಲಿ ||
ದೈವವೆಂದಱಿದಱಿದು ಮನದಲಿ |
ದೈವವನು ಕಣ್ಣಾಱೆ ಕಂಡಾ |
ದೈವದೊಡನೆಚ್ಚಾಡಿದಧಮನಿಗುಂಟೆ ಪರಲೋಕ || ೬೫

ಒಡೆಯನರಸನ ಗುರುವ ದೈವವ |
ಪಡೆದ ತಂದೆಯನಾಪ್ತಮಿತ್ರನ |
ನೆಡರನೇಕವ ಪರಿಹರಿಪ ಘನತರದ ಮಹಿಮನೊಳು ||
ಒಡಲೆರಡು ನೆರೆ ಜೀವವೊಂದೆಂ |
ದೆಡೆವಿಡದೆ ಸಂತತವು ಸಲಹಿದ |
ದೃಢಮತಿಯೊಳವಗಡಿಪ ಜಡಮತಿಗುಂಟೆ ಪರಲೋಕ || ೬೬

ಅಱಿಯದಜ್ಞಾನದಲಿ ಮಾಡಿದ |
ನರಗೆ ಪಾತಕವಳಿಸೆ ಪುಣ್ಯದ |
ನೆರವಣಿಗೆಯಲಿ ಹರಿಸಿಕೊಂಬುದು ನೀತಿ ಲೋಕದಲಿ ||
ಅಱಿದಱಿದು ಪಾಪೌಘಕೆಳಸಿದ |
ನರಗುಱಿಗಳಾದರಿಗೆ ನಿಷ್ಕೃತಿ |
ಧರೆಯೊಳುಂಟೇ ಮೂರ್ಖರಿಗೆ ಗುರುವಾದೆ ತಾನೆಂದ || ೬೭

ಇಳೆಯೊಳಖಿಳ ದುರಾತ್ಮರಾದರ |
ತಲೆಗೊಳಲು ನೀನುದಿಸಿದೈ ನಿ |
ನ್ನೊಳಗನಱಿಯದೆ ಪಾತಕಕೆ ಗುಱಿಯಾಗಿ ಸಮನೆನಿಸಿ ||
ಕೊಳುಗುಳವ ಮಾಡಿದ ದುರಾತ್ಮನ |
ಗಳವ ಛೇದಿಸು ತಡವದೇತಕೆ |
ಕೊಲದಿರಲು ಶ್ರೀಕೃಷ್ಣ ಕೇಳ್ ವಸುದೇವನಾಣೆಂದ || ೬೮

ಈಪರಿಯೊಳರ್ಜುನನ ಮನದನು |
ತಾಪವನು ಕಂಡಧಿಕಕೃಪೆಯಿಂ |
ದಾಪರಾತ್ಪರವಸ್ತು ಶ್ರೀಹರಿ ತನ್ನ ಚಿತ್ತದಲಿ ||
ವ್ಯಾಪಿಸಿದ ಘನತರದ ಕೋಪಾ |
ಟೋಪವನು ತಂಪಿಸಿಯೆ ರಥದಿಂ |
ತಾ ಪೊಡವಿಗಿಳಿತಂದು ತಕ್ಕೈಸಿ ನರನೊಳಿಂತೆಂದ || ೬೯

ಎಲೆ ಧನಂಜಯ ನಿನಗೆನಗೆ ನೋ |
ಡಲು ವಿಭೇದಗಳುಂಟೆ ಪರಿಕಿಸೆ |
ಇಳೆಯೊಳಹುದುರುತರದ ಸಂಗರವುಂದೆ ವೀರರೊಳು ||
ತಿಳಿಯಲದರಿಂದಾಮಹಾಹವ |
ದೊಳಗೆ ನಿಲುವಗ್ಗಳದ ರಣಕೌ |
ಶಲವ ನೋಡುವೆನೆಂದು ನಿಂದೆನು ನಿನ್ನೊಳಾಹವಕೆ || ೭೦

ಬಲವೆರಡರಲಿ ನೋಡೆ ನೀನೇ |
ಬಲುಮೆಕಾರರ ಮೌಳಿಮಾಣಿಕ |
ಹಲವನಾಡಲದೇನು ಜೈಸಲು ಬಲ್ಲೆ ಶಾತ್ರವರ ||
ಬಲಯುತನು ಧೃತಿವಂತ ಭಾಷ್ಕಳ |
ಗಳವ ರಣಬಾಹಿರರ ಶಿಕ್ಷಿಪ |
ಕಲಿ ಕಣಾ ನೀನೆಂದು ಹೊಗಳಿದನಸುರಹರ ನರನ || ೭೧

ದೇವಸಂಘವು ಮೆಚ್ಚೆ ರಣದಲಿ |
ತಾವು ಕಡುಛಲದಿಂದ ಮುಳಿದು ಮ |
ಹಾವಿಬುಧರಿಪುಕೋಟಿಸಂಖ್ಯೆಯನಾಜಿರಂಗದಲಿ ||
ಈವಿವೇಕವಿಚಾರನಯಸಂ |
ಭಾವನೋಕ್ತಿಯ ದೃಢಕೆ ಬಲುಸಮ |
ರಾವನಿಯ ಸುಪ್ರೌಢಿಯಾವಂಗಿಲ್ಲ ಕೇಳೆಂದ || ೭೨

ಕಂಡೆ ನಿನ್ನಯ ಶೌರ್ಯತರದು |
ದ್ದಂಡತನವನು ಮುಂದಕೊದಗುವ |
ಖಂಡಶಾತ್ರವಜಲಧಿಬಡಬಾಗ್ನಿಯಹೆ ನೀನು ||
ಅಂಡಲೆವ ರಿಪುಗಣಶರಭಭೇ |
ರುಂಡನಹುದೈ ಪಾರ್ಥ ಮೆಚ್ಚಿದೆ |
ಖಂಡಪರಶುವಿನಾಣೆ ನೀ ಧೃತಿವಂತನಹುದೆಂದ || ೭೩

ಹೊಗಳಿದನು ಮುರವೈರಿ ಪಾರ್ಥನ |
ನಗಣಿತೋತ್ಸವದಿಂದಲಬುಜಜ |
ನೆಗಹಿ ನಾಲ್ಕುಂಮೌಳಿಗಳನೊಲೆದೊಲೆದು ಕೀರ್ತಿಸಿದ ||
ನಗರಿಪು ಧನಂಜಯನ ಬಲುಮೆಗೆ |
ಜಗೆಯನೀಡಾಡಿದನು ಮಿಕ್ಕಿನ |
ದಿಗಧಿಪರು ಮನವೊಲಿದು ಪತಿಕರಿಸಿದರು ಫಲುಗುಣನ || ೭೪

ಹಿಗ್ಗಿದರು ರವಿಚಂದ್ರರರ್ಜುನ |
ನುಗ್ಗಡದ ಸಾಹಸಕೆ ಭೈರವ |
ನುಗ್ರಗುಹ ವರವೀರಭದ್ರ ಗಣೇಶ ಮೊದಲಾಗಿ ||
ಸಗ್ಗದಲ್ಲಿಹ ಚಕ್ರವರ್ತಿಗ |
ಳಗ್ಗಳೆಯ ಸುರನಿಕರ ಹರುಷದ |
ಸುಗ್ಗಿಯಲಿ ಷೋಡಶದ ರಾಯರು ಪೊಗಳಿದರು ನರನ || ೭೫

ದೇವಬಿಲ್ಲಾಳೆಂದು ಹನುಮನು |
ಭಾವಶುದ್ಧಿಯಲೊಲಿದು ಮೆಚ್ಚಿದ; |
ರಾವಣಾಸುರ ಕಾರ್ತವೀರ್ಯಾರ್ಜುನರ ಸಾಹಸವ ||
ಭಾವಿಸಿದೆವವರುಗಳಿಗಿನಿತಿ |
ಲ್ಲಾವ ಗರುಡಿಯ ಚಾಪವಿದ್ಯಾ |
ಕೋವಿದತ್ವವೊ ಎಂದು ನುತಿಸಿದರಮರರಭ್ರದಲಿ || ೭೬

ಈಪರಿಯಲವರಿರ್ವರನು ಬಳಿ |
ಕಾಪುರಾಂತಕನೊಂದು ಮಾಡಿ ಸು |
ಖೋಪವಾಸ್ನಿತರಾಗಿ ಬಾಳುವುದೆಂದು ಹರಸುತ್ತ ||
ಆಪುರಂದರಬ್ರ ೨ೂಡನೆ ವ |
ನೋಪಕಂಠನ ಕಳಿದು ಮುನಿಜನ |
ಗೋಪ ಸನ್ನುತ ಹರುಷದಲಿ ರಜತಾದ್ರಿಗೈದಿದನು || ೭೭

ಬಳಿಕ ಮುರರಿಪುವರ್ಜುನನ ಕರ |
ತಳದೊಳಗೆ ತಳುಕಿಕ್ಕಿ ಕರವನು |
ಮೊಳೆನಗೆಯ ಮಾಳಿಯಲಿ ಕೌರವರುಗಳನೊಡಗೂಡಿ ||
ಎಲೆವನೆಗೆ ನಡೆತಂದು ಯಮಜಗೆ |
ನಲವಿನಿಂದೆಱಗಲ್ಕೆ ತೊಲಗುತ |
ನಳಿನನಯನನ ಪದಕೆ ನಮಿಸಿದನಾಮಹೀಪಾಲ || ೭೮

ತಮತಮಗೆ ಭೀಮಾದಿಗಳು ಸಂ |
ಭ್ರಮದಿ ಮೆಯ್ಯಿಕ್ಕಿದರು ವಿಪ್ರರು |
ಸುಮನಸದಿ ವೇದಾಗಮಸ್ತುತಿಯಿಂದ ಹೊಗಳುತಿರೆ ||
ಅಮಿತಹರುಷದೊಳನಿಬರನು ಶ್ರೀ |
ರಮಣನುಪಚರಿಸುತ್ತ ಕುಳ್ಳಿರ |
ಲೆಮಸುತನು ನುತಿಗೈದನಸುರಾಂತಕನ ಮನದಣಿಯೆ || ೭೯

ತ್ರಾಹಿ ಲಕ್ಷ್ಮೀರಮಣ ಕೇಶವ |
ತ್ರಾಹಿ ಭುವನಾಧಾರ ದೈತ್ಯಪ |
ಮೊಹಕಾನನಪರಶು ಭಕ್ತಶಿಕಾಯ ಸುರಭೂಜ ||
ತ್ರಾಹಿ ದುರ್ಜನಜಾಲಘನಘೋಷ |
ರಾಹಿಗಾರುಡ ದೇವದೇವನೆ |
ತ್ರಾಹಿ ಮಾಯಾಮಹಿಮ ರಕ್ಷಿಸು ರಕ್ಷಿಸುವುದೆಂದ || ೬೦

ಕ್ಷಮಿಸುವುದು ದೇವೇಶ ದೇವೋ |
ತ್ತಮ ಪ್ರಥಿತಸುಭಟಾಭಿಮಾನ|
ಭ್ರಮಿತನನು ಗುರುದೈವದೂರನ ದುರಿತವಿಗ್ರಹನ ||
ಅಮಿತಘೋರಕೃತಾಪರಾಧನ |
ಸುಮನಸಾಲಯಪದಕೆ ಶೂನ್ಯನ |
ಕಮಲನೇತ್ರನೆ ಸಲಹಿ ನೀನುದ್ಧರಿಸಬೇಕೆಂದ || ೬೧

ದೇವ ನಿಮ್ಮಯ ವೈರಕಳುಕಿಯೆ |
ಭಾವಭವಹರ ಬ್ರಹ್ಮಮುಖ್ಯರು |
ಕಾವಡಂಜುವೆವೆಂದು ಕಳುಹಿದ ಖಚರನನು ಪಿಡಿದು ||
ದೇವದೇವನೊಳುಪನಿಷತ್ಕಾಂ |
ತಾನಳಿಗೆ ಸಿಲುಕದ ಪರಾತ್ಪರ |
ದೇವನೊಳ್ ಕಾದಿದ ಜಡಾತ್ಮನ ಸಲಿಹಿದ್ಯೆಯೆಂದ || ೬೨

ಎತ್ತಿದನು ಧರ್ಮಜನನೆಲೆ ರಾ |
ಜೋತ್ತಮನೆ ನಿನ್ನಂತೆ ಲೋಕದೊ |
ಳತ್ಯಧಿಕರಿನ್ನುಂಟೆ ನುತಿಸಲದೇಕೆ ಬಳಿಕಿನ್ನು ||
ಚಿತ್ತದಲಿ ಖಯಖೋಡಿ ಬೇಡೆಲೆ |
ಸತ್ಯಶೀಲನೆ ನಿಮ್ಮೆಡೆಗೆ ದು |
ಶ್ಚಿತ್ತವೆಮಗಿಲ್ಲಗ್ರಜನ ಪದದಾಣೆ ಕೇಳೆಂದ || ೬೩

ಮೇಲೆ ಬಹುದಧಿಕಾಜಿ ನಿಮ್ಮ ವಿ |
ಶಾಲವನವಾಸಾಂತ್ಯದಲ್ಲಿ ಮ |
ಹೀಲತಾಂಗಿಯ ಭಾರವನು ಬಿಡಿಸಲ್ಕೆ ಫಲುಗುಣನ ||
ತೋಳ ಬಲುಹನು ಕಾಣಲೋಸುಗ |
ಕಾಳಗಕೆ ನಾವ್ ನಿಂದೆವೆಲೆ ಭೂ |
ಪಾಲನಾಯಕರತುನ ಆಲಿತಿಹುದೆಂದನಸುರಾರಿ || ೬೪

ಅನಿತಱೊಳ್ ಪಾಂಚಾಲಿ ಲಕ್ಷ್ಮೀ |
ಮನಮನೋಹರವರಪದಾಬ್ಜಕೆ |
ವಿನುತೆ ಹರ್ಷಾಶ್ರುಜಲಸಹಿತೆಡೆಗೆಡೆದು ನುತಿಸಿದಳು ||
ಮನುಮಥನ ಪ್ರಿತ ರಾಮ ಮಾಧವ |
ಸನಕನಾರದಪೂಜ್ಯ ಸರ್ವೇ |
ಶನೆ ಸಲಹು ಸಾತ್ವಿಕಗುಣೋನ್ನತಮೂರ್ತಿಯೆಂದೆನುತ || ೮೫

ಸಲಹು ಸಾರಸನೇತ್ರ ಶ್ರೀಧರ |
ಜಲಧರಾಯತಕಾಯ ವರಯದು |
ಕುಲಲಲಾಮನೆ ಮೈದುನನ ಮರುಳಾಟವನು ಮಱೆದು ||
ಲಲಿತಕರುಣಾಪಾಂಗದೃಷ್ಟಿಯೊ |
ಳೆಳನಗೆಯ ಬೆಳ್ದಿಂಗಳನು ಕಱೆ |
ದೊಲಿದು ಪಾಲಿಸು ಎಂದು ನುತಿಸಿದಳಾಗ ಪಾಂಚಾಲಿ || ೮೬

ತಂಗಿ ಕೇಳುಪಚಾರವೇನಿದ |
ಕಂಗಜಾಂತಕನಾಣೆ ಮನಕು |
ತ್ತುಂಗಪರಿತೋಷಕವು ಕಾಣಿಸಿತರ್ಜುನನು ಗಯನ ||
ಹಿಂಗದೇ ಕೈಪಿಡಿದು ಛಲದಲಿ |
ಸಂಗರವ ತಮ್ಮೊಡನೆ ಮಾಡಿದ |
ಭಂಗವಿಕ್ರಮಚತುರತೆಗೆ ಮನ ನಲಿದುದೀಗೆಂದ || ೮೭

ಇರಲು ಬೇಡೆಳ್ಳನಿತು ಸಂಶಯ |
ತಿರುಗಿಬಿದ್ದರ್ಜುನ ವಿರೋಧಿಯ |
ಕರವಿಡಿದು ಕಾದಿದಕೆ ತಾವ್ ಮತ್ಸರಿಸೆವಿದಕೀಗ ||
ಸರಸಿಜಾಸನ ರುದ್ರ ಯದುಕುಲ |
ನರಸ ರಾಮನ ಪಾದದಾಣೆಲೆ |
ತರುಣಿ ತಾವ್ ಹರುಷಿಸಿದೆವೆಂದನು ದಾನವಧ್ವಂಸಿ || ೮೮

ನರಸೊಡನೆ ತಾವ್ ಮಾಡಿದೀಸಂ |
ಗರದ ಕಥನವನಾರು ಹರುಷದಿ |
ಯರುತ ಸುಮನಸದಿಂದ ಪೇಳ್ದಡೆ ಕೇಳ್ದ ಸುಜನರ್ಗೆ ||
ಕರೆದಪುವು ಜನ್ಮಾಂತರದ ಶತ |
ಸುರುತರದಿ ಮಾಡಿರ್ದ ಪಾಪವು; |
ಪರಿಯದಾವುದು ನಿಮ್ಮ ಸೌಭಾಗ್ಯಕ್ಕೆ ಕೇಳೆಂದ || ೮೯

ಬಳಿಕ ಮುರರಿಪು ಪಾಂಡುಸುತರನು |
ಪುಳಕಹರುಷದೊಳಪ್ಪಿ, ದ್ರುಪದನ |
ಲಲನೆಯನು ಸಂತೈಸಿ, ವನವಾಸವನು ತವಿಸಿದರಿ ||
ಇಳೆಯನಾಳುವರೆಂದು ಮನ್ನಿಸಿ |
ಬಳಗಸಹಿತೊಲವಿಂದ ತೆರಳಿದ |
ಜಲಧಿಮಧ್ಯದೊಳಿರ್ಪ ದ್ವಾರಾವತಿಗೆ ಪದುಳದಲಿ || ೯೦

ಮುರಹರನ ಸನಿಯದಲಿ ಪಾರ್ಥನು |
ಹರುಷದಿಂ ಚಾಮರವ ಬೀಸುತ |
ಪರಮಭಯಭಕ್ತಿಯಲಿ ಕಾವುದು ಕರುಣದಿಂದೆನುತ ||
ಉರುತರದ ತುತಿಯಿಂದ ಪೊಗಳುತ |
ಮಱೆಯದಾತನ ಮುಖವ ನೋಡುತ |
ಸರಸಿಜಾಕ್ಷನ ಪದವ ನೆನೆಯುತಲೊಡನೆ ನಡೆತಂದ || ೯೧

ಆಸಮಯದಲಿ ಪಾಂಡುಪುತ್ರರು |
ವಾಸುದೇವನ ಕೂಡೆ ಬಂದರು |
ಭಾಸುರದ ರಥವೇಱಿ ಧರ್ಮಜ ತೇರನಡೆಸುತ್ತ ||
ದಾಸಭಾವದಿ ಭೀಮ ಛತ್ರವ |
ನೋಸರಿಸದಳವಡಿಸಿ ಯಮಳರು |
ಮಿಾಸಲುದಕವ ಕ್ರಮುಕ ಪರ್ಣದ ಹಡಪವನು ಧರಿಸಿ || ೯೨

ದ್ರುಪದಸುತೆ ತಾ ವಿಪ್ರಸತಿಯರು |
ಅಪರಿಮಿತರೊಡಗೂಡಿಯೆದುರಿಂ |
ದುಪಮೆಗಳವಡದಿರ್ದ ರತುನಾರತಿಗಳನು ಪಿಡಿಸಿ ||
ಕಪಟನಾಟಕಸೂತ್ರಧಾರಿಗೆ |
ನೃಪನ ಸತಿಯೊಡನೆಯ್ದಿ ಯೆತ್ತಿದ |
ಳಪಸರರು ನಲಿಯಲ್ಕೆ ಬಹಳ ಮನೋನುರಾಗದಲಿ || ೯೩

ಆದಿಮೂರ್ತಿಗೆಯಮಿತಶರಣರ |
ಕಾದ ದೇವಗೆಯಜನ ಪೆತ್ತ ವ |
ಹಾದಯಾಂಬುಧಿ ಸನಕನಾರದಮುಖ್ಯರೊಡೆಯಂಗೆ ||
ಮೇದಿನೀಸುರಪಕ್ಷಪಾತಿಗೆ |
ವೇದವೇದ್ಯಗೆ ವಿಶ್ವಪೂಜ್ಯಗೆ |
ಆದರದಲಾರತಿಯನೆತ್ತಿದರೊಲಿದು ನಾರಿಯರು || ೯೪

ಮಂಗಳಪ್ರದನಾದ ದೇವಗೆ |
ಡಿಂಗರಿಗರಥಸಾದ ದೇವಗೆ |
ಅಂಗಜನ ಪಿತನಾದ ದೇವಗೆ ದೀನರಕ್ಷಕಗೆ ||
ತುಂಗವಿಕ್ರಮದಿಂದಲೆಸೆವಗೆ |
ಗಂಗೆಯನು ಪಾದದಲಿ ಪಡೆದಗೆ |
ಮಂಗಳಾರತಿಯೆತ್ತಿದರು ಜಯಜಯಸಿನಾದದಲಿ || ೯೫

ದೇವದೇವನೆ ಜಯತು ವಿವಿಜರ |
ಕಾವ ದೇವನೆ ಜಯತು ಗೋದ್ವಿಜ |
ದೇವದೇವನೆ ಜಯತುಜಯ ವಸುದೇವದೇವಕಿಯ ||
ಭಾವವಲರಿಪ ಸೋಮ ಜಯಜಯ |
ರಾವಣಾಂತಕ ರಾಮ ಜಯಜಯ |
ಕಾವುದೆಂದೆತ್ತಿದಳು ದ್ರೌಪದಿ ಮಂಗಳಾರತಿಯ || ೯೬

ರಂಭೆಯೂರ್ವಶಿಮುಖ್ಯ ದೇವನಿ |
ತಂಬಿನಿಯರಾಗಮಲರತ್ನದ |
ತುಂಬಿದಾರತಿಗಳನು ಪಿಡಿದತಿಚಿತ್ರಗತಿಗಳಲಿ ||
ಕುಂಭಿನೀಧವಗೆತ್ತಿದರು ಘನ |
ಕುಂಭದಾರತಿಗಳನು ಚಿತ್ತದ |
ಸಂಭ್ರಮದ ಪುಳಕೋದಯದಿ ಬಹುಮಂಗಳಾರತಿಯ || ೯೭

ದೇವದುಂದುಭಿ ಮೊಳಗೆ, ಸ್ವರ್ಗದ |
ಭಾವೆಯರು ನರ್ತಿಸಲು, ಸಕಲಸು |
ರಾವಳಿಯು ಕೀರ್ತಿಸಲು, ತುಂಬುರುನಾರದಾವಳಿಯು ||
ದೇವದೇವನ ಸಕಲಗುಣಗಳ |
ನೋವಿ ಪಾಡುತ್ತಿರಲು, ನಲಿಯುತ |
ರಾವಣಾಂತಕ ಪಾಂಡುಪುತ್ರರ ನೋಡುತಿಂತೆಂದ || ೯೮

ನೀವು ಮರಳಿನ್ನೇಕೆ ಬಹಿರತಿ |
ಧಾವತಿಯುಲಲಸಿದಿರಿ ನಿಮ್ಮ ತ |
ಪೋವನಕೆ ವಿಪ್ರಾಳಿ ದ್ರೌಪದಿಸಹಿತ ಬೇಗದಲಿ ||
ಭಾವ ನಿಮ್ಮಲ್ಲಿಹುದುಯೆಮ್ಮಯ |
ಜೀವವೈವರು ನೀವು ನಿಶ್ಚಯ |
ದೇವಕಿಯ ಪದದಾಣೆ ಎರವಿಲ್ಲೆಂದನಸುರಾರಿ || ೯೯

ಎಂದು ಕಳುಹುತ ಸಕಲರನು ಗೋ |
ವಿಂದ ತೆರಳಿದನಧಿಕಹರುಷದ |
ಲಿಂದ್ರಮೊದಲಾದಖಿಳದಿಗಧಿಪರುರುಗರಾಗಸದ ||
ಮಂದಿಯೆಲ್ಲರು ಬ್ರಹ್ಮನೊಡನೆ |
ಯ್ತಂದು ಸ್ತುತಿಗಳ ಮಾಡಲುತ್ಸವ |
ದಿಂದ ದ್ವಾರಾವತಿಯ ಹೊಕ್ಕನು ಕೃಷ್ಣನೊಲವಿನಲಿ || ೧೦೦

ಅರಸ ಕೇಳ್ಳೈ ಬಳಿಕ ಕೌರವ |
ಧರಣಿಪತಿಗುಡುಗೊರೆಯ ಮನ್ನಿಸಿ |
ಕುರುಕುಲಾಗ್ರಣಿ ನಿಮ್ಮ ದೆಸೆಯಲಿ ಕೀರ್ತಿಯೆಮಗಾಯ್ತು ||
ಮುಳಿಯಬೇಡೆಮ್ಮವನು ಸುಖದಿಂ |
ಕರಿಪುರಿಗೆ ಗಮಿಸೆಂದು ಗಂಗಾ |
ವರಸುತ ದ್ರೋಣಾದಿಸುಭಟರ ಕಳುಹಿದನು ಯಮಜ || ೧೦೧

ಜಗಕೆ ವೀರನು ಪಾರ್ಥನಲ್ಲದೆ |
ಬಗೆವೊಡೆರಡನೆ ಸುಭಟನಿಲ್ಲೀ |
ಯುಗಕೆ ಹರ್ಯಜ ಹರರ ಸಮನೆಂದೆಣಿಸಬಹುದಿವನ ||
ಅಗಡುತನ ತಮಗಿನ್ನು ಕೊಳ್ಳದು |
ವಿಗಡ ವನವಾಸಾಂತ್ಯದಲಿ ಬಹು |
ದಘಟಿತದ ರಣವೆನುತ ಕುರುಪತಿಯೆಯ್ದಿದನು ಪುರವ || ೧೦೨

ಇತ್ತ ಧರ್ಮಜ ಭೀಮಫಲುಗುಣ |
ರುತ್ತಮದ ಯಮಳಾದಿ ಬಾಂಧವ |
ವೊತ್ತಸಹಿತವೆ ತಿರುಗಿದನು ಜಯದುತ್ಸವದಿ ವನಕೆ ||
ಮತ್ತೆ ಕೇಳ್ಳೈ ಭೂಪ ಸಂಗರ |
ದತ್ಯಧಿಕದಾಯಾಸವಡೆದಿಹ |
ಮಿತ್ರಬಾಂಧವರುಗಳ ಮನ್ನಿಸಿ ಕಳುಹಿದನು ಕೆಲರ || ೧೦೩

ಅವರ ತದನಂತರದಿ ಭೀಮನ |
ಕುವರನನು ಸಂತೈಸಿ ಕಳುಹಲು |
ಪವಸುತಗೆ ತಾತಗೆ ಫಲುಗುಣಯಮಳರಿಗೆ ನಮಿಸಿ ||
ಯುವತಿ ದ್ರೌಪದಿಗೆಱಗಿ ತನ್ನಯ |
ಭವನಕೈದಿದ ದನುಜಸೇನಾ |
ನಿವಹ ಸಹಿತಾನಂದದಿಂದಲಿ ಕಲಿ ಘಟೋತ್ಕಚನು || ೧೦

ಬಳಿಕ ಗಂಧರ್ವೇಶ ಬಲುಬಗೆ |
ಗಳಲಿ ಪಾರ್ಥನ ನುತಿಸಿ ಲೋಕಾ |
ವಳಿಗೆ ಕೀರ್ತಿಯು ಪಡೆದೆಯುಳುಕದೆ ಕಾದುಯೆನ್ನುವನು ||
ಇಳೆಗೆ ನಿನ್ನ ಚರಿತ್ರೆ ಚಂದ್ರಮ |
ನಳಿನಸಖರುಳ್ಳನಕವಿರಲೆಂ |
ದೊಲವಿನಲಿ ಗಮಿಸಿದನು ಪುಷ್ಪಕವೇರಿ ಮಣಿಪುರಕೆ || ೧೦೫

ಪುರಕೆ ಖಚರನ ಕಳುಹಿ ಪಾರ್ಥನು |
ಧರಣಿಪತಿಗೆಱಗಲ್ಕೆ ತಮ್ಮನ |
ಹರುಷದಲಿ ಬರಸೆಳೆದು ತಕ್ಕೈಸುತ್ತ ಮುಂಡಾಡಿ ||
ತರುಣ ಬಾಯೆನ್ನಾನೆ ಬಾಯೆಂ |
ದುರುವ ಕೀರ್ತಿಯು ಪಡೆದೆ ವೀರರ |
ವರಶಿರೋಮಾಣಿಕವೆ ಬಾರೈ ಇತ್ತ ಬಾರೆಂದ || ೧೦೬

ಅನಿಲಸುತಗೆಱಗಲ್ಕೆ ಪಾರ್ಥನ |
ಘನಹರುಷದಿಂದಪ್ಪಿ ಬಾರೈ |
ದನುಜಮನುಜಭುಜಂಗ ಲೋಕದೊಳಖಿಳಕೀರ್ತಿಯನು ||
ತನಗೆ ತಂದೈ ನಿನ್ನ ವಂದಿಗ |
ರನುಜರನು ಜನ್ಮಾನು ಶತದಲಿ |
ಘನತಪಂಗಳಮಾಡೆ ಕಾಣೆನೆನುತ್ತ ಹರುಷಿಸಿದ || ೧೦೭

ಕಂಡೆವೇ ಮಗುಳರ್ಜುನನ ಕೋ |
ದಂಡವಿದ್ಯಾಜನಿತ ನಿಜದೋ |
ರ್ದಂಡಸಾಹಸದಿಂದ ಪೆಸರ್ವಡೆದೆಸೆವ ಮಹಿಮನನು ||
ಖಂಡಪರಶು ಸುರೇಂದ್ರ ಖಳವೇ |
ತಂಡಪಂಚಾನನ ಮುರಾರಿಯೊ |
ಳಂಡಲೆದು ಮೆಚ್ಚಿಸಿದವನನೆಂದಮಳರೆಱಗಿದರು || ೧೦೮

ತೆಗೆದು ತಕ್ಕೈಸುತ್ತಲವರನು |
ಬಿಗಿಬಿಗಿದು ಮುಂಡಾಡಿ ನುತಿಸುವ |
ಬಗೆಗೆ ಮೆಚ್ಚುತಲವರ ಮನ್ನಿಸುತಾಗ ಸಂತೈಸಿ ||
ಅಗಣಿತದ ವಿಪ್ರಾಳಿಮುನಿಕುಲ |
ದೊಗುಮಿಗೆಯ ಹರಕೆಯನು ಕೈಕೊಳು |
ತಗಲದಾಮೋದದಲಿಸೆದನೊಡಹುಟ್ಟಿದವರುಸಹಿತ || ೧೦೯

ತಂದಳಾಗಲೆ ದ್ರುಪದಸುತೆ ಬಲು |
ಸಂದಣಿಯ ನಾರಿಯರ ಹಸ್ತಗ |
ಳಿಂದೆಸೆಯುವಾರತಿಯ ಕುಂತಿಯ ತನುಜರಿದ್ದೆಡೆಗೆ ||
ಇಂದುಕುಲಪಾಲರಿಗೆ ಜಯಜಯ |
ನಂದನಂದನಚರಣಕಮಲವಿ |
ಳಿಂದರಿಗೆ ಜಯಜಯತು ಜಯಯೆನುತೆತ್ತಿದಳು ಮುದದಿ || ೧೧೦

ಮೂಱುಲೋಕದ ಗಂಡ ಜಯಜಯ |
ಮಾರವೈರಿಯ ಭಜಕ ಜಯಜಯ |
ಧಾರಿಣೀವರರೆಱೆಯ ಜಯಜಯತು ಕಲಿ ಪಾರ್ಥ ||
ವೀರವಿತರಣಶೂರ ಜಯಜಯ |
ವಾರಿಜಾಸನರುದ್ರರಸ್ತ್ರದಿ |
ಧೀರತನದಲಿ ಪಡೆದ ಪಂಥದ ಧೀರ ಜಯ ಜಯತು || ೧೧೧

ಈಪರಿಯಲಾರತಿಯನೆತ್ತುತ |
ಲಾಪತಿವ್ರತೆ ಪರಸಿ ಸೇಸೆಯ |
ನಾಪನಿತು ತಾ ದ್ವಿಜಸತಿಯರೊಡನವರುಗಳಿಗೆಸಗಿ |
ಚಾಪಳತೆಯಿಂ ಬಂದ ಪುರುಷರ |
ಸ್ನೈಪಿನಿಂದುಪಚರಿಸಿ ವಿನಯಾ |
ಳಾಪದಲಿ ಮಜ್ಜನವ ಭೋಜನಗಳನು ರಚಿಸಿದಳು || ೧೧೨

ಇಂತು ದ್ರೌಪದಿಸಹಿತಲೈವರು |
ಸಂತಸದಿ ಬುಧನಿವಹದೊಡನೆ ವ |
ನಾಂತರದಿ ಸುಖಗೋಷ್ಠಿಯಿಂದತಿವಿಮಲವೈಭವದಿ ||
ಸಂತತವು ತಿರುವೇಂಕಟೇಶನ |
ಕಂತುಹರನನು ಮನದಿ ನೆನೆದ |
ತ್ಯಂತಹರುಷದೊಳಿರ್ದರೆಲೆ ಭೂಪಾಲ ಕೇಳೆಂದ || ೧೧೩

ಒರೆದೆನಾನಱಿವಂದದಲಿ ಭೂ |
ವರಶಿರೋಮಣಿ ಭರತಕುಲವಿ |
ಸ್ಫುರದ ಜನಮೇಜಯಗೆ ವೈಶಂಪಾಯ ವಿವರಿಸಿದ ||
ತೆಱದಿ ನಿಮಗೆಂದಾಗ ಸೂತನು |
ಹರುಷರಸದಲಿ ಶೌನಕರ ಪದ |
ಸರಸಿಜಂಗಳಿಗಭಿನಮಿಸಿ ಮಿಗೆ ಸರಿದನಾಶ್ರಮಕೆ || ೧೧೪

ಕ್ಷಮಿಸುವುದು ಶ್ರೀವರನೆ ಸರ್ವೋ |
ತ್ತಮ ಸದಾನಂದೈಕಮೂರ್ತಿಯೆ |
ವಿಮಲಗರುಡಧ್ವಜನೆ ಶಬ್ದಾಕ್ಷರದರಿದ್ರನನು ||
ಅಮಿತಗರ್ವಾಂಧಕನ ಮೂರ್ಖನ !
ಭ್ರಮಿತ ಕ್ರೂರಶತಾಪರಾಧನ |
ಸುಮನಸದಿ ಕಾರುಣ್ಯದೃಷ್ಟಿಯೊಳೀಕ್ಷಿಸುವುದೊಲಿದು ||
ಲಲಿತಶಬ್ದಸುವರ್ಣಲಕ್ಷಣ |
ಕಲಿತಭಾವರಸಾದಿಯೆಂಬುದ |
ಸೊಳಗರಿಯನಿವನೇನ ಬಲ್ಲನದೆಂದು ಕೋಪಿಸದೆ ||
ಒಲಿದು ನೀ ಕೈಕೊಂಡುಯೆನ್ನನು |
ಸಲಹಿಯಿಹಪರದೊಳಗೆ ಸೌಖ್ಯಂ |
ಗಳನು ಕರುಣಿಸು ವೇಂಕಟಾಚಲವಾಸ ಲಕ್ಷ್ಮೀಶ ||
ಆಯುರಾರೋಗ್ಯವನು ಬಹಳ |
ಶ್ರೀಯುತದ ಸಾಂಬ್ರಾಜ್ಯಪದವನು |
ಪಾಯುಶಕ್ತಿಯನಖಿಳ ಗೋಧನರಾಜಪೂಜಿತವ ||
ಧೀಯುತವ ಬಹುಸುಖವನಧಿಕೋ |
ಪಾಯಸದಿ ಕೃತಿಕೇಳ್ದ ಮಹಿಮಗೆ |
ಶ್ರೀಯರಸ ತಿರುವೇಂಕಟೇಶ್ವರನೊಲಿದು ಕರುಣಿಪನು ||
ಹೇಮಕೋಟಿಯನಿತ್ತ ಫಲವಧಿ |
ರಾಮಕನ್ಯಾದಾನಫಲ ಹರಿ |
ಸೋಮದೇವಾಲಯಂಗಳನು ಪ್ರತಿಷ್ಠಿಸಿದ ಫಲವು ||
ಸೋಮಸೂರ್ಯಗ್ರಹಣಕಾಲದ |
ಲಾಮಹೀಸುರರಿಂಗೆ ಧೇನು |
ಸ್ತೋಮವನು ಒಲಿದಿತ್ತ ಫಲವಿದ ಕೇಳ್ದ ಸುಜನರ್ಗೆ |
ವರತಟಾಕವ ಕಟ್ಟಿಸಿದ ಫಲ |
ಹಿರಿದು ಧನನಿಕ್ಷೇಪಫಲ ಬಂ |
ಧುರದ ಬುಧಸ್ವಾತ್ಮ್ಯಫಲ ಹರಿಹರವರಾಲಯವ ||
ಭರದಿ ವಿರಚಿಸಿದಖಿಲ ಫಲ ವಿ|
ಸ್ತರ ವನಾಳಿಯ ಹಾಯ್ಕಿಸಿದ ಫಲ |
ದೊರೆವುದೀಸತ್ಕೃತಿಯನುಸಿರ್ದಂಗಿದನು ಕೇಳ್ದರಿಗೆ || ೧೧೯

ಅಪರಿಮಿತದಶಾಯುಪನು ಸುಖವನು |
ವಿಶ್ರುಳಸುತ ಪೌತ್ರಾಭಿವೃದ್ಧಿಯ |
ನುಪಮಿಸಲ್ಕೊಲವಿಂದ ಸಕಲಧರಾಧಿಪತ್ಯವನು ||
ದ್ವಿಪರಥಾಶ್ವಪದಾದಿಸಂಗರ |
ನಿಪುಣತೆಯು ಧನಧಾನ್ಯಗಳನೊದ |
ವಿಪನು ಕೇಳಿದ ಜನರಿಗಧಿಪತಿ ರಮಾನಾಥ || ೧೨೦

ಶ್ರೀಕೃಷ್ಣಾಯ ಪರಬ್ರಹ್ಮಣೇನಮಃ||
ಆಯುರಾರೋಗ್ಯೈಶ್ವರ್ಯಮಸ್ತು.

೨೦ತು ಸಂಧಿ ಇಪ್ಪತ್ತೇಳಕ್ಕಂ ಪದ ೧೭೦೮ ಕ್ಕಂ ಮಂಗಳಂ

## ಗಯಚರಿತ್ರೆ ಸಂಪೂರ್ಣಂ.